ಮಂಗಳೂರು ಗುರುವಾರ, 25 ಜೂನ್ 2026 ಸಂಪುಟ 48, ಸಂಚಿಕೆ 98 ಪುಟಗಳು 12+8 hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಲೋಕಹಿತಂ ಮಮ ಕರಣೀಯಂ

PARVATHANENI HARISH

ಕಾಶ್ಮೀರ ಮುಂದೆಯೂ ನಮ್ಮ ಆಂತರಿಕ ವಿಚಾರ

• ಪುಟ ೨

ಶೀಘ್ರ ಮನೆ ಹಂಚಿಕೆಗೆ ಡಿ.ಕೆ.ಶಿವಕುಮಾರ್ ಸೂಚನೆ

ವಸತಿ ವಿಳಂಬಕ್ಕೆ ಸಿಎಂ ಸಿಟ್ಟು

• ಬೆಂಗಳೂರು: ಗ್ರಾಮೀಣ ವಸತಿ ಮನೆಗಳ ನಿರ್ಮಾಣ, ನಿವೇಶನಗಳ ಹಂಚಿಕೆಯಲ್ಲಿ ನಿಧಾನಗತಿಗೆ ಅಧಿಕಾರಿಗಳ ವಿರುದ್ಧ ಸಿಟ್ಟಾದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಎಷ್ಟು ವರ್ಷ ಕಾಯಬೇಕು. ಮೊದಲು ಮನೆ ಹಂಚಿಕೆ ಮಾಡಿ ಎಂದು ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಬುಧವಾರ ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಹಲವು ವರ್ಷಗಳ ಹಿಂದೆಯೇ ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಕಾಯುತ್ತಿದ್ದಾರೆ. ಅವರೆಲ್ಲ ಕೇವಣಿ ಕಟ್ಟಿದ್ದಾರೆ. ಈ ಅರ್ಜಿಗಳ ಮೇಲೆ ಹಿಂದಿನ ಸರ್ಕಾರದ ವಸತಿ ಸಚಿವ ಸೋಮಣ್ಣ ಅವರ ಫೋಟೋ ಇದೆ. ಅವರಿಗಿನ್ನೂ ಮನೆ ಕೊಟ್ಟಿಲ್ಲ. ಪಾಪ ಅವರೆಲ್ಲಾ ಇನ್ನೂ ಎಷ್ಟು ವರ್ಷ ಕಾಯಬೇಕು ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಫಲಾನುಭವಿಗಳ ಪಟ್ಟಿ ಬೇಗ ಕೊಡಲು ಶಾಸಕರ ಜತೆ ಮಾತನಾಡುವೆ. ನೈಜ ಫಲಾನುಭವಿಗಳಿಗೇ ಸವಲತ್ತು ಸಿಗಬೇಕು.

➡ ಪುಟ ೪

> **ಯಾವುದೇ ವಸತಿ ಯೋಜನೆಗೆ ಕೈಹಾಕುವ ಮೊದಲೇ ಸ್ಪಷ್ಟ ಯೋಜನೆ ಇಟ್ಟುಕೊಳ್ಳಿ. ಯಾವುದೇ ಪ್ರಮುಖ ತೀರ್ಮಾನಗಳ ಬಗ್ಗೆ ನನ್ನ ಜತೆ ಚರ್ಚೆ ಅಗತ್ಯ. ಮನೆ ನಿರ್ಮಿಸಿದ ನಂತರ ಮಾರಾಟಕ್ಕೆ ಒದ್ದಾಡುವುದು ಬೇಡ. ನೀವು ಗುಣಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಇರಬೇಕು.**
> ■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ಕಿರುಸುದ್ದಿ

ಟಿಬಿ ಡ್ಯಾಂ ಗೇಟ್‌ಗೆ ಇಂದು ಚಾಲನೆ

• ಪುಟ ೫

ಭಾರೀ ಮಳೆ: ಮುಂಬೈ, ಅರುಣಾಚಲ ಜನ ತತ್ತರ

• ಪುಟ ೨

ಒಂದೇ ಕುಟುಂಬದ ಐವರು ಕಾವೇರಿ ಪಾಲು

• ಪುಟ ೪

ರಾಮಮಂದಿರ ಸ್ಫೋಟಕ್ಕೆ ಶಂಕಿತ ಉಗ್ರ ಸಂಚು

• ಪುಟ ೫

ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ವಿಜಯೇಂದ್ರ

• ಪುಟ ೫

ರಾಜ್ಯಕ್ಕೆ ಹೊರೆಯಾದರೂ ಜಾರಿ: ಸಚಿವ ಈಶ್ವರ ಖಂಡ್ರೆ ಹೇಳಿಕೆ

ಜು.1ರಿಂದ ವಿಬಿ ಜಿ ರಾಮ್‌ಜಿ

• ಬೆಂಗಳೂರು: ಗ್ರಾಮೀಣ ಭಾಗದ ಕುಟುಂಬಗಳಿಗೆ ಉದ್ಯೋಗದ ಖಾತ್ರಿ ನೀಡಿದ್ದ ನರೇಗಾ ಹೊಸ ಸ್ವರೂಪ ವಿಕಸಿತ ಭಾರತ್ ಜಿ ರಾಮ್‌ಜಿಯಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾದರೂ ಗ್ರಾಮೀಣ ಜನರ, ಮಹಿಳೆಯರ, ವಂಚಿತರ, ದುರ್ಬಲರ ಹಿತದೃಷ್ಟಿಯಿಂದ ಜುಲೈ 1ರಿಂದಲೇ ಜಾರಿಗೆ ತರಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಉನ್ನತಾಧಿಕಾರಿಗಳೊಂದಿಗೆ ನಡೆದ ಸಭೆಯ ಬಳಿಕ ಮಾತನಾಡಿದ ಅವರು, ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮನ್‌ರೇಗಾ ಯೋಜನೆಯಲ್ಲಿ ಕೇಂದ್ರ ಸರ್ಕಾರ 90:10 ಅನುಪಾತದಲ್ಲಿ ವೇತನ ಭರಿಸುತ್ತಿತ್ತು. ರಾಜ್ಯ ಸರ್ಕಾರ ಕೇವಲ 10ರಷ್ಟು ಹಣ ನೀಡುತ್ತಿತ್ತು. ಆದರೆ, ಈಗ 60:40ರ ಅನುಪಾತದಲ್ಲಿ ವೆಚ್ಚ ಭರಿಸಬೇಕಾಗಿದ್ದು ರಾಜ್ಯಗಳ ಮೇಲೆ ಹೆಚ್ಚಿನ ಹೊರೆ ಆಗುತ್ತಿದೆ. ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ ಮನ್‌ರೇಗಾ ಅಡಿಯಲ್ಲಿ 56,492 ಕೋಟಿ ರೂ. ಭರಿಸಿದ್ದರೆ, ರಾಜ್ಯ ಸರ್ಕಾರ 4,821 ಕೋಟಿ ರೂ. ಮಾತ್ರ ಭರಿಸಿ ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗ ಒದಗಿಸಿತ್ತು.

➡ ಪುಟ ೪

> **ವಿಬಿ ಜಿ ರಾಮ್‌ಜಿ ಕಾಯಿದೆ ತರುವ ಮುನ್ನ ಕೇಂದ್ರ ರಾಜ್ಯಗಳ ಸಲಹೆ ಪಡೆಯಬೇಕಾಗಿತ್ತು. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳನ್ನು ಬಿಟ್ಟು ಕಾಯಿದೆ ರೂಪಿಸಿದ ಬಗ್ಗೆಯೂ ಕರ್ನಾಟಕದ ವಿರೋಧವಿದೆ. ಇದನ್ನು ಸುಪ್ರೀಂನಲ್ಲಿ ಪ್ರಶ್ನಿಸಲಾಗುತ್ತಿದೆ.**
> ■ **ಈಶ್ವರ್ ಖಂಡ್ರೆ,** ಸಚಿವ

ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಿ

ಜೂ.28ರಂದು ದಿಲ್ಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೊಂದಿಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಇದ್ದು, ಈ ಸಭೆಯಲ್ಲಿ ಈ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು. ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ನಮ್ಮ ರಾಜ್ಯದಲ್ಲಿ 375 ರೂ. ಕೂಲಿ ಇದೆ. ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡಿದೆ. ಇದಕ್ಕೆ ಹೊಂದುವಂತೆ ಕೇಂದ್ರವೂ ಕನಿಷ್ಠ ಕೂಲಿ ಹೆಚ್ಚಿಸಬೇಕು ಎಂದು ಈಶ್ವರ ಖಂಡ್ರೆ ಒತ್ತಾಯಿಸಿದರು.

➡ ಪುಟ ೪

ಬಂಡವಾಳ ಹೂಡಲು ಯುಪಿಗೆ ಬನ್ನಿ: ಯೋಗಿ

• ಬೆಂಗಳೂರು: ಭಾರತದ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯ ಉತ್ತರ ಪ್ರದೇಶವು ಬಂಡವಾಳ ಹೂಡಲು ಹೇಳಿ ಮಾಡಿಸಿದಂತಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪೂರಕ ವಾತಾವರಣವಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ– 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನವ ಭಾರತದ ನವ ಉತ್ತರ ಪ್ರದೇಶಕ್ಕೆ ಉದ್ಯಮಿಗಳನ್ನು ಆಹ್ವಾನಿಸಲು ನಾನಿಲ್ಲಿಗೆ ಬಂದಿದ್ದೇನೆ. ಉತ್ತರ ಪ್ರದೇಶದಲ್ಲಿ ವಿಪುಲ ಅವಕಾಶಗಳಿವೆ ಎಂದು ಹೇಳಿದರು.

• ವಿವರ ಪುಟ ೪

ರಾಜ್ಯದ 6 ಕಡೆ ಇಡಿ ದಾಳಿ

ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ಮಂಜುನಾಥ ಮನೆ ಸೇರಿ 6 ಕಡೆ ಕಾರ್ಯಾಚರಣೆ

• ಬೆಳಗಾವಿ/ಮೈಸೂರು: ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ ಅವರ ಮನೆ, ಕಚೇರಿ ಸೇರಿದಂತೆ ರಾಜ್ಯದ ಆರು ಕಡೆ ಬುಧವಾರ ಏಕಕಾಲಕ್ಕೆ ಜಾರಿ ನಿರ್ದೇಶನಾಲಯ(ಇಡಿ) ದಾಳಿ ನಡೆಸಿದ್ದು, ಮಂಜುನಾಥ್ ಅವರ ಅಪ್ತೆ ಅಪ್ತ ಯಮುನಾ ಅವರನ್ನು ಮೈಸೂರಿನಲ್ಲಿ ತೀವ್ರ ವಿಚಾರಣೆ ನಡೆಸಿದರು. ಬೆಂಗಳೂರು, ಗೋವಾ ಇಡಿ ಕಚೇರಿ ಅಧಿಕಾರಿಗಳು ಬುಧವಾರ ಬೆಳಗ್ಗೆ ಈ ದಾಳಿ ನಡೆಸಿದ್ದು, ಶೋಧ ಕಾರ್ಯ ಕೈಗೊಂಡಿದ್ದಾರೆ. ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ ಹಾಗೂ ಸಚಿವ ಸತೀಶ ಜಾರಕಿಹೊಳಿ ಸಹೋದರಿಯ ಪತಿ ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪ ಕೇಳಿಬಂದಿದ್ದವು.

• ವಿವರ ಪುಟ ೪

SHAKTHI
ADVANCED LEARNING ACADEMY
SHAKTHI NEET ACADEMY
Best choice for true aspirants
Near Shree Gopalakrishna Temple, Shakthinagar, Mangaluru - 575 016
ADMISSIONS OPEN FOR 2026-27
REPEATERS BATCH 2027
NEET-UG MEDICAL
SALIENT FEATURES OF
THE NEET LONG TERM PROGRAMME
Total number of Teaching Hours with experienced inhouse faculty- 1000+ hrs.
Total Number of Test Planned - 150
Unit Tests - 85
Part Tests - 15
Cumulative Full Length Tests - 20
Grand Tests - 30
Low student teacher ratio per Batch with individual attention
Guest faculties from reputed institutions across the country for the paper discussion
High quality study material will be provided with DDP
High quality hygienic food will be provided.
24 hrs in house doctors and health care facility on campus
Supportive and stress free learning environment
Personalized doubt solving and counselling sessions
Separate Hostels for Boys and Girls
Early Bird Offer
FLAT 25% OFF For the July First Batch
Mob: 98450 86790 | 96860 00046 | 73492 44080
Web: shakthi.edu.in Email: info@shakthi.edu.in

ಕರ್ನಾಟಕ ಸರ್ಕಾರ
ಶ್ರೀ ಸಿ. ಆರ್. ಪಾಟೀಲ್
ಸನ್ಮಾನ್ಯ ಕೇಂದ್ರ ಜಲಶಕ್ತಿ ಸಚಿವರು
ಭಾರತ ಸರ್ಕಾರ
ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ಎನ್. ಚಂದ್ರಬಾಬು ನಾಯ್ಡು
ಸನ್ಮಾನ್ಯ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ
ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ
ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಚಿವರು
ಜಲಸಂಪನ್ಮೂಲ ಇಲಾಖೆ
ಕರ್ನಾಟಕ ಸರ್ಕಾರ

ಜಲಸಂಪನ್ಮೂಲ ಇಲಾಖೆ
ಶ್ರೀ ಡಿ. ಕೆ. ಶಿವಕುಮಾರ್, ಸನ್ಮಾನ್ಯ ಮುಖ್ಯಮಂತ್ರಿರವರಿಂದ
ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿದ 33 ಸ್ಪಿಲ್‌ವೇ ಗೇಟುಗಳ
ಲೋಕಾರ್ಪಣೆ ಕಾರ್ಯಕ್ರಮ
ದಿನಾಂಕ : 25-06-2026, ಗುರುವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ
ಸ್ಥಳ : ಸರ್ಕಾರಿ ಹೈಸ್ಕೂಲ್ ಗ್ರೌಂಡ್, ಮುನಿರಾಬಾದ್, ತಾಲ್ಲೂಕು ಮತ್ತು ಜಿಲ್ಲೆ: ಕೊಪ್ಪಳ

ಘನ ಉಪಸ್ಥಿತಿ
ಶ್ರೀ ಸಿ. ಆರ್. ಪಾಟೀಲ್
ಸನ್ಮಾನ್ಯ ಕೇಂದ್ರ ಜಲಶಕ್ತಿ ಸಚಿವರು
ಭಾರತ ಸರ್ಕಾರ
ಶ್ರೀ ಎನ್. ಚಂದ್ರಬಾಬು ನಾಯ್ಡು
ಸನ್ಮಾನ್ಯ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ
ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ
ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ಕೆ. ಪವನ್ ಕಲ್ಯಾಣ್
ಮಾನ್ಯ ಉಪ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ
ಶ್ರೀ ಮಲ್ಲು ಭಟ್ಟಿ ವಿಕ್ರಮಾರ್ಕ
ಮಾನ್ಯ ಉಪ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ
ಶ್ರೀ ವಿ. ಸೋಮಣ್ಣ
ಮಾನ್ಯ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ರಾಜ ಭೂಷಣ್ ಚೌಧರಿ
ಮಾನ್ಯ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರು
ಭಾರತ ಸರ್ಕಾರ
ಶ್ರೀ ಬಸವರಾಜ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು
ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಸಂಸದರು, ಹಾವೇರಿ-ಗದಗ ಲೋಕಸಭಾ ಕ್ಷೇತ್ರ
ಡಾ. ನಿಮ್ಮಲ ರಾಮ ನಾಯ್ಡು
ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ
ಆಂಧ್ರಪ್ರದೇಶ ಸರ್ಕಾರ
ಶ್ರೀ ಪಯ್ಯಾವುಲ ಕೇಶವ್
ಮಾನ್ಯ ಸಚಿವರು, ಹಣಕಾಸು, ಯೋಜನೆ, ವಾಣಿಜ್ಯತೆರಿಗೆ & ಸಂಸದೀಯ ವ್ಯವಹಾರಗಳ ಖಾತೆ, ಆಂಧ್ರಪ್ರದೇಶ ಸರ್ಕಾರ
ಶ್ರೀ ಎನ್. ಉತ್ತಮ್ ಕುಮಾರ್ ರೆಡ್ಡಿ
ಮಾನ್ಯ ಸಚಿವರು, ನೀರಾವರಿ ಇಲಾಖೆ & ಸಿಎಡಿ, ತೆಲಂಗಾಣ ಸರ್ಕಾರ
ಶ್ರೀ ಸಲೀಂ ಅಹಮದ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಶಾಸಕರು (ವಿಧಾನ ಪರಿಷತ್)

ಮುಖ್ಯ ಅತಿಥಿಗಳು
ಶ್ರೀ ಕೆ. ರಾಜಶೇಖರ ಹಿಟ್ನಾಳ್
ಮಾನ್ಯ ಸಂಸದರು
ಕೊಪ್ಪಳ ಲೋಕಸಭಾ ಕ್ಷೇತ್ರ
ಶ್ರೀ ಪಿ. ಸಿ. ಗದ್ದಿಗೌಡರ
ಮಾನ್ಯ ಸಂಸದರು
ಬಾಗಲಕೋಟೆ ಲೋಕಸಭಾ ಕ್ಷೇತ್ರ
ಶ್ರೀ ಈ. ತುಕಾರಾಮ್
ಮಾನ್ಯ ಸಂಸದರು
ಬಳ್ಳಾರಿ ಲೋಕಸಭಾ ಕ್ಷೇತ್ರ
ಡಾ. ಪ್ರಭಾ ಮಲ್ಲಿಕಾರ್ಜುನ್
ಮಾನ್ಯ ಸಂಸದರು
ದಾವಣಗೆರೆ ಲೋಕಸಭಾ ಕ್ಷೇತ್ರ
ಶ್ರೀ ಜಿ. ಕುಮಾರ್ ನಾಯಕ್
ಮಾನ್ಯ ಸಂಸದರು
ರಾಯಚೂರು ಲೋಕಸಭಾ ಕ್ಷೇತ್ರ
ಡಾ. ಸೈಯದ್ ನಾಸಿರ್ ಹುಸೇನ್
ಮಾನ್ಯ ರಾಜ್ಯಸಭಾ ಸದಸ್ಯರು
ಬಳ್ಳಾರಿ
ಹಾಗೂ ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಮತ್ತು ಗದಗ ಜಿಲ್ಲಾ ವ್ಯಾಪ್ತಿಯ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು.

ಅಧ್ಯಕ್ಷತೆ
ಶ್ರೀ ಕೆ. ರಾಘವೇಂದ್ರ ಹಿಟ್ನಾಳ್
ಮಾನ್ಯ ಶಾಸಕರು,
ಕೊಪ್ಪಳ ವಿಧಾನಸಭಾ ಕ್ಷೇತ್ರ

ಸ್ವಾಗತ ಕೋರುವವರು
ಶ್ರೀ ಗೌರವ್ ಗುಪ್ತ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ
ಶ್ರೀ ರಾಜೇಶ್ ಅಮ್ಮಿನಭಾವಿ, ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ
ಶ್ರೀ ಕೃಷ್ಣಮೂರ್ತಿ ಬಿ. ಕುಲಕರ್ಣಿ, ಕೆ.ಇ.ಎಸ್.
ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ
ಶ್ರೀ ಎಸ್. ಎನ್. ಪಾಂಡೆ, ಐ.ಇ.ಎಸ್.
ಮಾನ್ಯ ಅಧ್ಯಕ್ಷರು, ತುಂಗಭದ್ರಾ ಮಂಡಳಿ

ಪಾಕ್ ಸುಳ್ಳನ್ನು ಬೆಂಬಲಿಸಿದ್ದ ರಾಗಾ: ಬಿಜೆಪಿ

ದೇಶಕ್ಕೆ ಕಾಂಗ್ರೆಸ್ ವಿವರಣೆ ನೀಡಲಿ

• **ಹೊಸದಿಲ್ಲಿ** : 'ಆಪರೇಷನ್ ಸಿಂದೂರ' ವೇಳೆ ಪಾಕಿಸ್ತಾನದ ಸುಳ್ಳುಪ್ರಚಾರವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರೂಪಣೆಗೈದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಗ ದೇಶಕ್ಕೆ ಈ ಬಗ್ಗೆ ವಿವರಣೆ ನೀಡಬೇಕಾಗಿದೆ ಎಂದು ಬಿಜೆಪಿ ಬುಧವಾರ ಆಗ್ರಹಿಸಿದೆ. ತಾನು ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಹೇಳಿಕೊಂಡ ಪಾಕಿಸ್ತಾನದಿಂದ ಆಧಾರ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನೇ ಪ್ರಶ್ನಿಸಿದ್ದು, ರಾಹುಲ್ ಗಾಂಧಿಯ ಕುತ್ಸಿತ ಉದ್ದೇಶವನ್ನು ವ್ಯಕ್ತಗೊಳಿಸಿದ್ದು, ಈ ಬಗ್ಗೆ ಈಗ ದೇಶಕ್ಕೆ ಉತ್ತರಿಸಬೇಕು ಎಂದು ಅದು ಹೇಳಿದೆ.

ಪಾಕಿಸ್ತಾನ ತಾನು 'ಆಪರೇಷನ್ ಸಿಂದೂರ'ವೇಳೆ ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪ್ರಚುರಪಡಿಸಿತ್ತು. ಇತ್ತೀಚೆಗೆ ಭಾರತೀಯ ವಾಯುಪಡೆ(ಐಎಎಫ್) ಎಲ್ಲ 36 ರಾಫೆಲ್ ಯುದ್ಧ ವಿಮಾನಗಳಿಗೆ ಪೂರಕ ಪ್ಯಾಕೇಜ್‌ಗಾಗಿ ಟೆಂಡರ್ ಕರೆದಿದ್ದನ್ನು ಬಿಜೆಪಿ ಬೊಟ್ಟು ಮಾಡಿದ್ದು, ಪಾಕಿಸ್ತಾನ ಹಲವು ಸಮಯದಿಂದ ಹೇಳುತ್ತಾ ಬಂದಿದ್ದ ಸುಳ್ಳನ್ನು ಬಯಲಿಗೆಳೆದಿರುವುದನ್ನು ಎತ್ತಿತೋರಿದೆ.

ವಿಪರ್ಯಾಸವೆಂದರೆ, ಪಾಕಿಸ್ತಾನವು ಪ್ರಚುರಪಡಿಸಿದ್ದ ಇಂತಹ ಸುಳ್ಳು ಪ್ರಚಾರವನ್ನು ಭಾರತೀಯ ಸೇನೆ ತಿರಸ್ಕರಿಸಿದ್ದರೂ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಕಿಸ್ತಾನದಿಂದ ಇಂತಹ ಪ್ರಚಾರಕ್ಕೆ ಸಾಕ್ಷ್ಯ ಕೇಳುವ ಬದಲಿಗೆ ಭಾರತ ಸರಕಾರವನ್ನೇ ಪ್ರಶ್ನಿಸಿ ಮುಜುಗರವನ್ನುಂಟು ಮಾಡಲು ಯತ್ನಿಸಿದರು. ಆಪರೇಷನ್ ಸಿಂದೂರ್‌ನ ಸಂದರ್ಭ ಭಾರತವು ಗಂಭೀರ ರಾಷ್ಟ್ರೀಯ ಭದ್ರತಾ ಸವಾಲನ್ನು ಎದುರಿಸುತ್ತಿದ್ದರೆ, ರಾಹುಲ್ ಗಾಂಧಿ ಮಾತ್ರ ಭಾರತದ ರಾಫೆಲ್ ಯುದ್ಧ ವಿಮಾನಗಳಿಗೆ ಸಂಬಂಧಿಸಿ ಪಾಕಿಸ್ತಾನ ನಡೆಸುತ್ತಿದ್ದ ಸುಳ್ಳು ಪ್ರಚಾರಗಳನ್ನೇ ಬೆಂಬಲಿಸುವ ಪ್ರಶ್ನೆಗಳು ಮತ್ತು ನಿರೂಪಣೆಗಳನ್ನು ವಿಸ್ತರಿಸಲು ಯತ್ನಿಸುತ್ತಿದ್ದರು ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ತೀವ್ರವಾಗಿ ಖಂಡಿಸಿದ್ದಾರೆ.

ಭಾರತದ ರಾಫೆಲ್ ಸಮರ ವಿಮಾನಗಳನ್ನು ಹೊಡೆದುರುಳಿಸಿದ್ದೇನೆಂದು ಪ್ರಚುರಪಡಿಸುವ ಸುಳ್ಳುಪ್ರಚಾರವನ್ನು ಪಾಕಿಸ್ತಾನದ ಮಾಹಿತಿ ವ್ಯವಸ್ಥೆಗಳು ಆಕ್ರಮಣಕಾರಿಯಾಗಿ ನಡೆಸುತ್ತಿದ್ದವು. ಇತ್ತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವೈರಿಯ ಈ ದುರುದ್ದೇಶದ ಪ್ರಚಾರಕ್ಕೆ ನ್ಯಾಯ ಸಮ್ಮತತೆಯನ್ನು ನೀಡಿದರು. ಸುಳ್ಳು ಪ್ರಚಾರಕ್ಕೆ ಪಾಕಿಸ್ತಾನದಿಂದ ಸಾಕ್ಷ್ಯ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನು ಪ್ರಶ್ನಿಸಿದ್ದರು ಎಂದು ಮಾಳವೀಯ ನೆನಪಿಸಿದರು. ರಾಷ್ಟ್ರೀಯ ಭದ್ರತಾ ಕಾರ್ಯಾಚರಣೆಗಳ ವೇಳೆ ವೈರಿಯ ಸುಳ್ಳು ಮಾಹಿತಿ ಅಭಿಯಾನಕ್ಕೆ ಆಮ್ಲಜನಕ ಒದಗಿಸುವುದು ಅತ್ಯಂತ ಬೇಜವಾಬ್ದಾರಿ ರಾಜಕೀಯ ಮಾತ್ರವಲ್ಲ, ರಾಷ್ಟ್ರೀಯ ಹಿತಕ್ಕೇ ಬಗೆಯುವ ದ್ರೋಹ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಈಗ ರಾಹುಲ್ ಗಾಂಧಿ ತನ್ನ ಕೃತ್ಯದ ಬಗ್ಗೆ ದೇಶದ ಜನತೆಗೆ ಉತ್ತರಿಸಲಿ ಎಂದರು. ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪಾಕಿಸ್ತಾನ ಹೇಳಿಕೊಂಡಾಗ ಅದಕ್ಕೆ ಸಾಕ್ಷ್ಯ ನೀಡುವಂತೆ ಭಾರತ ಕೇಳಿದಾಗ ಅಂತಹ ಯಾವುದೇ ಸಾಕ್ಷ್ಯ ನೀಡಲು ಪಾಕಿಸ್ತಾನ ವಿಫಲವಾಗಿತ್ತು. ಅಲ್ಲದೆ ಫ್ರಾನ್ಸ್‌ನ ರಾಫೆಲ್ ಸಂಸ್ಥೆ ಕೂಡ ಯಾವುದೇ ರಾಫೆಲ್ ವಿಮಾನ ಪತನವಾಗಿರುವುದನ್ನು ನಿರಾಕರಿಸಿತ್ತು. ಅನಂತರ ತನ್ನ ಮುಖವುಳಿಸಿಕೊಳ್ಳಲು ಪಾಕಿಸ್ತಾನ ಮುಂದುವರಿಸಿದ್ದ ಅಪಪ್ರಚಾರಕ್ಕೆ ಭಾರತ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿತ್ತು.

ನೀಟ್ ಮರು ಪರೀಕ್ಷೆ ಸುಗಮ ಪ್ರಶಂಸಾರ್ಹ: ಮೋದಿ

ಇಲಾಖೆಗಳ ಸಮನ್ವಯ ಮುಖ್ಯ

• **ಹೊಸದಿಲ್ಲಿ:** ವಿವಿಧ ಇಲಾಖೆಗಳ ಮಧ್ಯೆ ಪರಸ್ಪರ ಸಮನ್ವಯತೆ ತೀರಾ ಮುಖ್ಯವೆಂದು ಬುಧವಾರ ಕೇಂದ್ರ ಸಂಪುಟ ಸಭೆಯಲ್ಲಿ ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ನೀಟ್-ಯುಜಿ ಮರು ಪರೀಕ್ಷೆ ಸುಗಮವಾಗಿ ನಡೆಯುವಲ್ಲಿ ಇಂತಹ ಸಮನ್ವಯ ಪ್ರಯತ್ನಗಳ ಸಾಕಾರ ಪ್ರಶಂಸಾರ್ಹ ಎಂದು ಪ್ರಶಂಸಿಸಿದ್ದಾರೆ.

ನೀಟ್ ಮರು ಪರೀಕ್ಷೆ ಪಾರದರ್ಶಿಯಾಗಿ ನಡೆದುದನ್ನು ಉದಾಹರಿಸಿದ ಪ್ರಧಾನಿ ಮೋದಿ, ವಿವಿಧ ಖಾತೆಗಳ ನಡುವೆ ಸಂಪೂರ್ಣ ಸಮನ್ವಯತೆ ಮುಖ್ಯವೆಂದು ಪುನರುಚ್ಚರಿಸಿದರು. ಸಂಪೂರ್ಣವಾಗಿ ಸರಕಾರದ ಧೋರಣೆ-ಪ್ರಯತ್ನಗಳ ಬಲದಿಂದ ಸವಾಲುಗಳು, ಸಮಸ್ಯೆಗಳ ನಿಭಾಯಿಸುವಂತೆ ಸಲಹೆ ಮಾಡಿದರು. ವಿವಿಧ ಖಾತೆಗಳು ಅಸೀಮ ಮತ್ತು ಸಮನ್ವಯತೆ ನೆಲೆಯಲ್ಲಿ ಕಾರ್ಯತತ್ಪರರಾದಲ್ಲಿ ಯಾವುದೇ ಸವಾಲುಗಳ ಎದುರಿಸಲು ಸಾಧ್ಯವೆಂದು ಹೇಳಿದರು. ಇಂಧನ ಕೊರತೆ ಜನಸಾಮಾನ್ಯರನ್ನು ಬಾಧಿಸದಿರಲು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಿ ಎಂದು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲೂ ವಿವಿಧ ಇಲಾಖೆಗಳಿಗೆ ಮೋದಿ ಕರೆ ನೀಡಿದ್ದರು. ತನ್ಮೂಲಕ ಸಮನ್ವಯತೆಯ ಮಹತ್ತ್ವವನ್ನು ಪ್ರತಿಪಾದಿಸಿದ್ದರು. ಇಂಧನ ಭದ್ರತೆ, ಸಾಗರ ಸುರಕ್ಷೆ, ಭಾರತೀಯರಿಗೆ ನೆರವು ಕಲ್ಪಿಸುವನ್ವಯ ವಿವಿಧ ಖಾತೆಗಳು ಜಂಟಿಯಾಗಿ ಸಮನ್ವಯದ ಪ್ರಯತ್ನಗಳನ್ನು ನಡೆಸಬೇಕೆಂದು ಕರೆ ನೀಡಿದ್ದರು. ಪ.ಏಷ್ಯಾ ಸಮರದ ಹಿನ್ನೆಲೆಯಲ್ಲಿ ಇಂಧನ ಭದ್ರತಾ ಸನ್ನಿವೇಶ ಬಗ್ಗೆ ಸಕಾಲಿಕ ಮಾಹಿತಿ ಒದಗಿಸುವುದಕ್ಕಾಗಿ, ಅಂತರ್ ಸಚಿವಾಲಯ ತಂಡಗಳನ್ನು ಸರಕಾರ ರಚಿಸಿತ್ತು ಮತ್ತು ನಿಯತವಾಗಿ ಸಭೆಗಳನ್ನು ಆಯೋಜಿಸಿತ್ತು.

ಎಫ್‌ಸಿಆರ್‌ಎ ನಿಯಮ ಬಿಗಿ

ವಿದೇಶಿ ನಿಧಿಯಿಂದ ಮತಾಂತರ ಚಟುವಟಿಕೆಗೆ ನಿರ್ಬಂಧ

ವಿದೇಶಿ ನಿಧಿ ಪಡೆಯುವ ಸರ್ಕಾರೇತರ ಸಂಸ್ಥೆಗಳ(ಎನ್‌ಜಿಒ) ಮೇಲೆ ಕೇಂದ್ರ ಸರ್ಕಾರ ಹೊಸ ನಿಯಮಗಳನ್ನು ಜಾರಿಗೊಳಿಸಿದ್ದು, ಮಾಹಿತಿ ಬಹಿರಂಗಪಡಿಸುವಿಕೆ ಮತ್ತು ಮೇಲ್ವಿಚಾರಣೆಯನ್ನು ಇನ್ನಷ್ಟು ಕಠಿಣಗೊಳಿಸಿದೆ. ಜತೆಗೆ, ವಿದೇಶಿ ನಿಧಿಯಿಂದ ನಡೆಸುವ ಧಾರ್ಮಿಕ ಚಟುವಟಿಕೆಗಳ ವ್ಯಾಪ್ತಿಯಿಂದ ಮತಾಂತರವನ್ನು ಹೊರಗಿಡಲಾಗಿದೆ. ಈ ಪೈಕಿ ಮುಖ್ಯವಾಗಿ ವಿದೇಶಿ ದೇಣಿಗೆಯನ್ನು ಬಳಸಿಕೊಂಡು ಮತಾಂತರ ಅಥವಾ ಮತಪ್ರಚಾರ ಚಟುವಟಿಕೆ ನಡೆಸುವುದಕ್ಕೆ ಕಡಿವಾಣ ಹಾಕಿದೆ. ಈ ಮೂಲಕ ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳಿಗೆ ವಿದೇಶಿ ನಿಧಿ ಸ್ವೀಕಾರ ಮತ್ತು ಬಳಕೆಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಹೊಸ ನಿಯಮ ಪ್ರಕಟ

ಕೇಂದ್ರ ಗೃಹ ಸಚಿವಾಲಯ ಈ ತಿದ್ದುಪಡಿ ನಿಯಮಗಳನ್ನು ಪ್ರಕಟಿಸಿದೆ. ವಿದೇಶಿ ಕೊಡುಗೆ (ನಿಯಂತ್ರಣ) ಕಾಯ್ದೆ(ಎಫ್‌ಸಿಆರ್‌ಎ) ಅನ್ವಯ ನೋಂದಣಿ ಅಥವಾ ಪೂರ್ವಾನುಮತಿ ಪಡೆಯಲು ಅರ್ಜಿ ಸಲ್ಲಿಸುವ ಎನ್‌ಜಿಒಗಳಿಗೆ ಈ ನಿಯಮಗಳು ಅನ್ವಯವಾಗುತ್ತವೆ. ಹೊಸ ನಿಯಮಗಳ ಪ್ರಕಾರ, ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರ, ಉದ್ದೇಶಗಳು, ಕಾರ್ಯನಿರ್ವಹಿಸುವ ರಾಜ್ಯಗಳು, ವಿದೇಶಿ ದಾನಿಗಳು, ಸಾಮಾಜಿಕ ಜಾಲತಾಣ ಖಾತೆಗಳು, ವಿದೇಶಿ ನಿಧಿಯ ಬಳಕೆ ಹಾಗೂ ಯಾವ ಉದ್ದೇಶಕ್ಕಾಗಿ ನಿಧಿ ಕೇಳಲಾಗುತ್ತಿದೆ ಎಂಬುದರ ಕುರಿತು ವಿವರವಾದ ಮಾಹಿತಿ ನೀಡಬೇಕಾಗುತ್ತದೆ.

ವಿದೇಶಿ ನಾಗರಿಕರಿಗೆ ಪ್ರಮುಖ ಹುದ್ದೆಗಳಿಲ್ಲ

ಅಧಿಸೂಚನೆಯ ಪ್ರಕಾರ, ಭಾರತೀಯ ಮೂಲದವರಲ್ಲದ ವಿದೇಶಿ ನಾಗರಿಕರು ಪ್ರಮುಖ ಪದಾಧಿಕಾರಿಗಳಾಗಿರುವ ಸಂಸ್ಥೆಗಳಿಗೆ ಸಾಮಾನ್ಯ ನಿಯಮಗಳಲ್ಲಿ ಎಫ್‌ಸಿಆರ್‌ಎ ನೋಂದಣಿ ಅಥವಾ ಪೂರ್ವಾನುಮತಿ ನೀಡಲಾಗುವುದಿಲ್ಲ. ಈ ಬಗ್ಗೆ ಹೊಸ ಸ್ಪಷ್ಟೀಕರಣವನ್ನು ನಿಯಮಗಳಲ್ಲಿ ಸೇರಿಸಲಾಗಿದ್ದು, ಇಂತಹ ಸಂಸ್ಥೆಗಳು ನೇರವಾಗಿ ಅರ್ಹವೆಂದು ಪರಿಗಣಿಸಲ್ಪಡುವುದಿಲ್ಲ ಎಂದು ತಿಳಿಸಲಾಗಿದೆ.

ಧಾರ್ಮಿಕ ಚಟುವಟಿಕೆಗಳ ವ್ಯಾಖ್ಯಾನ

ತಿದ್ದುಪಡಿ ನಿಯಮಗಳು ವಿದೇಶಿ ನಿಧಿಯಿಂದ ನಡೆಸಬಹುದಾದ ಧಾರ್ಮಿಕ ಚಟುವಟಿಕೆಗಳ ಪಟ್ಟಿಯನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸಿವೆ. ಪೂಜಾಸ್ಥಳಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಪವಿತ್ರ ಗ್ರಂಥಗಳ ಸಂರಕ್ಷಣೆ, ಮುದ್ರಣ, ಅನುವಾದ ಮತ್ತು ಡಿಜಿಟಲೀಕರಣ, ಧಾರ್ಮಿಕ ಅಧ್ಯಯನ ಸಂಸ್ಥೆಗಳ ಸಂರಕ್ಷಣೆ, ಯಾತ್ರಿಕರ ಸೌಲಭ್ಯಗಳು, ಧರ್ಮಶಾಲೆಗಳು, ಲಂಗರ್ ಮತ್ತು ಸಮುದಾಯ ಅಡುಗೆ ಕೇಂದ್ರಗಳು, ಧಾರ್ಮಿಕ ಶಿಕ್ಷಣ, ಆಧ್ಯಾತ್ಮಿಕ ಪ್ರವಚನಗಳು, ಭಕ್ತಿಗೀತೆಗಳು, ಮೂಲನಿವಾಸಿ ಮತ್ತು ಬುಡಕಟ್ಟು ಧಾರ್ಮಿಕ ಪರಂಪರೆಗಳ ಸಂರಕ್ಷಣೆ, ಧಾರ್ಮಿಕ ಪರಂಪರೆಯ ತಾಣ ಗಳ ರಕ್ಷಣೆ, ಅಂತರ್‌ಧರ್ಮ ಸಂವಾದ ಕಾರ್ಯಕ್ರಮಗಳು, ಧಾರ್ಮಿಕ ಪ್ರಕಟಣೆಗಳು, ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು, ಧಾರ್ಮಿಕ ಸಂಸ್ಥೆಗಳ ಸಲಹಾ ಮತ್ತು ವ್ಯಸನಮುಕ್ತಿ ಕೇಂದ್ರಗಳು, ಸಾಂಪ್ರದಾಯಿಕ ಕಲೆಗಳ ತರಬೇತಿ ಹಾಗೂ ಸಮಾಧಿ ಮತ್ತು ಸ್ಮಶಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಇವುಗಳಿಗೆ ಅನುಮತಿ ನೀಡಲಾಗಿದೆ.

ಆರೋಗ್ಯ, ನೈರ್ಮಲ್ಯ ಮತ್ತು ಮಕ್ಕಳ ರಕ್ಷಣೆಗೆ ನಿಧಿ

ಸಾಮಾಜಿಕ ವಲಯದಲ್ಲಿ ಶೌಚಾಲಯ ನಿರ್ಮಾಣ, ನೈರ್ಮಲ್ಯ ಜಾಗೃತಿ, ಋತುಸ್ರಾವ ಆರೋಗ್ಯ ಕಾರ್ಯಕ್ರಮಗಳು, ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉಪಶಾಮಕ ಚಿಕಿತ್ಸೆ ಮತ್ತು ಅಂತಿಮ ಹಂತದ ಆರೈಕೆ ಸೇವೆಗಳಿಗೆ ವಿದೇಶಿ ಹಣ ಬಳಸಬಹುದಾಗಿದೆ. ಅನಾಥಾಶ್ರಮಗಳು, ಮಕ್ಕಳ ಪೋಷಕ ಆರೈಕೆ, ದತ್ತು ಸ್ವೀಕಾರಕ್ಕೆ ನೆರವು ಮತ್ತು ಮಕ್ಕಳ ರಕ್ಷಣಾ ಕೇಂದ್ರಗಳಿಗೂ ವಿದೇಶಿ ನಿಧಿ ಪಡೆಯಲು ಅವಕಾಶ ನೀಡಲಾಗಿದೆ.

ಸ್ಪಷ್ಟ ಉದ್ದೇಶ ಘೋಷಣೆ ಕಡ್ಡಾಯ

ತಿದ್ದುಪಡಿ ನಿಯಮಗಳ ಪ್ರಕಾರ, ಎನ್‌ಜಿಒಗಳು ತಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿ ಘೋಷಿಸಬೇಕು. ಸಂಸ್ಥೆಗಳು ಪಡೆದ ವಿದೇಶಿ ನಿಧಿಯನ್ನು ಭಾರತದಲ್ಲಿ ಮಾತ್ರ ಬಳಸಬೇಕು ಹಾಗೂ ಅದು ಸಂಸ್ಥೆಯ ಘೋಷಿತ ಉದ್ದೇಶಗಳು ಮತ್ತು ನಿಧಿ ಪಡೆದ ಕಾರಣಗಳಿಗೆ ಅನುಗುಣವಾಗಿರಬೇಕು ಎಂದು ಅಧಿಸೂಚನೆ ತಿಳಿಸಿದೆ. ಹೀಗಾಗಿ, ಸಂಸ್ಥೆಗಳು ಅನುಮತಿ ಪಡೆಯುವ ಸಂದರ್ಭ ದಲ್ಲಿ ನೀಡಿದ ಉದ್ದೇಶಗಳ ಪ್ರಕಾರವೇ ವಿದೇಶಿ ನಿಧಿಯನ್ನು ಬಳಸಬೇಕಾಗುತ್ತದೆ.

ನಿಧಿ ಬಳಕೆಗೆ ಕಠಿಣ ಷರತ್ತುಗಳು

ಹೊಸ ನಿಯಮಗಳಲ್ಲಿ ವಿದೇಶಿ ನಿಧಿಯ ಕಂತುಗಳ ಬಿಡುಗಡೆಗೆ ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಲಾಗಿದೆ. ಎರಡನೇ ಅಥವಾ ನಂತರದ ಕಂತಿನ ಬಿಡುಗಡೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ಫಾರ್ಮ್ ಎಫ್‌ಸಿ -3ಬಿಬಿ ಮೂಲಕ ಅರ್ಜಿ ಸಲ್ಲಿಸಬೇಕು. ಹಿಂದಿನ ಕಂತಿನಲ್ಲಿ ಪಡೆದ ನಿಧಿಯ ಕನಿಷ್ಠ ಶೇ.75 ಬಳಸಿದ ನಂತರ ಮಾತ್ರ ಮುಂದಿನ ಕಂತು ಬಿಡುಗಡೆಗೊಳ್ಳಲಿದೆ. ಇದಕ್ಕೂ ಮೊದಲು, ನಿಧಿಯ ಬಳಕೆಯನ್ನು ಪರಿಶೀಲಿಸಲು ಕ್ಷೇತ್ರಮಟ್ಟದ ತನಿಖೆ ಅಥವಾ ಪರಿಶೀಲನೆ ನಡೆಸಲಾಗುತ್ತದೆ.

ಕಾರ್ಯವ್ಯಾಪ್ತಿ ಬದಲಾವಣೆ ಕಷ್ಟ

ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಅಥವಾ ಬದಲಾಯಿಸಲು ಬಯಸುವ ಸಂಸ್ಥೆಗಳಿಗೂ ಹೊಸ ನಿಯಮಗಳು ಅನ್ವಯವಾಗುತ್ತವೆ. ಹೊಸದಾಗಿ ಸೇರಿಸಲಾದ ರೂಲ್ 17ಬಿ ಪ್ರಕಾರ, ನೋಂದಣಿ ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾದ ಉದ್ದೇಶ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಸೇರಿಸಲು ಅಥವಾ ತೆಗೆದುಹಾಕಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕು. ಈ ಸಂಬಂಧ ಫಾರ್ಮ್ ಎಫ್‌ಸಿ-6ಎಫ್ ಮೂಲಕ ಅರ್ಜಿ ಸಲ್ಲಿಸಬೇಕು. ಜತೆಗೆ ಆಡಳಿತ ಮಂಡಳಿಯ ನಿರ್ಣಯ ಮತ್ತು ನಿಗದಿತ ಶುಲ್ಕವನ್ನು ಸಲ್ಲಿಸಬೇಕಾಗುತ್ತದೆ. ಅರ್ಜಿ ಕುರಿತು ಅಗತ್ಯ ತನಿಖೆ ನಡೆಸಿದ ಬಳಿಕ ಕೇಂದ್ರ ಸರ್ಕಾರ ಅನುಮೋದನೆ ಅಥವಾ ನಿರಾಕರಣೆ ನೀಡಬಹುದು.

ಮತಾಂತರಕ್ಕೆ ಅವಕಾಶವಿಲ್ಲ

ಆದರೆ, ಧರ್ಮಪ್ರಚಾರದ ಮೂಲಕ ಮತಾಂತರ ಮಾಡುವ ಚಟುವಟಿಕೆಗಳನ್ನು ಅನುಮತಿಸಲ್ಪಟ್ಟ ಧಾರ್ಮಿಕ ಚಟುವಟಿಕೆಗಳ ಪಟ್ಟಿಯಿಂದ ಸ್ಪಷ್ಟವಾಗಿ ಹೊರಗಿಡಲಾಗಿದೆ. ಧಾರ್ಮಿಕ ಶಿಕ್ಷಣ, ಸತ್ಸಂಗ, ಆಧ್ಯಾತ್ಮಿಕ ಪ್ರವಚನಗಳು ಮತ್ತು ಧ್ಯಾನ ಶಿಬಿರಗಳಿಗೆ ಅನುಮತಿ ಇದ್ದರೂ, ಅವುಗಳಲ್ಲಿ ಮತಾಂತರ ಉದ್ದೇಶ ಇರಬಾರದು ಎಂದು ನಿಯಮಗಳು ಹೇಳುತ್ತವೆ. ಅದೇ ರೀತಿ, ಮೂಲನಿವಾಸಿ ಮತ್ತು ಬುಡಕಟ್ಟು ಧಾರ್ಮಿಕ ಸಂಪ್ರದಾಯಗಳನ್ನು ದಾಖಲಿಸುವ ಅಥವಾ ಪುನರುಜ್ಜೀವನಗೊಳಿಸುವ ಕಾರ್ಯಗಳಿಗೆ ಅವಕಾಶವಿದ್ದರೂ, ಅವು ಮತಾಂತರಕ್ಕೆ ಕಾರಣವಾಗಬಾರದು.

ಭಾರತೀಯ ಪರಂಪರೆ ಆಧರಿತ ಕಲೆಗೆ ನೆರವು

ಸಾಂಸ್ಕೃತಿಕ ವಲಯದಲ್ಲಿ ಭಾರತೀಯ ಸಂಪ್ರದಾಯಗಳಿಂದ ಪ್ರೇರಿತವಾದ ಸಮಕಾಲೀನ ಕಲೆಗಳ ಪ್ರೋತ್ಸಾಹಕ್ಕೆ ವಿದೇಶಿ ಹಣ ಬಳಸಬಹುದು. ಆದರೆ ರಾಜಕೀಯ ಮತ್ತು ಸೈದ್ಧಾಂತಿಕ ವಿಷಯಗಳಿಗೆ ಅವಕಾಶ ಇರುವುದಿಲ್ಲ. ದೃಶ್ಯಕಲೆ, ಶಿಲ್ಪಕಲೆ, ಸಿನಿಮಾ, ಛಾಯಾಗ್ರಹಣ ಮತ್ತು ವಿನ್ಯಾಸದ ಅಭಿವೃದ್ಧಿ, ಸಾಂಸ್ಕೃತಿಕ ಮಾನವಶಾಸ್ತ್ರ, ಜನಾಂಗಶಾಸ್ತ್ರ ಮತ್ತು ಜಾನಪದ ಅಧ್ಯಯನದ ಸಂಶೋಧನೆಗೆ ವಿದೇಶಿ ನೆರವು ಪಡೆಯಬಹುದಾಗಿದೆ. ಭರತನಾಟ್ಯ, ಕಥಕ್, ಒಡಿಸ್ಸಿ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಮತ್ತು ಯಕ್ಷಗಾನ ಸೇರಿದಂತೆ ಶಾಸ್ತ್ರೀಯ ಕಲೆಗಳ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೂ ವಿದೇಶಿ ದೇಣಿಗೆ ಬಳಸಬಹುದು.

ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ

ಚಲನಚಿತ್ರಗಳು, ಆಕಾಶವಾಣಿ ಕಾರ್ಯಕ್ರಮಗಳು, ನಾಟಕದ ಹಸ್ತಪ್ರತಿಗಳು ಮತ್ತು ಛಾಯಾಚಿತ್ರಗಳ ಸಂಗ್ರಹ ಹಾಗೂ ಅಂಕೀಕರಣ, ಖಗೋಳಶಾಸ್ತ್ರ, ಗಣಿತ, ಲೋಹಶಾಸ್ತ್ರದ ಹಸ್ತಪ್ರತಿಗಳು ಮತ್ತು ಸಾಂಪ್ರದಾಯಿಕ ತಂತ್ರಜ್ಞಾನಗಳಂತಹ ವೈಜ್ಞಾನಿಕ ಹಾಗೂ ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ ನೀಡಲಾಗಿದೆ. ಸಾಹಿತ್ಯ ಅಕಾಡೆಮಿಗಳ ಸ್ಥಾಪನೆ, ಲೇಖಕರು, ಕವಿಗಳು ಮತ್ತು ಅನುವಾದಕರಿಗೆ ಬೆಂಬಲ ಹಾಗೂ ಪುಸ್ತಕ ಮೇಳಗಳ ಆಯೋಜನೆಗೂ ವಿದೇಶಿ ಹಣ ಬಳಸಬಹುದು.

ಶಿಕ್ಷಣ, ಉದ್ಯೋಗಕ್ಕೂ ಅನುಕೂಲ

ವಲಸೆ ಕಾರ್ಮಿಕರು, ನಿರಾಶ್ರಿತರು ಮತ್ತು ಅಲೆಮಾರಿ ಸಮುದಾಯಗಳ ಮಕ್ಕಳ ಶಿಕ್ಷಣ, ಶಾಲೆಗಳಲ್ಲಿ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣಕ್ಕೂ ವಿದೇಶಿ ದೇಣಿಗೆ ಬಳಸಬಹುದಾಗಿದೆ.ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅಧ್ಯಯನ ವೇತನ, ಮಾಸಿಕ ಭತ್ಯೆ ಮತ್ತು ಆರ್ಥಿಕ ನೆರವು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಶಿಕ್ಷಣ ಕಾರ್ಯಕ್ರಮಗಳು, ವಿಜ್ಞಾನ ಸಂಘಗಳು ಮತ್ತು ಆವಿಷ್ಕಾರ ಮೇಳಗಳಿಗೂ ನೆರವು ಪಡೆಯಬಹುದು. ಯುವ ನಾಯಕತ್ವ ಮತ್ತು ನಾಗರಿಕ ಭಾಗವಹಿಸುವಿಕೆ ಕಾರ್ಯಕ್ರಮಗಳೂ ಅನುಮತಿಸಲಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸೇರಿವೆ.

ಕಿರುಸುದ್ದಿ

ಪಾಸ್‌ಪೋರ್ಟ್ ಪೌರತ್ವಕ್ಕೆ ಅಂತಿಮ ಪುರಾವೆಯಲ್ಲ!

• **ಹೊಸದಿಲ್ಲಿ:** ಭಾರತೀಯ ಪಾಸ್‌ಪೋರ್ಟ್ ಹೊಂದಿದ ಮಾತ್ರಕ್ಕೆ ವ್ಯಕ್ತಿಯ ಪೌರತ್ವವನ್ನು ನಿರ್ಣಾಯಕವಾಗಿ ಸಾಬೀತುಪಡಿಸುವುದಿಲ್ಲ ಎಂದು ಕೇಂದ್ರ ವಿದೇಶಾಂಗ ಸಚಿವಾಲಯ ಸ್ಪಷ್ಟಪಡಿಸಿದೆ. ಪಾಸ್‌ಪೋರ್ಟ್ ಭಾರತೀಯ ನಾಗರಿಕರಿಗೆ ಮಾತ್ರ ನೀಡಲಾಗುತ್ತದೆಯಾದರೂ, ಅದು ಮೂಲತಃ ಅಂತಾರಾಷ್ಟ್ರೀಯ ಪ್ರಯಾಣಕ್ಕೆ ಅನುಕೂಲ ಕಲ್ಪಿಸುವ ಸರ್ಕಾರಿ ದಾಖಲೆಯಾಗಿದೆ ಎಂದು ತಿಳಿಸಿದೆ. ಪಾಸ್‌ಪೋರ್ಟ್ ಅನ್ನು ಕೇಂದ್ರ ಸರ್ಕಾರವೇ ವಿತರಿಸುತ್ತದೆ. ಅರ್ಜಿದಾರರ ಹೆಸರು, ವಿಳಾಸ, ಗುರುತು ಹಾಗೂ ಪೌರತ್ವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಅದನ್ನು ನೀಡಲಾಗುತ್ತದೆ. ಆದರೆ ಪಾಸ್‌ಪೋರ್ಟ್ ಹೊಂದಿರುವುದೊಂದೇ ಕಾನೂನಿನ ದೃಷ್ಟಿಯಲ್ಲಿ ಪೌರತ್ವವನ್ನು ಅಂತಿಮವಾಗಿ ಸ್ಥಾಪಿಸುವುದಿಲ್ಲ ಎಂದು ಸಚಿವಾಲಯ ಹೇಳಿದೆ. ಪಾಸ್‌ಪೋರ್ಟ್‌ನ ಕೊನೆಯ ಪುಟದಲ್ಲಿಯೂ ಅದು ಭಾರತ ಸರ್ಕಾರದ ಆಸ್ತಿಯಾಗಿದ್ದು, ಸರ್ಕಾರ ಸೂಚಿಸಿದಾಗ ಅದನ್ನು ಹಿಂದಿರುಗಿಸಬೇಕಾಗುತ್ತದೆ ಎಂದು ನಮೂದಿಸಲಾಗಿದೆ.

ವಿಶ್ವನಾಥ್ ಸಿನ್ಹಾ ಕೇರಳ ಮುಖ್ಯಕಾರ್ಯದರ್ಶಿ

• **ತಿರುವನಂತಪುರಂ:** ಕೇರಳದ ನೂತನ ಮುಖ್ಯ ಕಾರ್ಯದರ್ಶಿಯಾಗಿ ವಿಶ್ವನಾಥ್ ಸಿನ್ಹಾ ಅವರ ನೇಮಕಕ್ಕೆ ಕೇರಳ ಸಂಪುಟ ಒಪ್ಪಿಗೆ ನೀಡಿದೆ. 1991ರ ಬ್ಯಾಚಿನ ಐಎಎಸ್ ಅಧಿಕಾರಿಯಾಗಿರುವ ಸಿನ್ಹಾ ಅವರು ಜೂ.30ರಂದು ನಿವೃತ್ತರಾಗುತ್ತಿರುವ ಮುಖ್ಯ ಕಾರ್ಯದರ್ಶಿ ಜಯತಿಲಕ್ ಅವರ ಸ್ಥಾನವನ್ನು ತುಂಬಲಿದ್ದಾರೆ. ಬಿಹಾರ ಮೂಲದವರಾದ ಸಿನ್ಹಾ ಅವರು, ಪ್ರಸ್ತುತ ಗೃಹ ಮತ್ತು ವಿಜಿಲೆನ್ಸ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದರು.

ಆಂಧ್ರದಲ್ಲಿ ದೇಶದ ಮೊದಲ ಖಾಸಗಿ ಚಿನ್ನದ ಗಣಿ

• **ಕರ್ನೂಲ್:** ಸ್ವತಂತ್ರ ಭಾರತದ ಮೊದಲ ಖಾಸಗಿ ಸಮಗ್ರ ಗ್ರೀನ್‌ಫೀಲ್ಡ್ ಚಿನ್ನದ ಗಣಿಗಾರಿಕೆ ಯೋಜನೆಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಬುಧವಾರ ಕರ್ನೂಲಿನ ಜೊನ್ನಾಗಿರಿಯಲ್ಲಿ ಉದ್ಘಾಟಿಸಿದ್ದಾರೆ. ಇದು ದೇಶದ ಗಣಿಗಾರಿಕೆ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಚಿನ್ನದ ಬೆಲೆಗಳು ಐತಿಹಾಸಿಕ ಗರಿಷ್ಠ ಮಟ್ಟದಲ್ಲಿರುವ ಪ್ರಸ್ತುತ ಸಮಯದಲ್ಲಿ ವಾಣಿಜ್ಯ ಪ್ರಮಾಣದ ದೇಶೀಯ ಚಿನ್ನದ ಉತ್ಪಾದನೆಯು ಉತ್ತಮ ಬೆಳವಣಿಗೆಯಾಗಿದೆ.

ನಿರ್ದಿಷ್ಟವಾದ ದೇವರುಗಳ ಹೆಸರಲ್ಲಿ ಪ್ರಮಾಣ ಸಲ್ಲದು

• **ತಿರುವನಂತಪುರಂ:** ತಿರುವನಂತಪುರಂ ಮಹಾನಗರ ಪಾಲಿಕೆಯ 20 ಬಿಜೆಪಿ ಸದಸ್ಯರು ಸ್ವೀಕರಿಸಿದ್ದ ಪ್ರಮಾಣವಚನವನ್ನು ಅಸಿಂಧುಗೊಳಿಸಿರುವ ಕೇರಳ ಹೈಕೋರ್ಟ್, ನಾಲ್ಕು ವಾರಗಳೊಳಗೆ ನಿಗದಿತ ವಿಧಾನದಂತೆ ಮತ್ತೊಮ್ಮೆ ಪ್ರಮಾಣ ಸ್ವೀಕರಿಸುವಂತೆ ಆದೇಶಿಸಿದೆ.ಅಧಿಕಾರ ಸ್ವೀಕಾರದ ವೇಳೆ ಪಾಲಿಕೆ ಸದಸ್ಯರು ನಿರ್ದಿಷ್ಟ ದೇವರುಗಳು ಹಾಗೂ ಹುತಾತ್ಮರ ಹೆಸರನ್ನು ಉಲ್ಲೇಖಿಸಿದ್ದರು. ಇದು ಕಾನೂನಿನಲ್ಲಿ ನಿಗದಿಪಡಿಸಿರುವ ಪ್ರಮಾಣವಚನದ ಮಾದರಿಗೆ ವಿರುದ್ಧವಾಗಿದೆ ಎಂದು ನ್ಯಾ.ಪಿ.ವಿ. ಕುಂಞಿಕೃಷ್ಣನ್ ಅಭಿಪ್ರಾಯಪಟ್ಟಿದ್ದಾರೆ. ಸಿಪಿಎಂ ಪಾಲಿಕೆ ಸದಸ್ಯ ಎಸ್.ಪಿ. ದೀಪಕ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ನ್ಯಾಯಾಲಯ ಈ ಆದೇಶ ನೀಡಿದೆ. ಚುನಾಯಿತ ಪ್ರತಿನಿಧಿಗಳು ದೇವರ ಹೆಸರಿನಲ್ಲಿ ಅಥವಾ ಸಂವಿಧಾನದ ಹೆಸರಿನಲ್ಲಿ ಮಾತ್ರ ಪ್ರಮಾಣ ಸ್ವೀಕರಿಸಬೇಕು. ನಿರ್ದಿಷ್ಟ ದೇವತೆಗಳು ಅಥವಾ ವ್ಯಕ್ತಿಗಳ ಹೆಸರನ್ನು ಸೇರಿಸುವುದು ಸಂವಿಧಾನದ ತತ್ವಗಳು ಹಾಗೂ ಕಾನೂನಿನಲ್ಲಿ ನಿಗದಿಪಡಿಸಿರುವ ಪ್ರಮಾಣವಚನದ ಸ್ವರೂಪಕ್ಕೆ ವಿರುದ್ಧವಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು.ಪ್ರಮಾಣವಚನ ಅಸಿಂಧುವಾಗಿದ್ದರೂ, ಈ ಆದೇಶದಿಂದ 20 ಸದಸ್ಯರು ತಮ್ಮ ಸ್ಥಾನಗಳಿಂದ ಅನರ್ಹರಾಗುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಬಿಜೆಪಿಯ 20 ಪಾಲಿಕೆ ಸದಸ್ಯರ ಮರುಪ್ರಮಾಣ

• ನ್ಯಾಯಾಲಯದ ಆದೇಶದ ಬೆನ್ನಿಗೇ ಬುಧವಾರ ಈ 20ಸದಸ್ಯರು ಮರು ಪ್ರಮಾಣವಚನ ಸ್ವೀಕರಿಸಿದರು. ತಿರುವನಂತಪುರಂ ಮೇಯರ್ ವಿ.ವಿ.ರಾಜೇಶ್ ಅವರು ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು.

ಕಾಶ್ಮೀರ ಮುಂದೆಯೂ ನಮ್ಮ ಆಂತರಿಕ ವಿಚಾರ

• **ಹೊಸದಿಲ್ಲಿ:** ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರ ಎಂದೆಂದಿಗೂ ಭಾರತದ ಅವಿಭಾಜ್ಯ ಅಂಗ ಮತ್ತು ಭಾರತದ ತೀರಾ ಆಂತರಿಕ ವಿಚಾರ. ಕಣಿವೆ ರಾಜ್ಯ ಹಿಂದೆಯೂ ಭಾರತದ ಅವಿಭಾಜ್ಯ ಅಂಗವಾಗಿತ್ತು ಮತ್ತು ಮುಂದೆಯೂ. ಆದರೆ ಪಾಕಿಸ್ತಾನ ವಿಶ್ವಸಂಸ್ಥೆಯಲ್ಲಿ ಪದೇ ಪದೇ ಕಾಶ್ಮೀರ ವಿಚಾರ ಪ್ರಸ್ತಾವಿಸುವ ಮುಖೇನ ವಿಶ್ವಸಂಸ್ಥೆಯನ್ನು ರಾಜಕೀಯ ವೇದಿಕೆಯಾಗಿಸಲು ಹುನ್ನಾರ ನಡೆಸುತ್ತಿದೆ ಎಂದು ವಿಶ್ವಸಂಸ್ಥೆಗೆ ನ್ಯೂಯಾರ್ಕ್‌ನಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿರುವ ಪರ್ವತನೇಣಿ ಹರೀಶ್ ಪಾಕಿಸ್ತಾನವನ್ನು ತರಾಟೆಗೆತ್ತಿಕೊಂಡಿದ್ದಾರೆ.

ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಕಾಶ್ಮೀರ ವಿಚಾರವೆತ್ತುವುದು ಪಾಕ್‌ನ ಖಾಯಂ ಚಾಳಿ. ವಿಶ್ವಸಂಸ್ಥೆಯ ಕಲಾಪ ಸಂದರ್ಭದಲ್ಲೂ, ವಿಶ್ವಸಂಸ್ಥೆಗೆ ಪಾಕ್‌ನ ಖಾಯಂ ಪ್ರತಿನಿಧಿಯಾದ ಆಸೀಮ್ ಇಫ್ತಿಕಾರ್ ಅಹಮದ್ ಕಾಶ್ಮೀರ ವಿಷಯ ಪ್ರಸ್ತಾವಿಸಿದ್ದರು. ಪಾಕ್ ಮಧ್ಯಪ್ರವೇಶಕ್ಕೆ ತೀಕ್ಷ್ಣ ಪ್ರತ್ಯುತ್ತರವಿತ್ತ ಹರೀಶ್, ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂಬ ಸತ್ಯವನ್ನು ಪಾಕ್ ಪ್ರತಿನಿಧಿಗೆ ಸ್ಪಷ್ಟ ಮನವರಿಕೆ ಮಾಡಿದರಲ್ಲದೆ, ಈ ವಿಚಾರದಲ್ಲಿ ಪಾಕ್ ರಾಯಭಾರಿಯ ನಡವಳಿಕೆಯನ್ನು ತರಾಟೆಗೆತ್ತಿಕೊಂಡರು. ನಡೆನುಡಿಯಲ್ಲಿ ಸಮತೋಲನ ಮತ್ತು ನಿಷ್ಪಕ್ಷಪಾತಿಯಾಗಿರಬೇಕಾದ ಪಾಕ್ ಪ್ರತಿನಿಧಿ, ವೇದಿಕೆಯನ್ನು ರಾಜಕೀಯಗೊಳಿಸಲು ಯತ್ನಿಸಿರುವುದು ತೀರಾ ಘಾತಕವೆಂದು ಟೀಕಿಸಿದರು.

ಭದ್ರತಾ ಮಂಡಳಿಯ ನಿಯಮಗಳು ಮಾತ್ರ ವಿಶ್ವಸಂಸ್ಥೆ 80 ಚೌಕಟ್ಟಿನಿಂದ ಹೊರಗಿರುವುದರ ಔಚಿತ್ಯವೇನೆಂಬುದು ಭಾರತದ ಪ್ರಶ್ನೆಯಾಗಿದೆ ಎಂದು ಹರೀಶ್ ಗಮನ ಸೆಳೆದರು.

ಇರಾನ್‌ನ ಪರಮಾಣು ತಾಣಗಳ ಮೇಲ್ವಿಚಾರಣೆ

• **ಟೋಕಿಯೋ:** ಅಮೆರಿಕ ಮತ್ತು ಇರಾನ್ ನಡುವಿನ ಮಧ್ಯಂತರ ಒಪ್ಪಂದದಲ್ಲಿ ಇರಾನ್‌ನ ಪರಮಾಣು ಸಮೃದ್ಧೀಕರಣ ತಾಣಗಳಿಗೆ ತಮ್ಮ ಇನ್ಸ್‌ಪೆಕ್ಟರ್‌ಗಳು ಭೇಟಿ ನೀಡಲಿದ್ದಾರೆ ಎಂದು ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಮುಖ್ಯಸ್ಥ ರಾಫೆಲ್ ಮರಿಯಾನೊ ಗ್ರೊಸ್ಸಿ ಬುಧವಾರ ತಿಳಿಸಿದ್ದಾರೆ.

ಇಬ್ಬರೂ ಅಧ್ಯಕ್ಷರು ಸಹಿ ಮಾಡಿರುವ ತಿಳುವಳಿಕೆ ಪತ್ರ ಪರಮಾಣು ಸಾಮಗ್ರಿ ಸೌಲಭ್ಯಗಳನ್ನು ಐಎಇಎ ಮೇಲ್ವಿಚಾರಣೆ ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತದೆ. ಇರಾನ್‌ನ ಯುರೇನಿಯಂ ದಾಸ್ತಾನನ್ನು ಹೆಚ್ಚು ಸಮೃದ್ಧೀಕರಣ ಮಟ್ಟದಿಂದ ಕಡಿಮೆ ಮಾಡಲು ಈ ತಪಾಸಣೆಗಳು ಮುಖ್ಯವಾಗಿವೆ ಎಂದು ತಿಳಿಸಲಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಯುಎಸ್ ಕಳೆದ ವರ್ಷ ಬಾಂಬ್ ದಾಳಿ ನಡೆಸಿದ ತಾಣಗಳನ್ನು ಪರಿಶೀಲಿಸಲು ಇನ್ಸ್‌ಪೆಕ್ಟರ್‌ಗಳಿಗೆ ಅನುಮತಿಯಿಲ್ಲ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೈಲ್ ಬಘೇಯ್ ಮಂಗಳವಾರ ತಿಳಿಸಿದ್ದು, ಯುಎಸ್ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹೇಳಿಕೆಯನ್ನು ನಿರಾಕರಿಸಿದ್ದಾರೆ. 2025ರಲ್ಲಿ ಇರಾನ್ ಮೇಲೆ ಇಸ್ರೇಲ್ 12 ದಿನಗಳ ಯುದ್ಧ ಪ್ರಾರಂಭಿಸಿದ ನಂತರ ಟೆಹ್ರಾನ್ ಐಎಇಎ ಇನ್ಸ್‌ಪೆಕ್ಟರ್‌ಗಳನ್ನು ಸಮೃದ್ಧೀಕರಣ ತಾಣಗಳಿಗೆ ನಿರ್ಬಂಧಿಸಿತ್ತು. ಅಮೆರಿಕ ಮತ್ತು ಇರಾನ್ ನಡುವಿನ ತಾಂತ್ರಿಕ ಮಟ್ಟದ ಮಾತುಕತೆಗಳು ಮುಂದಿನ ವಾರ ಸ್ವಿಟ್ಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಪುನರಾರಂಭಗೊಳ್ಳಲಿವೆ. ಇದೇ ವೇಳೆ ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಅಬುಧಾಬಿ, ಕುವೈತ್ ಮತ್ತು ಬಹ್ರೇನ್‌ಗಳಲ್ಲಿ ಸಭೆ ನಡೆಸಲು ಪರ್ಷಿಯನ್ ಕೊಲ್ಲಿಗೆ ಆಗಮಿಸಿದ್ದಾರೆ.

ಇರಾನ್: ಖಮೇನಿ ಅಂತ್ಯಕ್ರಿಯೆಗಾಗಿ ಮೋದಿಗೆ ಆಹ್ವಾನ

• **ಹೊಸದಿಲ್ಲಿ:** ಅಮೆರಿಕ-ಇಸ್ರೇಲಿ ವಾಯುದಾಳಿಯಲ್ಲಿ ಮೃತರಾದ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಸಯ್ಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ಹಾಜರಾಗಲು ಇರಾನ್ ಅಧ್ಯಕ್ಷ ಮಸೂದ್ ಪೆಝೆಷ್ಕಿಯಾನ್ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಔಪಚಾರಿಕವಾಗಿ ಆಹ್ವಾನಿಸಿದ್ದಾರೆ. ಖಮೇನಿ ಅಂತ್ಯಕ್ರಿಯೆಯಲ್ಲಿ ಸ್ವತಃ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆಯೇ ಅಥವಾ ಕೇಂದ್ರ ಸರ್ಕಾರದ ನಿಯೋಗ ಭಾಗವಹಿಸಲಿದೆಯೇ ಎಂಬ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಖಮೇನಿ ಅವರ ದೇಹವನ್ನು ಟೆಹ್ರಾನ್‌ನ ಗ್ರ್ಯಾಂಡ್ ಮೊಸಲ್ಲಾ ಸಂಕೀರ್ಣದಲ್ಲಿ ಇರಿಸುವುದರೊಂದಿಗೆ ಸರ್ಕಾರಿ ಅಂತ್ಯಕ್ರಿಯೆಯ ವಿಧಿ ವಿಧಾನ ಜು.4ರಂದು ಆರಂಭವಾಗಲಿದೆ. ಖಮೇನಿಯ ತವರು ಪಟ್ಟಣವಾದ ಮಶ್ಹಾದ್‌ನಲ್ಲಿರುವ ಇಮಾಮ್ ರೆಝಾದಲ್ಲಿ ಜು.9ರಂದು ಅಂತಿಮ ವಿಧಿವಿಧಾನ ನಡೆಯಲಿದೆ.

ನೀರವ್ ಮೋದಿಗೆ ಯುಕೆ ಕೋರ್ಟ್ ಆದೇಶ

ಬ್ಯಾಂಕ್ ಆಫ್ ಇಂಡಿಯಾಗೆ 100 ಕೋಟಿ ರೂ. ಪಾವತಿಸಿ

• **ಲಂಡನ್:** ಉದ್ಯಮಿ ನೀರವ್ ಮೋದಿ ಬ್ಯಾಂಕ್ ಆಫ್ ಇಂಡಿಯಾಗೆ 10.7 ಮಿಲಿಯನ್ ಡಾಲರ್ (100 ಕೋಟಿ ರೂ.ಗಿಂತ ಹೆಚ್ಚು) ಪಾವತಿಸಬೇಕು ಎಂದು ಲಂಡನ್ ಸರ್ಕ್ಯೂಟ್ ಕಮರ್ಷಿಯಲ್ ಕೋರ್ಟ್ ತೀರ್ಪು ನೀಡಿದೆ.

ದುಬೈನ ಫೈರ್‌ಸ್ಟಾರ್ ಡೈಮಂಡ್ ಎಫ್‌ಝಡ್‌ಇ ಸಾಲಕ್ಕೆ ಮೋದಿ ನೀಡಿದ್ದ ವೈಯಕ್ತಿಕ ಗ್ಯಾರಂಟಿಯಲ್ಲಿ ಅವರು ಮರುಪಾವತಿಗೆ ವೈಯಕ್ತಿಕವಾಗಿ ಹೊಣೆಗಾರರಾಗಿದ್ದಾರೆ ಎಂದು ಕೋರ್ಟ್ ಹೇಳಿದೆ. 13,000 ಕೋಟಿ ರೂ.ಗಳ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣದ ಪ್ರಮುಖ ಆರೋಪಿಯಾಗಿರುವ ಮೋದಿ ಸಾಲದ ಕಾನೂನುಬದ್ಧ ಜವಾಬ್ದಾರಿ ಹೊಂದಿದ್ದಾರೆ. ಈ ಮೊತ್ತ 4.1 ಮಿಲಿಯನ್ ಡಾಲರ್ ಅಸಲು ಮತ್ತು ಬಡ್ಡಿಯನ್ನು ಒಳಗೊಂಡಿದೆ.

ಮೋದಿ ಆಗಸ್ಟ್ 3, 2012ರಂದು ವೈಯಕ್ತಿಕ ಗ್ಯಾರಂಟಿಗೆ ಸಹಿ ಹಾಕಿದ್ದರು. 2018ರಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣ ಹೊರಬಂದ ನಂತರ ಫೈರ್‌ಸ್ಟಾರ್ ಗ್ರೂಪ್‌ನ ಸ್ಥಿತಿ ಕ್ಷೀಣಿಸಿತು. ಸಿಬಿಐ ಫೆಬ್ರವರಿ 2018ರಲ್ಲಿ ಎಫ್‌ಐಆರ್ ದಾಖಲಿಸಿದ್ದು, ವಂಚನೆಯು 2 ಬಿಲಿಯನ್ ಡಾಲರ್ ಮೊತ್ತದ ವಹಿವಾಟು ಒಳಗೊಂಡಿದೆ ಎಂದು ಆರೋಪಿಸಿದೆ.ಕಂಪನಿ ಸುಸ್ತಿಯಾದ ನಂತರ ಬ್ಯಾಂಕ್ ಆಫ್ ಇಂಡಿಯಾ ವಸೂಲಾತಿ ಪ್ರಕ್ರಿಯೆ ಆರಂಭಿಸಿತು. ಬ್ಯಾಂಕ್ ಮರುಪಾವತಿ ಕೋರಿ ಹಲವಾರು ಡಿಮ್ಯಾಂಡ್ ನೋಟಿಸ್ ನೀಡಿದರೂ ಪಾವತಿ ಬಂದಿರಲಿಲ್ಲ. ಏಪ್ರಿಲ್ 2018 ಮತ್ತು ಅಕ್ಟೋಬರ್ 2025ರ ನೋಟಿಸ್‌ಗಳು ತಮಗೆ ತಲುಪಿಲ್ಲ ಎಂದು ಮೋದಿ ವಾದಿಸಿದ್ದರು. ಆದರೆ, ನ್ಯಾಯಾಲಯ, ಮೋದಿಯವರ ಈ ವಾದಗಳನ್ನು ತಿರಸ್ಕರಿಸಿ, ನೋಟಿಸ್‌ಗಳು ಸರಿಯಾಗಿ ತಲುಪಿವೆ ಎಂದು ತೀರ್ಪು ನೀಡಿತು.

ಮುಂಬೈನಲ್ಲಿ ಮಳೆ ಅಬ್ಬರ | ಅರುಣಾಚಲ ಪ್ರದೇಶದಲ್ಲಿ ಪ್ರವಾಹ

ಜನಜೀವನ ಅಸ್ತವ್ಯಸ್ತ; ಸಂಚಾರ ವ್ಯತ್ಯಯ

• **ಮುಂಬೈ/ಇಟಾನಗರ:** ದೇಶದ ಎರಡು ಭಾಗಗಳಲ್ಲಿ ಭಾರೀ ಮಳೆ ಭಿನ್ನ ರೀತಿಯ ಸಂಕಷ್ಟವನ್ನು ಉಂಟುಮಾಡಿದೆ. ಮಹಾರಾಷ್ಟ್ರದ ಮುಂಬೈನಲ್ಲಿ ಮುಂಗಾರು ಹಂಗಾಮಿನ ಮೊದಲ ಭಾರೀ ಮಳೆ ರಸ್ತೆ ಹಾಗೂ ರೈಲು ಸಂಚಾರವನ್ನು ಅಸ್ತವ್ಯಸ್ತಗೊಳಿಸಿದರೆ, ಅರುಣಾಚಲ ಪ್ರದೇಶದಲ್ಲಿ ಪ್ರವಾಹ ಮತ್ತು ಭೂಕುಸಿತಗಳಿಂದ ಒಬ್ಬರು ಮೃತಪಟ್ಟಿದ್ದು, ನಾಲ್ವರು ನಾಪತ್ತೆಯಾಗಿದ್ದಾರೆ.



ಮುಂಬೈನಲ್ಲಿ ಕಳೆದ 24 ಗಂಟೆಗಳಲ್ಲಿ ಕೆಲವು ಪ್ರದೇಶಗಳಲ್ಲಿ 300 ಮಿ.ಮೀ.ಗಿಂತ ಹೆಚ್ಚು ಮಳೆಯಾಗಿದೆ. ಮಾಲ್ವಾನಿಯಲ್ಲಿ 340 ಮಿ.ಮೀ. ಹಾಗೂ ಪರೇಲ್‌ನಲ್ಲಿ 334 ಮಿ.ಮೀ. ಮಳೆ ದಾಖಲಾಗಿದೆ. ಅಂಧೇರಿ ಸಬ್‌ವೇ, ಹಿಂದ್ಮಾತಾ ಹಾಗೂ ಕಿಂಗ್ಸ್ ಸರ್ಕಲ್ ಪ್ರದೇಶಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆಯಾಯಿತು. ಮಧ್ಯ ರೈಲ್ವೆಯ ಟ್ರಾನ್ಸ್-ಹಾರ್ಬರ್ ಮಾರ್ಗದಲ್ಲಿ ಹಳಿ ಕುಸಿತದಿಂದ ರೈಲು ಸೇವೆಗಳು ವ್ಯತ್ಯಯಗೊಂಡವು. ಈ ನಡುವೆ ಬಿಎಂಸಿ ಅಧಿಕಾರಿಯೊಬ್ಬರು ತೆರೆದ ಚರಂಡಿಗೆ ಬಿದ್ದ ಘಟನೆ ರಾಜಕೀಯ ಚರ್ಚೆಗೆ ಕಾರಣವಾಯಿತು. ವಿರೋಧ ಪಕ್ಷಗಳು ಬಿಎಂಸಿಯ ಕಾರ್ಯವೈಖರಿಯನ್ನು ಟೀಕಿಸಿವೆ.

ಅರುಣಾಚಲದಲ್ಲಿ ಶಿಕ್ಷಕಿ ಸಾವು: ಇತ್ತ ಅರುಣಾಚಲ ಪ್ರದೇಶದ ಕೆಯಿ ಪನ್ಯೋರ್ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ ಏಕಾಏಕಿ ಪ್ರವಾಹ ಉಂಟಾಗಿ ಶಿಕ್ಷಕಿ ನಿರ್ಮಲಾ ಗುಪ್ತಾ ಮೃತಪಟ್ಟಿದ್ದಾರೆ. ನಾಲ್ವರು ನಾಪತ್ತೆಯಾಗಿದ್ದು, 17 ಮಂದಿ ಗಾಯಗೊಂಡಿದ್ದಾರೆ. ಕನಿಷ್ಠ 18 ಮನೆಗಳಿಗೆ ಹಾನಿಯಾಗಿದೆ. ಹಲವು ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿ ರಾಷ್ಟ್ರೀಯ ಹೆದ್ದಾರಿ-13 ಸಂಪರ್ಕ ಕಡಿತಗೊಂಡಿದೆ. ರಕ್ಷಣಾ ಕಾರ್ಯಾಚರಣೆಗೆ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಹಾಗೂ ಭಾರತೀಯ ವಾಯುಪಡೆಯ ನೆರವು ಪಡೆಯಲಾಗಿದೆ.

ಅಧಿಕಾರಿಗಳು ಜನರು ಎಚ್ಚರಿಕೆಯಿಂದ ಇರಲು ಹಾಗೂ ಅನಗತ್ಯ ಪ್ರಯಾಣವನ್ನು ತಪ್ಪಿಸಲು ಸೂಚಿಸಿದ್ದಾರೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ 2,31,000(2,36,000) ಅಪರಂಜಿ ಚಿನ್ನ 14,380(14,540) ಆಭರಣ ಚಿನ್ನ: 13,230(13,375) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,318(117↑) ಎನ್‌ಎಸ್‌ಇ 23,659(41↑)

$1 = ₹96.60

ಕಿರುಸುದ್ದಿ

ಇಂದು ಬಿಜೈ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕೇಂದ್ರ ಸರ್ಕಾರದ ಸಾಧನಾ ಪ್ರದರ್ಶನಿ ಹಾಗೂ ಜನಕಲ್ಯಾಣ ಶಿಬಿರ

• ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 'ವಿಕಸಿತ ಭಾರತ – ವಿಶ್ವಾಸ, ವಿಕಾಸ ಮತ್ತು ಜನಕಲ್ಯಾಣಕ್ಕೆ 12 ವರ್ಷಗಳು' ಪೂರೈಸಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಬೃಹತ್ 'ಸಾಧನಾ ಪ್ರದರ್ಶನಿ ಹಾಗೂ ಜನಕಲ್ಯಾಣ ಶಿಬಿರ'ವನ್ನು ಜೂ. 25 ರಂದು ಮಂಗಳೂರಿನಲ್ಲಿ ಆಯೋಜಿಸಲಾಗಿದೆ. ಈ ವಿಶೇಷ ಪ್ರದರ್ಶನ ಮತ್ತು ಶಿಬಿರ ಮಂಗಳೂರಿನ ಬಿಜೈ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಇಂದು ನಡೆಯಲಿದ್ದು, ಬೆಳಗ್ಗೆ 10ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಪ್ರದರ್ಶನಿ ಹಾಗೂ ಜನಕಲ್ಯಾಣ ಶಿಬಿರ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯ ತನಕ ತೆರೆದಿರಲಿದೆ. ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿವಿಧ ಜನಪರ ಯೋಜನೆಗಳು, ದೇಶದ ಸರ್ವತೋಮುಖ ಅಭಿವೃದ್ಧಿಯ ಮೈಲಿಗಲ್ಲುಗಳ ಮಾಹಿತಿ ಹಾಗೂ ಸಾರ್ವಜನಿಕರಿಗೆ ನೇರ ಪ್ರಯೋಜನ ಸಿಗುವಂತಹ ಶಿಬಿರಗಳು ಒಂದೇ ಸೂರಿನಡಿ ಲಭ್ಯವಿರಲಿದೆ.

ಸಿಎ ಪರೀಕ್ಷೆಯಲ್ಲಿ ತೇರ್ಗಡೆ

• ಮಂಗಳೂರು: ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ 2026ರ ಮೇ ಯಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ಪೈವಳಿಕೆ ಕುರುಡ ಪದವು ಗ್ರಾಮದ ಕುರ್ಯಗುತ್ತು ಸುರಕ್ಷಾ ಕೆ ಬಿ ತೇರ್ಗಡೆ ಹೊಂದಿದ್ದಾರೆ. ಅವರು ಮಂಗ ಳೂರಿನ ಸಿಎ ರಾಜಾರಾಮ್ ಶೆಣೈ ಅವರ ಮಾರ್ಗದರ್ಶನದಲ್ಲಿ ಆರ್ಟಿಕಲ್ ಶಿಪ್ ಮುಗಿಸಿರುತ್ತಾರೆ. ಇವರು ದಿ. ಕುರ್ಯಗುತ್ತು ಸೂರ್ಯ ನಾರಾಯಣ ಭಂಡಾರಿ ಮತ್ತು ಕಳ್ಳಿಗೆಬೀಡು ಬೇಬಿ ಎಸ್ ಭಂಡಾರಿ ಯವರ ಪುತ್ರಿ.

ಸಿ.ಎ ಅಂತಿಮ ಪರೀಕ್ಷೆಯಲ್ಲಿ ಮೂವರು ತೇರ್ಗಡೆ

• ಕುಂದಾಪುರ: ಸಿ.ಎ. ಅಂತಿಮ ಪರೀಕ್ಷೆಯಲ್ಲಿ ಶಿರೂರು ಗ್ರಾಮೀಣ ಭಾಗದ ಮೂವರು ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಯೊಂದಿಗೆ ತೇರ್ಗಡೆ ಹೊಂದಿದ್ದಾರೆ. ಶಿರೂರು ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೀರ್ಗದ್ದೆ ನಿವಾಸಿ ಸುಬ್ರಾಯ ಗಾಣಿಗ ಹಾಗೂ ಸವಿತಾ ದಂಪತಿಯ ಪುತ್ರ ಸೃಜನ್ ಎಸ್., ಕಳಿಹಿತ್ಲು ನಿವಾಸಿ ಶ್ರೀಕಾಂತ ಶೆಟ್ಟಿ ಹಾಗೂ ಶಿಕ್ಷಕಿ ಪ್ರೇಮಾ ಶೆಟ್ಟಿ ದಂಪತಿಯ ಪುತ್ರ ಪ್ರಸಾದ ಶೆಟ್ಟಿ ಹಾಗೂ ಮಾತೃಛಾಯಾ ಹೊಸ್ಮನೆ ನಿವಾಸಿ ಅನಿತಾ ಶೆಟ್ಟಿ ಪುತ್ರ ಆಶೀಶ್ ಶೆಟ್ಟಿ ಈ ಮೂವರು ವಿದ್ಯಾರ್ಥಿಗಳು ಸಿ.ಎ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ಶಿರೂರಿಗೆ ಕೀರ್ತಿ ತಂದಿದ್ದಾರೆ.

ಇಂದು ಹೆಮ್ಮಾಡಿಯ ಜನತಾ ಪದವಿಪೂರ್ವ ಕಾಲೇಜಿನ ವಸತಿ ನಿಲಯ ಲೋಕಾರ್ಪಣೆ

• ಹೆಮ್ಮಾಡಿ: ಇಲ್ಲಿನ ಜನತಾ ಪದವಿಪೂರ್ವ ಕಾಲೇಜಿನ ಬಾಲಕ–ಬಾಲಕಿಯರ ನೂತನ ವಸತಿ ನಿಲಯ 'ಶ್ಲಾಘನ ಶನಯ'ದ ಲೋಕಾರ್ಪಣಾ ಸಮಾರಂಭವು ಜೂ. 25ರಂದು ಪೂರ್ವಾಹ್ನ 10 ಗಂಟೆಗೆ ನಡೆಯಲಿದ್ದು, ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು ಶ್ಲಾಘನ ಶನಯ' ವಸತಿ ನಿಲಯವನ್ನು ಲೋಕಾರ್ಪಣೆಗೊಳಿಸಿ, ಆಶೀರ್ವಚನ ನೀಡಿ ಅನುಗ್ರಹಿಸಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಗಣೇಶ್ ಮೊಗವೀರ ತಿಳಿಸಿದ್ದಾರೆ.

ರಾಯರ ಸನ್ನಿಧಿಯಲ್ಲಿ ಸರಯೂ ಮಕ್ಕಳ ಮೇಳ

• ಮಂಗಳೂರು : 26 ವರ್ಷಗಳ ಇತಿಹಾಸವುಳ್ಳ; ದಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರಪ್ರಥಮ ಮಕ್ಕಳ ಮೇಳ 'ಸರಯೂ ತಂಡ' ಇದೇ ಪ್ರಪ್ರಥಮ ಬಾರಿಗೆ ಮಂತ್ರಾಲಯದ ಶ್ರೀಗುರುರಾಯರ ಸನ್ನಿಧಿಯಲ್ಲಿ, ಶ್ರೀ ಸುಭುದೇಂದ್ರತೀರ್ಥ ಸ್ವಾಮೀಜಿಯವರ ಸಮ್ಮುಖದಲ್ಲಿ 'ಶ್ರೀರಾಮ ದರ್ಶನ' ಎಂಬ ಬಯಲಾಟವನ್ನು ಪ್ರಸ್ತುತ ಪಡಿಸಲಿದೆ. ಜೂ. 29 ರಂದು ಮಂತ್ರಾಲಯದಲ್ಲೂ ಪ್ರಪ್ರಥಮ ಬಾರಿಗೆ ಮಕ್ಕಳ ತಂಡ ಪ್ರದರ್ಶನ ನೀಡಲಿದೆ ಎಂದು ಗೌರವ ಸಂಚಾಲಕ ಧರ್ಮದರ್ಶಿ ಡಾ.ಹರಿಕೃಷ್ಣ ಪುನರೂರು ಹಾಗೂ ನಿರ್ದೇಶಕ ವರ್ಕಾಡಿ ರವಿ ಅಲೆವೂರಾಯ ಜಂಟಿಯಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಅಧ್ಯಕ್ಷ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಸಿರಿ ಸಂಸ್ಥೆಯ ಸಂಸ್ಥಾಪಕರಾದ ಹೇಮಾವತಿ ವಿ. ಹೆಗ್ಗಡೆ ಬುಧವಾರದಂದು ಬೆಳ್ತಂಗಡಿಯಲ್ಲಿರುವ ಸಿರಿ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್‌ಗೆ ಭೇಟಿ ನೀಡಿದರು. ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ಧನ, ಸೇಲಂನಲ್ಲಿರುವ ಇಸ್ಕಾನ್ ದೇವಾಲಯದ ಶ್ರೀರಾಮಪ್ರಭು ಚಂದನದಾಸ ಸ್ವಾಮೀಜಿ, ರಾಜೇಶ್ ಪೈ, ಡಾ. ಹರೀಶ್ ಕೃಷ್ಣಸ್ವಾಮಿ, ಹೆಗ್ಗಡೆಯವರ ಮೊಮ್ಮಗಳು ಕುಮಾರಿ ಮಾನ್ಯ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಲೇಖಕ ನಾ. ಕಾರಂತ ಪೆರಾಜೆಯವರಿಗೆ ಬೆ.ಸು.ನಾ.ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ

• ಪುತ್ತೂರು: ಕರ್ನಾಟಕ ಸುದ್ದಿ ಸಂವಹನ ಸಂಸ್ಥೆ 'ವಿಶ್ವ ಸಂವಾದ ಕೇಂದ್ರ' ಇದರ ವತಿಯಿಂದ ನೀಡಲಾಗುವ ವಾರ್ಷಿಕ 'ವಿಎಸ್‌ಕೆ ಮಾಧ್ಯಮ ಪ್ರಶಸ್ತಿ'ಯು ಘೋಷಣೆಯಾಗಿದ್ದು, ಲೇಖಕ, ಅಂಕಣಕಾರ, ಕಲಾವಿದ ನಾ. ಕಾರಂತ ಪೆರಾಜೆಯವರು 'ಬೆ.ಸು.ನಾ.ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಜು.12ರಂದು ಬೆಂಗಳೂರಿನ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗಲಿದೆ.

ನಾ. ಕಾರಂತ ಪೆರಾಜೆಯವರು ಕೃಷಿ ಮಾಸಿಕ 'ಅಡಿಕೆ ಪತ್ರಿಕೆ'ಯ ಸಹಾಯಕ ಸಂಪಾದಕರು. ಹೊಸದಿಗಂತ ಸಹಿತ ವಿವಿಧ ಪತ್ರಿಕೆಗಳಲ್ಲಿ ಅಂಕಣಗಾರರಾಗಿದ್ದರು. ಭಾರತದ ಪ್ರಧಾನಿ ನರೇಂದ್ರ ಮೋದಿಯವರ ನವಭಾರತದ ಮುನ್ನೋಟ 'ನಮೋ ನಮಃ' ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕುರಿತಾದ 'ಭಾಗ್ಯದ ಬಾಗಿಲು' ಕೃತಿಗಳು ವಿಶೇಷ ಗೌರವಕ್ಕೆ ಪಾತ್ರವಾದ ಪುಸ್ತಕಗಳು. ಯಕ್ಷಗಾನಕ್ಕೆ ಸಂಬಂಧಪಟ್ಟಂತೆ 'ಸಾಮಗ ಪಡಿದನಿ' ಕೃತಿಗೆ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಪ್ರಶಸ್ತಿ' ಪ್ರಾಪ್ತವಾಗಿದೆ. 2012ರಲ್ಲಿ ಕರ್ನಾಟಕ ಸರಕಾರದ 'ಪರಿಸರ ಪತ್ರಿಕೋದ್ಯಮ ಪ್ರಶಸ್ತಿ', ಗ್ರಾಮೀಣ ಪತ್ರಿಕೋದ್ಯಮ ವಿಭಾಗದಲ್ಲಿ ದ.ಕ. ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ, ಪ.ಗೋ.ಪ್ರಶಸ್ತಿ, ಲ್ಯಾಡ್ಲಿ ಮೀಡಿಯಾ ಪ್ರಶಸ್ತಿ, ಕೃಷಿ ಮಾಧ್ಯಮ ಕೇಂದ್ರದ ಪ್ರಶಸ್ತಿ ಹೀಗೆ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಪದ್ಮಶ್ರೀ ಹರೇಕಳ ಹಾಜಬ್ಬರ ಸಾಧನೆಯ 'ಅಕ್ಷರ ಯೋಗಿಯ ನೋಡಲ್ಲಿ' ಲೇಖನವು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ ಹಾಗೂ ದಾವಣಗೆರೆ ವಿಶ್ವವಿದ್ಯಾಲಯಗಳ ವಾಣಿಜ್ಯ ವಿಭಾಗದ ಕನ್ನಡ ಪಠ್ಯದಲ್ಲಿ ಸೇರಿದ್ದುವು. ಅಲ್ಲದೆ ಎರಡು ಕೃಷಿ ಸಂಬಂಧಿ ಲೇಖನಗಳು ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯದಲ್ಲಿ ಸೇರ್ಪಡೆಗೊಂಡಿದ್ದವು.

ವಿಧಾನಸಭೆಯಲ್ಲಿ ವಿವಿಧ ಯೋಜನೆಗಳ ಘೋಷಣೆ: ಸ್ಥಳ ಸಂದರ್ಶಿಸುವ ಭರವಸೆ ನೀಡಿದ ಸಚಿವ

ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ನಿರೀಕ್ಷೆ

• ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಲಪಾಡಿಯಿಂದ ಮೊಗ್ರಾಲ್ ವರೆಗಿನ ಸಮುದ್ರ ಕರಾವಳಿ ಪ್ರದೇಶಗಳಲ್ಲಿ ಪ್ರತೀ ವರ್ಷ ವಿವಿಧೆಡೆ ಪ್ರಬಲವಾದ ಕಡಲ್ಕೊರೆತ ಸಂಭವಿಸುತ್ತಿದೆ. ಇದರಿಂದಾಗಿ ಅಪಾರ ನಾಶ ನಷ್ಟ ಉಂಟಾಗುತ್ತಿದೆ.

ಈ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮಗಳನ್ನು ಒದಗಿಸಬೇಕೆಂದು ಆಗ್ರಹಿಸಿ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರು ವಿಧಾನಸಭಾ ಅಧಿವೇಶನದಲ್ಲಿ ವಿಷಯ ಮಂಡಿಸಿದ್ದಾರೆ. ಇದಕ್ಕೆ ಉತ್ತರವಾಗಿ ತುರ್ತು ಕ್ರಮಗಳನ್ನು ಕೈಗೊಳ್ಳುವುದಾಗಿ ರಾಜ್ಯ ನೀರಾವರಿ ಇಲಾಖೆ ಸಚಿವ ರೋಷಿ ಅಗಸ್ಟಿನ್ ಘೋಷಿಸಿದ್ದಾರೆ.

ಲೋಕ ಬ್ಯಾಂಕ್‌ನ ಧನಸಹಾಯ ಯೋಜನೆಯಲ್ಲಿ ಪ್ರತ್ಯೇಕ ಮಿಶನ್ ಡೈರಕ್ಟರೇಟ್‌ನ ವ್ಯಾಪ್ತಿಯಲ್ಲಿ ಒಳಪಡಿಸಿ ವಿಶೇಷ ಪ್ಯಾಕೇಜ್‌ನೊಂದಿಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಈ ಮೂಲಕ ಕಡಲ್ಕೊರೆತವನ್ನು ತಡೆಗಟ್ಟಲು ಶಾಶ್ವತ ಪರಿಹಾರ ಕ್ರಮಗಳನ್ನು ರೂಪಿಸಲಾಗುವುದು ಎಂದು ಸಚಿವರು ಅಧಿವೇಶನದಲ್ಲಿ ಭರವಸೆ ನೀಡಿದರು.

ಅಧ್ಯಯನಕ್ಕಾಗಿ 6.70 ಲಕ್ಷ ರೂ.

ಕರಾವಳಿ ಪ್ರದೇಶದ ಸಮಗ್ರ ಸಂರಕ್ಷಣೆಗಾಗಿ ಒಂಭತ್ತು ಪ್ರಧಾನ ನಿರ್ಮಾಣ ಪ್ರೊಪೋಸಲ್‌ಗಳನ್ನು ಕೇರಳ ಸರಕಾರವು ಸಿದ್ಧಪಡಿಸಿದೆ. ಇದರಲ್ಲಿ ಪೆರಿಂಗಡಿ ಕಡಪ್ಪುರದಲ್ಲಿ 400 ಮೀಟರ್ ಉದ್ದಕ್ಕೆ ತುರ್ತು ಸಂರಕ್ಷಣಾ ಕಾಮಗಾರಿಗಳಿಗಾಗಿ 123.40 ಲಕ್ಷ ರೂ.ಗಳ ಯೋಜನೆಯನ್ನು ತಯಾರಿಸಲಾಗಿದೆ. ಅಲ್ಲದೆ ಪೆರಿಂಗಡಿ, ಶಿರಿಯ ಕಡಪ್ಪುರಗಳಲ್ಲಿ ಇನ್‌ವೆಸ್ಟಿಗೇಶನ್ ಕಾಮಗಾರಿಗಳಿಗೆ 8 ಲಕ್ಷ ರೂ., ಕೊಯಿಪ್ಪಾಡಿ, ಪೆರುವಾಡ್, ನಾಂಗಿ, ಕೊಪ್ಪಳ ಕಡಪ್ಪುರಗಳಲ್ಲಿ ಅಧ್ಯಯನ ನಡೆಸಲು 6.70 ಲಕ್ಷ ರೂ. ಮೀಸಲಿರಿಸಲಾಗಿದೆ.

ಕಣ್ವತೀರ್ಥದಲ್ಲಿ ಸಮುದ್ರ ತಡೆಗೋಡೆ

ಶಿರಿಯ ಕಡಪ್ಪುರಕ್ಕೆ 25 ಲಕ್ಷ ರೂ., ಕುಂಬಳೆಯ ದೂಮನ್‌ವಳಪ್ಪ್, ಕೊಯಿಪ್ಪಾಡಿ ಕಡಪ್ಪುರಗಳಿಗೆ 50 ಲಕ್ಷ ರೂ., ಮಂಗಲ್ಪಾಡಿಯ ಬಂಗ್ಲಾವ್ ಕಡಪ್ಪುರಕ್ಕೆ 24 ಲಕ್ಷ ರೂ. ನೀಡಲು ನಿರ್ಧರಿಸಲಾಗಿದೆ. ಕಣ್ವತೀರ್ಥ ಬೀಚ್‌ನಲ್ಲಿ 83 ಮೀಟರ್ ಉದ್ದದಲ್ಲಿ 25 ಲಕ್ಷ ರೂ.ಗಳ ಕಾಮಗಾರಿಗೆ ಯೋಜನೆ ತಯಾರಿಸಲಾಗಿದೆ. ಮಂಜೇಶ್ವರ ಹಾರ್ಬರ್‌ನಿಂದ ಐಲ ಬೀಚ್ ವರೆಗಿರುವ ಅಧ್ಯಯನ ಸಮೀಕ್ಷೆಗಳಿಗಾಗಿ 10.62 ಲಕ್ಷ ರೂ., ಕಣ್ವತೀರ್ಥದಲ್ಲಿ ಸಮುದ್ರ ತಡೆಗೋಡೆ ನಿರ್ಮಾಣ ಸಾಧ್ಯತೆ ಅಧ್ಯಯನಕ್ಕಾಗಿ 4.50 ಲಕ್ಷ ರೂ. ಒದಗಿಸಲಾಗಿದೆ.

ಈ ಎಲ್ಲಾ ಯೋಜನೆಗಳಿಗೆ ಆಡಳಿತಾನುಮತಿ ಲಭ್ಯವಾದ ಕೂಡಲೇ ಕಾಮಗಾರಿಗಳನ್ನು ಆರಂಭಿಸಲಾಗುವುದು. ಅಲ್ಲದೆ ಮಂಜೇಶ್ವರ ಮಂಡಲದ ಕಡಲ ತೀರದ ಗಂಭೀರ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸುವ ಸಲುವಾಗಿ ನೀರಾವರಿ ಇಲಾಖೆ ಸಚಿವ ಈ ಪ್ರದೇಶಗಳಿಗೆ ಸದ್ಯದಲ್ಲೇ ಭೇಟಿ ನೀಡುವುದಾಗಿ ಆಶ್ವಾಸನೆ ನೀಡಿದ್ದಾರೆ.

• ತಡೆಗೋಡೆ ಬಹುತೇಕ ನಾಶ

ಕಣ್ವತೀರ್ಥ, ಮೂಸೋಡಿ, ಉಪ್ಪಳ, ಶಾರದಾನಗರ, ಹನುಮಾನ್‌ನಗರ, ಶಿವಾಜಿನಗರ, ಪೆರಿಂಗಡಿ, ಶಿರಿಯ, ಕುಂಬಳೆ, ಕೊಯಿಪ್ಪಾಡಿ, ಪೆರುವಾಡ್, ಮೊಗ್ರಾಲ್, ಕೊಪ್ಪಳ ಮುಂತಾದ ಕರಾವಳಿ ಪ್ರದೇಶಗಳಲ್ಲಿ ಕಡಲ್ಕೊರೆತ ತೀವ್ರವಾಗಿ ಸಂಭವಿಸುತ್ತಿರುವುದನ್ನು ಪ್ರತೀ ವರ್ಷ ಪತ್ತೆಹಚ್ಚಲಾಗುತ್ತಿದೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವೆಡೆಗಳಲ್ಲಿ ಸಮುದ್ರ ತಡೆಗೋಡೆ ಬಹುತೇಕ ನಾಶವಾಗಿದ್ದು, ಈ ಮೂಲಕ ಸಮುದ್ರವು ತೀರ ಭಾಗದ ಭೂಪ್ರದೇಶವನ್ನು ಆಹುತಿಯಾಗಿಸುತ್ತಿದೆ ಎಂದು ಸಚಿವರು ತಿಳಿಸಿದರು.

ಕದ್ರಿ ಕಂಬಳದಲ್ಲಿ ಹಲಸು ಮಾವು ಮೇಳ

ಧಾರ್ಮಿಕ ವ್ರತಾಚರಣೆಯ ಸಂದರ್ಭದ ಆಹಾರಸೂತ್ರ ಆರೋಗ್ಯದಾಯಕವಾದದ್ದು

• ಮಂಗಳೂರು: ಪರಂಪರಾಗತವಾಗಿ ಋಷಿ ಮುನಿಗಳಾದಿಯಾಗಿ ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದಿರುವ ಧಾರ್ಮಿಕ ಆಚರಣೆಗಳು ಹಾಗೂ ಆಯಾ ಕಾಲಗಳಿಗೆ ಅನುಗುಣವಾಗಿ ಆಯಾ ಪ್ರದೇಶಗಳಲ್ಲಿ ಪ್ರಕೃತಿದತ್ತವಾಗಿ ಲಭಿಸುವ ಹಣ್ಣು, ಸಸ್ಯ, ತರಕಾರಿ ಇತ್ಯಾದಿಗಳೆಲ್ಲವೂ ಮಾನವನ ಶರೀರಕ್ಕೆ ಯೋಗ್ಯವಾಗಿಯೇ ಇರುವುದು. ಮುಖ್ಯವಾಗಿ ಮಳೆಗಾಲದಲ್ಲಿ ಮನುಷ್ಯನ ದೇಹವು ಮಂದಸ್ಥಿತಿಯಲ್ಲಿರುವುದರಿಂದ ಚಾತುರ್ಮಾಸ್ಯ ವ್ರತದ ಸಂದರ್ಭ ಯತಿಗಳು ಬಳಸುವ ಆಹಾರ ಸೂತ್ರಗಳು ವೈಜ್ಞಾನಿಕವಾಗಿಯೂ ಹೆಚ್ಚು ಆರೋಗ್ಯಕರವಾಗಿರುತ್ತದೆ. ಸಾತ್ವಿಕ ವಾದ ಆಹಾರಗಳೆಲ್ಲವೂ ಮಾನವರ ಆರೋಗ್ಯ ವರ್ಧನೆಗೆ ತುಂಬಾ ಸಹಕಾರಿಯಾಗಿರುವುದಲ್ಲದೆ, ಇದಕ್ಕೆ ಯೋಗಾಭ್ಯಾಸವೂ ಪೂರಕವಾಗುವುದು ಎಂದು ಅದಮಾರು ಮಠಾಧೀಶರಾದ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ನುಡಿದರು.

ಕಲ್ಕೂರ ಪ್ರತಿಷ್ಠಾನ ಹಾಗೂ ಸಾವಯವ ಕೃಷಿಕ ಗ್ರಾಹಕ ಬಳಗದ ಸಹಯೋಗದೊಂದಿಗೆ ಕದ್ರಿ ಕಂಬಳ ಮಲ್ಲಿಕಾ ಬಡಾವಣೆಯ ಮಂಜುಪ್ರಾಸಾದದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಹಲಸು ಮಾವು ಮೇಳದ ಎರಡನೇ ದಿನದ ಸಭಾ ಕಾರ್ಯಕ್ರಮದಲ್ಲಿ ಅವರು ಸಾವಯವ ಜಾಗೃತ ಸಂದೇಶ ನೀಡಿದರು.

ಆಯುರ್ವೇದ ತಜ್ಞ ಪಡುಬಿದ್ರಿಯ ಡಾ.ಎನ್.ಟಿ. ಅಂಚನ್ ಆರೋಗ್ಯ ಭಾಗ್ಯದ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭ ವಾದಿರಾಜ ಮಂಟಪದ ವಿಶ್ವೇಶತೀರ್ಥ ವೇದಿಕೆಯಲ್ಲಿ ನೂರಾರು ಪ್ರತಿಭಾನ್ವಿತ ಕಲಾವಿದರಿಂದ ವಾದ್ಯಸಂಗೀತ, ಭಜನೆ, ಪ್ರವಚನ, ಏಕಪಾತ್ರಾಭಿನಯ, ತಾಳಮದ್ದಳೆ, ಗಮಕ ವಾಚನ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು ಅನಾವರಣಗೊಂಡವು. ಸಾಧಕ ಪ್ರತಿಭೆಗಳಿಗೆ ಕಲ್ಕೂರ ಪ್ರತಿಷ್ಠಾನದ ವತಿಯಿಂದ ಸನ್ಮಾನ, ಗೌರವಾರ್ಪಣೆ ನೆರವೇರಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಎಸ್. ಪ್ರದೀಪ ಕುಮಾರ ಕಲ್ಕೂರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾವಯವ ಕೃಷಿಕ ಗ್ರಾಹಕ ಬಳಗದ ಅಧ್ಯಕ್ಷ ಜಿ.ಆರ್. ಪ್ರಸಾದ್, ಕದ್ರಿ ನವನೀತ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಉಪ್ಪಿನಕುದ್ರು: ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ಕಾರ್ಯಕ್ರಮ

• ಕುಂದಾಪುರ: ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ವಿನೂತನ ಕಾರ್ಯಕ್ರಮ ಸರಣಿಯಡಿ ಸತತ 120 ನೇ ತಿಂಗಳ ಕಾರ್ಯಕ್ರಮ ಭಾನುವಾರ ಜರುಗಿತು.

ನಿವೃತ್ತ ಅಧ್ಯಾಪಕ ಸದಾಶಿವ ಬತಾಳ್, ನಿವೃತ್ತ ಪ್ರಾಧ್ಯಾಪಕ ಎಂ. ರತ್ನಾಕರ ಪೈ, ಶಂಕರ ನಾಗಪ್ಪ ಬಿಲ್ಲವ, ಭಾಗವತ ಸುಬ್ರಹ್ಮಣ್ಯ ನಾವುಡ, ಶಿಕ್ಷಕಿ ಸೌಜನ್ಯ ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು. ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯ ಅರ್ಥಧಾರಿ ಎಚ್. ಶಂಕರ ನಾಗಪ್ಪ ಬಿಲ್ಲವ, ಹೆಮ್ಮಾಡಿ ಹಾಗೂ 2025–26 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉಪ್ಪಿನಕುದ್ರು ಸರಕಾರಿ ಪ್ರೌಢ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದ ಚಂದನ್ ಅವರನ್ನು ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ಶಂಕರ ನಾಗಪ್ಪ ಬಿಲ್ಲವರಿಂದ ಯಕ್ಷಗಾನ, ಜಾನಪದ ಏಕಪಾತ್ರಾಭಿನಯ ನಡೆಯಿತು. ನಿವೃತ್ತ ಶಿಕ್ಷಕ ಉದಯ ಭಂಡಾರ್‌ಕಾರ್ ಹಟ್ಟಿಯಂಗಡಿ ಕಾರ್ಯಕ್ರಮ ನಿರೂಪಿಸಿದರು.

ಜು.1ರಿಂದ ಬಾಲಿಕಾ ಜಾಗೃತಿ ಅಭಿಯಾನ

• ಮಂಗಳೂರು: ಪ್ರಚಲಿತ ಚಾರಿಟೇಬಲ್ ಟ್ರಸ್ಟ್ ಹಾಗೂ ಲೋಬೋ ಫೌಂಡೇಶನ್ ಆಶ್ರಯದಲ್ಲಿ ಜುಲೈ 1ರಿಂದ ಒಂದು ತಿಂಗಳ ಕಾಲ ಬಾಲಿಕಾ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿದೆ ಎಂದು ಪ್ರಚಲಿತ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಹನಿಫಾ ಸವಾದ್ ತಿಳಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಣ್ಣು ಮಕ್ಕಳಿಗೆ ಆರೋಗ್ಯ, ಶಿಕ್ಷಣ, ಕಾನೂನು ಅರಿವು, ವ್ಯಕ್ತಿತ್ವ ವಿಕಾಸ, ಆತ್ಮವಿಶ್ವಾಸ, ಸೈಬರ್ ಸುರಕ್ಷತೆ ಹಾಗೂ ಜೀವನ ಕೌಶಲ್ಯಗಳ ಕುರಿತು ಸಮಗ್ರ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುವುದು ಎಂದರು.

ಮಂಗಳೂರಿನ ವಿವಿಧ ಹೋಬಳಿ ಮಟ್ಟದ ಶಾಲೆಗಳಲ್ಲಿ ಕೈಗೊಳ್ಳಲಾಗುವ ಈ ಅಭಿಯಾನದಲ್ಲಿ ವೈದ್ಯರು, ಉನ್ನತ ನ್ಯಾಯವಾದಿಗಳು ಹಾಗೂ ಅನುಭವಿ ಶಿಕ್ಷಣ ತಜ್ಞರು ವಿದ್ಯಾರ್ಥಿನಿಯರೊಂದಿಗೆ ನೇರ ಸಂವಾದ ನಡೆಸಿ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ. 'ಜಾಗೃತ ಹೆಣ್ಣು ಮಗು– ಸುರಕ್ಷಿತ ಸಮಾಜದ ಅಡಿಪಾಯ' ಎಂಬ ಸಂದೇಶದೊಂದಿಗೆ ನಡೆಯುತ್ತಿರುವ ಈ ಅಭಿಯಾನವು ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸ ಬೆಳೆಸುವ ಜತೆಗೆ ಉತ್ತಮ ನಾಗರಿಕರಾಗಿ ಬೆಳೆಯಲು ಅಗತ್ಯವಾದ ಕಾನೂನು ಹಾಗೂ ಸಾಮಾಜಿಕ ಅರಿವನ್ನು ಮೂಡಿಸುವ ಪ್ರಯತ್ನವಾಗಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲೆ ಮಾನಸ ಹೆಗ್ಡೆ, ಲೋಬೋ ಫೌಂಡೇಶನ್ ನ ಸಂಸ್ಥಾಪಕ ಜಾನ್ ವಿಲ್ಸನ್ ಲೋಬೋ, ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಸಂಶದ್ ಕುಂಜತ್ತಬೈಲ್, ಶಿಕ್ಷಣ ತಜ್ಞೆ ಅನುರಾಧ ಶೆಟ್ಟಿ ಉಪಸ್ಥಿತರಿದ್ದರು.

ಬಂಟ್ವಾಳದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ಅಂಗವಾಗಿ ನಾಗರಿಕರ ಗೋಷ್ಠಿ

ಹಿಂದುತ್ವ ಜಗತ್ತಿಗೆ ಬೆಳಕು ನೀಡಿದ ಸಂಸ್ಕೃತಿ: ಯಾದವ್

• ಮಂಗಳೂರು: ಜಗತ್ತಿಗೆ ಭಾರತದಿಂದಲೇ ಸಂಸ್ಕೃತಿಯ ವಿಕಾಸವಾಯಿತು. ನಾಗರಿಕತೆ, ಸಂಸ್ಕೃತಿ, ಸಭ್ಯತೆ ಪ್ರಾರಂಭವಾದದ್ದು ಭಾರತದಲ್ಲಿ. ಭಾರತದ ನಾಗರಿಕತೆ ಅತ್ಯಂತ ಪುರಾತನವಾಗಿದ್ದು, ಇದೇ ಹಿಂದು ಸಂಸ್ಕೃತಿ. ಹಿಂದುತ್ವ ಭಾರತದ ಆತ್ಮ. ಹಿಂದುತ್ವವೇ ಈ ನೆಲದ ರಾಷ್ಟ್ರೀಯತೆ. ಹಿಂದುತ್ವ ಎಲ್ಲರನ್ನೂ ಒಳಗೊಳ್ಳುವ ಸಂಸ್ಕೃತಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಂಪರ್ಕ ಪ್ರಮುಖ್ ಯಾದವ ಕೃಷ್ಣ ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ಅಂಗವಾಗಿ ಬಂಟ್ವಾಳ ಬಂಟರ ಭವನ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಮುಖ ನಾಗರಿಕರ ಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಇಂದು ಹಿಂದುತ್ವ ಬಹುಚರ್ಚಿತ ವಿಷಯ. ಹಿಂದುತ್ವದ ಬಗ್ಗೆ ಕೆಲವರು ನೆಗೆಟಿವ್ ನರೇಟಿವ್ ಸೃಷ್ಟಿ ಮಾಡಿದರು. ಆದರೆ, ಹಿಂದುತ್ವ ಜಗತ್ತಿಗೆ ಬೆಳಕು ನೀಡಿದ ಸಂಸ್ಕೃತಿ. ಇದೊಂದು ಇಸಂ ಅಲ್ಲ, ಕೇವಲ ಪೂಜಾ ಪದ್ಧತಿಯಲ್ಲ, ಒಂದು ಜನಾಂಗವಲ್ಲ, ಒಂದು ಸಂಪ್ರದಾಯವೂ ಅಲ್ಲ. ಇದೊಂದು ಜೀವನ ಶೈಲಿ. ಎಲ್ಲರನ್ನೂ ಒಳಗೊಂಡ ಒಂದು ಸಂಸ್ಕೃತಿ. ಈ ಕಾರಣಕ್ಕಾಗಿಯೇ ಭಾಷೆ, ವೇಷ, ಬಣ್ಣ ಮುಂತಾದ ಅನೇಕ ಭಿನ್ನತೆ, ವೈವಿಧ್ಯತೆಗಳಿದ್ದರೂ ನಾವೆಲ್ಲರೂ ಒಂದು ಎನ್ನುವ ಭಾವನೆಯೊಂದಿಗೆ ಒಟ್ಟಾಗಿ ಬದುಕುತ್ತಿದ್ದೇವೆ ಅವರು ವಿಶ್ಲೇಷಿಸಿದರು.

ಹಿಂದುತ್ವವೇ ರಾಷ್ಟ್ರೀಯತೆ ಎಂದು ಸಂಘ ಪ್ರತಿಪಾದಿಸುತ್ತದೆ. ರಾಷ್ಟ್ರೀಯ ಎಂದರೆ ಈ ನೆಲದ ಸಂಸ್ಕೃತಿಯ ವಾಹಕ. ಈ ನೆಲದ ಸಂಸ್ಕೃತಿಯನ್ನು ಪಾಲಿಸಿ, ಅಳವಡಿಸಿ, ಗೌರವಿಸಿ ಅದನ್ನು ಮುನ್ನಡೆಸಿಕೊಂಡು ಹೋಗುವವನೇ ರಾಷ್ಟ್ರೀಯ ಎಂದು ಕರೆಸಿಕೊಳ್ಳುತ್ತಾನೆ. ಯಾರು ದೇಶವನ್ನು ತಾಯಿ ಎಂದು ತಿಳಿದುಕೊಂಡು ತಾನು ಈ ತಾಯಿಯ ಪುತ್ರ ಎಂಬ ಭಾವನೆಯೊಂದಿಗೆ ಸಮಾನ ಭಾವವನ್ನು ಹೊಂದುತ್ತಾನೋ ಆತ ರಾಷ್ಟ್ರೀಯನಾಗುವುದಕ್ಕೆ ಅರ್ಹ ವ್ಯಕ್ತಿಯಾಗುತ್ತಾನೆ. ಆದ್ದರಿಂದ, ಹಿಂದುತ್ವ ಜನಾಂಗ ವಾಚಕ ಪದವಲ್ಲ, ಸಾಂಸ್ಕೃತಿಕ ವಾಚಕ ಪದ ಎಂದು ಅಭಿಪ್ರಾಯಪಟ್ಟರು.

ಬಳಿಕ ಗೋಷ್ಠಿಯಲ್ಲಿ ಭಾಗವಹಿಸಿದ್ದ ಪ್ರಮುಖರು, ಗಣ್ಯರ ಜತೆಗೆ ಪ್ರಸ್ತುತ ವಿಚಾರಗಳ ಬಗ್ಗೆ ಸಂವಾದ ನಡೆಸಲಾಯಿತು.

ಮಂಗಳೂರು ಗ್ರಾಮಾಂತರ ಜಿಲ್ಲಾ ಸಂಘಚಾಲಕ್ ವೈ.ಎನ್. ಸಾಲಿಯಾನ್ ಮುಲ್ಕಿ ಉಪಸ್ಥಿತರಿದ್ದರು. ಸುಜಿತ್ ಕಲ್ಲಡ್ಕ ಸ್ವಾಗತಿಸಿ, ವಿನೋದ್ ವಂದಿಸಿದರು. ಅಭಿರಾಮ್ ವೈಯಕ್ತಿಕ ಗೀತೆ ಹಾಡಿದರು. ವಿದ್ಯಾ ಆಚಾರ್ಯ ಕಲ್ಲಡ್ಕ ವಂದೇ ಮಾತರಂ ಹಾಡಿದರು. ಕೀರ್ತಿರಾಜ್ ಕಾರ್ಯಕ್ರಮ ನಿರೂಪಿಸಿದರು.



THE KING GRACES THE COAST
AN EVENING WITH
SHAH RUKH
KHAN
TODAY AT 4.00 PM
ADYAR GARDEN, MANGALORE
Registered Guests Only

ತಿಂಗಳೊಳಗೆ ಕೆಕೆಆರ್‌ಡಿಬಿ ಕಾರ್ಯದರ್ಶಿ ನೇಮಿಸಿ: ಹೈಕೋರ್ಟ್ ನಿರ್ದೇಶನ

• ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾತ್ರ ನೇಮಕ ಮಾಡಬೇಕು ಎಂಬುದು ದೋಷಪೂರಿತ ವಾದ ಎಂದು ಕರ್ನಾಟಕ ಹೈಕೋರ್ಟ್ ಬುಧವಾರ ಹೇಳಿದ್ದು, ತಿಂಗಳಲ್ಲಿ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಕೆಕೆಆರ್‌ಡಿಬಿ ಕಾರ್ಯದರ್ಶಿಯನ್ನಾಗಿ ನೇಮಿಸಬೇಕು ಎಂದು ನಿರ್ದೇಶಿಸಿದೆ.

ಕೆಕೆಆರ್‌ಡಿಬಿ ಅಧ್ಯಕ್ಷರಾಗಿರುವ ಡಾ.ಅಜಯ್ ಸಿಂಗ್ ನೇಮಕಾತಿ ಮತ್ತು ಕೊಪ್ಪಳ ಜಿಲ್ಲಾಧಿಕಾರಿ ನಳಿನಿ ಅತುಲ್ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿರುವುದು ಹಾಗೂ ಕೆಕೆಆರ್‌ಡಿಬಿಯಲ್ಲಿನ ಅಕ್ರಮದ ತನಿಖೆಗೆ ನಿರ್ದೇಶಿಸುವಂತೆ ಕೋರಿ ಆಹಿಂದ ಚಿಂತಕರ ವೇದಿಕೆಯ ಸಾಯಿಬಣ್ಣಾ ಜಮಾದಾರ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು, ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠವು ಇತ್ಯರ್ಥಪಡಿಸಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ 2013 ಆದೇಶಕ್ಕೆ ತಿದ್ದುಪಡಿ ಮಾಡಿ, 2020ರ ಜ. 27ರಂದು ಹೊರಡಿಸಿರುವ ಆದೇಶವನ್ನು ಉಲ್ಲೇಖಿಸಿದರು. ತಿದ್ದುಪಡಿಯಲ್ಲಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಪೈಕಿ ಒಂದು ಜಿಲ್ಲಾ ಉಸ್ತುವಾರಿ ಸಚಿವರು ಎಂದಿದ್ದನ್ನು ಕೈಬಿಟ್ಟು, ನಾಮನಿರ್ದೇಶನ ಮಾಡಲ್ಪಟ್ಟ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸಬಹುದು ಎಂದು ತಿದ್ದುಪಡಿ ಮಾಡಲಾಗಿದೆ ಎಂದು ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಪೀಠದ ಗಮನಕ್ಕೆ ತಂದರು.

ಇದನ್ನು ಒಪ್ಪಿದ ಪೀಠವು ಸಚಿವರನ್ನು ಮಾತ್ರ ಕೆಕೆಆರ್‌ಡಿಬಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು ಎಂಬ ಅರ್ಜಿದಾರರ ವಾದ ದೋಷಪೂರಿತವಾಗಿದೆ ಎಂದಿತು. ಇನ್ನು ಕಾರ್ಯದರ್ಶಿ ನೇಮಕಕ್ಕೆ ಸಂಬಂಧಿಸಿದಂತೆ 4 ವಾರಗಳಲ್ಲಿ ಅಗತ್ಯವಾದ ಆದೇಶ ಹೊರಡಿಸಲಾಗುವುದು ಎಂದು ಅಡ್ವೊಕೇಟ್ ಜನರಲ್ ತಿಳಿಸಿದರು. ಈ ಹೇಳಿಕೆಯನ್ನು ದಾಖಲಿಸಿಕೊಂಡ ಪೀಠವು 4 ವಾರಗಳಲ್ಲಿ ಕೆಕೆಆರ್‌ಡಿಬಿಗೆ ಸೂಕ್ತ ಅರ್ಹತೆ ಹೊಂದಿರುವ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಬೇಕು ಎಂದು ನಿರ್ದೇಶಿಸಿತು.

ರಾಮ ಬಾಣ


ಇನ್ನು ಅವರ ಪಾದರಕ್ಷೆಗಳಾದ ನಾವು ಒಟ್ಟಿಗೆ ಇರುವುದರಲ್ಲಿ ಅರ್ಥವಿಲ್ಲ... ನೀನು ಆ ಕಡೆ ಹೋಗು ! ನಾನು ಈ ಕಡೆ ಹೋಗ್ತೀನಿ !!
ಟಿಎಂಸಿಯಿಂದ ದೀದಿ ಉಚ್ಚಾಟನೆ !?

ಸ್ವಾತಂತ್ರ್ಯ ದಿನಾಚರಣೆಗೆ ಸ್ಪರ್ಧೆ

• ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ–2026ರ ಅಂಗವಾಗಿ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿಯನ್ನು ಉತ್ತೇಜಿಸುವ ಉದ್ದೇಶದಿಂದ ಸಮಗ್ರ ಶಿಕ್ಷಣ ಕರ್ನಾಟಕವು ರಕ್ಷಣಾ ಸಚಿವಾಲಯ, ಮೈ ಗೌ (ಎಂವೈ, ಜಿಒವಿ) ಹಾಗೂ ಮೈ ಭಾರತ್ ಸಹಯೋಗದೊಂದಿಗೆ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ವಿವಿಧ ಆನ್‌ಲೈನ್ ಸ್ಪರ್ಧೆಗಳನ್ನು ಆಯೋಜಿಸಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಜು.17ರವರೆಗೆ ಅವಕಾಶ ಕಲ್ಪಿಸಲಾಗಿದೆ.

2047ರ ಒಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ ಕೃತಕ ಬುದ್ಧಿಮತ್ತೆ (ಎಐ)ಯ ಪಾತ್ರ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. 500 ರಿಂದ 600 ಪದಗಳ ಮಿತಿಯಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ (ದ್ವಿ ಭಾಷೀಯ) ಪ್ರಬಂಧ ಬರೆಯಬೇಕಿದ್ದು, ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ.

ಇದೇ ವೇಳೆ ಭಾರತ 1947ರಿಂದ ಭಾರತ 2047ರ ವಿಷಯದ ಅಡಿಯಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಬಹುಮಾನ ಹಾಗೂ 20 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ವಿವಿಧ ಕ್ಷೇತ್ರಗಳ ಸಾಧನೆಗಳ ಕುರಿತು ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿರುವ ಈ ಸ್ಪರ್ಧೆಯಲ್ಲಿ 5 ನಿಮಿಷಗಳ ಅವಧಿಯಲ್ಲಿ 20 ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಹಾಗೂ 50 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ಪ್ರಬಂಧ, ಚಿತ್ರಕಲೆ ಮತ್ತು ರಸಪ್ರಶ್ನೆ ಸ್ಪರ್ಧೆಗಳಲ್ಲಿ ಆಯ್ಕೆಯಾಗುವ ತಲಾ 200 ಅಗ್ರ ಸ್ಪರ್ಧಿಗಳಿಗೆ ಅವರೊಬ್ಬ ಸಹಚರರೊಂದಿಗೆ ಆ.15ರಂದು ದಿಲ್ಲಿಯ ಕೆಂಪುಕೋಟೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ–ಆಹ್ವಾನ ಪತ್ರಿಕೆ ನೀಡಲಾಗುತ್ತದೆ. ಆದರೆ ಪ್ರಯಾಣ, ವಸತಿ ಮತ್ತು ಆಹಾರ ವೆಚ್ಚವನ್ನು ಸ್ಪರ್ಧಿಗಳೇ ಭರಿಸಬೇಕಾಗುತ್ತದೆ ಎಂದು ಸಮಗ್ರ ಶಿಕ್ಷಣ ಕರ್ನಾಟಕ ಸೂಚನೆ ನೀಡಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ,
ದಕ್ಷಿಣಾಯನ, ಗ್ರೀಷ್ಮ ಋತು,
ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ,
ನಕ್ಷತ್ರ: ಸ್ವಾತಿ

ದಿನದ ಮಾತು

ಕೆಡುಕಿನ ಮನೋಭಾವದವನಿಗೆ ಸಂತಸವೆಂಬುದು ಯಾವಾಗಲೂ ಮರೀಚಿಕೆಯೇ.

▲ ಗೌತಮ ಬುದ್ಧ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡಬೇಕೇ ಹೊರತು ಅಲ್ಪ ಜ್ಞಾನಿಗಳು ತಾವು ಹೇಳಿದ್ದೇ ಧರ್ಮ ಅಂತ ಬಿಂಬಿಸಿಕೊಂಡು ಸಮಾಜವನ್ನು ತಪ್ಪು ದಾರಿಗೆ ಎಳೆಯುವುದು ಸರಿಯಲ್ಲ

– ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ

– ಧರ್ಮವನ್ನು ವ್ಯಾಪಾರವನ್ನಾಗಿ ಮಾಡಿಕೊಳ್ಳುವ ಮಂದಿಗೆ ಅದೆಲ್ಲ ಬೇಕಿಲ್ಲ, ವ್ಯಾಪಾರವೇ ಅವರ ಧರ್ಮ!

ದಿನ ಭವಿಷ್ಯ

ಮೇಷ ನಿಮ್ಮ ನಡೆ ಕೆಲವರಿಗೆ ತಪ್ಪರ್ಥ ಮೂಡಿಸಬಹುದು. ಅಸಮಾಧಾನ ತರುವ ಬೆಳವಣಿಗೆ. ಆಪ್ತ ಬಂಧು ಭೇಟಿಯಿಂದ ಸಮಾಧಾನ.

ವೃಷಭ ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ವರ್ತಿಸಬೇಡಿ. ಶೀತ, ಜ್ವರದ ಸಮಸ್ಯೆ ಕಾಡಬಹುದು.

ಮಿಥುನ ಕೆಲದಿನಗಳ ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ.

ಕಟಕ ಆರ್ಥಿಕ ಪ್ರಗತಿ ಉತ್ತಮ. ಆದರೆ ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ಸಿಂಹ ಅನ್ಯರ ಮೆಚ್ಚಿಸಲು ಅನವಶ್ಯ ಪ್ರಯತ್ನ ಬೇಡ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಕೌಟುಂಬಿಕ ಬಿಕ್ಕಟ್ಟು ಪರಿಹಾರ ಕಷ್ಟವಾದೀತು.

ಕನ್ಯಾ ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ಬಂದೀತು. ಆತ್ಮೀಯ ಬಂಧು ಭೇಟಿ.

ತುಲಾ ನಡೆನುಡಿಯಲ್ಲಿ ಎಚ್ಚರ ವಹಿಸಿ. ಜಗಳಕ್ಕೆ ಆಸ್ಪದ ಕೊಡಬೇಡಿ. ಗೌರವಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ವೃಶ್ಚಿಕ ಜೀವನದ ಹೊಸ ಪಾಠ ಕಲಿಯುವಂತಹ ಪ್ರಸಂಗ ಸಂಭವ. ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಧನು ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಮಕರ ನಿಮ್ಮ ಪಾಲಿಗೆ ಮಹತ್ವದ ದಿನ.ಬಯಸಿದ ಬೆಳವಣಿಗೆ ಸಂಭವ. ದೊಡ್ಡ ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ಕುಂಭ ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಇರಲಿ.

ಮೀನ ಈ ದಿನ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಮನೆಯಲ್ಲಿ ಕಲಹವಾದೀತು.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ : 2,7,5,1

ನಾಲ್ವರು ಜಲಸಮಾಧಿ

• ಮಂಡ್ಯ: ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆಯಲು ಹೋದ ಒಂದೇ ಕುಟುಂಬದ ಓರ್ವ ವ್ಯಕ್ತಿ, ನಾಲ್ಕು ಮಹಿಳೆಯರು ಸೇರಿದಂತೆ ಐವರು ಜಲ ಸಮಾಧಿಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಮುತ್ತತ್ತಿ ಬಳಿ ನಡೆದಿದೆ. ಚನ್ನಪಟ್ಟಣ ತಾಲೂಕಿನ ಬ್ಯಾಡರಹಳ್ಳಿಯ ಚೈತ್ರಾ (20), ಶ್ವೇತಾ(38), ವಿಜಯಮ್ಮ (50), ಪ್ರಿಯಾಂಕ(28) ಹಾಗೂ ಮಹೇಶ್ (30) ಎಂಬುವರೇ ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ಮುತ್ತತ್ತಿಯ ಮುತ್ತುರಾಯಸ್ವಾಮಿ ದೇವಾಲಯಕ್ಕೆ ಆಗಮಿಸಿದ್ದ ಮಹೇಶ್ ಇತರರು, ಬುಧವಾರ ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ಕಾವೇರಿ ನದಿ ಬಳಿ ಸೆಲ್ಫಿ ತೆಗೆದುಕೊಳ್ಳಲು ಹೋಗಿದ್ದಾರೆ. ಕಾಲೇಜು ನದಿಯಲ್ಲಿ ಬಿದ್ದು ಜಲಸಮಾಧಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉ.ಪ್ರ.ಜಾಗತಿಕ ಬೆಳವಣಿಗೆ ಸಂವಾದ: ಹೂಡಿಕೆದಾರರ ರೋಡ್ ಶೋ

ಉ.ಪ್ರ.ಪ್ರಗತಿಗೆ ಯೋಗಿ ಹೆಮ್ಮೆ

• ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ವಿಕಾಸದ ಹೊಸ ಆಯಾಮ ಸೃಷ್ಟಿಸಿದೆ. ಭಾರತದ ಕುರಿತ ಜಗತ್ತಿನ ದೃಷ್ಟಿಕೋನವನ್ನು ಅವರು ಬದಲಿಸಿದ್ದಾರೆ. ಜಾಗತಿಕ ಹೂಡಿಕೆಯನ್ನು ಭಾರತ ಆಕರ್ಷಿಸುತ್ತಿದೆ. ಉತ್ತರ ಪ್ರದೇಶವು ಕಳೆದ 9 ವರ್ಷಗಳಲ್ಲಿ ಭಾರತದ ಪ್ರಗತಿಯಲ್ಲಿ ಸಹಭಾಗಿಯಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.

ನಗರದ ಖಾಸಗಿ ಹೋಟೇಲಿನಲ್ಲಿ ಬುಧವಾರ ಆಯೋಜಿಸಿದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ– 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ 9 ವರ್ಷಗಳ ಉ.ಪ್ರದೇಶದ ಪ್ರಗತಿಯನ್ನು ಅವಲೋಕನ ಮಾಡಬೇಕು. ಇದಕ್ಕಾಗಿ ಖುದ್ದು ಉ.ಪ್ರದೇಶಕ್ಕೆ ಬಂದು ನಮ್ಮ ರಾಜ್ಯದ ವಿಕಾಸವನ್ನು ಕಣ್ತುಂಬಿಕೊಳ್ಳಬಹುದು. 9 ವರ್ಷಕ್ಕೂ ಮುನ್ನ ಯುಪಿಯಲ್ಲಿ ಸಮರ್ಥ ಆಡಳಿತವಿರಲಿಲ್ಲ, ರಾಜ್ಯದಲ್ಲಿ ಅಭಿವೃದ್ಧಿ ಹೆಸರೇ ಇರಲಿಲ್ಲ. ಉತ್ತರ ಭಾರತದ ರೋಗಗ್ರಸ್ತ ರಾಜ್ಯಗಳಲ್ಲಿ ಉ.ಪ್ರದೇಶವೂ ಒಂದಾಗಿತ್ತು. ಕೆಟ್ಟ ವಾತಾವರಣ ಅಲ್ಲಿತ್ತು. ಈಗಿನ ಉತ್ತರ ಪ್ರದೇಶದ ಬಗ್ಗೆ ಹೇಳಲು ನನಗೆ ಬಹಳ ಸಂತೋಷವಾಗುತ್ತಿದೆ. ಈಗ ಅಲ್ಲಿ ಎಲ್ಲವೂ ಇದೆ, ಅಲ್ಲಿರುವುದು ಬೇರೆ ಕಡೆ ಇಲ್ಲ, ಬೇರೆ ಕಡೆ ಇರುವುದೆಲ್ಲವೂ ಅಲ್ಲಿನ ಯಾವುದಾದರೊಂದು ಕಡೆ ಸಿಗುತ್ತದೆ ಎಂದು ವಿವರಿಸಿದರು.

ಕೇವಲ ಕೈಗಾರಿಕೆಗಳಿಗೆ ಮಾತ್ರವಲ್ಲದೇ ಉತ್ತರ ಪ್ರದೇಶದಲ್ಲಿ ಕೃಷಿಗೂ ಉತ್ತಮ ಅವಕಾಶಗಳಿವೆ. ಐದು ಕೃಷಿ ವಿಶ್ವವಿದ್ಯಾಲಯಗಳಿವೆ. ಕೃಷಿ ಕ್ಷೇತ್ರದಲ್ಲೂ ಪ್ರಗತಿ ಸಾಧಿಸಿದೆ. ಬಂಡವಾಳ ಹೂಡಲು ಉತ್ತರ ಪ್ರದೇಶ ಹೇಳಿ ಮಾಡಿಸಿದಂತಿದೆ. ಭಾರತ, ಉತ್ತರ ಪ್ರದೇಶದ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ದೊಡ್ಡದು. ಏಕಗವಾಕ್ಷಿ ವ್ಯವಸ್ಥೆ ಉದ್ಯಮಿಗಳಿಗೆ ಸಿಗಲಿದೆ, ಉದ್ಯಮಗಳಿಗೆ ಭಾರೀ ಸುರಕ್ಷೆ ಒದಗಿಸಲಾಗುತ್ತದೆ. ಆದ್ದರಿಂದ ಉತ್ತರ ಪ್ರದೇಶಕ್ಕೆ ಬನ್ನಿ ಎಂದು ಯೋಗಿ ಆದಿತ್ಯನಾಥ್ ಆಹ್ವಾನಿಸಿದರು.

ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ವಿತ್ತ ಸಚಿವ ಸುರೇಶ್ ಕುಮಾರ್ ಖನ್ನಾ ಹಾಗೂ ಉ.ಪ್ರದೇಶ ಸರ್ಕಾರದ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

> ಉತ್ತರ ಪ್ರದೇಶವು ಪ್ರಸಕ್ತ ಸುರಕ್ಷಿತವಾಗಿದೆ. ನಮ್ಮ ಆರ್ಥಿಕ ನೀತಿಗಳಿಂದ ಜಗತ್ತಿಗೆ ನಮ್ಮ ಮೇಲೆ ವಿಶ್ವಾಸ ಬರುತ್ತಿದೆ. ಕಡಿಮೆ ಬೆಲೆ ಭೂಮಿ ಸಿಗುತ್ತಿದೆ. ಉತ್ತಮ ಸಂಪರ್ಕ ವ್ಯವಸ್ಥೆ, ಮೂಲ ಸೌಕರ್ಯವಿದೆ. ರಾಜ್ಯದ ಆರ್ಥಿಕತೆಯನ್ನು 1 ಟ್ರಿಲಿಯನ್ ಡಾಲರ್‌ಗೇರಿಸಲು ಗುರಿ ಇಟ್ಟುಕೊಳ್ಳಲಾಗಿದೆ.
>
> ■ **ಸುರೇಶ್ ಕುಮಾರ್ ಖನ್ನಾ,**
> ಉತ್ತರ ಪ್ರದೇಶದ ವಿತ್ತ ಸಚಿವ

ಡಬಲ್ ಡೆಕ್ಕರ್ ಸರ್ಕಾರದಿಂದ ಅಭಿವೃದ್ಧಿ

ಕಳೆದ 9 ವರ್ಷಗಳಿಂದ ಉತ್ತರ ಪ್ರದೇಶದಲ್ಲಿ ಡಬಲ್ ಇಂಜಿನ್ ಸರ್ಕಾರ ಸುರಕ್ಷೆ ಹೆಚ್ಚಿಸಿದೆ. ಉತ್ತರ ಪ್ರದೇಶದ ಆರ್ಥಿಕತೆ ಮೂರು ಪಟ್ಟು ಹೆಚ್ಚಾಗಿದೆ, ತಲಾದಾಯ ಮೂರು ಪಟ್ಟು ಜಾಸ್ತಿಯಾಗಿದೆ. ಹೂಡಿಕೆ ಅವಕಾಶಗಳು ಹಿಂದಿಗಿಂತಲೂ ಹೆಚ್ಚಾಗಿವೆ. 75 ಸಾವಿರ ಎಕರೆಗಳಷ್ಟು ಭೂ ಬ್ಯಾಂಕ್ ಉತ್ತರ ಪ್ರದೇಶದಲ್ಲಿದೆ. ದೇಶದ ಅತೀ ದೊಡ್ಡ ಗಂಗಾ ಎಕ್ಸ್‌ಪ್ರೆಸ್‌ವೇ, ದೇಶದ ಮೊದಲ ಒಳನಾಡು ಜಲಮಾರ್ಗ, ಐದು ಅಂತಾರಾಷ್ಟ್ರೀಯ ಮತ್ತು 16 ದೇಶೀಯ ವಿಮಾನ ನಿಲ್ದಾಣಗಳಿವೆ. ಇನ್ನೂ ಐದು ವಿಮಾನ ನಿಲ್ದಾಣಗಳ ನಿರ್ಮಾಣ ನಡೆಯುತ್ತಿದೆ. ಎರಡು ಐಐಟಿಗಳಿವೆ, ಕೌಶಲಯುತ ಮಾನವಶಕ್ತಿ ಇದೆ. ದೇಶದ ಮೊದಲ ಸ್ಪೀಡ್ ರೈಲು ದಿಲ್ಲಿ ಮೀರತ್ ನಡುವೆ ಓಡುತ್ತಿದೆ ಎಂದು ತಿಳಿಸಿದರು.

ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿ

• ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿದರೆ ಕ್ಲಬ್‌ನ 150 ವರ್ಷಗಳ ಸಂಭ್ರಮಕ್ಕೆ ಅರ್ಥ ಬರುತ್ತದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ಯಾಂಕಿ ರಸ್ತೆಯ ಗಾಲ್ಫ್ ಕ್ಲಬ್ ನಲ್ಲಿ ಬುಧವಾರ ನಡೆದ ಬೆಂಗಳೂರು ಗಾಲ್ಫ್ ಕ್ಲಬ್‌ನ 150ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, 150 ವರ್ಷದ ಇತಿಹಾಸವಿರುವ ಗಾಲ್ಫ್ ಕ್ಲಬ್. ಇಷ್ಟು ಹೊತ್ತಿಗೆ ಬೆಂಗಳೂರಿನಲ್ಲಿ ಮೂರ್ನಾಲ್ಕು ಗಾಲ್ಫ್ ಕೋರ್ಸ್ ನಿರ್ಮಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಬೊಮ್ಮಾಯಿ ಅವರಾಗಿದ್ದ ಕಾರಣಕ್ಕೆ ನಿಮಗೆ ನೀಡಲಾಗಿರುವ ಅನುಮತಿಯನ್ನು ನವೀಕರಿಸಿದ್ದಾರೆ. ನಾನಾಗಿದ್ದರೆ ನವೀಕರಣ ಮಾಡುತ್ತಿರಲಿಲ್ಲ. ನಾನು ಅನುಮತಿ ನವೀಕರಿಸಬೇಕಾದರೆ ಮುಂದಿನ ಪೀಳಿಗೆಗೆ ಒಂದೆರಡು ಗಾಲ್ಫ್ ಕೋರ್ಸ್ ಆರಂಭಿಸಿ ಎಂದು ಷರತ್ತು ಹಾಕುತ್ತಿದ್ದೆ. ನಾನು ಇತಿಹಾಸ ಓದುವುದಕ್ಕಿಂತ ಇತಿಹಾಸ ಬರೆಯುವುದರಲ್ಲಿ ಆಸಕ್ತಿ ಹೊಂದಿದ್ದೇನೆ. ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ. ಟೀಕೆ ಮಾಡುವವರು ಮಾಡುತ್ತಾರೆ ಎಂದರು.

ಗಾಲ್ಫ್ ಕ್ಲಬ್ 150 ವರ್ಷ ಪೂರ್ಣಗೊಳಿಸಿದೆ. ಈ ಸಂದರ್ಭದಲ್ಲಿ ಎಲ್ಲರಿಗೂ ಅಭಿನಂದನೆಗಳು. ನಾನು ಮುಖ್ಯಮಂತ್ರಿಯಾದ ಬಳಿಕ ನಾನು ಭಾಗವಹಿಸುತ್ತಿರುವ ಮೊದಲ ಖಾಸಗಿ ಕಾರ್ಯಕ್ರಮ. ನಾನು ಸಿಎಂ ಎನ್ನುವುದಕ್ಕಿಂತ ಇಲ್ಲಿನ ಸದಸ್ಯ. ಹೀಗಾಗಿ ಬಂದಿದ್ದೇನೆ. ನನ್ನ ಮಾತು ನಿಮಗೆ ಹಿತವಾಗಿರುವುದಿಲ್ಲ. ನಿಮ್ಮ ಚಪ್ಪಾಳೆ ಬೇಡ. ನಿಮಗೆ ಇಷ್ಟವಾಗುತ್ತದೆಯೋ ಇಲ್ಲವೋ ಆದರೆ ನಾನು ಸತ್ಯ ನುಡಿಯಬೇಕು ಎಂದರು.

ಪಾರ್ಕ್ ನಿರ್ಮಾಣ

ಬೆಂಗಳೂರಿನಲ್ಲಿ ಹಸಿರು ಹೆಚ್ಚಿಸಲು ನನಗೆ ಆಸಕ್ತಿ ಇದೆ. ಕಬ್ಬನ್ ಪಾರ್ಕ್, ಲಾಲ್ ಬಾಗ್ ಬಿಟ್ಟರೆ ಬೇರೆ ಎಲ್ಲಿದೆ ಜಾಗ, ಹೀಗಾಗಿ ಅರಣ್ಯ ಇಲಾಖೆ ಜೊತೆ ಚರ್ಚೆ ಮಾಡಿ ಬೆಂಗಳೂರಿನ 18 ಕಿ.ಮೀ ಸುತ್ತಮುತ್ತ ಎಲ್ಲೆಲ್ಲಿ ಅರಣ್ಯ ಇಲಾಖೆ ಜಾಗ ಇದೆಯೋ ಅವುಗಳನ್ನು ಖಾಲಿ ಬಿಡುವ ಬದಲು ಉದ್ಯಾನವನ ನಿರ್ಮಿಸಿ ಎಂದು ಸೂಚಿಸಿದ್ದೇನೆ ಎಂದರು.

ಉದ್ಯಮಶೀಲತೆಗೆ ಉತ್ತೇಜನ ಉದ್ದೇಶ

> ಮಹಿಳಾ ಉದ್ಯಮಿಗಳು ಆತ್ಮವಿಶ್ವಾಸದಿಂದ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಿ ಜಾಗತಿಕ ಮಟ್ಟದಲ್ಲಿ ತಮ್ಮ ಸ್ಥಾನವನ್ನು ನಿರ್ಮಿಸಿಕೊಳ್ಳಬೇಕು.
>
> ■ **ಕುಮಾರಿ ಸಾದ್ವಿ ಸೈಲ್,**
> ಫೆಮಿನಾ ಮಿಸ್ ಇಂಡಿಯಾ 2026ರ ವಿಜೇತೆ

• ಬೆಂಗಳೂರು: ಕರ್ನಾಟಕದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಹಾಗೂ ಉದ್ಯೋಗ ಸೃಷ್ಟಿಗೆ ನೆರವಾಗುವ ಸಮಗ್ರ ವ್ಯವಸ್ಥೆಗಳ ಅಗತ್ಯತೆ ಇದೆ ಎಂದು ಕೆಎಸ್‌ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೃಷ್ಣ ಸೈಲ್ ತಿಳಿಸಿದರು.

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ವತಿಯಿಂದ ಸಂಪತ್ತಿ–ದ ಮಂತ್ರ ಫಾರ್ ಅಬಂಡನ್ಸ್ ಎಂಬ ಸಮಗ್ರ ವ್ಯವಹಾರ ಪರಿಸರ ಕಾರ್ಯಕ್ರಮಕ್ಕೆ ನೀಡಿ ಮಾತನಾಡಿ, ಸ್ಟಾರ್ಟ್‌ಅಪ್‌ಗಳು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಮಾರ್ಗದರ್ಶಕರು, ಹೂಡಿಕೆದಾರರು ಹಾಗೂ ಕೈಗಾರಿಕಾ ವಲಯವನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

ಕೆಎಸ್‌ಎಂಸಿಎ ವ್ಯವಸ್ಥಾಪಕ ನಿರ್ದೇಶಕ ಬಿ. ಆನಂದ್ ಮಾತನಾಡಿ, ಸರ್ಕಾರದ ಮಾರ್ಗದರ್ಶನ ಮತ್ತು ಬೆಂಬಲದೊಂದಿಗೆ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಉದ್ಯಮಿಗಳ ಬೆಳವಣಿಗೆಗೆ ಅಗತ್ಯವಾದ ಮಾರ್ಗದರ್ಶನ, ಮಾರುಕಟ್ಟೆ ಸಂಪರ್ಕ, ಬ್ರ್ಯಾಂಡಿಂಗ್ ಮತ್ತು ವ್ಯವಹಾರ ವಿಸ್ತರಣೆಗೆ ಕೆಎಸ್‌ಎಂಸಿಎ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ಸ್ಮಿತಾ ಪ್ರಭು ಮಾತನಾಡಿ, ಸಂಪತ್ತಿ ಕಾರ್ಯಕ್ರಮದ ಸಮಗ್ರ ಪರಿಚಯವನ್ನು ನೀಡಿದರು. ಸ್ಟಾರ್ಟ್‌ಅಪ್‌ಗಳು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಲಭ್ಯವಾಗುವ ಅವಕಾಶಗಳ ಕುರಿತು ವಿವರಿಸಿದರು. ವಿಡಿಯೋ ಸಂದೇಶದ ಮೂಲಕ ಮಾತನಾಡಿದ ಮೆಂಟರ್ ಆನ್ ರೋಡ್ ಆ್ಯಂಪ್ ಗ್ಲೋಬಲ್ ನೆಟ್‌ವರ್ಕ್ ಸಂಸ್ಥಾಪಕ ಡಾ. ಜಗತ್ ಶಾ, ಜಾಗತಿಕ ಮಾರುಕಟ್ಟೆ ಅವಕಾಶಗಳು, ಮಾರ್ಗದರ್ಶನದ ಮಹತ್ವ, ರಫ್ತು ಆಧಾರಿತ ಬೆಳವಣಿಗೆ ಹಾಗೂ ವ್ಯವಹಾರ ಜಾಲತಾಣಗಳ ಅಗತ್ಯತೆಯನ್ನು ವಿವರಿಸಿದರು.

ಸಂಪತ್ತಿ ಭವನ ಸಮಗ್ರ ವ್ಯವಹಾರ ಕೇಂದ್ರ: ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಸಂಪತ್ತಿ ಭವನ ಎಂಬ ಸಮಗ್ರ ವ್ಯವಹಾರ, ನವೀನತೆ ಮತ್ತು ಉದ್ಯಮಶೀಲತಾ ಕೇಂದ್ರ ಘೋಷಿಸಲಾಯಿತು. ಇದು ಉದ್ಯಮಿಗಳು, ಹೂಡಿಕೆದಾರರು, ಮಾರ್ಗದರ್ಶಕರು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕಾ ವಲಯವನ್ನು ಸಂಪರ್ಕಿಸುವ ಪ್ರಮುಖ ವೇದಿಕೆಯಾಗಲಿದೆ. ಸಂಪತ್ತಿಯ ಮುಖ್ಯ ಸಲಹೆಗಾರರಾದ ಎಂ.ಕೆ.ಎಚ್.ಎಚ್. ಜಿಲಾನಿ, ಬ್ರಿಸ್ಕ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ಸಮೀರ್ ಶಾಸ್ತ್ರಿ, ಪೇಯು (PayU) ಸಂಸ್ಥೆಯ ನಿರ್ದೇಶಕ ಪ್ರೀತಂ ಪ್ರಜಾಪತಿ,

ಜು.1ರಿಂದ ವಿಬಿ ಜಿರಾಮ್‌ಜಿ

ಪುಟ ೧➡ ಆದರೆ ಈಗ ಒಂದೇ ವರ್ಷಕ್ಕೆ 3,806ಕೋಟಿ ರೂ. ವೆಚ್ಚ ಭರಿಸುವ ಸ್ಥಿತಿ ಬಂದಿದೆ. ಇದು ರಾಜ್ಯದ ಮೇಲೆ ಆಗುವ ದೊಡ್ಡ ಹೊರೆ ಎಂದು ತಿಳಿಸಿದರು. ಕೇಂದ್ರ ಸರ್ಕಾರ ವಿಬಿ ಜಿ ರಾಮ್‌ಜಿನಲ್ಲಿ ರಾಜ್ಯಕ್ಕೆ 5,709 ಕೋಟಿ ರೂ. ಹಂಚಿಕೆ ಮಾಡಿದೆ. ಗ್ರಾಮೀಣ ಜನರಿಗೆ ತೊಂದರೆ ಆಗದಂತೆ ಯೋಜನೆಗೆ ರಾಜ್ಯ ಸರ್ಕಾರದ ವತಿಯಿಂದ 3,806 ಕೋಟಿ ರೂ. ಭರಿಸಬೇಕಾಗುತ್ತದೆ. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು, ಅವರು ಸಮ್ಮತಿಸಿದ್ದಾರೆ ಎಂದರು. ಜತೆಗೆ ಕೇಂದ್ರ ಸರ್ಕಾರ ಹಂತ ಹಂತವಾಗಿ ಕನಿಷ್ಠ 80:20ರ ಅನುಪಾತದಲ್ಲಾದರೂ ರಾಜ್ಯಗಳ ನೆರವಿಗೆ ನಿಲ್ಲಬೇಕು ಎಂದು ಆಗ್ರಹಿಸಲಾಗುತ್ತಿದೆ ಎಂದರು. ಕೇಂದ್ರ ಸರ್ಕಾರ ಅವೈಜ್ಞಾನಿಕವಾಗಿ ಬೇಸಾಯದ ಸಮಯದಲ್ಲಿ 60 ದಿನ ಕಾಲ ಉದ್ಯೋಗ ನೀಡದಿರುವಂತೆ ಸೂಚಿಸಿದೆ. ಇದು ಗ್ರಾಮೀಣ ಕುಟುಂಬಗಳಿಗೆ ಮಾರಕವಾಗಿದೆ. ಕಾರಣ ಈಗ ಅತ್ಯಾಧುನಿಕ ಕೃಷಿ ಯಂತ್ರೋಪಕರಣ ಬಂದಿದ್ದು, ಗ್ರಾಮೀಣ ಕುಟುಂಬಗಳಿಗೆ ಬೇಸಾಯದ ಸಮಯದಲ್ಲೂ ಕೃಷಿ ಉದ್ಯೋಗ ಲಭಿಸುವುದಿಲ್ಲ. ಹೀಗಾಗಿ ವಿಬಿ ಜಿ ರಾಮ್‌ಜಿ ಅವರ ಅನ್ನವನ್ನು ಕಸಿದುಕೊಂಡಂತೆ ಮಾಡಿದೆ. ಇದರ ವಿರುದ್ಧ ರಾಜ್ಯ ಸರ್ಕಾರ ಆಕ್ಷೇಪಣೆ ವ್ಯಕ್ತಪಡಿಸಿದೆ ಎಂದರು.

ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಿ

ಪುಟ ೧➡ ಜುಲೈ 1ರಿಂದ ಹೊಸ ಸ್ವರೂಪದ ಮನ್‌ರೇಗಾ (ವಿಬಿ ಜಿ ರಾಮ್‌ಜಿ) ಜಾರಿ ಮಾಡಲಾಗುವುದು. ಇದರನ್ವಯ ಯಾರೇ ಉದ್ಯೋಗ ಕೇಳಿ ಬಂದರೂ ಅರ್ಹರಿಗೆ ಉದ್ಯೋಗ ನೀಡಲು ಸರ್ಕಾರ ಸನ್ನದ್ಧವಾಗಿದೆ ಎಂದರು. ಕಳೆದ 3 ತಿಂಗಳಲ್ಲಿ ರಾಜ್ಯದಲ್ಲಿ 1.40 ಲಕ್ಷ ಮಾನವ ದಿನ ಸೃಷ್ಟಿಸಲಾಗಿದೆ. 9 ಕೋಟಿ ವಾರ್ಷಿಕ ಗುರಿ ಇಟ್ಟುಕೊಂಡಿದೆ. ಪ್ರತಿ ತಿಂಗಳೂ 80 ರಿಂದ 90 ಲಕ್ಷ ಮಾನವ ದಿನ ಸೃಷ್ಟಿ ನಮ್ಮ ಗುರಿಯಾಗಿದೆ ಎಂದರು. ಈಗಾಗಲೇ ನರೇಗಾದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 7000ಕ್ಕೂ ಹೆಚ್ಚು ಸಿಬ್ಬಂದಿಯ ಜೀವನೋಪಾಯಕ್ಕೆ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶಿವಮೊಗ್ಗ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ

• ಶಿವಮೊಗ್ಗ: ನಗರದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯಕ್ಕೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯ ಆವರಣದಲ್ಲಿ ಭದ್ರತಾ ಸಿಬ್ಬಂದಿ, ಶ್ವಾನದಳ ಹಾಗೂ ಎಎಸ್‌ಸಿ ತಂಡಗಳಿಂದ ಬುಧವಾರ ಬೆಳಗ್ಗೆ ವ್ಯಾಪಕ ತಪಾಸಣೆ ನಡೆಸಲಾಯಿತು. ಬೆದರಿಕೆ ಸಂದೇಶದಿಂದ ನ್ಯಾಯಾಲಯದ ಸಿಬ್ಬಂದಿ, ವಕೀಲರು ಹಾಗೂ ಸಾರ್ವಜನಿಕರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಕಚೇರಿಯ ಅಧಿಕೃತ ಇ–ಮೇಲ್ ವಿಳಾಸಕ್ಕೆ ಅನಾಮಧೇಯ ವ್ಯಕ್ತಿಯಿಂದ ಬಾಂಬ್ ಸ್ಫೋಟದ ಬೆದರಿಕೆ ಸಂದೇಶ ಬಂದಿತ್ತು. ನಿರ್ದಿಷ್ಟ ಸಮಯದಲ್ಲಿ ನ್ಯಾಯಾಲಯ ಆವರಣದಲ್ಲಿ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಇ–ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು ಎನ್ನಲಾಗಿದೆ. ಶ್ವಾನದಳ ಮತ್ತು ಎಎಸ್‌ಸಿ ತಂಡಗಳನ್ನು ಕರೆಸಿ ನ್ಯಾಯಾಲಯದ ಕಟ್ಟಡ, ನ್ಯಾಯಾಂಗ ಕೊಠಡಿಗಳು, ವಾಹನ ನಿಲುಗಡೆ ಪ್ರದೇಶ ಹಾಗೂ ಸಾರ್ವಜನಿಕರು ಸಂಚರಿಸುವ ಸ್ಥಳಗಳಲ್ಲಿ ಸಮಗ್ರ ತಪಾಸಣೆ ನಡೆಸಲಾಯಿತು. ತಪಾಸಣೆ ವೇಳೆ ಯಾವುದೇ ಅನುಮಾನಾಸ್ಪದ ವಸ್ತು ಅಥವಾ ಸ್ಫೋಟಕ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ನ್ಯಾಯಾಲಯ ಆವರಣದಲ್ಲಿ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಆಯುಕ್ತ ವೈ.ಮಂಜುನಾಥ್‌ಗೆ ಇಡಿ ಶಾಕ್

• ಬೆಳಗಾವಿ/ಮೈಸೂರು: ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ ಅವರಿಗೆ ಸಂಬಂಧಿಸಿದ ಬೆಳಗಾವಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಒಟ್ಟು ಆರು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಬುಧವಾರ ಬೆಳಗ್ಗೆ ಏಕಕಾಲದಲ್ಲಿ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ ಹಾಗೂ ಸಚಿವ ಸತೀಶ ಜಾರಕಿಹೊಳಿ ಅವರ ಸಹೋದರಿಯ ಪತಿಯಾಗಿರುವ ವೈ. ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಬೆಳಗಾವಿಯ ಹನುಮಾನ್ ನಗರದಲ್ಲಿರುವ ವೈ. ಮಂಜುನಾಥ್ ಅವರ ವಿಶ್ರಾಮ ನಿವಾಸದ ಮೇಲೆ ಇಡಿ ಅಧಿಕಾರಿಗಳು ಬೆಳಗ್ಗೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಆರಂಭಿಸಿದರು. ಇದೇ ವೇಳೆ ಅವರಿಗೆ ಸಂಬಂಧಿಸಿದ ಇನ್ನೂ ಐದು ಕಚೇರಿಗಳು ಮತ್ತು ನಿವಾಸಗಳ ಮೇಲೂ ಅಧಿಕಾರಿಗಳು ಏಕಕಾಲದಲ್ಲಿ ಶೋಧ ಕಾರ್ಯ ನಡೆಸಿದ್ದಾರೆ.

ದಾಳಿಯ ವೇಳೆ ಕಾಗದ ಪತ್ರಗಳು, ಬ್ಯಾಂಕ್ ಖಾತೆಗಳ ವಿವರಗಳು, ಆಸ್ತಿ ದಾಖಲೆಗಳು ಹಾಗೂ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಬೆಳಗಾವಿ, ಮೈಸೂರು, ಬೆಂಗಳೂರು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಇರುವ ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದ್ದು, ಮಂಜುನಾಥ ಅವರ ಆಪ್ತರು ಮತ್ತು ಸ್ನೇಹಿತರಿಗೆ ಸಂಬಂಧಿಸಿದ ಮನೆಗಳಲ್ಲಿಯೂ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ವೈ.ಮಂಜುನಾಥ್ ಆಪ್ತೆ ಯಮುನಾ ವಿಚಾರಣೆ

ಮೈಸೂರು: ಮೈಸೂರಿನ ದಟ್ಟಗಳ್ಳಿ ನಿವಾಸದಲ್ಲಿರುವ ಸಚಿವ ಸತೀಶ್ ಜಾರಕಿಹೊಳಿ ಅವರ ಸಂಬಂಧಿ ವೈ. ಮಂಜುನಾಥ್ ಹಾಗೂ ಅವರ ಆಪ್ತೆ ಯಮುನಾ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ವಿಚಾರಣೆ ನಡೆಸಿದರು. ಬುಧವಾರ ಬೆಳಗ್ಗೆ 6ಕ್ಕೆ ಎರಡು ಕಾರುಗಳಲ್ಲಿ ಬಂದ ಇಡಿ ಅಧಿಕಾರಿಗಳು ವೈ. ಮಂಜುನಾಥ್ ನಿವಾಸಕ್ಕೆ ದಾಳಿ ಮಾಡಿದ್ದು, ಎರಡು ಗಂಟೆಗಳಿಗೂ ಹೆಚ್ಚು ಕಾಲ ನಿರಂತರವಾಗಿ ಶೋಧ ಕಾರ್ಯ ನಡೆಸಿದರು. ವಶಕ್ಕೆ ಪಡೆದ ದಾಖಲೆಗಳನ್ನು ಪರಿಶೀಲಿಸಿದರು. ಅಧಿಕಾರಿಗಳ ತಂಡ ಹೆಚ್ಚಿನ ಮಾಹಿತಿಗಾಗಿ ಯಮುನಾ ಅವರನ್ನು ಬ್ಯಾಂಕ್ ಹಾಗೂ ಇನ್ನಿತರ ಸ್ಥಳಗಳಿಗೆ ಕರೆದೊಯ್ದು ವಿಚಾರಣೆ ನಡೆಸಿದರು. ಮತ್ತೆ ದಟ್ಟಗಳ್ಳಿ ನಿವಾಸಕ್ಕೆ ಕರೆತಂದು ವಿಚಾರಣೆ ನಡೆಸಿದರು. ಯಮುನಾ ಅವರು ಈ ಹಿಂದೆ ಅಬಕಾರಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈಚೆಗೆ ವಿಆರ್‌ಎಸ್ ಪಡೆದಿದ್ದರು.

ವಸತಿ ವಿಳಂಬಕ್ಕೆ ಮುಖ್ಯಮಂತ್ರಿ ಸಿಟ್ಟು

ಪುಟ ೧➡ ಈ ಬಗ್ಗೆ ಎಲ್ಲರೂ ಸ್ಪಷ್ಟತೆ ಇಟ್ಟುಕೊಳ್ಳಿ ಎಂದ ಮುಖ್ಯಮಂತ್ರಿಗಳು, ಮನೆ ಕಟ್ಟಿದರೆ ಸಾಲದು. ಮೂಲ ಸೌಲಭ್ಯಗಳು ಮತ್ತು ಸೂಕ್ತ ಸಂಪರ್ಕ ಕಲ್ಪಿಸುವ ಕಡೆಗೂ ಗಮನಹರಿಸಬೇಕು. ಯಾವುದೇ ವಸತಿ ಯೋಜನೆ ಅನುಷ್ಠಾನಕ್ಕೆ ಯೋಜನಾ ವಿಭಾಗಕ್ಕೆ ಮೊದಲು ಹೋಗಲೇಬೇಕು ಎಂದು ಸೂಚಿಸಿದರು. ಬಡವರಿಗೆ ತಲೆ ಮೇಲೊಂದು ಸೂರು ಬೇಕು. ಅವರಿಗೆ ನಿವೇಶನದ ಬದಲು ಮನೆ ಕಟ್ಟಿ ಕೊಡಲು ಆದ್ಯತೆ ನೀಡಿ. ಮನೆ ಕಟ್ಟಲು ಸರ್ಕಾರದಿಂದ ಕಡಿಮೆ ದರದಲ್ಲಿ ನಿವೇಶನ ಪಡೆದವರು 3 ಅಥವಾ 5 ವರ್ಷದೊಳಗೆ ಮನೆ ನಿರ್ಮಿಸುವ ನಿಯಮ ಪರಿಶೀಲಿಸಿ ಎಂದು ಸಲಹೆ ನೀಡಿದರು. ಕೆಎಚ್‌ಬಿಯಿಂದ 568 ಯೋಜನೆಗಳನ್ನು ಅನುಮೋದಿಸಲಾಗಿದ್ದು, ಇದರಲ್ಲಿ 280 ಅನುಷ್ಠಾನಗೊಂಡಿವೆ. 288 ಬಾಕಿ ಇವೆ. ಈ ಬಾಕಿ ಯೋಜನೆಗಳಿಗೆ ಅಡ್ಡಿ ಆಗಿರುವ ತಾಂತ್ರಿಕ ಅಡಚಣೆಗಳ ನಿವಾರಣೆಗೆ ಕ್ರಮ ವಹಿಸಬೇಕು ಮತ್ತು ದುರುಪಯೋಗ ಆಗದಂತೆ ಜಾಗ್ರತೆ ವಹಿಸಬೇಕು. ಶಿವರಾಮ ಕಾರಂತ ಬಡಾವಣೆಯ ರಾಜೀವ್ ಗಾಂಧಿ ವಸತಿ ಯೋಜನೆಯ ಮನೆಗಳ ನಿರ್ಮಾಣ ಜವಾಬ್ದಾರಿಯನ್ನು ಬಿಡಿಎಗೆ ವಹಿಸಲು ಸೂಚನೆ ನೀಡಿದರು.

ಮುಂಬೈ ಮಾದರಿಯಲ್ಲಿ ಸ್ಲಂ ಅಭಿವೃದ್ಧಿ

ನಿವೇಶನಗಳು ಖಾಲಿ ಬಿದ್ದಷ್ಟೂ ಸ್ಲಂಗಳು ತಲೆ ಎತ್ತುತ್ತವೆ. ಇದಕ್ಕೆ ಅವಕಾಶ ಕೊಡಬೇಡಿ. ಮುಂಬೈ ಮಾದರಿಯಲ್ಲಿ ಸ್ಲಂಗಳ ಮರು ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಿ. ಮುಂಬೈಗಿಂತ ಹೆಚ್ಚು ವಿಸ್ತೀರ್ಣದ ಮನೆಗಳನ್ನು ನಿರ್ಮಿಸಿ. ಮುಂಬೈಗೆ ಹೋಗಿ ಅಧ್ಯಯನ ನಡೆಸಿಕೊಂಡು ಬನ್ನಿ. ಅದಕ್ಕಿಂತ ಉತ್ತಮ ಮಾದರಿಯಲ್ಲಿ ನಾವೇನು ಮಾಡಬಹುದು ಎಂಬ ಬಗ್ಗೆ ಮುಂದಿನ ಕ್ಯಾಬಿನೆಟ್ ಒಳಗೆ ವರದಿ ಸಿದ್ಧಪಡಿಸಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಆದೇಶಿಸಿದರು.

ಮನೆ ಅರ್ಹರಿಗೋ, ಹಣವಿದ್ದವರಿಗೋ?

ಮನೆ ಹರಾಜು ಹಾಕಿದರೆ ಅರ್ಹರಿಗೆ ಸಿಗುತ್ತದೋ, ಹಣವಿದ್ದವರಿಗೆ ಸಿಗುತ್ತದೋ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿಗಳು, ಲಾಟರಿ ಮೂಲಕ ಮನೆ ಹಂಚುತ್ತೀರೋ, ಹರಾಜಿನ ಮೂಲಕ ಹಂಚುತ್ತೀರೋ ಎನ್ನುವುದಕ್ಕಿಂತ ನೈಜ ಅರ್ಹರಿಗೇ ಮನೆ ಸಿಗಬೇಕು. ಇದಕ್ಕೇನು ವ್ಯವಸ್ಥೆ ಮಾಡಿದ್ದೀರಿ ಎನ್ನುವ ವಿವರ ಸಲ್ಲಿಸಿ ಎಂದರು.

ಸಂಪುಟ ಶೀಘ್ರ ವಿಸ್ತರಣೆ: ಪಾಟೀಲ

• **ಕಲಬುರಗಿ:** ಕ್ಯಾಬಿನೆಟ್ ವಿಸ್ತರಣೆ ಬಗ್ಗೆ ಅಧಿಕೃತವಾಗಿ ಘೋಷಿಸಲು ನಾನೇನು ಹೈಕಮಾಂಡ್ ಅಲ್ಲ. ಆದರೆ, ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಈ ಕುರಿತು ಹೈಕಮಾಂಡ್ ನಾಯಕರ ಜತೆ ಮಾತುಕತೆ ನಡೆಸಲಿದ್ದಾರೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ರಾಜಕಾರಣದ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆಗಳ ಪ್ರಕ್ರಿಯೆ ಮುಗಿದ ಬಳಿಕ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಿಎಂ ಅವರೇ ಹೇಳಿದ್ದಾರೆ. ಈಗ ಚುನಾವಣೆ ಮುಗಿದಿವೆ, ಹಾಗಾಗಿ, ಶೀಘ್ರದಲ್ಲೇ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ನೇಮಕವೂ ಪ್ರಕಟಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ರಾಮ ಮಂದಿರ ಸ್ಫೋಟಕ್ಕೆ ಉಗ್ರ ಸಂಚು

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಬನ್ನಿಕೋಡು ಗ್ರಾಮದಲ್ಲಿ ಬಂಧಿತನಾಗಿದ್ದ ಶಂಕಿತ ಉಗ್ರ ಸೊಹೇಲ್, ತಾನು ಅಯೋಧ್ಯೆ ರಾಮ ಮಂದಿರವನ್ನು ಬಾಂಬ್ ಇಟ್ಟು ಸ್ಫೋಟಿಸಲು ಬಯಸುವುದೂ ಸೇರಿದಂತೆ ದೇಶದ ರಕ್ಷಣೆಗೆ ಧಕ್ಕೆ ತರುವಂತಹ ಆಡಿಯೋ, ಸಂದೇಶಗಳನ್ನು ಪಾಕಿಸ್ತಾನ ಮೂಲದ ರಾಣಾ ಎಂಬ ವ್ಯಕ್ತಿಯೊಂದಿಗೆ ವಿನಿಮಯ ಮಾಡಿಕೊಂಡಿದ್ದ ಸಂಗತಿ ಹೊರ ಬಿದ್ದಿದೆ. ಉತ್ತರ ಪ್ರದೇಶದ ಸಹರಾನಪುರ ಜಿಲ್ಲೆ ಲಖ್ನೋತಿ ಗ್ರಾಮದವನಾದ ಶಂಕಿತ ಉಗ್ರ ಸೊಹೇಲ್(20 ವರ್ಷ) ಮೊಬೈಲ್ ಜಾಡು ಹಿಡಿದು ಹೋದ ತನಿಖಾಧಿಕಾರಿ, ಪೊಲೀಸ್ ಅಧಿಕಾರಿಗಳು ಬೆಚ್ಚಿ ಬೀಳುವಂತಹ ಆಘಾತಕಾರಿ ಹಿಂದಿ–ಉರ್ದು ಮಿಶ್ರಿತ ಆಡಿಯೋ, ಮೆಸೇಜ್, ಕೈಗಳಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದ ಫೋಟೋ, ಉಗ್ರರನ್ನು ಹೋಲುವ ಚಿತ್ರಗಳು ಹಾಗೂ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹದಗೆಡಿಸುವ, ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ, ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸುವಂತಹ ವಿಚಾರ ಹೊಂದಿದ್ದ ಬಗ್ಗೆ ಸುಳಿವು ಸಿಕ್ಕಿದೆ ಎನ್ನಲಾಗಿದೆ.



ಸಂಸದ ಬಿ. ವೈ. ರಾಘವೇಂದ್ರ ನೇತೃತ್ವದ ಶಿವಮೊಗ್ಗ ಜನಪ್ರತಿನಿಧಿಗಳು ಹಾಗೂ ವಕೀಲರ ನಿಯೋಗವು ಬುಧವಾರ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಅಭಿನಂದಿಸಿ, ಸಂಚಾರಿ ಪೀಠ ಸ್ಥಾಪನೆ ಕುರಿತಂತೆ ಮನವಿ ಸಲ್ಲಿಸಿತು. ಶಾಸಕರಾದ ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ ಧನರಾಜ್ ಸರ್ಜಿ,ಡಿ.ಎಸ್. ಅರುಣ್, ಶಿವಮೊಗ್ಗ ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಸ್ವಾಮಿ, ಬಸಪ್ಪಗೌಡ ಮತ್ತಿತರರು ಜತೆಗಿದ್ದರು.

ವಾರ್ತಾ ಆಯುಕ್ತರಾಗಿ ಅನುಚೇತ್

• **ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2009ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿರುವ ಅನುಚೇತ್ ಅವರು ಇದುವರೆಗೆ ಪೊಲೀಸ್ ನೇಮಕಾತಿ ವಿಭಾಗದ ಡಿಐಜಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಹೇಮಂತ್ ಎಂ. ನಿಂಬಾಳ್ಕರ್ ಅವರ ಸ್ಥಾನಕ್ಕೆ ಅವರನ್ನು ವರ್ಗಾಯಿಸಿ ನಿಯೋಜಿಸಲಾಗಿದೆ. ಇದರೊಂದಿಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನೂ ಅನುಚೇತ್ ಅವರಿಗೆ ವಹಿಸಲಾಗಿದೆ. ಈ ಹುದ್ದೆಯನ್ನು ನಿರ್ವಹಿಸುತ್ತಿದ್ದ ಕುಮಾರ್ ಟಿಎಚ್‌ಎಂ ಅವರ ವರ್ಗಾವಣೆಯ ಹಿನ್ನೆಲೆಯಲ್ಲಿ ಈ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಹಾವು ಕಚ್ಚಿ ಬಾಲಕ ಸಾವು

• **ಬನವಾಸಿ:** ವಿಷಪೂರಿತ ಹಾವು ಕಚ್ಚಿ 12 ವರ್ಷದ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ಸಮೀಪದ ಸಹಸ್ರಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. 6ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಮಿಥುನ್ ಮಟ್ಟಪ್ಪ ನಾಯ್ಕ (12) ಮೃತ ಬಾಲಕ. ಆತನ ಸಹೋದರಿ ದೀಕ್ಷಾಳಿಗೂ ಹಾವು ಕಚ್ಚಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಕೆಯ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ. ಮೃತ ಬಾಲಕ ಮಿಥುನ್ ಮತ್ತು ಸಹೋದರಿ ದೀಕ್ಷಾ ಮಲಗಿದ್ದ ವೇಳೆ ಹಾವು ಕಡಿದಿದ್ದು, ಇಬ್ಬರೂ ಏಕಾಏಕಿ ವಾಂತಿ ಮಾಡ ತೊಡಗಿದ್ದಾರೆ. ಇದನ್ನು ಗಮನಿಸಿದ ಪೋಷಕರು ಮಕ್ಕಳ ಆರೋಗ್ಯದಲ್ಲಿ ಏರು ಪೇರಾಗಿರುವುದನ್ನು ಗಮನಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ವೇಳೆಗಾಗಲೇ ಬಾಲಕ ಮೃತಪಟ್ಟಿದ್ದಾನೆ.

ಕಿರುಸುದ್ದಿ

ಪಕ್ಷದ ಸಿದ್ಧಾಂತ ವಿರುದ್ಧ ನಡೆದರೆ ಕ್ರಮ: ಹರಿಪ್ರಸಾದ್

• **ಹುಬ್ಬಳ್ಳಿ:** ಕಾಂಗ್ರೆಸ್ ಪಕ್ಷ ಸಿದ್ಧಾಂತಕ್ಕೆ ಬದ್ಧವಾಗಿದೆ. ಅದಕ್ಕೆ ವಿರುದ್ಧವಾಗಿದ್ದರೆ ನಾವು ಹೋರಾಟ ಮಾಡುತ್ತೇವೆ. ಪಕ್ಷದ ಸಿದ್ಧಾಂತ ವಿರುದ್ಧ ನಡೆದುಕೊಳ್ಳುವವರು ಯಾರೇ ಇದ್ದರೂ ಅವರಿಗೆ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ ಹೇಳಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಯಾವುತ್ತು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತ ಒಪ್ಪಲ್ಲ. ದೇಶದ ತ್ರಿವರ್ಣ ಧ್ವಜ, ಜಾತ್ಯತೀತ ಹಾಗೂ ಬಹುತ್ವದ ರಾಷ್ಟ್ರ ವಿರುದ್ಧವಾಗಿ ಅವರು ಇದ್ದಾರೆ. ಆರ್‌ಎಸ್‌ಎಸ್ ಕೋಟ್ಯಂತರ ರೂಪಾಯಿ ಸಂಗ್ರಹ ಮಾಡುತ್ತದೆ. ಭಾರತ ಸಂವಿಧಾನದಲ್ಲಿ ಯಾವುದೇ ಸಂಘ, ಸಂಸ್ಥೆಯಾದರೂ ನೋಂದಣಿ ಮಾಡಿಸಿಕೊಳ್ಳಬೇಕು. ಆರ್‌ಎಸ್‌ಎಸ್ ಅದಕ್ಕೆ ಹೊರತಾಗಿಲ್ಲ ಎಂದರು. ಬಿಜೆಪಿ ಅವರು 2014ರಲ್ಲಿ ಅಧಿಕಾರಕ್ಕೆ ಬಂದಾಗ ಅಚ್ಛೆ ದಿನ್ ಎಂದು ಹೇಳಿದ್ದರೂ, ಈಗ ರಾಹು ಕಾಲ ದೇಶದಲ್ಲಿ ಬಂದಿದೆ. ಕೇಂದ್ರ ಸರ್ಕಾರದ ಯೋಜನೆಗಳು ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿವೆ ಎಂದು ಕಿಡಿಕಾರಿದರು.

ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ನಿಗದಿ

• **ಬೆಂಗಳೂರು:** ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿಯ ಗೋಕರೆಬಚ್ಚೇನಹಳ್ಳಿ ಮತ್ತು ಹ್ಯಾಡಾಳ ಗ್ರಾಮದಲ್ಲಿ ಕೈಗಾರಿಕಾ ಉದ್ದೇಶಕ್ಕೆ ರೈತರು ಸ್ವಯಂಪ್ರೇರಿತವಾಗಿ ಬಿಟ್ಟುಕೊಡಲು ಒಪ್ಪಿರುವ 120 ಎಕರೆ ಜಮೀನಿಗೆ ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ಭೂದರ ನಿರ್ಧಾರಣಾ ಸಲಹಾ ಸಮಿತಿ ನಿಗದಿಪಡಿಸಿ ಕೆಐಎಡಿಬಿಗೆ ಶಿಫಾರಸು ಮಾಡಿದೆ. ಕೆಐಎಡಿಬಿ ವಿಶೇಷ ಜಿಲ್ಲಾಧಿಕಾರಿ ಎ.ಎನ್.ರಘುನಂದನ್ ಅಧ್ಯಕ್ಷತೆ ಬುಧವಾರ ನಡೆದ ಅಧಿಕಾರಿಗಳು ಹಾಗೂ ಭೂಮಾಲೀಕರ ಜಂಟಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಈ ತೀರ್ಮಾನವನ್ನು ಕೆಐಎಡಿಬಿ ಮಂಡಳಿಯ ಅನುಮೋದನೆಗಾಗಿ ಕಳಿಸಿಕೊಡಲಾಗುವುದು. ಪರಿಹಾರವನ್ನು ಹಣದ ರೂಪದಲ್ಲಿ ತೆಗೆದುಕೊಳ್ಳಲು ಇಷ್ಟವಿಲ್ಲದಿದ್ದರೆ ಪ್ರತೀ ಎಕರೆ ಕೃಷಿ ಜಮೀನಿಗೆ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಬಡಾವಣೆಯಲ್ಲಿ 10,781 ಚದರ ಅಡಿ ಜಾಗವನ್ನು ಪಡೆದುಕೊಳ್ಳುವುದಕ್ಕೂ ಅವಕಾಶ ನೀಡಲಾಗಿದೆ ಎಂದು ರಘುನಂದನ್ ತಿಳಿಸಿದ್ದಾರೆ. ಕೆಐಎಡಿಬಿ ಭೂಸ್ವಾಧೀನಾಧಿಕಾರಿ ಸೂರಜ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಇದ್ದರು.

ಕಾರ್ಮಿಕ ಆತ್ಮಹತ್ಯೆ: ಕಲ್ಲು ತೂರಾಟ

• **ಬೆಳಗಾವಿ:** ಇಲ್ಲಿನ ಪ್ರಸಿದ್ಧ ಹಿಂಡಾಲ್ಕೋ ಕಂಪನಿ ಆವರಣದಲ್ಲಿ ಯುವ ಕಾರ್ಮಿಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಬೆಳಕಿಗೆ ಬಂದಿದ್ದು, ಈ ಘಟನೆ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಸಾರ್ವಜನಿಕರು ಕಂಪನಿ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿದ ಪರಿಣಾಮ ಪ್ರದೇಶದಲ್ಲಿ ತೀವ್ರ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಮೃತ ಯುವಕನನ್ನು ಶಂಕರ ತಳವಾರ (24)ಎಂದು ಗುರುತಿಸಲಾಗಿದೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶಂಕರ್, ಕೆಲ ದಿನಗಳಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಕೊನೆಗೆ ಆತ್ಮಹತ್ಯೆಗೆ ಶರಣಾಗಿದ್ದಾನೆ ಎನ್ನಲಾಗಿದೆ.

ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಡೆತ್‌ನೋಟ್: ಆತ್ಮಹತ್ಯೆಗೂ ಮುನ್ನ ಶಂಕರ ತನ್ನ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಡೆತ್ ನೋಟ್ ಮಾದರಿಯ ಸಂದೇಶವೊಂದನ್ನು ಪ್ರಕಟಿಸಿದ್ದಾನೆ ಎಂದು ತಿಳಿದುಬಂದಿದೆ. ಆ ಸಂದೇಶದಲ್ಲಿ ಕಂಪನಿಯಲ್ಲಿ ಹಳೆಯ ಕಾರ್ಮಿಕರನ್ನು ತೆಗೆದು ಹೊಸ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದ್ದು, ಗುತ್ತಿಗೆದಾರ ಪೈಯಾಲ್ ನಂದಿ ಅವರಿಂದ ತನಗೆ ತೀವ್ರ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದ್ದಾನೆ ಎನ್ನಲಾಗಿದೆ.

ಇಂದಿನ ಕಾರ್ಯಕ್ರಮದಲ್ಲಿ 3 ರಾಜ್ಯದ ಸಿಎಂ, ಕೇಂದ್ರ ಸಚಿವರು ಭಾಗಿ

ಟಿಬಿ ಡ್ಯಾಂ ಗೇಟ್‌ಗೆ ಚಾಲನೆ

• **ಕೊಪ್ಪಳ:** ಕಲ್ಯಾಣ ಕರ್ನಾಟಕದ ಜೀವನಾಡಿ ತುಂಗಭದ್ರಾ ಜಲಾಶಯದ 33 ಕ್ರಸ್ಟ್‌ಗೇಟ್ ಲೋಕಾರ್ಪಣೆ ಗುರುವಾರ ಜರುಗಲಿದ್ದು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ನೂತನವಾಗಿ ಅಳವಡಿಸಿದ 33 ಸ್ಟಿಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಸ್ಟಿಲ್ ವೇ ಗೇಟುಗಳನ್ನು ಲೋಕಾರ್ಪಣೆಗೊಳಿಸುವರು.

ಜಲಸಂಪನ್ಮೂಲ ಇಲಾಖೆ ವತಿಯಿಂದ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಗ್ರೌಂಡ್‌ನಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್.ಪಾಟೀಲ, ಆಂಧ್ರಪ್ರದೇಶ ಮುಖ್ಯಮಂತ್ರಿಗಳಾದ ಎನ್.ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿಗಳಾದ ಎ.ರೇವಂತ್ ರೆಡ್ಡಿ, ಕರ್ನಾಟಕ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್, ಆಂಧ್ರಪ್ರದೇಶ ಉಪ ಮುಖ್ಯಮಂತ್ರಿಗಳಾದ ಕೆ.ಪವನ್ ಕಲ್ಯಾಣ್, ತೆಲಂಗಾಣ ಉಪ ಮುಖ್ಯಮಂತ್ರಿಗಳಾದ ಮಲ್ಲು ಭಟ್ಟಿ ವಿಕ್ರಮಾರ್ಕ, ಭಾರತ ಸರ್ಕಾರದ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರಾದ ವಿ.ಸೋಮಣ್ಣ, ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರಾದ ರಾಜ ಭೂಷಣ್ ಚೌಧರಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮವು ಶಾಂತಿಯುತವಾಗಿ ನಡೆಯುವ ದಿಶೆಯಲ್ಲಿ ಭದ್ರತೆಗಾಗಿ ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆರು ಜನ ಎಸ್‌ಪಿ, 25 ಜನ ಡಿವೈಎಸ್ಪಿ, 25ಕ್ಕೂ ಹೆಚ್ಚು ಜನ ಸಿಪಿಐ ಮತ್ತು ಪಿಎಸ್ಐ ಹಾಗೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕೆಎಸ್‌ಆರ್‌ಪಿ ಸೇರಿದಂತೆ ವಿವಿಧ ಪೊಲೀಸ್ ತುಕಡಿಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. 150 ಬಸ್‌ಗಳಿಗೆ ಹಾಗೂ 250ಕ್ಕೂ ಹೆಚ್ಚು ಬೇರೆ ಬೇರೆ ವಾಹನಗಳಿಗೆ ಬೇರೆ ಬೇರೆ ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ನವಲಿ ಸಮಾನಾಂತರ ಜಲಾಶಯ ಚರ್ಚೆ ಸಾಧ್ಯತೆ

ಇದೇ ಮೊದಲ ಬಾರಿಗೆ ಈ ಮೂರು ಮುಖ್ಯಮಂತ್ರಿಗಳು ಒಂದೆಡೆ ಸೇರಲಿದ್ದು, ನವಲಿ ಸಮಾನಾಂತರ ಜಲಾಶಯ ನಿರ್ಮಾಣ ವಿಷಯ ಸೇರಿ ಹಲವು ನೀರಾವರಿ ಸಮಸ್ಯೆ ಗಳಿಗೆ ಪರಿಹಾರ ಸಿಗುವ ಸಾಧ್ಯತೆ ಇದೆ. ತುಂಗಭದ್ರಾ ಜಲಾಶಯದಲ್ಲಿ 32 ಟಿಎಂಸಿಯಷ್ಟು ಹೂಳು ತುಂಬಿದ್ದು, ಹೂಳೆತ್ತುವ ಬಗ್ಗೆಯೂ ಕೂಡ ಚರ್ಚೆಯಾಗಲಿದೆ.

ಶಾಲಾ -ಕಾಲೇಜಿಗೆ ರಜೆ

ಮುನಿರಾಬಾದ್ ಸರ್ಕಾರಿ ಶಾಲಾ ಮೈದಾನದಲ್ಲಿ ಕಾರ್ಯಕ್ರಮ ಜರುಗಲಿದ್ದು, ಸರ್ಕಾರಿ ಶಾಲಾ, ಕಾಲೇಜಿಗೆ ರಜೆ ಘೋಷಿಸಲಾಗಿದೆ. ಇನ್ನುಳಿದಂತೆ ಮುನಿರಾಬಾದ್‌ನಲ್ಲಿ ಇರುವ ಇತರೆ ಶಾಲೆಗಳಿಗೂ ರಜೆ ಘೋಷಣೆಯಾಗಿದೆ. ಕಾರ್ಯಕ್ರಮಕ್ಕೆ ಹಲವು ಗಣ್ಯರು ಆಗಮಿಸುವುದರಿಂದಾಗಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಖಾತೆಯೇ ಇಲ್ಲದೆ ಕೋಟ್ಯಂತರ ಪಾವತಿ: ಆರೋಪ

ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ಬಿವೈವಿ

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆ ಈಗ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹಗರಣವಾಗಿ ಮಾರ್ಪಟ್ಟಿದೆ. ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ ಬರೋಬ್ಬರಿ 46.52 ಕೋಟಿ ರೂ. ಪಾವತಿಯಾಗಿರುವುದು ಮತ್ತು 19,020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದನ್ನು ಸ್ವತಃ ಸಿಎಜಿ ವರದಿಯೇ ಬಯಲಿಗೆಳೆದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, 10 ಲಕ್ಷಕ್ಕೂ ಅಧಿಕ ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ರಾಜ್ಯದ ಬಡ ಮಹಿಳೆಯರ ಹೆಸರಿನಲ್ಲಿ ನಡೆಯುತ್ತಿರುವ ಬೃಹತ್ ಲೂಟಿಗೆ ಸಾಕ್ಷಿಯಲ್ಲವೇ ಮುಖ್ಯಮಂತ್ರಿಗಳೇ ಎಂದು ಪ್ರಶ್ನಿಸಿದ್ದಾರೆ.

ಸ್ವತಃ ಸಿಎಜಿ ಕೇಳಿದರೂ ಬ್ಯಾಂಕ್ ಖಾತೆಗಳ ವಿವರ ನೀಡದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಲಿ

ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿರುವ ಗಂಭೀರ ಭ್ರಷ್ಟಾಚಾರದ ಬಗ್ಗೆ ತಕ್ಷಣ ಅತ್ಯಂತ ಪಾರದರ್ಶಕವಾಗಿ, ಉನ್ನತ ಮಟ್ಟದ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲೇಬೇಕು ಎಂದು ಒತ್ತಾಯಿಸಿದ್ದಾರೆ.

ಮುಚ್ಚಿಡುತ್ತಿರುವುದಕ್ಕೆ ಕಾರಣವಾದರೂ ಏನು? ಈ ಹಗರಣದ ಬೇರುಗಳು ಈ ಕಾಂಗ್ರೆಸ್ ಸರ್ಕಾರದಲ್ಲಿ ಬಹಳ ಗಾಢವಾಗಿ ಹರಡಿಕೊಂಡಿರುವ ಸಂಶಯ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಇನ್ನೂ ಉತ್ತರ ನೀಡಿಲ್ಲ. ಬಡ ತಾಯಂದಿರಿಗೆ ನೀಡಬೇಕಾದ ಈ 5,000 ಕೋಟಿ ರೂ. ಎಲ್ಲಿ ಹೋಯಿತು? ಯಾರ ಜೇಬು ಸೇರಿತು ಎಂದು ಈ ಸರ್ಕಾರ ಉತ್ತರಿಸದ ಹಿನ್ನೆಲೆಯಲ್ಲಿ ಹೈಕೋರ್ಟ್ ಆಕ್ಷೇಪಿಸಿ ನೋಟಿಸ್ ಜಾರಿ ಮಾಡಿದೆ. ಹಗರಣಗಳ ಸರಮಾಲೆಯಾಗಿರುವ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತ ನಡೆಸುವ ಯಾವ ನೈತಿಕತೆಯೂ ಉಳಿದಿಲ್ಲ ಮುಖ್ಯವಾಗಿ ಎಂದು ವಿಜಯೇಂದ್ರ ಟೀಕಿಸಿದ್ದಾರೆ.

ಮಾವು ಬೆಳೆಗಾರರಿಗೆ ನೆರವು: ಚೌಹಾಣ್

• **ಬೆಂಗಳೂರು:** ಹವಾಮಾನ ವೈಪರೀತ್ಯ ಹಾಗೂ ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವ ರಾಜ್ಯದ ಮಾವು ಬೆಳೆಗಾರರಿಗೆ ಅನುಕೂಲವಾಗುವ ನಿರ್ಧಾರ ಕೈಗೊಳ್ಳುವುದಾಗಿ ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಭರವಸೆ ನೀಡಿದ್ದಾರೆ.

ದಿಲ್ಲಿಯಲ್ಲಿ ಬುಧವಾರ ಸಂಜೆ ಚೌಹಾಣ್ ಅವರ ನಿವಾಸಕ್ಕೆ ತೆರಳಿ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾವೇರಿ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಮಾವು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಅವರು ಕೃಷಿ ಸಚಿವರಿಗೆ ವಿವರಿಸಿದರು. ಕರ್ನಾಟಕವು ಅತಿ ಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಸಚಿವರು ಕೃಷಿ ಸಚಿವರ ಗಮನ ಸೆಳೆದರು.

> ಕೃಷಿ ಸಚಿವರ ಸಕಾರಾತ್ಮಕ ಸ್ಪಂದನೆಯಿಂದ ನನಗೆ ಬಹಳ ಸಂತೋಷವಾಗಿದೆ. ಅತ್ಯಂತ ಭರಿತವಾಗಿ ರೈತರ ಪರವಾಗಿ ನಿರ್ಧಾರ ಕೈಗೊಳ್ಳುವುದಾಗಿ ಹಾಗೂ ಬೆಂಬಲ ಬೆಲೆ ಘೋಷಣೆ ಮಾಡುವದಾಗಿ ಭರವಸೆ ನೀಡಿದ್ದು ಸ್ವಾಗತಾರ್ಹ.
>
> ■ **ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ಬಿಡದಿಯಲ್ಲಿ ಜನರನ್ನು ಎದುರಿಸಲು ಭಯವೇ?: ರವಿ

• **ಚಿಕ್ಕಮಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಸಿಎಂಗೆ ಬಿಡದಿಯಲ್ಲೇ ಜನರನ್ನು ಎದುರಿಸಲು ಭಯವೇ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ಒಬ್ಬ ಸಿಎಂ ಜನರಿಂದ ದೂರ ಉಳಿಯುತ್ತೇನೆ ಎಂದರೆ ವಿನರ್ಥ, ಡಿಕೆಶಿ ಅವರಿಗೆ ಜನರ ಭಯವೇ, ಮತ್ತೇಕೆ ಬಿಡದಿಯ ರೈತರಿಂದ ಅವರು ದೂರ ಇದ್ದಾರೆ ಎಂದಿದ್ದಾರೆ. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತ ಹೋರಾಟಕ್ಕೆ ನಾವು ರಾಜಕೀಯ ಬೆಂಬಲ ನೀಡುತ್ತಿದ್ದೇವೆ. ಇದು ರಾಜಕೀಯ ಹೋರಾಟವಾಗಿ ಪರಿವರ್ತನೆಗೊಂಡರೆ, ಆಗ ಮೂಲ ಹೋರಾಟಗಾರರು, ಮೂಲ ಸಮಸ್ಯೆ ಬದಿಗೆ ಸರಿಯುವಂತಾಗ ಬಹುದು. ಆ ರೀತಿ ಆಗ ಬಾರದು ಎನ್ನುವ ಕಾರಣದಿಂದ ರೈತರ ಹೋರಾಟಕ್ಕೆ ರಾಜಕೀಯ ಬೆಂಬಲ ನೀಡುತ್ತಿದ್ದೇವೆ ಎಂದರು.

ಇ-ಸ್ವತ್ತು ಕುರಿತ ಸಭೆಯಲ್ಲಿ ಉನ್ನತಾಧಿಕಾರಿಗಳಿಗೆ ಖಂಡ್ರೆ ಸೂಚನೆ

ದಾಖಲೆರಹಿತ ಮನೆಗೆ ನಿಯಮ ಸರಳೀಕರಣ

• **ಬೆಂಗಳೂರು:** ಗ್ರಾಮಠಾಣಾ ವ್ಯಾಪ್ತಿಯಲ್ಲಿ ದಾಖಲೆ ಇಲ್ಲದ ಹಳೆಯ ಮನೆಗಳಿಗೆ ಇ-ಸ್ವತ್ತು ನೀಡುವ ಸಂಬಂಧ ನಿಯಮಗಳಿಗೆ ತಿದ್ದುಪಡಿ ಮಾಡಲು ಸೂಚನೆ ನೀಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬುಧವಾರ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಇ-ಸ್ವತ್ತು ಕುರಿತಂತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಸುಮಾರು 65 ಲಕ್ಷ ಆಸ್ತಿಗಳು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತವೆ. ಇದು ಅವರಿಗೆ ಪೂರ್ವಜರಿಂದ ಬಂದ ಬಳುವಳಿಯಾಗಿದ್ದು, ಕೆಲವರ ಬಳಿ ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇಲ್ಲ. ಹೀಗಾಗಿ ಒಂದು ಬಾರಿಯ ಕ್ರಮವಾಗಿ ನಿಯಮಾವಳಿ ಸರಳೀಕರಣ ಮಾಡಿ, ಸಾರ್ವಜನಿಕರ ಆಕ್ಷೇಪಣೆ ಕರೆದು 100 ದಿನಗಳ ಒಳಗಾಗಿ ಗ್ರಾಮಠಾಣಾ ಆಸ್ತಿಗಳಿಗೆ ಸಮರೋಪಾದಿಯಲ್ಲಿ ಇ-ಖಾತಾ ವಿತರಿಸಲು ಕ್ರಮ ಜರುಗಿಸಲು ಸೂಚಿಸಲಾಗಿದೆ ಎಂದರು.

ಹೊಸದಾಗಿ 11ಬಿ ಅರ್ಜಿ ಸಲ್ಲಿಸಲು ಕಾಲಾವಕಾಶ ವಿಸ್ತರಣೆ: ನಮೂನೆ 11 ಬಿ ಯಲ್ಲಿ ಆಸ್ತಿಗಳಿಗೆ ಅರ್ಜಿ ಸಲ್ಲಿಸಲು, ಮುಂದಿನ ಸೆಪ್ಟೆಂಬರ್‌ವರೆಗೆ ಕಾಲಾವಕಾಶ ವಿಸ್ತರಿಸುವ ಬಗ್ಗೆ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಗ್ರಾಮೀಣರು ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು. ಈವರೆಗೆ 10.16 ಲಕ್ಷ ಆಸ್ತಿಗಳಿಗೆ ಬಿ-ಖಾತಾ ನೀಡಲಾಗಿದೆ. ಇನ್ನೂ 90 ಲಕ್ಷ ಆಸ್ತಿಗಳಿಗೆ ಎ ಮತ್ತು ಬಿ-ಖಾತಾ ನೀಡಬೇಕಾಗಿದೆ ಎಂದರು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಯಾವುದೇ ವಸತಿ ಬಡಾವಣೆಯಲ್ಲಿ ಸರ್ಕಾರಿ ಎ ಮತ್ತು ಬಿ ಖರಾಬು ಜಮೀನೂ ಬಳಸಿಕೊಂಡು ಲೇಔಟ್ ನಿರ್ಮಾಣ ಮಾಡಿದ್ದಾರೆ. ಅಂತಹ ಆಸ್ತಿಗಳಿಗೆ ಇ-ಸ್ವತ್ತು ನೀಡದಂತೆ ಸೂಚಿಸಲಾಗಿದೆ. ಇಂತಹ ಸ್ವತ್ತುಗಳನ್ನು ದಿಶಾಂಕ್ ಆ್ಯಪ್‌ನಲ್ಲಿ ಖರಾಬು ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಹೀಗಾಗಿ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳ ಸಭೆ ಕರೆದು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಒಟ್ಟು 5,928 ಗ್ರಾಮ ಪಂಚಾಯ್ತಿಗಳಿದ್ದು ಒಟ್ಟಾರೆ 1.50 ಕೋಟಿ ಆಸ್ತಿಗಳಿವೆ. ಈ ಪೈಕಿ ಈಗಾಗಲೇ 53.53 ಸ್ವತ್ತುಗಳಿಗೆ ಇ-ಸ್ವತ್ತು ನೀಡಲಾಗಿದೆ. ಉಳಿದ ಆಸ್ತಿಗಳಿಗೆ ಸಮರೋಪಾದಿಯಲ್ಲಿ ಇ-ಸ್ವತ್ತು ನೀಡಲು ಸೂಚಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ವಿಳಂಬವಾದರೆ ಪಿಡಿಒಗಳಿಗೆ ನೋಟಿಸ್: ಎಚ್ಚರಿಕೆ

ಇ-ಸ್ವತ್ತಿಗೆ ಅರ್ಜಿ ಸಲ್ಲಿಸಿ 15 ದಿನಕ್ಕಿಂತ ಹೆಚ್ಚು ವಿಳಂಬವಾಗಿದ್ದರೆ, ತಾಂತ್ರಿಕ ದೋಷ ಹೊರತುಪಡಿಸಿ, ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ್ದರೆ ಅಂತಹ ಪಿಡಿಒಗಳಿಗೆ ಕಾರಣ ಕೇಳಿ ನೋಟಿಸ್ ನೀಡಬೇಕು. ದಾಖಲೆ ಇಲ್ಲದೆ ಕೆಲವು ಪಿಡಿಒಗಳು ಇ-ಸ್ವತ್ತು ನೀಡುತ್ತಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಖಂಡ್ರೆ ಸ್ಪಷ್ಟಪಡಿಸಿದರು.

ಕೌಶಲ, ಸೃಜನಶೀಲತೆ, ನವೋದ್ಯಮದತ್ತ ಮುಖ ಮಾಡಿದ ಶಿಕ್ಷಣ ಕ್ಷೇತ್ರ | ನವೀನ ಆವಿಷ್ಕಾರಗಳ ಮೂಲಕ ಕಲಿಕೆ

ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಶಾಕಿರಣ ಮೂಡಿಸಿದ ಎಸ್‌ಟಿಇಎಎಂ

▸ **ನಂದಿನಿ ಎನ್.**

ದಿಗಂತ ವಿಶೇಷ

• **ಬೆಂಗಳೂರು:** ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಯಲ್ಲಿ ಶಿಕ್ಷಣ ಕ್ಷೇತ್ರವು ಹೊಸ ರೂಪ ಪಡೆದುಕೊಳ್ಳುತ್ತಿದೆ. ಕೇವಲ ಪಠ್ಯಪುಸ್ತಕಗಳ ಜ್ಞಾನ ಮತ್ತು ಪರೀಕ್ಷಾ ಅಂಕಗಳಿಗೆ ಸೀಮಿತವಾಗಿದ್ದ ಶಿಕ್ಷಣ ವ್ಯವಸ್ಥೆ, ಈಗ ಕೌಶಲ ಸೃಜನಶೀಲತೆ ಮತ್ತು ನವೋದ್ಯಮದತ್ತ ಮುಖ ಮಾಡಿದೆ. ಈ ನಿಟ್ಟಿನಲ್ಲಿ ಸ್ಟೀಮ್ (ಎಸ್‌ಟಿಇಎಎಂ) ಶಿಕ್ಷಣ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಶಾಕಿರಣ ಮೂಡಿಸಿದೆ.

ಸಾಂಪ್ರದಾಯಿಕ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕಗಳಲ್ಲಿರುವ ವಿಷಯಗಳನ್ನು ಓದಿ ಪರೀಕ್ಷೆ ಬರೆಯುವ ಮಾದರಿ ಹೆಚ್ಚಾಗಿತ್ತು. ಆದರೆ, ಸ್ಟೀಮ್ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಲಿತ ವಿಷಯಗಳನ್ನು ನೈಜ ಜೀವನದಲ್ಲಿ ಹೇಗೆ ಬಳಸಬಹುದು ಎಂಬುದಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ವಿಜ್ಞಾನ ಪ್ರಯೋಗಗಳು, ರೋಬೋಟಿಕ್ಸ್, ಕೋಡಿಂಗ್, ವಿನ್ಯಾಸ ಚಿಂತನೆ, ಮಾದರಿ ನಿರ್ಮಾಣ, ಸಮಸ್ಯೆ ಪರಿಹಾರ ಕೌಶಲಗಳು ಹಾಗೂ ನವೀನ ಆವಿಷ್ಕಾರಗಳ ಮೂಲಕ ಕಲಿಕೆಯನ್ನು ಹೆಚ್ಚು ಆಸಕ್ತಿದಾಯಕ, ಪರಿಣಾಮಕಾರಿಯನ್ನಾಗಿ ಮಾಡಲಾಗುತ್ತದೆ.

ಅಲ್ಲದೇ, ಇಂದಿನ ಉದ್ಯೋಗ ಮಾರುಕಟ್ಟೆಯಲ್ಲಿ ಕೇವಲ ತಾಂತ್ರಿಕ ಜ್ಞಾನ ಸಾಕಾಗುವುದಿಲ್ಲ. ಹೊಸ ಆಲೋಚನೆಗಳು, ವಿನ್ಯಾಸ ಕೌಶಲ, ತಂಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ ಮತ್ತು ಸಂವಹನ ಕೌಶಲಗಳೂ ಅಗತ್ಯ. ಈ ಎಲ್ಲ ಅಂಶಗಳನ್ನು ಸ್ಟೀಮ್ ಶಿಕ್ಷಣ ಸಮಗ್ರವಾಗಿ ಬೆಳೆಸುತ್ತದೆ.

ಪ್ರೌಢಶಾಲೆ ಹಂತದಲ್ಲಿ ಅಗತ್ಯವೇಕೆ?: ಪ್ರೌಢಶಾಲಾ ಹಂತವೇ ವಿದ್ಯಾರ್ಥಿಗಳ ಭವಿಷ್ಯದ ವೃತ್ತಿಜೀವನದ ದಿಕ್ಕು ನಿರ್ಧರಿಸುವ ಮಹತ್ವದ ಘಟ್ಟವಾಗಿದೆ. ಇದೇ ಸಮಯದಲ್ಲಿ ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ ಅಥವಾ ಕಲಾ ವಿಭಾಗಗಳತ್ತ ತಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಸ್ಟೀಮ್ ಶಿಕ್ಷಣವು ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳ ಪರಿಚಯ ನೀಡುವುದರ ಜತೆಗೆ ಅವರಲ್ಲಿರುವ ಪ್ರತಿಭೆ ಮತ್ತು ಆಸಕ್ತಿಗಳನ್ನು ಗುರುತಿಸಲು ನೆರವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಕೇವಲ ವೈದ್ಯರು, ಇಂಜಿನಿಯರ್‌ಗಳು ಅಥವಾ ಸರ್ಕಾರಿ ಉದ್ಯೋಗಗಳ ಬಗ್ಗೆ ಮಾತ್ರ ಯೋಚಿಸದೆ ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ರೋಬೋಟಿಕ್ಸ್, ಅನಿಮೇಷನ್, ಡಿಸೈನ್, ಗೇಮ್ ಡೆವಲಪ್ಮೆಂಟ್ ಹಾಗೂ ಸ್ಟಾರ್ಟ್‌ಅಪ್ ಉದ್ಯಮಗಳಂತಹ ಹೊಸ ಅವಕಾಶಗಳತ್ತ ಮುಖ ಮಾಡುವ ಸಾಧ್ಯತೆ ಹೆಚ್ಚುತ್ತದೆ.

ಭವಿಷ್ಯದ ಉದ್ಯೋಗಗಳಿಗೆ ಸಿದ್ಧತೆ: ಜಾಗತಿಕ ಮಟ್ಟದಲ್ಲಿ ಉದ್ಯೋಗ ಕ್ಷೇತ್ರ ವೇಗವಾಗಿ ಬದಲಾಗುತ್ತಿದೆ. ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಸೈಬರ್ ಭದ್ರತೆ, ಡೇಟಾ ಸೈನ್ಸ್, ಹಸಿರು ತಂತ್ರಜ್ಞಾನ ಹಾಗೂ ಅಂತರಿಕ್ಷ ಸಂಶೋಧನೆ ಮುಂತಾದ ಕ್ಷೇತ್ರಗಳು ಮುಂದಿನ ದಶಕದಲ್ಲಿ ಪ್ರಮುಖ ಉದ್ಯೋಗ ಕ್ಷೇತ್ರಗಳಾಗಲಿವೆ. ಈ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ಮೂಲಭೂತ ಕೌಶಲಗಳನ್ನು ಸ್ಟೀಮ್ ಶಿಕ್ಷಣದ ಮೂಲಕ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿಯೇ ಕಲಿಯುವ ಅವಕಾಶ ಪಡೆಯಲಿದ್ದಾರೆ.

ಮಹತ್ವಾಕಾಂಕ್ಷಿ ಯೋಜನೆ

ವಿದ್ಯಾರ್ಥಿಗಳನ್ನು ಭವಿಷ್ಯದ ಜಾಗತಿಕ ಸ್ಪರ್ಧೆಗೆ ಸಜ್ಜುಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಸೈನ್ಸ್, ಟೆಕ್ನಾಲಜಿ, ಇಂಜಿನಿಯರಿಂಗ್, ಆರ್ಟ್ಸ್ ಮತ್ತು ಮ್ಯಾಥಮೆಟಿಕ್ಸ್ (ಸ್ಟೀಮ್) ಶಿಕ್ಷಣವನ್ನು ಪರಿಚಯಿಸುತ್ತಿದ್ದು, ಇದು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟದಲ್ಲಿ ಮಹತ್ವದ ಬದಲಾವಣೆ ತರಲಿರುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ.

> ಶಿಕ್ಷಣವನ್ನು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತಗೊಳಿಸದೆ, ಮಕ್ಕಳಲ್ಲಿ ಕುತೂಹಲ ಬೆಳೆಸುವ ಸ್ಟೀಮ್ ಶಿಕ್ಷಣ ಪದ್ಧತಿಯ ಮೂಲಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿದೆ. ಇದರಿಂದ ಕೆಪಿಎಸ್ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಹೆಚ್ಚಾಗಲಿದ್ದು, ವಿದ್ಯಾರ್ಥಿಗಳಿಗೆ ಭವಿಷ್ಯದ ಉದ್ಯೋಗ ಮಾರುಕಟ್ಟೆಗೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳಲು ನೆರವಾಗಲಿದೆ.
>
> ■ **ಸುರಳ್ಕರ್ ವಿಕಾಸ್ ಕಿಶೋರ್, ಆಯುಕ್ತ, ಶಾಲಾ ಶಿಕ್ಷಣ ಇಲಾಖೆ**

ಖರ್ಗೆ ಕುಟುಂಬದಿಂದ 100 ಕೋ.ರೂ. ಮೌಲ್ಯದ ಸರ್ಕಾರಿ ಭೂಮಿ ಲೂಟಿ: ಬಿಜೆಪಿ

• **ಹೊಸದಿಲ್ಲಿ :** ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕರ್ನಾಟಕ ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರ ಕುಟುಂಬದ ಒಡೆತನದ ಸಿದ್ಧಾರ್ಥ ವಿಹಾರ ಟ್ರಸ್ಟ್ ಗೆ ಬಡವರಿಗೆ ಸೇರಿದ ಭೂಮಿಯನ್ನು ಅಕ್ರಮವಾಗಿ ಹಂಚಿಕೆ ಮಾಡಿರುವ ಬಗ್ಗೆ ಬಿಜೆಪಿ ಬುಧವಾರ ಗಂಭೀರ ಆರೋಪ ಮಾಡಿದೆ.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ ಅವರು,ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಕುಟುಂಬಸ್ಥರು ಮುನ್ನಡೆಸುತ್ತಿರುವ ಖಾಸಗಿ ಟ್ರಸ್ಟ್‌ಗೆ ಕರ್ನಾಟಕದಲ್ಲಿ 100 ಕೋ. ರೂ. ಮೌಲ್ಯದ ಪ್ರಮುಖ ಸರ್ಕಾರಿ ಜಮೀನನ್ನು ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಲಾಗಿರುವ ಬಗ್ಗೆ ಆರೋಪಿಸಿದರು.

ಏರೋಸ್ಪೇಸ್ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಟ್ರಸ್ಟ್‌ಗೆ ಭಾರೀ ಮೌಲ್ಯದ 5 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ. ಕೈಗಾರಿಕಾ ಉದ್ದೇಶಗಳಿಗೆ ಬಳಕೆಯಾಗಬೇಕಿದ್ದ ಜಮೀನು ಖರ್ಗೆ ಅವರ ಖಾಸಗಿ ಟ್ರಸ್ಟ್‌ಗೆ ನೀಡಲಾಗಿದ್ದು, ಇದರ ಮೌಲ್ಯ 100ಕೋ.ರೂ.ಎಂದು ಅವರು ಹೇಳಿದರು.

ಸಂಪಾದಕೀಯ

ಮರುಕಳಿಸುವ ಅಗ್ನಿದುರಂತಗಳು

ಕೆಲವು ದಿನಗಳ ಹಿಂದೆ ಲಕ್ನೋದ ಆಲಿಗಂಜ್‌ನಲ್ಲಿ ಕೋಚಿಂಗ್ ಸೆಂಟರ್ ಒಂದರಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ 14 ಮಂದಿ ತರುಣರು ಸಾವನ್ನಪ್ಪಿದರು. ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದಾಗ ಅಲ್ಲಿಂದ ಹೊರಬರಲಾಗದೆ ತೊಳಲಾಡಿದ, ಕೆಲವರು ಕಿಟಕಿಯಿಂದಲೇ ಕೆಳಕ್ಕೆ ಹಾರಿದ ದೃಶ್ಯ ಮನಕಲಕುವಂತಿತ್ತು. ಸಂಭವನೀಯ ದುರಂತ ಸಂಭವಿಸಿದಾಗ ಕ್ಷಿಪ್ರವಾಗಿ ಹೊರಗೆ ಬರಲು ತುರ್ತು ನಿರ್ಗಮನ ಬಾಗಿಲುಗಳೇ ಅಲ್ಲಿರಲಿಲ್ಲ... ಮೂರು ವಾರಗಳ ಮೊದಲಷ್ಟೇ ದಿಲ್ಲಿಯಲ್ಲಿ ಕೂಡಾ ಇದೇ ಬಗೆಯ ದೃಶ್ಯಗಳು ಕಂಡುಬಂದಿದ್ದವು. ಅಲ್ಲಿ ಸಣ್ಣ ಹೋಟೆಲೊಂದರಲ್ಲಿ ಇಂತಹುದೇ ಅಗ್ನಿದುರಂತ ಸಂಭವಿಸಿತ್ತು. 21 ಮಂದಿ ಸಾವಿಗೀಡಾಗಿದ್ದರು. ಅಲ್ಲೂ ಆ ಕಟ್ಟಡಕ್ಕೆ ಇಕ್ಕಟ್ಟಾದ ಮೆಟ್ಟಿಲು ವ್ಯವಸ್ಥೆ ಇತ್ತು. ಎಮರ್ಜೆನ್ಸಿ ಬಾಗಿಲು ಇರಲಿಲ್ಲ. ಎರಡೂ ಪ್ರಸಂಗಗಳಲ್ಲಿ ಸುರಕ್ಷಾ ನಿಯಮಗಳನ್ನು ಮತ್ತು ಇನ್ನಿತರ ಸರಕಾರಿ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ನಡೆಯುತ್ತಿತ್ತು. ಲಕ್ನೋ ಪ್ರಸಂಗದಲ್ಲಂತೂ ಕೆಲವು ವರ್ಷಗಳ ಹಿಂದೆ ಆ ಕಟ್ಟಡವನ್ನು ಕೆಡಹುವಂತೆ ಸ್ಥಳೀಯಾಡಳಿತದಿಂದ ನೋಟೀಸೂ ಜಾರಿಯಾಗಿತ್ತು. ಆದರೆ ಎರಡೇ ತಿಂಗಳಲ್ಲಿ ರಾಜಕೀಯ ಪ್ರಭಾವ ಬೀರಿ ಆ ನೋಟೀಸು ರದ್ದುಪಡಿಸುವಲ್ಲಿ ಕಟ್ಟಡ ಮಾಲಕರು ಸಫಲರಾಗಿದ್ದರು. ಒಟ್ಟಿನಲ್ಲಿ ಇಂತಹ ದುರಂತಗಳು ಸಂಭವಿಸಲು ಸಂಬಂಧಪಟ್ಟ ಕಟ್ಟಡಗಳ ಮಾಲಕರು, ಅಲ್ಲಿ ವ್ಯವಹಾರ ನಡೆಸುವ ಮಂದಿ ಎಷ್ಟು ಹೊಣೆಗಾರರೋ, ಸ್ಥಳೀಯಾಡಳಿತ ಸಂಸ್ಥೆಗಳ ಭ್ರಷ್ಟಾಚಾರಿ ವ್ಯವಸ್ಥೆ, ರಾಜಕೀಯ ಭ್ರಷ್ಟಾಚಾರ ಕೂಡಾ ಅಷ್ಟೇ ಹೊಣೆಗಾರನಾಗಿದೆ. ಕಟ್ಟಡಕ್ಕೆ ಕಣ್ಣುಮುಚ್ಚಿ ನಿರ್ವಹಣಾ ಪರವಾನಿಗೆ ನೀಡುವುದು, ಕಟ್ಟಡಗಳ ಸುರಕ್ಷಾ ವ್ಯವಸ್ಥೆಯನ್ನು ಪರಿಶೀಲಿಸದೆಯೇ ಅಲ್ಲಿ ವ್ಯವಹಾರ ನಿರ್ವಹಣೆಗೆ ಅನುಮತಿ ನೀಡುವುದು, ತುರ್ತು ಸಂದರ್ಭದಲ್ಲಿ ಅಗ್ನಿಶಾಮಕ ವ್ಯವಸ್ಥೆ ಸಮರ್ಪಕವಾಗಿ ಕಾರ್ಯಾಚರಿಸಲು ಬೇಕಾದಂತಹ ಸ್ಥಳಾವಕಾಶ ಇದೆಯೆ ಎಂದು ಪರಿಶೀಲಿಸದಿರುವುದು... ಇವೆಲ್ಲವೂ ವ್ಯವಸ್ಥೆಯ ಕಡೆಯಿಂದಾಗುವ ಲೋಪಗಳು. ಸ್ಥಳೀಯಾಡಳಿತವು ಕ್ರಮ ಕೈಗೊಳ್ಳಲು ಮುಂದಾಗುವಾಗ ರಾಜಕೀಯ ಹಸ್ತಕ್ಷೇಪ ನಡೆದು ಅದಕ್ಕೆ ತಡೆ ಬೀಳುವುದೂ ಇದೆ. ಇದು ಎಲ್ಲೋ ಒಂದೆರಡು ಕಡೆ ನಡೆಯುವ ವಿಷಯವಲ್ಲ, ದೇಶದಲ್ಲಿಡೀ ಇಂತಹ ಅಪಸವ್ಯಗಳು ನಡೆಯುವುದಿದೆ.

ಕಟ್ಟಡ ನಿರ್ಮಾಣದಲ್ಲಿ ಮತ್ತು ಅಲ್ಲಿ ನಡೆಯುವ ವಾಣಿಜ್ಯಿಕ ವ್ಯವಹಾರಗಳಲ್ಲಿ ನಡೆಯುವ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳದ ಹೊರತು, ಇದರಲ್ಲಿ ರಾಜಕೀಯ ಹಸ್ತಕ್ಷೇಪ ನಿಲ್ಲದ ಹೊರತು ಇಂತಹ ದುರ್ಘಟನೆಗಳು ನಡೆಯುತ್ತಲೇ ಇರುತ್ತವೆ. ರಾಜ್ಯ, ಪ್ರದೇಶ, ಕಟ್ಟಡ, ಸಂದರ್ಭ ಭಿನ್ನವಾಗಿರಬಹುದು ಅಷ್ಟೆ. ವಾಣಿಜ್ಯಿಕವಾಗಿ ಕಾರ್ಯ ನಿರ್ವಹಿಸುವ ಪ್ರತಿಯೊಂದು ಕಟ್ಟಡ, ಅಲ್ಲಿನ ವ್ಯವಹಾರ ಕ್ಷೇತ್ರವು ಸೂಕ್ತ ಸುರಕ್ಷಾ ಕ್ರಮಗಳನ್ನು ಒಳಗೊಂಡಿರುವಂತೆ, ತುರ್ತು ಸಂದರ್ಭಗಳಲ್ಲಿ ಕ್ಷಿಪ್ರ ನಿರ್ಗಮನಕ್ಕೆ ಅವಕಾಶ ಕಲ್ಪಿಸುವ ವ್ಯವಸ್ಥೆ ಹೊಂದಿರುವಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು ಅತ್ಯಗತ್ಯವಾಗಿದೆ.

ಲಕ್ಷ್ಮಿ ಯಾರ ಸಮೀಪ ಸುಳಿಯುವುದಿಲ್ಲ?

ಅತ್ಯಾರ್ಯಂ ಅತಿದಾತಾರಂ ಅತಿಶೂರಂ ಅತಿವ್ರತಮ್ ।
ಪ್ರಾಜ್ಞಾಭಿಮಾನಿನಂ ಚೈವ ಶ್ರೀಭಯಾನ್ನೋಪಸರ್ಪತಿ ॥ -ಮಹಾಭಾರತ

ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಅತಿಯಾದ ಸೌಜನ್ಯವಿರುವವನು, ಅತಿ ದಾನಿ, ಅತಿಶೂರ, ಅತಿಯಾದ ನಿಯಮಶೀಲ, ಪಂಡಿತ, ಅಭಿಮಾನಿ–ಇವರುಗಳನ್ನು ಲಕ್ಷ್ಮಿಯು (ಸಂಪತ್ತು) ಹೆದರಿ ಹತ್ತಿರ ಹೋಗುವುದಿಲ್ಲ – ಎಂಬುದು ಶ್ಲೋಕಾರ್ಥ.

ಎಲ್ಲರೂ ಸಂಪತ್ತನ್ನು ಬಯಸಿದರೂ ಎಲ್ಲರಲ್ಲಿಯೂ ಸಂಪತ್ತಿರುವುದಿಲ್ಲ, ಬಯಸುವವರೆಲ್ಲರನ್ನೂ ಹುಡುಕಿಕೊಂಡು ಸಂಪತ್ತು ಬರುವುದಿಲ್ಲ. ಸಂಪತ್ತು ನೆಲೆ ನಿಲ್ಲಬೇಕಾದರೂ ಕೆಲವರು ಅಂತಹವರಿರಬೇಕು. ಲಕ್ಷಣಗಳನ್ನು ಹೊಂದಿರಬೇಕು. ಇದನ್ನು ಪ್ರಕೃತ ಶ್ಲೋಕದಲ್ಲಿ ಹೇಳಲಾಗಿದೆ. ಇಂಥವರ ಸಮೀಪ ಲಕ್ಷ್ಮಿ ಹೋಗುವುದಿಲ್ಲವಂತೆ. ಇದಕ್ಕೆ ಕಾರಣ ಅವರನ್ನು ಕಂಡರೆ ಲಕ್ಷ್ಮಿಗೆ ಹೆದರಿಕೆ. ಹಾಗಿದ್ದರೆ ಯಾರನ್ನೆಲ್ಲ ಕಂಡರೆ ಹೆದರಿಕೆ ಎಂಬುದನ್ನು ಇಲ್ಲಿ ನೀಡಲಾಗಿದೆ.

ಅತಿಯಾದ ಸೌಜನ್ಯವಿರುವವನ ಸಮೀಪ ಲಕ್ಷ್ಮಿ ಸುಳಿಯಲಾರಳು. ಇದಕ್ಕೆ ಕಾರಣ ಅತಿಯಾದ ಸೌಜನ್ಯವೇ ಆಗಿದೆ. ಸೌಜನ್ಯವಿರುವವರಿಗೆ ಸಂಪತ್ತನ್ನು ಇಟ್ಟುಕೊಳ್ಳಬೇಕು, ಕೂಡಿಡಬೇಕು ಎಂಬ ಭಾವನೆ ಇರದು. ಯಾರಾದರೂ ಕಷ್ಟವನ್ನು ಹೇಳಿಕೊಂಡರೆ ಎಲ್ಲವನ್ನೂ ಕೊಟ್ಟುಬಿಡುತ್ತಾರೆ. ಪೂರ್ವಾಪರವನ್ನು ಕೂಲಂಕಷವಾಗಿ ವಿಚಾರಿಸದೇ ನೀಡುತ್ತಾರೆ. ಹೀಗೆ ಎಷ್ಟಿದ್ದರೂ ಸಾಲದು. ಈ ಕಾರಣಕ್ಕಾಗಿಯೇ ಹೆದರಿದ ಲಕ್ಷ್ಮಿ ಅವರ ಸಮೀಪ ಸಾರಲಾರಳು.

ಅತಿದಾತಾರ ಎಂದರೆ ಧಾರಾಳಿ. ಇವನ ಸ್ವಭಾವವೂ ಅಷ್ಟೇ! ತನ್ನಲ್ಲಿ ಇರುವುದನ್ನು ಧಾರಾಳವಾಗಿ ನೀಡುವುದು. ಮುಂದೆ ಬೇಕಾದೀತು... ಇತ್ಯಾದಿ ಯಾವ ಯೋಚನೆಯನ್ನೂ ಮಾಡದೆ ಕೊಡುತ್ತಾನೆ. ಹೀಗಿರುವಾಗ ಲಕ್ಷ್ಮಿ ನೆಲೆ ನಿಲ್ಲಲು ಹೇಗೆ ಸಾಧ್ಯ ? ಅಲ್ಪಸ್ವಲ್ಪವಾದರೂ ಕೂಡಿಡುವ ಸ್ವಭಾವವಿದ್ದರೆ ಲಕ್ಷ್ಮಿ ನೆಲೆಸುತ್ತಾಳೆ. ಅದೇ ಇಲ್ಲದಿದ್ದರೆ ನೆಲೆಸುವುದಾದರೂ ಹೇಗೆ?

ಅತಿ ಶೂರನಲ್ಲಿಯೂ ಲಕ್ಷ್ಮಿ ನೆಲೆ ಕಾಣಳು. ಜೀವನವನ್ನೆಲ್ಲ ಸಾಹಸ ಕಾರ್ಯದಲ್ಲಿ, ಶೌರ್ಯ ಪ್ರದರ್ಶನದಲ್ಲಿಯೇ ಕಳೆದರೆ, ಅದಕ್ಕೆ ಬೇಕಾದ ಸಿದ್ಧತೆಗೆ ಗಳಿಸಿದ ಹಣವೆಲ್ಲ ಬಳಕೆಯಾಗುತ್ತದೆ. ಹೀಗಿರುವಾಗ ಲಕ್ಷ್ಮಿ ಹೇಗೆ ನಿಂತಾಳು?

ಅತಿಯಾದ ನಿಯಮಶೀಲನಲ್ಲೂ ಲಕ್ಷ್ಮಿ ನೆಲೆ ನಿಲ್ಲಲು ಸಾಧ್ಯವಾಗುವುದಿಲ್ಲ. ಅಲ್ಲಿ ಅವಳಿಗೆ ಸ್ಥಾನವಿಲ್ಲ. ಹೀಗಿರುವಾಗ ನೆಲಸಲು ಹೇಗೆ ಸಾಧ್ಯ? ಪಂಡಿತರ ಗಮನ ಹರಿಯುವುದು ಪಾಂಡಿತ್ಯದತ್ತ. ಅದಕ್ಕೆ ಬೇಕಾದುದನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಜ್ಞಾನಾರ್ಜನೆಯತ್ತಲೆ ವಿನಾ ಸಂಪತ್ತನ್ನು ಗಳಿಸುವತ್ತ ಗಮನವಿರುವುದಿಲ್ಲ. ಲೌಕಿಕ ಸಂಪತ್ತಿನತ್ತ ತಿರಸ್ಕಾರ. ಇಂಥವರೊಂದಿಗೆ ಲಕ್ಷ್ಮಿ ಹೇಗೆ ವಾಸಿಸುತ್ತಾಳೆ?

ಅಭಿಮಾನಿಯು ಎಂದೆಂದಿಗೂ ಅಭಿಮಾನವನ್ನು ಬಿಟ್ಟು ಸಂಪತ್ತು ಗಳಿಸುವುದಕ್ಕೆ ಹಾತೊರೆಯಲಾರ. ಯಾರೆದುರೂ ಕೈ ಚಾಚಲಾರ. ಅಭಿಮಾನಕ್ಕೆ ಭಂಗ ತರುವ ಕೆಲಸದಲ್ಲಿ ತೊಡಗಲಾರ. ಅಭಿಮಾನ ಬಿಟ್ಟು ವ್ಯವಹಾರ ಮಾಡಲಾರ. ಇಂಥವರತ್ತ ಗೌರವಾದರಗಳು ಹರಿದು ಬರುತ್ತದೆಯೇ ವಿನಾ ಸಂಪತ್ತು ಬರದು.

ಇವರಿಗೆಲ್ಲ ಜಿಪುಣತನ, ಕೂಡಿಡುವ ಬುದ್ಧಿ, ಇನ್ನೊಬ್ಬರಿಗೆ ವಂಚನೆಯಾದರೂ ಹಣ ಮಾಡಬೇಕು, ಹಣ ಗಳಿಸುವುದಕ್ಕೆ ಯಾವ ಮಾರ್ಗವಾದರೂ ಸರಿ ಇತ್ಯಾದಿ ಮನೋಭಾವ ಇಲ್ಲದಿರುವುದರಿಂದ ಭಯದಿಂದ ಇವರತ್ತ ಲಕ್ಷ್ಮಿಯು ಬರಲಾರಳು.

ಬರಗಾಲದಲ್ಲಿ ಚರ್ಚಿಲ್ ನರಮೇಧದ ಕರಾಳ ನೆನಪು

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com

ಬ್ರಿಟನ್ ಜಗತ್ತಿಗೆ ಪತ್ರಿಕಾ ಸ್ವಾತಂತ್ರ್ಯದ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾಠ ಹೇಳುವ ದೇಶ. ಆದರೆ ಆ ದೇಶದ ಹೃದಯ ಭಾಗದ ವಸ್ತುಸಂಗ್ರಹಾಲಯವೊಂದು, ಕೇವಲ ಒಂದು ವಿಡಿಯೋವನ್ನು ಸಹಿಸಲಾರದೆ ಹೋಯಿತು. ಲಂಡನ್‌ನ ನ್ಯಾಷನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿ ಕಳೆದ ಸೆಪ್ಟೆಂಬರ್‌ನಿಂದ ಪ್ರದರ್ಶನದಲ್ಲಿದ್ದ, ಟರ್ನರ್ ಪ್ರಶಸ್ತಿ ವಿಜೇತ ಕಲಾವಿದೆ ಹೆಲೆನ್ ಕ್ಯಾಮಕ್ ಅವರ 40 ನಿಮಿಷದ ಪರ್ಸಿಸ್ಟೆನ್ಸ್ ಎಂಬ ವಿಡಿಯೋ ಕೃತಿಯನ್ನು, ಈ ವಾರ ಗ್ಯಾಲರಿ ಹಿಂಪಡೆದಿದೆ. ಕಾರಣ ಎಂದರೆ ಆ ಕೃತಿ ಅಲ್ಲಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಮತ್ತು 1943ರ ಬಂಗಾಳ ಕ್ಷಾಮದ ಬಗ್ಗೆ ಆಡಿದ ಮಾತುಗಳು.

ಆ ವಿಡಿಯೋ, ಬಂಗಾಳ ಕ್ಷಾಮವನ್ನು ಚರ್ಚಿಲ್‌ರಿಂದ ಭಾರತೀಯರ ಉದ್ದೇಶಪೂರ್ವಕ ಹಸಿವಿನ ಹತ್ಯೆ ಎಂದು ಬಣ್ಣಿಸಿತ್ತು. ಜೊತೆಗೆ ಚರ್ಚಿಲ್‌ರ ನಡೆಯನ್ನು ಐರ್ಲೆಂಡ್‌ನಲ್ಲಿ ಕ್ರಾಮ್‌ವೆಲ್ ನಡೆಸಿದ ದಂಡಯಾತ್ರೆಗೆ ಹೋಲಿಸಿತ್ತು. ಚರ್ಚಿಲ್‌ರ ಜೀವನಚರಿತ್ರಕಾರ ಆಂಡ್ರ್ಯೂ ರಾಬರ್ಟ್ಸ್ ಮುಂದಾಳತ್ವದಲ್ಲಿ, ಚರ್ಚಿಲ್‌ರ ಮೊಮ್ಮಗ ಸರ್ ನಿಕೋಲಸ್ ಸೋಮ್ಸ್ ಸೇರಿದಂತೆ 50ಕ್ಕೂ ಹೆಚ್ಚು ಹೌಸ್ ಆಫ್ ಲಾರ್ಡ್ಸ್ ಸದಸ್ಯರು ಗ್ಯಾಲರಿಗೆ ಬಹಿರಂಗ ಪತ್ರ ಬರೆದು, ಅದನ್ನು ಸೈದ್ಧಾಂತಿಕ ಪ್ರೇರಿತ ಅಸಂಬದ್ಧ ಕೂಗು, ಹೀನ ಮತ್ತು ನೀಚ ಎಂದು ಜರಿದರು. ಕಡೆಯದಾಗಿ, ಒತ್ತಡ ಹೆಚ್ಚಿದಾಗ ಕಲಾವಿದೆ ಸ್ವತಃ ಕೃತಿ ಹಿಂಪಡೆದರು. ಆದರೆ ಆ ಸ್ವಯಂ ನಿರ್ಧಾರದ ಹಿಂದಿನ ಕೈ ಯಾವುದು ಎಂಬುದು ಎಲ್ಲರಿಗೂ ಗೊತ್ತು.

ಇಲ್ಲಿ ನಿಜವಾದ ಪ್ರಶ್ನೆ ಕಲೆಯದ್ದಲ್ಲ. ಬದಲಾಗಿ ಬ್ರಿಟನ್ ತನ್ನದೇ ಮುಖವನ್ನು ಕನ್ನಡಿಯಲ್ಲಿ ನೋಡಲು ಏಕೆ ಹೆದರುತ್ತದೆ ಎಂಬುದು. ಏಕೆಂದರೆ 1943 ಎಂಬುದು ಕೇವಲ ಒಂದು ಇಸವಿಯಲ್ಲ. ಅದು ಬಂಗಾಳದ ರಸ್ತೆಗಳಲ್ಲಿ ಮೂಳೆಚರ್ಮವಾಗಿ ಬಿದ್ದ ಸುಮಾರು 30 ಲಕ್ಷ ಜೀವಗಳ ಕಥನ. ತಾಯಿಯ ಬರಿದಾದ ಎದೆಯನ್ನು ಚೀಪುತ್ತಲೇ ಪ್ರಾಣ ಬಿಟ್ಟ ಕಂದಮ್ಮಗಳ, ಅನ್ನದ ಒಂದು ತುತ್ತಿಗಾಗಿ ಕೋಲ್ಕತ್ತಾದ ಚರಂಡಿಯಂಚಿನಲ್ಲಿ ಕುಸಿದ ಬಡವರ ಕಥನ. ಮತ್ತು ಇದು ಪ್ರಕೃತಿಯ ಆಕಸ್ಮಿಕ ಅಲ್ಲ. ಬದಲಾಗಿ ಬಹುಪಾಲು ಇದು ಮಾನವ ನಿರ್ಮಿತ ದುರಂತ.

ಕ್ಷಾಮಕ್ಕೆ ಹಲವು ಕಾರಣಗಳಿದ್ದವು ನಿಜ. 1942ರ ಚಂಡಮಾರುತ, ಜಪಾನ್ ವಶಪಡಿಸಿಕೊಂಡ ಬರ್ಮಾದಿಂದ ಅಕ್ಕಿ ಆಮದು ಸ್ಥಗಿತ, ಅಕ್ರಮ ದಾಸ್ತಾನು ಹಾಗೂ ಯುದ್ಧಕಾಲದ ಹಣದುಬ್ಬರ ಪ್ರಮುಖ ಕಾರಣಗಳಾಗಿದ್ದವು. ಆದರೆ ಈ ಎಲ್ಲದರ ಮೇಲೆ ಕೂತದ್ದು ಬ್ರಿಟಿಷ್ ಯುದ್ಧ ಮಂತ್ರಿಮಂಡಲದ ತೀರ್ಮಾನಗಳು. ಜಪಾನ್ ದಂಡೆತ್ತಿ ಬಂದರೆ ಅವರಿಗೆ ಸಿಗಬಾರದು ಎಂಬ ನೆಪದಲ್ಲಿ ಕರಾವಳಿ ಬಂಗಾಳದ ದೋಣಿಗಳನ್ನೂ ಅಕ್ಕಿಯನ್ನೂ ಕಿತ್ತುಕೊಂಡ ನಿರಾಕರಣ ನೀತಿ ರೈತನ ಬದುಕನ್ನೇ ಮುರಿಯಿತು. ಬಂಗಾಳ ಹಸಿವಿನಿಂದ ಸಾಯುತ್ತಿರುವಾಗಲೂ ಭಾರತದಿಂದ ಧಾನ್ಯ ರಫ್ತಾಗುತ್ತಿತ್ತು ಎಂದರೆ ಅವರ ಕಟುಕುತನ ಹೇಗಿರಬೇಕು ಎಂಬುದನ್ನು ಊಹಿಸಿಕೊಳ್ಳಿ. ಆಸ್ಟ್ರೇಲಿಯಾ ಹಾಗೂ ಕೆನಡಾಗಳು ನೀಡಲು ಮುಂದಾದ ಗೋಧಿಯ ಹಡಗುಗಳನ್ನು ಯುದ್ಧಕ್ಕೆ ಹಡಗು ಬೇಕು ಎಂದು ತಿರಸ್ಕರಿಸಲಾಯಿತು. ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ತೋರಿಸಿಕೊಟ್ಟಂತೆ, ಆಹಾರ ಇತ್ತು. ಆದರೆ ಬಡವನ ಕೈಗೆ ಅದು ಎಟುಕದಂತೆ ವ್ಯವಸ್ಥೆಯೇ ನೋಡಿಕೊಂಡಿತು. ಕ್ಷಾಮ ಎಂಬುದು ಎಂದಿಗೂ ಬರೀ ಹವಾಮಾನದ ಫಲವಲ್ಲ. ಅದು ರಾಜಕೀಯ ಆಯ್ಕೆಯ ಫಲ ಎಂಬುದು ಅಂದು ಸಾಬೀತಾಯಿತು.

ಆ ಆಯ್ಕೆಯ ಬೇರು ಇದ್ದದ್ದು ಭಾರತೀಯನ ಬಗ್ಗೆ ಬ್ರಿಟಿಷ್ ಆಡಳಿತಗಾರ ಇಟ್ಟಿದ್ದ ತಿರಸ್ಕಾರದಲ್ಲಿ. ಸ್ವತಃ ಚರ್ಚಿಲ್ ಭಾರತೀಯರನ್ನು ತೀರಾ ಕ್ಷುಲ್ಲಕವಾಗಿ ನೋಡುತ್ತಿದ್ದರು. ಭಾರತೀಯರು ಮೊಲಗಳಂತೆ ಹೆಚ್ಚುತ್ತಾರೆ ಎಂದು ಕರೆದಿದ್ದರು. ಬಂಗಾಳದಲ್ಲಿ ಲಕ್ಷಗಟ್ಟಲೆ ಜನ ಸಾಯುತ್ತಿದ್ದಾರೆ ಎಂಬ ವರದಿ ಬಂದಾಗ, ಹಾಗಾದರೆ ಗಾಂಧಿ ಇನ್ನೂ ಏಕೆ ಸತ್ತಿಲ್ಲ? ಎಂದು ಅತಿ ಕೆಟ್ಟ, ಅಮಾನುಷ, ಅಮಾನವೀಯ ಪ್ರಶ್ನೆ ಕೇಳಿದಾತ ಇವರು. ಅಂದಿನ ಬ್ರಿಟಿಷ್ ಸಾಮ್ರಾಜ್ಯಕ್ಕೆ ಭಾರತೀಯನ ಜೀವ ಒಂದು ಜೀವವಾಗಿರಲಿಲ್ಲ. ಅದು ಲೆಕ್ಕಪತ್ರದ ಒಂದು ಸಂಖ್ಯೆ ಅಷ್ಟೇ ಆಗಿತ್ತು. ಯುದ್ಧ ಯಂತ್ರಕ್ಕೆ ಹೋದ ಧಾನ್ಯ ಬಂಗಾಳಿಯ ಹೊಟ್ಟೆಗೂ ಹೋಗಬಹುದಿತ್ತು. ಆ ಆಯ್ಕೆ ಮಾಡದೇ, ಭಾರತೀಯರನ್ನು ವರ್ಣಾಧಾರಿತವಾಗಿ ಗುರುತಿಸಿ, ತೀರಾ ಕೆಟ್ಟದಾಗಿ ಬಳಸಿಕೊಂಡರು. ಅವರ ಈ ತಿರಸ್ಕಾರ ಒಂದು ವ್ಯಕ್ತಿಯ ಮನೋಭಾವವಾಗಿರಲಿಲ್ಲ. ಅದು ಇಡೀ ವಸಾಹತುಶಾಹಿ ವ್ಯವಸ್ಥೆಯ ತಿರುಳಾಗಿತ್ತು. ಶತಮಾನಗಳ ಕಾಲ ಭಾರತದ ಸಂಪತ್ತನ್ನು ಬಸಿದು ಬ್ರಿಟನ್‌ಗೆ ಸಾಗಿಸಿದ ಆ ಸಂಪತ್ತಿನ ಬಸಿತದ ಮುಂದುವರಿಕೆಯೇ 1943ರ ಹಸಿವು. ಬಂಗಾಳಿಯ ತಟ್ಟೆ ಖಾಲಿಯಾದರೆ ಪರವಾಗಿಲ್ಲ, ಲಂಡನ್‌ನ ಯುದ್ಧ ಬಜೆಟ್ ತುಂಬಿರಬೇಕು ಎಂಬುದೇ ಆ ಆಡಳಿತದ ಲೆಕ್ಕಾಚಾರವಾಗಿತ್ತು.

ಇಷ್ಟಾದರೂ, ಎಂಟು ದಶಕ ಕಳೆದರೂ, ಬ್ರಿಟನ್ ಈ ಪಾಪಕ್ಕೆ ಒಂದು ಬಾರಿಯೂ ಕ್ಷಮೆ ಕೇಳಿಲ್ಲ. ಚರ್ಚಿಲ್ ಕೇಳಲಿಲ್ಲ. ಅವರ ನಂತರ ಬಂದವರೂ ಕೇಳಲಿಲ್ಲ. ಪ್ರತಿಮೆಗಳಲ್ಲಿ, ನೋಟುಗಳಲ್ಲಿ ಹಾಗೂ ಪಠ್ಯಪುಸ್ತಕಗಳಲ್ಲಿ ಚರ್ಚಿಲ್ ಯುದ್ಧ ನಾಯಕನಾಗಿ ವಿಜೃಂಭಿಸುತ್ತಲೇ ಇದ್ದಾರೆ. ಮತ್ತೊಂದೆಡೆ ಬಂಗಾಳದ 30 ಲಕ್ಷ ಮಂದಿ ಒಂದು ಅಡಿಟಿಪ್ಪಣಿಯಾಗಿ ಮಸುಕಾಗಿದ್ದಾರೆ. ಗ್ಯಾಲರಿಯಿಂದ ವಿಡಿಯೋ ತೆಗೆದದ್ದು ಇದೇ ನಿರಾಕರಣೆಯ ಹೊಸ ಅಧ್ಯಾಯ. ನಾವು ಕೇಳುತ್ತಿರುವುದು ಸೇಡಲ್ಲ. ಸತ್ಯದ ಸ್ವೀಕಾರ ಮಾತ್ರ. ಇತಿಹಾಸವನ್ನು ಅಳಿಸಿ ಹಾಕುವ ಮೂಲಕ ಅಪರಾಧವನ್ನು ಪವಿತ್ರಗೊಳಿಸಲಾಗದು.

ಈ ಹಳೆಯ ಗಾಯವನ್ನು ಈಗಲೇ ಏಕೆ ಕೆದಕಬೇಕು? ಇದಕ್ಕೆ ಉತ್ತರಗಳೂ ಇವೆ. ಅಲ್ಲಿನ ಸಂಗ್ರಹಾಲಯದಿಂದ ವಿಡಿಯೋ ತೆಗೆದ ಹೊತ್ತಲ್ಲೇ, ಭಾರತವೂ ಸೇರಿದಂತೆ ಜಗತ್ತು ಎಲ್ ನಿನೋದ ಅಟ್ಟಹಾಸ ಎದುರಿಸಲು ಕುಳಿತಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಈ ಬಾರಿ ಸಾಧಾರಣಕ್ಕಿಂತ ಕಡಿಮೆ, ಅಂದರೆ ದೀರ್ಘಾವಧಿ ಸರಾಸರಿಯಾದ 870 ಮಿ.ಮೀ.ಗೆ ಬದಲು ಸುಮಾರು 800 ಮಿ.ಮೀ. ಮಳೆಯ ಮುನ್ಸೂಚನೆ ನೀಡಿದೆ. ಇದರೊಂದಿಗೆ ಬರದ ಸಾಧ್ಯತೆ ಸಾಮಾನ್ಯಕ್ಕಿಂತ ದುಪ್ಪಟ್ಟಾಗಿದೆ. 2015 ರಿಂದ 2016ರ ಅವಧಿಯ ಪ್ರಬಲ ಎಲ್ ನಿನೋ ತಂದ ಬರ ಹಾಗೂ 2002ರ ಭೀಕರ ಕೊರತೆ ಇನ್ನೂ ನೆನಪಿನಲ್ಲಿವೆ. ದೇಶದ ಶೇ.60ರಷ್ಟು ರೈತರು ಇಂದಿಗೂ ಮುಂಗಾರಿನ ಮೇಲೆಯೇ ಅವಲಂಬಿತರು. ಬರ ಮತ್ತೆ ಬಾಗಿಲು ತಟ್ಟುತ್ತಿದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಮಳೆ ಕೈಕೊಟ್ಟರೆ ಉತ್ತರ ಕರ್ನಾಟಕ ಮತ್ತು ಬಯಲುಸೀಮೆಯ ರೈತ ಮೊದಲ ಬಲಿಪಶು. ಜಲಾಶಯಗಳ ನೀರಿನ ಮಟ್ಟ, ಬಿತ್ತನೆ ಬೀಜ ಮತ್ತು ಮೇವಿನ ದಾಸ್ತಾನು ಇವೆಲ್ಲ ಈಗಿನಿಂದಲೇ ನಿಗಾ ಬೇಡುವ ಸಂಗತಿಗಳು.

ಆದರೆ 1943 ಮತ್ತು 2026ರ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಆ ವ್ಯತ್ಯಾಸದಲ್ಲೇ ನಮ್ಮ ಭರವಸೆ ಅಡಗಿದೆ. ಅಂದು, ಯಾವ ಭಾರತೀಯನಿಗೂ ಉತ್ತರದಾಯಿಯಲ್ಲದ ವಸಾಹತುಶಾಹಿ ಆಡಳಿತ ಜನರನ್ನು ಸಾಯಲು ಬಿಟ್ಟಿತು. ಇಂದು, ಆಹಾರ ಭದ್ರತೆಯ ಒಂದಿಡೀ ರಚನೆ ನಮ್ಮ ಬಳಿಯಿದೆ. ಭಾರತೀಯ ಆಹಾರ ನಿಗಮದ ಬಫರ್ ದಾಸ್ತಾನು, ಸಾರ್ವಜನಿಕ ಪಡಿತರ ವ್ಯವಸ್ಥೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಖಾತರಿ ಯೋಜನೆ, ಬೆಳೆ ವಿಮೆ, ಮುಂಚಿತ ಎಚ್ಚರಿಕೆ ವ್ಯವಸ್ಥೆ ಹಾಗೂ ನೀರಾವರಿ ಜಾಲ ನಮ್ಮಲ್ಲಿವೆ. ಇಂದು ಭಾರತದಲ್ಲಿ ಕ್ಷಾಮ ಸಂಭವಿಸಿದರೆ ಅದು ವಿಧಿಯ ಆಟವಲ್ಲ. ಅದು ಆಡಳಿತದ ವೈಫಲ್ಯ. ಆದರೂ ಆತ್ಮತೃಪ್ತಿ ಸಲ್ಲದು. ಹವಾಮಾನ ಬದಲಾವಣೆ, ಸಣ್ಣ ರೈತನ ಸಂಕಷ್ಟ, ಅಂತರ್ಜಲ ಕುಸಿತ ಹಾಗೂ ವಿತರಣೆಯ ಸೋರಿಕೆ ಇವು ಇನ್ನೂ ನಮ್ಮ ದೌರ್ಬಲ್ಯಗಳು.

ಸೇನ್ ಹೇಳಿದ ಪಾಠ ಇಂದಿಗೂ ಪ್ರಸ್ತುತ. ಪ್ರಜಾಪ್ರಭುತ್ವ, ಮುಕ್ತ ಪತ್ರಿಕೋದ್ಯಮ ಮತ್ತು ಉತ್ತರದಾಯಿತ್ವ ಇರುವಲ್ಲಿ ಕ್ಷಾಮ ಸಂಭವಿಸುವುದಿಲ್ಲ. ಆದ್ದರಿಂದ ಸಿದ್ಧತೆ ಎಂಬುದು ಬರೀ ಗೋದಾಮಿನ ಲೆಕ್ಕವಲ್ಲ. ಅದು ರಾಜಕೀಯ ಇಚ್ಛಾಶಕ್ತಿ. ಬರಪೀಡಿತ ತಾಲ್ಲೂಕುಗಳ ಶೀಘ್ರ ಘೋಷಣೆ, ಪಡಿತರ ಸಮಯಕ್ಕೆ ಸರಿಯಾಗಿ ತಲುಪುವಂತೆ ನೋಡಿಕೊಳ್ಳುವುದು, ಕುಡಿಯುವ ನೀರಿನ ಟ್ಯಾಂಕರ್ ಜಾಲ, ಜಾನುವಾರು ಶಿಬಿರ, ಉದ್ಯೋಗ ಖಾತರಿಯಡಿ ಕೆಲಸದ ಭರವಸೆ ಹಾಗೂ ರೈತನ ಸಾಲ ಮನ್ನಾ ಇವೆಲ್ಲವೂ ಒಂದು ಹಸಿವನ್ನು ತಡೆಯುವ ಗೋಡೆಗಳು. ಈ ಗೋಡೆಗಳನ್ನು ಮಳೆ ಕೈಕೊಡುವ ಮೊದಲೇ ಕಟ್ಟಬೇಕು. ನಂತರ ಅಲ್ಲ. ಈಗಿನ ಸರ್ಕಾರಗಳು ಇದನ್ನು ಯಶಸ್ವಿಯಾಗಿ ಮಾಡುವ ಶಕ್ತಿಯನ್ನು ಹೊಂದಿವೆ ಎಂಬುದರಲ್ಲಿ ಅನುಮಾನವಿಲ್ಲ.

ಆದ್ದರಿಂದ 1943 ಬರೀ ಇತಿಹಾಸವಲ್ಲ. ಅದು ಒಂದು ಕನ್ನಡಿಯೂ ಹೌದು. ಜೊತೆಗೆ ಒಂದು ಎಚ್ಚರಿಕೆಯೂ ಹೌದು. ಚರ್ಚಿಲ್‌ರ ಪಾಪವನ್ನು ನೆನಪಿಸಿಕೊಳ್ಳುವುದು ದ್ವೇಷವಲ್ಲ. ಬದಲಿಗೆ ಅಂದು ನಮ್ಮ ಮೇಲೆ ಅವರು ನಡೆಸಿದ ಅಮಾನವೀಯ ಸವಾರಿಯ ಕರಾಳ ನೆನಪಷ್ಟೇ. ಹಾಗೆಯೇ, ತೀರಾ ಈಗ ಮಾನವತೆಯ ವಕ್ತಾರರಂತೆ ಮಾತನಾಡುವ ಈ ಪಾಶ್ಚಿಮಾತ್ಯರಿಗೆ ಆಗಾಗ ನೆನಪಿಸಬೇಕಾದ ಸಂಗತಿಯೂ ಹೌದು.

◆

ಬಂಗಾಳದಲ್ಲಿ ಮತ್ತೊಮ್ಮೆ 'ವಂದೇ ಮಾತರಂ ಕ್ಷಣ!'

ಡಾ. ಮನಮೋಹನ ವೈದ್ಯ,
ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ, ಆರೆಸ್ಸೆಸ್

ನನಗೆ ಡಿಸೆಂಬರ್ 2025 ಮತ್ತು ಫೆಬ್ರವರಿ 2026ರಲ್ಲಿ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡುವ ಅವಕಾಶ ಲಭಿಸಿತ್ತು. ಅಲ್ಲಿನ ಹೆಚ್ಚಿನ ಜನರು ಆಡಳಿತ ಬದಲಾವಣೆಯನ್ನು ಅಪೇಕ್ಷಿಸುತ್ತಿರುವುದು ಅವರೊಡನೆಯ ಮಾತುಕತೆಯಿಂದ ಅರಿವಾಯಿತು. ಆದರೆ ಇಂತಹ ಬದಲಾವಣೆ ಸಾಧ್ಯವಾದೀತು ಎಂಬುದರ ಬಗ್ಗೆ ಹೆಚ್ಚಿನವರಿಗೆ ವಿಶ್ವಾಸವಿರಲಿಲ್ಲ. ಪರಿಸ್ಥಿತಿ ಹೇಗಿತ್ತೆಂದರೆ ಬದಲಾವಣೆ ನಡೆದರೆ ಅದುವೇ ಪವಾಡ ಎಂಬಂತಿತ್ತು. ಅಲ್ಲಿ ಮುಕ್ತ ಮತ್ತು ನ್ಯಾಯೋಚಿತ ಚುನಾವಣೆ ನಡೆಯಲು ಸೂಕ್ತವಾದ ವಾತಾವರಣ ನಿರ್ಮಿಸುವುದೇ ಅತೀ ದೊಡ್ಡ ಸವಾಲಾಗಿತ್ತು. ಆದರೆ ಚುನಾವಣಾ ಆಯೋಗ, ಸುಪ್ರೀಂಕೋರ್ಟು, ಕೇಂದ್ರ ಗೃಹ ಸಚಿವಾಲಯ ಹಾಗೂ ಭದ್ರತಾ ಸಿಬ್ಬಂದಿಗಳ ಸಹಕಾರದಿಂದ ಇದು ಸಾಧ್ಯವಾಯಿತು.

ಈ ಬಾರಿ ಬಂಗಾಳದ ಜನತೆ ಭಾರಿ ಪ್ರಮಾಣದಲ್ಲಿ ಮತ ಚಲಾಯಿಸಿದರು. ಕಳೆದ ಐದು ಚುನಾವಣೆಗಳಲ್ಲಿ ಸರಾಸರಿ ಮತದಾನ ಶೇ.79.22 ಆಗಿದ್ದರೆ ಈ ಬಾರಿ ಶೇ. 92.47 ಮತದಾನವಾಯಿತು. ಜನರು ಈ ಚುನಾವಣೆಯ ಒಂದು ನಾಗರಿಕ ಸಮರ ಎಂದು ಪರಿಗಣಿಸಿ ತಮ್ಮ ಮತ ಚಲಾಯಿಸಿದರು. ಫೆಬ್ರವರಿಯಲ್ಲಿ ನಾನು ಹಿರಿಯ ಪತ್ರಕರ್ತೆಯೊಬ್ಬರನ್ನು ಕೋಲ್ಕತ್ತಾದಲ್ಲಿ ಭೇಟಿಯಾಗಿದ್ದೆ. ಆಕೆ ಎಡಪಂಥೀಯ ಧೋರಣೆಯವಳು. ಮೇ 29ರಂದು ಮತ್ತೆ ಆಕೆಯನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ತಾನು 18ರ ಹರೆಯದಲ್ಲಿ ಮೊತ್ತ ಮೊದಲಾಗಿ ಮತದಾನ ಮಾಡಿದ್ದಾಗಿಯೂ ಆ ಬಳಿಕ ಎರಡನೆಯದಾಗಿ ಈ ವರ್ಷ ಮತದಾನ ಮಾಡಿದ್ದಾಗಿಯೂ ಆಕೆ ನುಡಿದಳು. ಪ್ರಸ್ತುತ ಆಕೆಗೆ 46 ವರ್ಷ. ಬಂಗಾಳದ ಪರಿಸ್ಥಿತಿಯಿಂದ ರೋಸಿ ದೀರ್ಘ ಕಾಲ ಮತದಾನ ಮಾಡದಿದ್ದ ಆಕೆ ಈಗ ಬದಲಾವಣೆ ಬಯಸಿ ಮತದಾನ ಮಾಡಿದ್ದರು.

ಈ ಚುನಾವಣೆಯು ಕೇವಲ ಬಿಜೆಪಿಯ ಗೆಲುವಲ್ಲ. ಬಂಗಾಳದ ಜನರು ಭಾರತದ ಧಾರ್ಮಿಕ ಪರಂಪರೆ ಮತ್ತು ಹಿಂದುತ್ವದ ಸಿದ್ಧಾಂತವನ್ನೂ ಗೆಲ್ಲಿಸಿದ್ದಾರೆ. ಪಶ್ಚಿಮ ಬಂಗಾಳದ ಅಸ್ಮಿತೆಯು ಮತ್ತೊಮ್ಮೆ ಜಾಗೃತಗೊಂಡಂತಾಗಿದೆ. ಈ ಗೆಲುವು ಬಂಗಾಳದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ಬಂಕಿಂಚಂದ್ರ, ರವೀಂದ್ರನಾಥ ಠಾಗೋರ್, ಜಗದೀಶ್‌ಚಂದ್ರ ಬೋಸ್ ಮುಂತಾದ ಮಹನೀಯರೆಲ್ಲರ ವಿಜಯವಾಗಿದೆ.

ಈ ಸಂದರ್ಭದಲ್ಲಿ ನನಗೆ ಬಂಗಾಳ ವಿಭಜನೆಯ ವಿರುದ್ಧ 1905ರಲ್ಲಿ ನಡೆದ ಕ್ರಾಂತಿಯ ನೆನಪಾಗುತ್ತದೆ. ಆ ಸಂದರ್ಭದಲ್ಲಿ ವಂದೇ ಮಾತರಂ ಘೋಷಣೆಯೊಂದಿಗೆ ಬಂಗಾಳದ ಜನರು ಸಿಡಿದೆದ್ದಿದ್ದರು. ಪ್ರತಿಭಟನೆಯ ಕಾವು ಎಷ್ಟಿತ್ತೆಂದರೆ ಬ್ರಿಟಿಷ್ ಆಡಳಿತವು ಬಂಗಾಳದ ವಿಭಜನೆಯನ್ನು 1911ರಲ್ಲಿ ಹಿಂತೆಗೆದುಕೊಳ್ಳಬೇಕಾಯಿತು. ಅದಷ್ಟೇ ಅಲ್ಲದೆ ಬ್ರಿಟಿಷರು ತಮ್ಮ ರಾಜಧಾನಿಯನ್ನು ಕೋಲ್ಕತ್ತಾದಿಂದ ದಿಲ್ಲಿಗೆ ಬದಲಾಯಿಸಿದರು. ಈ ಹಿನ್ನೆಲೆಯಲ್ಲಿ ನೋಡುವಾಗ ಈ ಬಾರಿಯ ಚುನಾವಣೆಯಲ್ಲಿ ಭಾರತದ ಧಾರ್ಮಿಕ ಪರಂಪರೆ ಮತ್ತು ಹಿಂದುತ್ವ ಸಿದ್ಧಾಂತಕ್ಕೆ ದೊರಕಿದ ವಿಜಯವು ಮತ್ತೊಂದು "ವಂದೇಮಾತರಂ ಕ್ಷಣ" ಎಂದು ಬಣ್ಣಿಸಬಹುದು.

ವಂದೇಮಾತರಂ ಗೀತೆಯನ್ನು ಬಂಕಿಮಚಂದ್ರ ಚಟ್ಟೋಪಾಧ್ಯಾಯರು 1875ರಲ್ಲಿ ತಮ್ಮ ಆನಂದಮಠ ಕಾದಂಬರಿಯಲ್ಲಿ ಬರೆದಿದ್ದರು. 1896ರಲ್ಲಿ ಅದನ್ನು ರವೀಂದ್ರನಾಥ ಠಾಗೋರ್ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮೊತ್ತಮೊದಲು ಹಾಡಿದ್ದರು. ಅಲ್ಲಿಂದ ಬಳಿಕ ಬಂಗಾಳದ ವಿಭಜನೆಯ ವಿರುದ್ಧವಾಗಿ ಜನರು ಪ್ರತಿಭಟನೆಯ ಸಂದರ್ಭದಲ್ಲಿ ವಂದೇಮಾತರಂ ಗೀತೆಯನ್ನು ರಣಮಂತ್ರವನ್ನಾಗಿ ಮಾಡಿಕೊಂಡರು. ಇಡೀ ದೇಶವು ಬಂಗಾಳದ ವಿಭಜನೆಯ ವಿರುದ್ಧವಾಗಿ ಏಕತೆಯಿಂದ ಹೋರಾಡಿತು. ವಂದೇಮಾತರಂ ಜನರ ನರನಾಡಿಗಳಲ್ಲಿ ದೇಶಭಕ್ತಿಯ ಸೆಲೆಗಳನ್ನು ಎಬ್ಬಿಸಿತು. ಬಹಳಷ್ಟು ಕ್ರಾಂತಿಕಾರಿಗಳು ವಂದೇಮಾತರಂ ಘೋಷಣೆಯೊಂದಿಗೆ ಗಲ್ಲಿನ ಕುಣಿಕೆಗೆ ಕೊರಳೊಡ್ಡಿದರು.

1905ರ ಅಕ್ಟೋಬರ್ 16ರಂದು ಕಲ್ಕತ್ತಾದಲ್ಲಿ ನಡೆದ ರಕ್ಷಾಬಂಧನ ಕಾರ್ಯಕ್ರಮ ಐತಿಹಾಸಿಕವಾಗಿತ್ತು. ಸಾಧಾರಣವಾಗಿ ರಕ್ಷಾಬಂಧನವು ಶ್ರಾವಣಮಾಸದಲ್ಲಿ ಅಂದರೆ ಆಗಸ್ಟ್‌ನಲ್ಲಿ ಬರುತ್ತದೆ. ಆದರೆ ಬಂಗಾಳದ ವಿಭಜನೆಯನ್ನು ವಿರೋಧಿಸಿ ಅಕ್ಟೋಬರ್ 16ರಂದು ರಕ್ಷಾಬಂಧನ ಆಚರಿಸಲಾಯಿತು. ಅಂದು ಕಲ್ಕತ್ತಾದ ಹಿಂದು–ಮುಸ್ಲಿಂ ಪುರುಷರು ಮತ್ತು ಮಹಿಳೆಯರೆಲ್ಲರೂ ಪವಿತ್ರ ಗಂಗಾನದಿಯಲ್ಲಿ ಮಿಂದು ಪರಸ್ಪರರ ಕೈಗಳಿಗೆ ರಕ್ಷೆಯನ್ನು ಕಟ್ಟಿ ಬಂಗಾಳವನ್ನು ವಿಭಜನೆಯಾಗಲು ಬಿಡಲಾರೆವೆಂಬ ಪಣ ತೊಟ್ಟರು.

ವಂದೇ ಮಾತರಂನ್ನು ಮೊದಲು ಸ್ವಾತಂತ್ರ್ಯ ಘೋಷವನ್ನಾಗಿ ಮಾಡಿದವರು ಶ್ರೀ ಅರವಿಂದರು. ಅವರು 'ವಂದೇಮಾತರಂ' ಹೆಸರಿನ ಪತ್ರಿಕೆಯೊಂದನ್ನು ಕೂಡಾ ಆರಂಭಿಸಿದರು. ಮೇಡಂ ಬಿಕಾಜಿ ಕಾಮಾ ಅವರು ಜರ್ಮನಿಯಲ್ಲಿ ಸ್ವತಂತ್ರ ಭಾರತದ ಧ್ವಜವನ್ನು ಅನಾವರಣ ಮಾಡಿದಾಗ ಅದರಲ್ಲಿ ವಂದೇಮಾತರಂ ಎಂದು ಬರೆದಿತ್ತು. ಅಲ್ಲಿಂದ ಬಳಿಕ ವಂದೇಮಾತರಂ ಸ್ವಾತಂತ್ರ್ಯ ಗೀತೆಯಾಯಿತು. ವಂದೇಮಾತರಂ ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚುತ್ತಿದ್ದುದನ್ನು ಕಂಡ ಬ್ರಿಟಿಷ್ ಸರಕಾರವು 1906ರಲ್ಲಿ ಆ ಗೀತೆಯನ್ನು ಸಾರ್ವಜನಿಕವಾಗಿ ಹಾಡುವುದನ್ನು ನಿಷೇಧಿಸಿತು. ಆದರೆ ಈ ನಿಷೇಧವು ಬಂಗಾಳದ ಜನತೆಯಲ್ಲಿ ಸ್ವಾತಂತ್ರ್ಯದ ಸ್ಫೂರ್ತಿಯನ್ನು ಇನ್ನಷ್ಟು ಹೆಚ್ಚಿಸಿತೇ ಹೊರತು ಕಡಿಮೆ ಮಾಡಲಿಲ್ಲ.

ಈ ಸ್ವಾತಂತ್ರ್ಯದ ಕಿಚ್ಚು ಬಂಗಾಳಕ್ಕಷ್ಟೇ ಸೀಮಿತವಾಗಲಿಲ್ಲ. ಬಳಿಕ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿಯೊಂದು ಸಮ್ಮೇಳನದಲ್ಲೂ ವಂದೇಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದು ರೂಢಿಯಾಯಿತು. ಕಾಂಗ್ರೆಸ್‌ನ ಎಲ್ಲಾ ಸದಸ್ಯರು, ಮುಸ್ಲಿಮರಾಗಿರಲಿ ಹಿಂದುಗಳಾಗಿರಲಿ, ವಂದೇಮಾತರಂನ್ನು ಹಾಡುತ್ತಿದ್ದರು. ಆದರೆ 1921ರ ಬಳಿಕ ಬ್ರಿಟಿಷರ ಒಡೆದಾಳುವ ನೀತಿಯ ಪರಿಣಾಮವಾಗಿ ಕೋಮುವಾದಿ ಶಕ್ತಿಗಳು ಕಾಂಗ್ರೆಸ್‌ನಲ್ಲೂ ಪ್ರಭಾವ ಹೆಚ್ಚಿಸಿಕೊಳ್ಳತೊಡಗಿದವು. ಅದರಿಂದಾಗಿ ಕಾಂಗ್ರೆಸ್ ಖಿಲಾಫತ್ ಆಂದೋಲನವನ್ನು ಬೆಂಬಲಿಸುವಂತಾಯಿತು. ಅದರ ಜತೆಗೇ ವಂದೇಮಾತರಂನ್ನು ಕೋಮುವಾದಿಯೆಂದು ಬಿಂಬಿಸಿ ಅದನ್ನು ಹಾಡುವುದನ್ನು ವಿರೋಧಿಸಲಾಯಿತು. 1920ರ ತನಕ ಸ್ವಾತಂತ್ರ್ಯ ಹೋರಾಟದ ಜೀವಮಂತ್ರವಾಗಿದ್ದ ವಂದೇಮಾತರಂ 1923ರ ಬಳಿಕ ಕೋಮುವಾದಿ ಎಂದು ಹಣೆಪಟ್ಟಿ ಕಟ್ಟಿಕೊಂಡಿತು. ಅಲ್ಲಿಂದಲೇ ಭಾರತದ ವಿಭಜನೆಗೆ ಬೀಜ ಬಿತ್ತಲಾಯಿತು ಎನ್ನಬಹುದು.

ಭಾರತೀಯ ಚಿಂತನೆಯಲ್ಲಿ ಮನುಷ್ಯನನ್ನು ಕೇವಲ ದೇಹ ಎಂಬುದಾಗಿ ಪರಿಗಣಿಸುವುದಿಲ್ಲ. ಪಂಚಭೂತಗಳ ಸಂಗಮ ಎಂದು ಹೇಳಲಾಗುತ್ತದೆ. ಅದೇರೀತಿಯಲ್ಲಿ ವಂದೇಮಾತರಂ ಕೂಡಾ ಭಾರತದ ಪೂರ್ಣಚಿತ್ರಣ ನೀಡುತ್ತದೆ. ಗೀತೆಯ ಮೊದಲ ಚರಣವು ಭರತಭೂಮಿಯನ್ನು ಬಣ್ಣಿಸಿದರೆ, ಎರಡನೇ ಚರಣ ದೇಶದ ಜನರ ವರ್ಣನೆ ನೀಡುತ್ತದೆ. ಮುಂದಿನ ಚರಣಗಳು ಭಾರತದ ಮನಸ್ಸು, ಬುದ್ಧಿವಂತಿಕೆ, ಜೀವನಶಕ್ತಿ ಮತ್ತು ಧಾರ್ಮಿಕ ಪ್ರಜ್ಞೆಯ ಪರಿಕಲ್ಪನೆ ಬಿಂಬಿಸುತ್ತವೆ.

ತುಮಿ ವಿದ್ಯಾ ತುಮಿ ಧರ್ಮ ಎಂಬ ವಾಕ್ಯದಲ್ಲಿ ವಿದ್ಯೆ ಎಂಬುದು ದೇಶದ ಧಾರ್ಮಿಕ ಬುದ್ಧಿಮತ್ತೆಯನ್ನು ಬಣ್ಣಿಸಿದರೆ, ಧರ್ಮ ಪದವು 'ನಾನು' ಎಂಬ ವ್ಯಕ್ತಿಗತ ವಿಚಾರ ಬಿಟ್ಟು 'ನಾವು' ಎಂಬ ಸಮಷ್ಟಿಗೆ ಆದ್ಯತೆ ಕೊಡುತ್ತದೆ.

ಸ್ವಾತಂತ್ರ್ಯದ ಬಳಿಕ ದೇಶದ ಮುಂದಾಳುಗಳು ಲೋಕಸಭೆಗೆ 'ಧರ್ಮಚಕ್ರ ಪ್ರವರ್ತನಾಯ' ಎಂದ ಸಂದೇಶವಾಕ್ಯ ನೀಡಿದರೆ, ರಾಜ್ಯಸಭೆಗೆ 'ಸತ್ಯಂ ವದ, ಧರ್ಮಂ ಚರ' ಹಾಗೂ ಸುಪ್ರೀಂ ಕೋರ್ಟಿಗೆ 'ಯತೋ ಧರ್ಮಸ್ತತೋ ಜಯಃ' ಎಂಬ ಸಂದೇಶ ವಾಕ್ಯ ನೀಡಿದರು. ರಾಷ್ಟ್ರಧ್ವಜದಲ್ಲಿ ಧರ್ಮಚಕ್ರ ಅಳವಡಿಸಲಾಯಿತು. ಈ ಧರ್ಮ ಮತ್ತು ವಿದ್ಯೆಗಳು ಭಾರತ ಮಾತೆಯಲ್ಲಿ ನೆಲೆಸಿವೆ ಎಂಬುದಾಗಿ ನಂಬಲಾಗುತ್ತಿದೆ. ಭಾರತ ಮಾತೆಯು ಶಕ್ತಿ ದೇವತೆ ದುರ್ಗೆ, ಸಂಪತ್ತಿನ ದೇವತೆ ಲಕ್ಷ್ಮೀ ಮತ್ತು ವಿದ್ಯಾದೇವತೆ ಸರಸ್ವತಿ ಎಲ್ಲರನ್ನೊಳಗೊಂಡ ಅಪರಾವತಾರ ಎಂದು ಪರಿಗಣಿಸಲಾಗಿದೆ. ಹಾಗಾಗಿ 1905ರಿಂದ ಆರಂಭಿಸಿ ರಾಷ್ಟ್ರೀಯ ಕಾಂಗ್ರೆಸಿನ ಪ್ರತೀ ಸಮ್ಮೇಳನದಲ್ಲೂ ವಂದೇಮಾತರಂ ಗೀತೆಯನ್ನು ಪೂರ್ಣವಾಗಿ ಹಾಡಲು ಆರಂಭವಾಯಿತು. ಇಡೀ ಗೀತೆ ಹಾಡಲು 3 ನಿಮಿಷ ತಗಲುತ್ತದೆ. ಇದರಲ್ಲಿ ಕೋಮುವಾದ ಎಲ್ಲಿಂದ ಬಂತು? ಮುಂದಿನ ದಿನಗಳಲ್ಲಿ ವಿಭಜಕ ಮತ್ತು ಕೋಮುವಾದಿ ಶಕ್ತಿಗಳ ಕಾರಣದಿಂದಾಗಿ ವಂದೇಮಾತರಂಗೆ ವಿರೋಧ ಹೆಚ್ಚತೊಡಗಿತು. ಆದರೆ ವಂದೇಮಾತರಂನಲ್ಲಿ ಕೋಮುವಾದವನ್ನು ಕಾಣುವವರು ತಮ್ಮ ಅಜ್ಞಾನವನ್ನು ಪ್ರದರ್ಶಿಸುತ್ತಿದ್ದಾರೆ ಅಥವಾ ಅವರು ದೇಶ ವಿಭಜಕ ಶಕ್ತಿಗಳ ಕೈವಶವಾಗಿ ವರ್ತಿಸುತ್ತಿದ್ದಾರೆ ಎಂದೇ ಅರ್ಥ.

2026ರ ಚುನಾವಣಾ ಫಲಿತಾಂಶವು ಬಂಗಾಳದಲ್ಲಿ 1905ರಿಂದ 1911ರ ಅವಧಿಯಲ್ಲಿ ಕಂಡುಬಂದಂತಹ ಜಾಗೃತಿ, ದೃಢಬದ್ಧತೆ, ರಾಷ್ಟ್ರೀಯ ಪ್ರಜ್ಞೆ, ನಿರ್ಣಾಯಕ ಕರ್ತವ್ಯಶಕ್ತಿಯ ನೆನಪುಗಳನ್ನು ಮರುಕಳಿಸುವಂತೆ ಮಾಡಿದೆ. 1905ರಲ್ಲಿ ಬ್ರಿಟಿಷರು ಜಿಹಾದಿ ಉಗ್ರರೊಂದಿಗೆ ಸೇರಿಕೊಂಡು ಭಾರತದ ರಾಷ್ಟ್ರೀಯ ಅಸ್ಮಿತೆಯನ್ನು ನಾಶಪಡಿಸಲು ಯತ್ನಿಸಿದಂತೆಯೇ 2026ರಲ್ಲಿ ಕೂಡಾ ವಿವೇಚನಾರಹಿತ ರಾಜಕಾರಣಿಗಳು, ಜಿಹಾದಿ ಉಗ್ರರು ಮತ್ತು ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು ಬಂಗಾಳವು ಭಾರತದೊಂದಿಗಿನ ಸಂಪರ್ಕ ಕಡಿಯುವಂತೆ ಮಾಡಲು ಯತ್ನಿಸಿದ್ದರು.

1905ರಲ್ಲಿ ತಮ್ಮ ಅಸ್ತಿತ್ವಕ್ಕೇ ಸಂಚಕಾರ ಬಂದಾಗ ಒಗ್ಗೂಡಿ ಹೋರಾಡಿದ ಹಿಂದುಗಳು 2026ರಲ್ಲೂ ಅದೇ ರೀತಿಯಲ್ಲಿ ಹೋರಾಟ ನಡೆಸಿದರು. ಇದೀಗ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮುಂತಾದವರ ಸ್ಫೂರ್ತಿಯು ಮತ್ತೊಮ್ಮೆ ಜಾಗೃತಗೊಂಡಂತಾಗಿದೆ. ಎಲ್ಲರನ್ನು ಒಳಗೊಳ್ಳುವ, ಸಮಗ್ರ, ಆಧ್ಯಾತ್ಮಿಕ ತತ್ವವಾದ ಹಿಂದುತ್ವವು ಮತ್ತೊಮ್ಮೆ ಶಕ್ತಿಶಾಲಿ ಹಾಗೂ ಸ್ಪಷ್ಟ ಅಭಿವ್ಯಕ್ತಿಯನ್ನು ಸಾರಿದೆ.

ಇದನ್ನು ಸಾಧ್ಯಗೊಳಿಸಿದ ಎಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳು. ಬಂಗಾಳದ ಜನರು ಪ್ರಜಾತಂತ್ರ ಮತ್ತು ಬದಲಾವಣೆಯೆಡೆಗೆ ವ್ಯಕ್ತಪಡಿಸಿದ ಬದ್ಧತೆಯು ಐತಿಹಾಸಿಕ ಫಲಿತಾಂಶಕ್ಕೆ ಕಾರಣವಾಗಿದೆ.

ಅನುಮಾನವೇ ಇಲ್ಲ, ಇದು ಬಂಗಾಳದ 'ವಂದೇ ಮಾತರಂ ಕ್ಷಣ'

◆

ಜಾಗತಿಕ ಹೆಬ್ಬಾಗಿಲು ತೆರೆದ ಮೋದಿಯವರ ವ್ಯಾಪಾರ ದೃಷ್ಟಿಕೋನ

ಪಿಯೂಷ್ ಗೋಯಲ್,
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು

ಜುಲೈ 15ರಿಂದ ಜಾರಿಗೆ ಬರಲಿರುವ ಬ್ರಿಟನ್ ಜತೆಗಿನ ಐತಿಹಾಸಿಕ ವ್ಯಾಪಾರ ಒಪ್ಪಂದವು ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದಲ್ಲದೇ ಭಾರತೀಯ ರೈತರು, ಎಂಎಸ್‌ಎಂಇ, ಮೀನುಗಾರರು, ನವೋದ್ಯಮಗಳು ಮತ್ತು ಕುಶಲಕರ್ಮಿಗಳಿಗೆ ಸಮೃದ್ಧಿ ತರಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ವಿಕಸಿತ ಭಾರತ 2047' ಧ್ಯೇಯವನ್ನು ಮುಂದಕ್ಕೆ ಕೊಂಡೊಯ್ಯಲು ಇದು ಉದ್ಯೋಗಗಳನ್ನು ಸೃಷ್ಟಿಸಿ, ಭಾರತೀಯ ನಾಗರಿಕರಿಗೆ ಸಮಂಜಸ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಸರಕುಗಳನ್ನು ಉತ್ತೇಜಿಸುತ್ತದೆ.

ಭಾರತ ಮತ್ತು ಬ್ರಿಟನ್ ನಡುವಿನ ಪರಿವರ್ತಕ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ (ಸಿ.ಇ.ಟಿ.ಎ), ಬ್ರಿಟನ್‌ನಲ್ಲಿ ಭಾರತೀಯ ಸರಕುಗಳಿಗೆ, ವಿಶೇಷವಾಗಿ ಕಾರ್ಮಿಕ–ತೀವ್ರ ವಲಯಗಳಿಗೆ ಸಮಗ್ರ ಮಾರುಕಟ್ಟೆ ಪ್ರವೇಶವನ್ನು ಉಂಟುಮಾಡಿವೆ. ಈ ಪರಸ್ಪರ ಲಾಭದಾಯಕ ಒಪ್ಪಂದವು ಸುಮಾರು 99% ಸುಂಕದ ಮಾರ್ಗಗಳಲ್ಲಿನ ಸುಂಕಗಳನ್ನು ತಕ್ಷಣವೇ ತೆಗೆದುಹಾಕುತ್ತದೆ. ಇದು ವ್ಯಾಪಾರದ ಮೌಲ್ಯದ 100% ಅನ್ನು ಒಳಗೊಂಡಿರುತ್ತದೆ ಮತ್ತು ಭಾರತೀಯ ರಫ್ತುಗಳಿಗೆ ಅಗಾಧ ಅವಕಾಶಗಳನ್ನು ಸೃಷ್ಟಿಸುತ್ತದೆ. ಸಿ.ಇ.ಟಿ.ಎ ಜನಕೇಂದ್ರಿತ ಒಪ್ಪಂದವಾಗಿದ್ದು ಕಳೆದ ವರ್ಷ ಪ್ರಧಾನಮಂತ್ರಿ ಮೋದಿ ಮತ್ತು ಬ್ರಿಟಿಷ್ ಪ್ರಧಾನಮಂತ್ರಿ ಸರ್ ಕೀರ್ ಸ್ಟಾರ್ಮರ್ ಅವರ ಸಮ್ಮುಖದಲ್ಲಿ ಸಹಿ ಹಾಕಲಾಗಿತ್ತು. ವಿಶಾಲವಾದ ಬ್ರಿಟನ್ ಮಾರುಕಟ್ಟೆಗೆ ಹೆಚ್ಚಿದ ಸಮುದ್ರಾಹಾರ ರಫ್ತುಗಳಿಂದ ಮೀನುಗಾರರು ಪ್ರಯೋಜನ ಪಡೆಯುತ್ತಾರೆ. ಕಾರ್ಮಿಕರಿಗೆ ಹೊಸ ಉದ್ಯೋಗಾವಕಾಶಗಳು ಸಿಗಲಿವೆ. ಮಹಿಳಾ ಉದ್ಯಮಿಗಳು, ಯುವಕರು, ನವೋದ್ಯಮಗಳು ಮತ್ತು ಎಂಎಸ್‌ಎಂಇಗಳಿಗೆ ಜಾಗತಿಕ ಮೌಲ್ಯ ಸರಪಳಿಗಳಿಗೆ ಉತ್ತಮ ಪ್ರವೇಶ ದೊರೆಯಲಿದೆ. ಹೆಚ್ಚಿನ ಪ್ರಯಾಣ ಮತ್ತು ಮಾನ್ಯತೆಯ ಅವಕಾಶಗಳಿಂದ ವೃತ್ತಿಪರರು ಲಾಭ ಪಡೆಯುತ್ತಾರೆ.

ಅರಿಶಿಣ, ಕಾಳುಮೆಣಸು, ಏಲಕ್ಕಿ ಮತ್ತು ಮಾವಿನ ತಿರುಳು, ಉಪ್ಪಿನಕಾಯಿ ಮತ್ತು ಬೇಳೆಕಾಳುಗಳಂತಹ ಸಂಸ್ಕರಿಸಿದ ಸರಕುಗಳು ಸುಂಕ–ಮುಕ್ತ ಪ್ರವೇಶವನ್ನು ಪಡೆಯುತ್ತವೆ. ಹೆಚ್ಚಿನ ಕೃಷಿ ರಫ್ತುಗಳು ಕೃಷಿಕರ ಆದಾಯ ಹೆಚ್ಚಿಸುತ್ತವೆ. ಜೊತೆಗೆ ಗುಣಮಟ್ಟ, ಪ್ಯಾಕೇಜಿಂಗ್ ಮತ್ತು ಪ್ರಮಾಣೀಕರಣಕ್ಕಾಗಿ ಹೆಚ್ಚಿನ ಉತ್ತೇಜನ ನೀಡುತ್ತವೆ. ಇದು ಕೃಷಿ ಮೌಲ್ಯ ಸರಪಳಿಯಾದ್ಯಂತ ಹಲವಾರು ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಇದೇ ವೇಳೆ ದೇಶೀಯ ರೈತರನ್ನು ರಕ್ಷಿಸಲು ಭಾರತದ ಅತ್ಯಂತ ಸೂಕ್ಷ್ಮ ಕೃಷಿ ವಲಯಗಳನ್ನು ಒಪ್ಪಂದದಿಂದ ಹೊರಗಿಡಲಾಗಿದೆ. ವಿಶೇಷವಾಗಿ ಹೈನು ಉತ್ಪನ್ನಗಳು, ಏಕದಳ ಧಾನ್ಯಗಳು, ಸಿರಿಧಾನ್ಯಗಳು, ಸೇಬು, ಓಟ್ಸ್ ಮತ್ತು ಅಡುಗೆ ಎಣ್ಣೆ ಕ್ಷೇತ್ರಗಳನ್ನು ಒಪ್ಪಂದದಿಂದ ಕೈಬಿಡಲಾಗಿದೆ. ಈ ವಿನಾಯಿತಿಯು ಆಹಾರ ಭದ್ರತೆ, ದೇಶೀಯ ಬೆಲೆ ಸ್ಥಿರತೆ ಮತ್ತು ದುರ್ಬಲ ಕೃಷಿ ಸಮುದಾಯಗಳಿಗೆ ಆದ್ಯತೆ ನೀಡುವ ಮೋದಿ ಸರ್ಕಾರದ ಕಾರ್ಯತಂತ್ರವನ್ನು ಪ್ರತಿಬಿಂಬಿಸುತ್ತವೆ.

ಭಾರತಕ್ಕೆ ರಫ್ತು ಆಸಕ್ತಿಯ ಎಲ್ಲಾ ಪ್ರಮುಖ ಸೇವಾ ವಲಯಗಳು ಮತ್ತು 137 ಉಪ-ವಲಯಗಳನ್ನು ಒಳಗೊಂಡಂತೆ ಬ್ರಿಟನ್ ಅತ್ಯಂತ ಸಮಗ್ರ ಸೇವಾ ಬದ್ಧತೆ ಒದಗಿಸಿದೆ. ಹೆಚ್ಚಿದ ಮಾರುಕಟ್ಟೆ ಪ್ರವೇಶ ಮತ್ತು ನಿಯಂತ್ರಕ ನಿಶ್ಚಿತತೆಯಿಂದ ಐಟಿ ಮತ್ತು ಐಟಿ ಆಧಾರಿತ ಸೇವೆಗಳು, ಹಣಕಾಸು ಸೇವೆಗಳು, ವೃತ್ತಿಪರ ಸೇವೆಗಳು, ಆರೋಗ್ಯ ರಕ್ಷಣೆ, ಶಿಕ್ಷಣ, ಎಂಜಿನಿಯರಿಂಗ್, ದೂರಸಂಪರ್ಕ ಮತ್ತು ಸಲಹಾ ಸೇವೆಗಳಲ್ಲಿ ಭಾರತೀಯ ಸೇವಾ ಪೂರೈಕೆದಾರರು ಪ್ರಯೋಜನ ಪಡೆಯಲಿದ್ದಾರೆ. ಪ್ರಧಾನಮಂತ್ರಿ ಮೋದಿಯವರ ನಾಯಕತ್ವದಲ್ಲಿ, ಮುಕ್ತ ವ್ಯಾಪಾರ ಒಪ್ಪಂದಗಳು (ಎಫ್.ಟಿ.ಎ) ಸರಕುಗಳು ಮತ್ತು ಸೇವೆಗಳನ್ನು ಮೀರಿ ಹೊಸ ಮಾನದಂಡಗಳನ್ನು ಸ್ಥಾಪಿಸುತ್ತವೆ. ಇ.ಎಫ್.ಟಿ.ಎ ದೇಶಗಳಾದ ಸ್ವಿಟ್ಜರ್ಲೆಂಡ್, ನಾರ್ವೆ, ಐಸ್ಲ್ಯಾಂಡ್, ಲಿಚ್ಟೆನ್‌ಸ್ಟೈನ್ ಜೊತೆ ಭಾರತವು 100 ಶತಕೋಟಿ ಡಾಲರ್ ಹೂಡಿಕೆಯ ಬದ್ಧತೆ ಭದ್ರಪಡಿಸಿಕೊಂಡಿದ್ದು ಇದು 1 ದಶಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ನ್ಯೂಜಿಲೆಂಡ್‌ನೊಂದಿಗೆ ಮುಕ್ತ ವ್ಯಾಪಾರ ಒಪ್ಪಂದದ ಮೂಲಕ ಭಾರತವು 15 ವರ್ಷಗಳಲ್ಲಿ 20 ಶತಕೋಟಿ ಡಾಲರ್ ಹೂಡಿಕೆಯ ಬದ್ಧತೆ ಭದ್ರಪಡಿಸಿಕೊಂಡಿದೆ. ಇದೇ ವೇಳೆ, ಆಸ್ಟ್ರೇಲಿಯಾ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದವು ಭಾರತೀಯ ಐಟಿ ಕಂಪನಿಗಳಿಗೆ ತೊಡಕಾಗಿದ್ದ ದ್ವಿತೆರಿಗೆ ಸಮಸ್ಯೆಯನ್ನು ಪರಿಹರಿಸಿದೆ.

2014ರಲ್ಲಿ ಭಾರತದ ಆರ್ಥಿಕತೆಯು ಸಂಕಷ್ಟದಲ್ಲಿತ್ತು. ಸಂಭಾವ್ಯ ಹೂಡಿಕೆದಾರರು ಅದರ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದರು. ನೀತಿಗಳ ನಿರ್ಲಕ್ಷ್ಯ, ಮತ್ತು ಭಾರಿ ಭ್ರಷ್ಟಾಚಾರ ಹಗರಣಗಳಿಂದ ಗುರುತಿಸಲ್ಪಟ್ಟ ಒಂದು ದಶಕದ ನಂತರ ಭಾರತವನ್ನು ದುರ್ಬಲ ಐದು ಆರ್ಥಿಕತೆಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಮೋದಿ ಸರ್ಕಾರವು ಭಾರತೀಯ ಆರ್ಥಿಕತೆಯ ಮೇಲೆ ಜಾಗತಿಕ ವಿಶ್ವಾಸವನ್ನು ಮರುನಿರ್ಮಾಣ ಮಾಡಲು ಮತ್ತು ಹೂಡಿಕೆದಾರರಿಗೆ ಅದನ್ನು ಆಕರ್ಷಕವಾಗಿಸಲು ದೃಢವಾದ ಕಾರ್ಯವಿಧಾನವನ್ನು ಅಳವಡಿಸಿಕೊಂಡಿತು. ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡುವುದು ಮುಂದಿನ ಹಂತವಾಗಿತ್ತು. ಭಾರತದ ಪ್ರಮುಖ ವ್ಯಾಪಾರ ಹಿತಾಸಕ್ತಿಗಳೊಂದಿಗೆ ನೇರವಾಗಿ ಸ್ಪರ್ಧಿಸದ, ದೊಡ್ಡ ಮಾರುಕಟ್ಟೆಗಳನ್ನು ಒದಗಿಸುವ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಸರ್ಕಾರವು ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮುಂದುವರಿಸಿತು. ಇದು [illegible] ಸ್ಪರ್ಧಿಗಳಿಗೆ ಭಾರತದ ಬಾಗಿಲುಗಳನ್ನು ತೆರೆಯುವ ಮೂಲಕ ಭಾರತೀಯ ವ್ಯವಹಾರಗಳಿಗೆ ಅಪಾಯವನ್ನುಂಟುಮಾಡುವ ಹಿಂದಿನ ಸರ್ಕಾರದ ವಿಧಾನಕ್ಕಿಂತ ಭಿನ್ನವಾಗಿ, ಪರಸ್ಪರ ಲಾಭದಾಯಕ ಸ್ವಭಾವವನ್ನು ಸ್ಪಷ್ಟಪಡಿಸಿತು.

ಇಂದಿನ ಅನಿಶ್ಚಿತ ಜಗತ್ತಿನಲ್ಲಿ, ಪ್ರಧಾನಮಂತ್ರಿ ಮೋದಿಯವರ ನಾಯಕತ್ವದ ಭಾರತವನ್ನು ಚೇತರಿಸಿಕೊಳ್ಳುವ ಆರ್ಥಿಕತೆ ಮತ್ತು ವಿಶ್ವಾಸಾರ್ಹ ಪಾಲುದಾರ ಎಂದು ವ್ಯಾಪಕವಾಗಿ ಗೌರವಿಸಲಾಗುತ್ತದೆ. ಜೊತೆಗೆ ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಸ್ಥಾನ ಪಡೆದಿದೆ. ಪ್ರಮುಖ ಆರ್ಥಿಕತೆಗಳ ನಡುವಿನ ಸಮಾನ ಮತ್ತು ಮಹತ್ವಾಕಾಂಕ್ಷೆಯ ವ್ಯಾಪಾರ ಒಪ್ಪಂದಗಳಿಗೆ ಸಿ.ಇ.ಟಿ.ಎ ಒಂದು ಮಾನದಂಡವಾಗಿದೆ. ಇದು ಭಾರತದ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ [illegible] ಆಕರ್ಷಕ ಜಾಗತಿಕ ಅವಕಾಶಗಳನ್ನು ತೆರೆಯುತ್ತದೆ. 'ನವ ಭಾರತ' ಹೇಗೆ ವ್ಯವಹಾರ ಮಾಡುತ್ತದೆ ಎಂಬುದಕ್ಕೆ ಇದೊಂದು ಉಜ್ವಲ ಉದಾಹರಣೆಯಾಗಿದೆ.

◆

ಕಿರುಸುದ್ದಿ

ಯುವಕ ಆತ್ಮಹತ್ಯೆ ಪ್ರಕರಣ: ಜೀವನದಲ್ಲಿ ಜಿಗುಪ್ಸೆಯೇ ಕಾರಣ

• **ಕಟಪಾಡಿ:** ಉದ್ಯಾವರ ಪಾಪನಾಶಿನಿ ಹೊಳೆಯ ಮೇಲ್ಸೇತುವೆಯಿಂದ ಜೂ.23ರಂದು ಹೊಳೆಗೆ ಹಾರಿ ಆತ್ಮಹತ್ಯೆಗೆ ಶರಣಾದ ಯುವಕ ಉದ್ಯಾವರ ಪಿತ್ರೋಡಿಯ ಹರ್ಷಿತ್ ಶೆಟ್ಟಿ (28) ಆತ್ಮಹತ್ಯೆಗೆ ಜೀವನದಲ್ಲಿ ಜಿಗುಪ್ಸೆಯೇ ಕಾರಣವಾಗಿದೆ. ಮಲ್ಪೆಯ ದ್ವಿತಿ ಕನ್ಸಂಟೆನ್ಸಿಯಲ್ಲಿ ಎಕೌಂಟೆಂಟ್ ಆಗಿ ಕೆಲಸ ಮಾಡಿಕೊಂಡಿದ್ದು, ಜೂ.22ರ ರಾತ್ರಿ 10 ಗಂಟೆಯಿಂದ ಜೂ. 23 ರ ಬೆಳಗ್ಗೆ 6 ಗಂಟೆಯ ಮಧ್ಯದ ಅವಧಿಯಲ್ಲಿ ಮನೆಯಿಂದ ಹೋದಾತ ಕಾಣೆಯಾಗಿದ್ದು, ಪಾಪನಾಶಿನಿ ನದಿಯಲ್ಲಿ ಶವ ಪತ್ತೆಯಾಗಿತ್ತು. ಮೃತರು ಯಾವುದೋ ವಿಚಾರದಲ್ಲಿ ಜೀವನದಲ್ಲಿ ಜಿಗುಪ್ಸೆಗೊಂಡು ಉದ್ಯಾವರ ಸೇತುವೆಯಿಂದ ಪಾಪನಾಶಿನಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಣಜದ ಹುಳುಗಳ ದಾಳಿಗೆ ವೃದ್ಧೆ ಬಲಿ

• **ಕಾಸರಗೋಡು:** ಕಣಜದ ಹುಳುಗಳ ದಾಳಿಗೊಳಗಾಗಿ ವೃದ್ಧೆ ಸಾವನ್ನಪ್ಪಿದ ಘಟನೆ ನಡೆದಿದೆ. ಬೋವಿಕ್ಕಾನ ಬಳಿಯ ಎರಿಂಞಿಪುಳ ಮಲಾಂಕಡಪ್ಪು ನಿವಾಸಿ ಟಿ.ನಾರಾಯಣಿ (77) ಸಾವನ್ನಪ್ಪಿದ ದುರ್ದೈವಿ. ಕಳೆದ ಶುಕ್ರವಾರ ಅವರು ತಮ್ಮ ಹಿತ್ತಿಲಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕಣದ ಹುಳುಗಳು ದಾಳಿ ನಡೆಸಿದ್ದವು. ಇದರಿಂದ ಗಂಭೀರ ಗಾಯಗೊಂಡ ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಿದರೂ ಫಲಕಾರಿಯಾಗದೆ ಆಸುನೀಗಿದರು. ಮೃತರು ಮಕ್ಕಳಾದ ಟಿ.ದಾಮೋದರನ್, ಟಿ.ವಿಜಯಕುಮಾರಿ ಅವರನ್ನು ಅಗಲಿದ್ದಾರೆ.

ಕಿನ್ನಿಮೂಲ್ಕಿ ಸ್ವಾಗತ ಗೋಪುರದ ಬಳಿ ಅಪರಿಚಿತ ವ್ಯಕ್ತಿ ಸಾವು

• **ಉಡುಪಿ:** ಇಲ್ಲಿನ ಕಿನ್ನಿಮೂಲ್ಕಿ ಸ್ವಾಗತ ಗೋಪುರದ ಬಳಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಸುಮಾರು 45-50 ವರ್ಷ ಪ್ರಾಯದ ಅಪರಿಚಿತ ವ್ಯಕ್ತಿಯೊಬ್ಬರು ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ. ಸಾಮಾಜಿಕ ಕಾರ್ಯಕರ್ತ ಶಬ್ಬೀರ್ ಅವರು ಸಾರ್ವಜನಿಕರ ಮಾಹಿತಿಯಂತೆ ಅಸ್ವಸ್ಥ ವ್ಯಕ್ತಿಯನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದರಾದರೂ, ವೈದ್ಯರು ಅವರು ಮೃತಪಟ್ಟಿರುವುದಾಗಿ ತಿಳಿಸಿದರು. ಮೃತರು ಹೃದಯಾಘಾತ ಅಥವಾ ಅನಾರೋಗ್ಯದಿಂದ ಮೃತಪಟ್ಟಿರಬಹುದು ಎನ್ನಲಾಗಿದೆ.

ಬೈಕ್‌ಗಳ ಡಿಕ್ಕಿ: ಓರ್ವ ಸಾವು

• **ಉಪ್ಪಿನಂಗಡಿ :** ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಕೌಕ್ರಾಡಿ ಗ್ರಾಮದ ಪೆರಿಯಶಾಂತಿ ಎಂಬಲ್ಲಿ ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸವಾರ ಸಾವನ್ನಪ್ಪಿ ಇನ್ನೋರ್ವ ಗಂಭೀರವಾಗಿ ಗಾಯಗೊಂಡ ಘಟನೆ ಬುಧವಾರ ಸಂಭವಿಸಿದೆ.

ಮೃತ ಸವಾರನನ್ನು ಕಾಸರ ಗೋಡು ನಿವಾಸಿ ರಿಜೇಶ್ ವಿ. (33) ಎಂದು ಗುರುತಿಸಲಾಗಿದೆ. ಇನ್ನೊಂದು ಬೈಕಿನ ಸವಾರ ಗಿರೀಶ್ ಕಾಲಿಗೆ ಗಂಭೀರ ಸ್ವರೂಪದ ಗಾಯ ಪಡೆದು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಗಿರೀಶ್ ಚಲಾಯಿಸುತ್ತಿದ್ದ ಬೈಕನ್ನು ಕೊಕ್ಕಡದ ಕಡೆಗೆ ತಿರುಗಿಸಿದ ಕಾರಣ ರಿಜೇಶ್ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಪ್ರಕರಣಕ್ಕೆ ಸಂಬಂಧಿಸಿ ಸಯ್ಯದ್ ಜಾಫರ್ ಪಾಷಾ ಎಂಬವರು ನೀಡಿದ ದೂರಿನಂತೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.

ಮದ್ಯದ ವ್ಯಸನಕ್ಕೆ ಬೇಸತ್ತು ಭದ್ರತಾ ಸಿಬ್ಬಂದಿ ಆತ್ಮಹತ್ಯೆ

• **ಉಡುಪಿ:** ವಿಪರೀತ ಮದ್ಯಪಾನದ ಚಟದಿಂದ ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಬಡಗುಬೆಟ್ಟು ಗ್ರಾಮದ ವ್ಯಾಪ್ತಿಯಲ್ಲಿ ನಡೆದಿದೆ. ಮೂಲತಃ ಶರಣಪ್ಪ ತಂಡಿಗೇರಿ (44) ಮೃತಪಟ್ಟ ದುರ್ದೈವಿ. ಇವರು ಸ್ಥಳೀಯ ನಿರ್ಮಾಣ ಹಂತದ ಫ್ಲಾಟ್‌ನ ಸೆಕ್ಯೂರಿಟಿ ರೂಮ್‌ನಲ್ಲಿ ವಾಸವಾಗಿದ್ದರು. ಜೂನ್ 22ರ ರಾತ್ರಿ 9 ರಿಂದ 11 ಗಂಟೆಯ ನಡುವೆ ಅವರು ತಾವು ವಾಸವಿದ್ದ ಮನೆಯ ಕೆಳಭಾಗದ ಸಿಮೆಂಟ್ ಶೀಟ್‌ನ ಕಬ್ಬಿಣದ ರಾಡಿಗೆ ನೇಣು ಬಿಗಿದುಕೊಂಡಿದ್ದಾರೆ.

ಮೃತರ ಪತ್ನಿ ದ್ಯಾಮವ್ವ ನೀಡಿದ ದೂರಿನಂತೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್-ಲಾರಿ ಅಪಘಾತ: ವ್ಯಕ್ತಿ ಗಂಭೀರ

• **ಸುಳ್ಯ:** ದೇವರಕೊಲ್ಲಿ ಬಳಿ ಲಾರಿ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿ ಬೈಕ್ ಸವಾರ ಗಂಭೀರ ಗಾಯಗೊಂಡ ಘಟನೆ ಬುಧವಾರ ನಡೆದಿದೆ. ಗಾಯಾಳುಗಳನ್ನು ಸುಳ್ಯದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಗಾಯಗೊಂಡವರನ್ನು ಬಿಜಾಪುರ ಮೂಲದ ಮಾಹಂತೇಶ್ ಎಂದು ತಿಳಿದು ಬಂದಿದೆ. ಅವರು ಪುತ್ತೂರಿನ ಟ್ಯಾಕ್ಟೋ ಅರ್ಥ್ ಮೂವರ್ಸ್‌ನ ಉದ್ಯೋಗಿ ಎನ್ನಲಾಗಿದೆ.

ಪರಿಸರ ದಿನಾಚರಣೆ

• **ಕುಂದಾಪುರ:** ಅಂಗನವಾಡಿ ಕೇಂದ್ರ ಮಲ್ಯರಬೆಟ್ಟು ಗಂಗೊಳ್ಳಿ, ಬಿಲ್ಲವರ ಹಿತರಕ್ಷಣಾ ವೇದಿಕೆ ಗಂಗೊಳ್ಳಿ ಮತು ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗ ಇದರ ವತಿಯಿಂದ ಪರಿಸರ ದಿನಾಚರಣೆ, ಸ್ವಚ್ಛತೆ ಹಾಗೂ ಗಿಡ ನೆಡುವ ಕಾರ್ಯಕ್ರಮ ಮಲ್ಯರಬೆಟ್ಟು ಅಂಗನವಾಡಿ ಕೇಂದ್ರದ ವಠಾರದಲ್ಲಿ ಬುಧವಾರ ನಡೆಯಿತು. ಗಂಗೊಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಜಯಂತಿ ಖಾರ್ವಿ ಮತ್ತು ಬಿಲ್ಲವರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಜಿ.ಗೋಪಾಲ ಬಿಲ್ಲವ ಅವರು ಜಂಟಿಯಾಗಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಂಗನವಾಡಿಯ ಬಾಲವಿಕಾಸ ಸಮಿತಿ ಅಧ್ಯಕ್ಷ ಅನಿತಾ ಖಾರ್ವಿ ಪರಿಸರ ಮಾಹಿತಿ ನೀಡಿದರು. ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗದ ಅಧ್ಯಕ್ಷೆ ಸಮಿತ್ರಾ ಜಿ., ವೀಣಾ, ಶೋಭಾ, ನಿಹಾಪ್, ರೋಶನ್, ನವೀದ್ ಚೌಗುಲೆ, ಲಿಬಿರಾ, ಶಾಂತಿ ಖಾರ್ವಿ, ಕೃಷ್ಣ ಖಾರ್ವಿ ಮತ್ತಿತರರು ಉಪಸ್ಥಿತರಿದ್ದರು.

ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ‘ವಿವೇಕ ಮುನ್ನುಡಿ-2026’

ಯುವ ನಾಯಕತ್ವ ಉಜ್ವಲ ಭವಿಷ್ಯದ ಅಡಿಪಾಯ

Viveka
Munnudi
2026

• **ಪುತ್ತೂರು:** ವಿದ್ಯಾರ್ಥಿ ಶಕ್ತಿ ಅತ್ಯಂತ ವಿಶೇಷವಾದದ್ದು ಮತ್ತು ಪ್ರಭಾವಶಾಲಿಯಾದುದು. ಸಮರ್ಪಕವಾದ ಈ ಸಂಘಟನಾ ಶಕ್ತಿಯನ್ನು ಬಳಸಿಕೊಂಡರೆ ಸಮಾಜದಲ್ಲಿ ಧನಾತ್ಮಕವಾದ ಬೆಳವಣಿಗೆಯನ್ನು ರೂಪಿಸಬಹುದಾಗಿದೆ. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡಷ್ಟು ನಾಯಕತ್ವ ಗುಣ ಬೆಳೆಯಲು ಸಾಧ್ಯವಾಗುತ್ತದೆ ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘದ ನಿರ್ದೇಶಕ ಕೃಷ್ಣಕುಮಾರ್ ಶೆಟ್ಟಿ ಹೇಳಿದರು.

ನಗರದ ವಿವೇಕಾನಂದ ಕಾಲೇಜಿನ ಕೇಶವ ಸಂಕಲ್ಪ ಸಭಾಂಗಣದಲ್ಲಿ ನಡೆದ 2026-27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ಯುವಕರಿಗೆ ಸೂಕ್ತ ಮಾರ್ಗದರ್ಶನ ದೊರೆತಾಗ ಸಮಾಜದಲ್ಲಿ ಮೇಲ್ಪಂಕ್ತಿಯಲ್ಲಿ ಗುರುತಿಸಲು ಸಾಧ್ಯ. ನಿರಂತರವಾದ ಶ್ರಮ ಎಂದಿಗೂ ಸಾಧನೆಯ ತುತ್ತತುದಿಗೆ ತಲುಪಿಸುವಲ್ಲಿ ಸಹಕಾರಿಯಾಗುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡರೆ ಭವಿಷ್ಯದಲ್ಲಿ ಯಶಸ್ವಿ ವ್ಯಕ್ತಿಗಳಾಗಿ ಬೆಳೆಯುವಲ್ಲಿ ಯಾವುದೇ ಸಂದೇಹವಿಲ್ಲ ಎಂದು ಆಶಿಸಿದರು.

ಪ್ರಸಕ್ತ ಶೈಕ್ಷಣಿಕ ಸಾಲಿನ ಕಾಲೇಜ್ ವಿದ್ಯಾರ್ಥಿ ಸಂಘದ ಪ್ರತಿನಿಧಿಗಳ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಕಾಲೇಜಿನ ಅಧ್ಯಕ್ಷರಾಗಿ ದ್ವಿತೀಯ ವಾಣಿಜ್ಯ ವಿಭಾಗದ ಕೆ.ಆರ್. ದಿಶಾಂತ್, ಕಾರ್ಯದರ್ಶಿ ದ್ವಿತೀಯ ವಿಜ್ಞಾನ ವಿಭಾಗದ ನೇಹಾ ಅನೀಶ್ ಎನ್., ಜೊತೆ ಕಾರ್ಯದರ್ಶಿ ದ್ವಿತೀಯ ವಿಜ್ಞಾನ ವಿಭಾಗದ ವರ್ಷಿಣಿ ಕ್ರೀಡಾ ಕಾರ್ಯದರ್ಶಿ ದ್ವಿತೀಯ ವಿಜ್ಞಾನ ವಿಭಾಗದ ಕಾರ್ತಿಕ್ ಕೆಮ್ಮಿಂಜೆ ಹಾಗೂ ಕ್ರೀಡಾ ಜತೆ ಕಾರ್ಯದರ್ಶಿ ದ್ವಿತೀಯ ವಿಜ್ಞಾನ ವಿಭಾಗದ ಡಿಂಪಲ್ ಶೆಟ್ಟಿ ಆಯ್ಕೆ ಆಗಿದ್ದಾರೆ. ನೂತನವಾಗಿ ಆಯ್ಕೆಯಾದ ವಿದ್ಯಾರ್ಥಿ ಹಾಗೂ ಕ್ರೀಡಾ ಪ್ರತಿನಿಧಿಗಳಿಗೆ ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ. ಪ್ರಮಾಣವಚನ ಬೋಧಿಸಿದರು.

ಈ ಸಂದರ್ಭ 10ನೇ ತರಗತಿಯಲ್ಲಿ ಅತ್ಯಧಿಕ ಅಂಕ ಗಳಿಸಿದ, ಕ್ರೀಡಾ ಕ್ಷೇತ್ರ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ವಾಣಿಜ್ಯ ವಿಭಾಗದ ಉಪನ್ಯಾಸಕ ಶ್ರೀಧರ ಶೆಟ್ಟಿಗಾರ್ ಚುನಾವಣಾ ಪ್ರಕ್ರಿಯೆಯ ವರದಿ ಮಂಡಿಸಿದರು. ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ. ಸ್ವಾಗತಿಸಿ, ಉಪನ್ಯಾಸಕಿಯರಾದ ಸವಿತಾ ಎಸ್. ವಂದಿಸಿದರು. ಮಮತಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

> **ಸ್ವಂತ ಸುಖಕ್ಕಿಂತ ಪರರ ಸುಖದ ಬಗೆಗೆ ಚಿಂತಿಸುವವನು ಉತ್ತಮ ನಾಯಕನಾಗುತ್ತಾನೆ. ನಾಯಕತ್ವ ಬೆಳೆಯಲು ಆತ್ಮವಿಶ್ವಾಸ ಅತೀ ಮುಖ್ಯವಾಗಿದ್ದು, ದೇಶವನ್ನು ನಡೆಸುವ, ನೇತೃತ್ವವನ್ನು ಸ್ವೀಕರಿಸುವ, ತಪ್ಪನ್ನು ಮನ್ನಿಸದೆ ಮುನ್ನಡೆಸುವ ಸಮರ್ಥ ನಾಯಕನ ಅವಶ್ಯಕತೆ ಇಂದಿನ ದಿನಗಳಲ್ಲಿದೆ. ಸಂಸ್ಕಾರ-ಸಂಸ್ಕೃತಿ ಜೊತೆಗೂಡಿಗೊಂಡಾಗ ನಾಯಕತ್ವ ಕಳೆಗಟ್ಟುತ್ತದೆ.**
>
> ■ **ರವೀಂದ್ರ ಪಿ., ಅಧ್ಯಕ್ಷರು, ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ**

ಕಟ್ಟಡ ತೆರವು ಪ್ರಕರಣ: ಶಾಸಕ, ಅಧ್ಯಕ್ಷರ ಮೇಲಿನ ತಡೆ ತೆರವು

• **ಪುತ್ತೂರು:** ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಾತ್ರಾ ಸಂದರ್ಭದಲ್ಲಿ ಶ್ರೀ ದಂಡನಾಯಕ ಉಳ್ಳಾಲ್ತಿ ಅಮ್ಮನವರ ಭಂಡಾರ ಬರುವ ಹಾದಿಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ, ಶಿಥಿಲಾವಸ್ಥೆಯಲ್ಲಿತ್ತೆನ್ನಲಾದ ಕಟ್ಟಡ ತೆರವುಗೊಳಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ಅಶೋಕ್ ಕುಮಾರ್ ರೈ ಹಾಗೂ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಅವರು ಆಸ್ತಿಗೆ ಪ್ರವೇಶಿಸದಂತೆ ಅಥವಾ ಹಾನಿ ಮಾಡದಂತೆ ಹೊರಡಿಸಲಾಗಿದ್ದ ತಡೆಯಾಜ್ಞೆ ಅರ್ಜಿಯನ್ನು ಬಂಟ್ವಾಳದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯವು ವಜಾಗೊಳಿಸಿ ಆದೇಶ ಹೊರಡಿಸಿದೆ.

ಅರ್ಜಿದಾರರು ಬಂಟ್ವಾಳ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ದಾಖಲಿಸಿ, ಶಾಸಕ ಅಶೋಕ್ ರೈ ಹಾಗೂ ಪಂಜಿಗುಡ್ಡೆ ಈಶ್ವರ ಭಟ್ ಅವರು ಆಸ್ತಿಗೆ ಪ್ರವೇಶಿಸದಂತೆ ಅಥವಾ ಹಾನಿ ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕೆಂದು ಕೋರಿದ್ದರು. ಶಾಸಕರ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸಿದ ವಕೀಲ ಸುದರ್ಶನ ಕುಮಾರ್ ಮುಳಿಯ ಅವರು, ಶಾಸಕರು ಈ ಮೂಲ ದಾವೆಗೆ ಯಾವುದೇ ರೀತಿಯಲ್ಲೂ ಸಂಬಂಧಪಟ್ಟವರಲ್ಲ. ಅವರು ಯಾವುದೇ ಅಕ್ರಮ ಚಟುವಟಿಕೆ ನಡೆಸಿಲ್ಲ ಅಥವಾ ಯಾರಿಗೂ ಪ್ರಚೋದನೆ ನೀಡಿಲ್ಲ. ಕಾನೂನಿನ ಪ್ರಕಾರ, ದಾವೆಯಲ್ಲಿ ಪಾರ್ಟಿ ಅಲ್ಲದ ಮೂರನೇ ವ್ಯಕ್ತಿಗಳ ಅಥವಾ ಅಪರಿಚಿತರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ನೀಡಲು ಬರುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹಾಗೂ ಹೈಕೋರ್ಟ್ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿ ವಾದ ಮಂಡಿಸಿದರು.

ಅವರ ವಾದವನ್ನು ಪಂಜಿಗುಡ್ಡ ಈಶ್ವರ ಭಟ್ ಅವರ ಪರ ವಕೀಲ ಮಹೇಶ್ ಕಜೆ ಅವರೂ ಪುಷ್ಟೀಕರಿಸಿ, ಅನಾದಿ ಕಾಲದಿಂದಲೂ ಸಾರ್ವಜನಿಕ ರಸ್ತೆ ಹಾಗೂ ‘ಮಹಾಲಿಂಗೇಶ್ವರ ದೇವರ ಕಟ್ಟೆ’, ‘ಉಳ್ಳಾಲ್ತಿ ನಡೆ’ ಇದ್ದು, ಸಾವಿರಾರು ಭಕ್ತರು ನಡೆದಾಡುವ ಹಾದಿಯಾಗಿದೆ. ಅರ್ಜಿದಾರರು ನೈಜ ಸಂಗತಿಗಳನ್ನು ಮರೆಮಾಚಿ ದಾವೆ ಹೂಡಿದ್ದಾರೆ ಎಂದು ಆಕ್ಷೇಪಣೆ ಸಲ್ಲಿಸಿದ್ದರು. ಉಭಯ ಕಡೆಗಳ ವಾದ-ಪ್ರತಿವಾದಗಳನ್ನು ಆಲಿಸಿದ ಬಂಟ್ವಾಳದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಅನಿಲ್ ಪ್ರಕಾಶ್ ಎಂ.ಪಿ. ಅವರು ಜೂ.20ರಂದು ಈ ಆದೇಶ ಪ್ರಕಟಿಸಿದ್ದಾರೆ.

ಸಿಪಿಸಿ ಆದೇಶ 39 ನಿಯಮ 1 ಮತ್ತು 2ರ ಪ್ರಕಾರ, ನ್ಯಾಯಾಲಯವು ಕೇವಲ ದಾವೆಯಲ್ಲಿರುವ ಪಕ್ಷಗಾರರ ವಿರುದ್ಧ ಮಾತ್ರ ತಡೆಯಾಜ್ಞೆ ನೀಡಬಹುದು. ಪ್ರಕರಣಕ್ಕೆ ಸಂಬಂಧಪಡದ ಅಥವಾ ದಾವೆಯಲ್ಲಿ ಪ್ರತಿವಾದಿಗಳಲ್ಲದ ಮೂರನೇ ವ್ಯಕ್ತಿಗಳ ವಿರುದ್ಧ ಇಂತಹ ಆದೇಶ ಹೊರಡಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಅರ್ಜಿದಾರರು ಪ್ರಥಮ ದೃಷ್ಟ್ಯಾ ತಮಗೆ ಪೂರಕವಾದ ಪ್ರಕರಣವನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಪರಿಗಣಿಸಿದ ನ್ಯಾಯಾಧೀಶರು, ಸ್ವರ್ಣಲತಾ ರಾವ್ ಅವರು ಸಲ್ಲಿಸಿದ್ದ ಐಎ ನಂ.27 ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದ್ದಾರೆ.

ಬಡಗಬೆಟ್ಟು ಸೊಸೈಟಿ: ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ₹15 ಲಕ್ಷ ಮೌಲ್ಯದ ಪರಿಕರ ವಿತರಣೆ, ಪ್ರತಿಭಾ ಪುರಸ್ಕಾರ

• **ಉಡುಪಿ:** ಸಾಮಾಜಿಕ ಕಳಕಳಿಯ ಧ್ಯೇಯದೊಂದಿಗೆ ಉಡುಪಿ ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಜಿಲ್ಲೆಯ ಕನ್ನಡ ಮಾಧ್ಯಮ ಶಾಲಾ ವಿದ್ಯಾರ್ಥಿಗಳಿಗೆ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ನೋಟ್ ಪುಸ್ತಕ, ಶೈಕ್ಷಣಿಕ ಪರಿಕರಗಳ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಸಸಿ ವಿತರಣೆ ಕಾರ್ಯಕ್ರಮವು ಜೂನ್ 27ರಂದು ಬೆಳಗ್ಗೆ 10.30ಕ್ಕೆ ಉಡುಪಿ ಅಜ್ಜರಕಾಡು ಟೌನ್ ಹಾಲ್‌ನಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದ್ದಾರೆ.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬೃಹತ್ ಕಾರ್ಯಕ್ರಮದಲ್ಲಿ ಜಿಲ್ಲೆಯ ಸುಮಾರು 50 ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಿ ಪ್ರೋತ್ಸಾಹಿಸಲಾಗುವುದು ಎಂದರು.

ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತ ರಾದ ಪಿ.ಜಿ.ಆರ್. ಸಿಂಧ್ಯಾ ಅವರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಯಶ್‌ಪಾಲ್ ಎ. ಸುವರ್ಣ, ಉಡುಪಿ ಡಯಟ್ ಪ್ರಾಂಶುಪಾಲ ಅಶೋಕ್ ಕಾಮತ್ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕ ಸುಧೀರ್ ಕುಮಾರ್ ಜಿ. ಉಪಸ್ಥಿತರಿರಲಿದ್ದಾರೆ. ಸಹಕಾರ ರತ್ನ ಜಯಕರ ಶೆಟ್ಟಿ ಇಂದ್ರಾಳಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಅಂದು ಬೆಳಗ್ಗೆ 9.30 ರಿಂದ ವಿದ್ಯಾರ್ಥಿಗಳಿಗಾಗಿ ಸಂಪನ್ಮೂಲ ವ್ಯಕ್ತಿ ದಾಮೋದರ್ ಶರ್ಮ ಬಾರ್ಕೂರು ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ವ್ಯವಸ್ಥಾಪಕ ರಾಜೇಶ್ ವಿ. ಶೇರಿಗಾರ್ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

ಜೂ.11ರ ಲೋಕ ಅದಾಲತ್‌ಗೆ ಪೂರ್ವಭಾವಿ ಸಭೆ

• **ಪುತ್ತೂರು:** ಲೋಕ ಅದಾಲತ್ ಮೂಲಕ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಕೌಟುಂಬಿಕ ಕಲಹಗಳು ಬೇರೆಯೇ ರೂಪ ತಾಳಿ ನ್ಯಾಯಾಲಯಗಳ ಮೆಟ್ಟಿಲೇರುತ್ತಿದೆ. ಅಂತಹ ಪ್ರಕರಣಗಳನ್ನು ಗುರುತಿಸಿ ಮುಗಿಸಬೇಕಿದೆ. ಜತೆಗೆ ಜಾಗದ ತಕರಾರುಗಳನ್ನು ರಾಜಿ ಸಂಧಾನದ ಮೂಲಕ ಮುಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಪುತ್ತೂರು ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್ ಹೇಳಿದರು.

ಜು.11ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆಯಲ್ಲಿ ಪುತ್ತೂರು 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸಭಾಂಗಣದಲ್ಲಿ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಪುತ್ತೂರು 7ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶೆ ಸುಮಂಗಲಾ ಮಾತನಾಡಿ, ಸರಕಾರದ ಮಟ್ಟದ ಹಲವು ಪ್ರಕರಣಗಳಿದ್ದು, ಅವುಗಳ ಇತ್ಯರ್ಥಕ್ಕೆ ಅದಾಲತ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ಬ್ಯಾಂಕ್ ಪ್ರಕರಣಗಳಲ್ಲಿ ಹೆಚ್ಚಿನ ವ್ಯತ್ಯಾಸ ಇಲ್ಲದ ಪ್ರಕರಣ ರಾಜಿ ಸಂಧಾನಕ್ಕೆ ಮುಂದೆ ಬರಬೇಕಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಇತ್ಯರ್ಥವಾದರೆ ಅದಾಲತ್ ಉದ್ದೇಶ ಯಶಸ್ವಿಯಾಗುತ್ತದೆ ಎಂದರು.

ಪುತ್ತೂರು ನ್ಯಾಯಾಧೀಶರಾದ ದೇವರಾಜ್ ವೈ.ಎಚ್., ಆರ್. ರಮ್ಯಾ ವೇದಿಕೆಯಲ್ಲಿದ್ದರು. ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ, ಪುತ್ತೂರು ನಗರಸಭಾ ಪೌರಾಯುಕ್ತೆ ವಿದ್ಯಾ ಎಂ. ಕಾಳೆ, ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ, ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಯದುರಾಜ್, ಪಿಎಸ್‌ಐ ಸುರೇಶ್ ಉಪಸ್ಥಿತರಿದ್ದರು.

ಹಲಸು - ಮಾವು ಮೇಳದಲ್ಲಿ ‘ರಾಮಧಾನ್ಯ ಚರಿತ್ರೆ’ ತುಳು ಕಾವ್ಯವಾಚನ - ವ್ಯಾಖ್ಯಾನ

• **ಮಂಗಳೂರು:** ಕಲ್ಕೂರ ಪ್ರತಿಷ್ಠಾನ ಮಂಗಳೂರು ವತಿಯಿಂದ ಸಾವಯವ ಕೃಷಿಕ ಬಳಗದ ಸಹಯೋಗದಲ್ಲಿ ಕದ್ರಿ ಕಂಬಳ ಮಲ್ಲಿಕಾ ಬಡಾವಣೆಯ ಮಂಜು ಪ್ರಾಸಾದದಲ್ಲಿ ಆಯೋಜಿಸಿದ ಎರಡು ದಿನಗಳ ‘ಹಲಸು - ಮಾವು ಮೇಳ’ದ ಅಂಗವಾಗಿ ಶ್ರೀ ವಿಶ್ವೇಶತೀರ್ಥ ಮಂಟಪದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಮೊದಲನೇ ದಿನ ಸಂತ ಕವಿ ಕನಕದಾಸರ ‘ರಾಮಧಾನ್ಯ ಚರಿತ್ರೆ’ ಕಾವ್ಯ ಆಧಾರಿತ ತುಳು ಪುರಾಣ ಪ್ರವಚನ ಕಾರ್ಯಕ್ರಮ ನಡೆಯಿತು.

ಯಕ್ಷಗಾನ ಅರ್ಥಧಾರಿ ಭಾಸ್ಕರ ರೈ ಕುಕ್ಕುವಳ್ಳಿ ತುಳು ಭಾಷೆಯಲ್ಲಿ ‘ರಾಮಧಾನ್ಯ ಚರಿತ್ರೆ’ ವ್ಯಾಖ್ಯಾನ ನೀಡಿದರು. ಗಾಯಕ ತೋನ್ಸೆ ಪುಷ್ಕಳ ಕುಮಾರ್ ವಾಚಿಸಿದರು.

ಕರ್ನಾಟಕ ಸರಕಾರದ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಯೋಜನೆಯಂತೆ ದೇಶದ 14 ಭಾಷೆಗಳಲ್ಲಿ ಅನುವಾದಗೊಂಡು ಈಚೆಗೆ ಬಿಡುಗಡೆಯಾಗಿದ್ದ ‘ರಾಮಧಾನ್ಯ ಚರಿತ್ರೆ’ಯ ತುಳು ಆವೃತ್ತಿಯನ್ನು ಪ್ರಥಮ ಬಾರಿಗೆ ಹಲಸು ಮಾವು ಮೇಳದಲ್ಲಿ ವಾಚನ- ವ್ಯಾಖ್ಯಾನಕ್ಕೆ ಅಳವಡಿಸಿಕೊಂಡಿರುವುದು ಕಾರ್ಯಕ್ರಮದ ವಿಶೇಷತೆಯಾಗಿತ್ತು.

ತುರ್ತು ಪರಿಸ್ಥಿತಿ ಇದಿಷ್ಟೇ ಅಸಾಂವಿಧಾನಿಕ ನಡೆಗಳಿಗೆ ನಿದರ್ಶನವೇ ಎಂದು ಅವಲೋಕಿಸಿದರೆ, ಪಟ್ಟಿ ಬೆಳೆಯುತ್ತದೆ, ಡಿಸೆಂಬರ್ 18, 1975 ಸಂವಿಧಾನಕ್ಕೆ ತಂದ 42ನೇ ತಿದ್ದುಪಡಿ, ಈ ತಿದ್ದುಪಡಿ ಮೂಲ ಸಂವಿಧಾನದ ಆಶಯಗಳಿಗೆ ತಿಲಾಂಜಲಿ ಇಟ್ಟ ಅಪಕೀರ್ತಿಗೆ ಭಾಜನವಾಗಿದೆ, ಎರಡು ವರ್ಷ 11 ತಿಂಗಳು 18 ದಿವಸ ಸಂವಿಧಾನ ರಚನಾಕಾರರು ತಮ್ಮ ಅದಮ್ಯವಾದ ಜ್ಞಾನ, ಚರ್ಚೆ, ಮೌಲ್ಯಮಾಪನದ ಜತೆಗೆ ಸಂವಿಧಾನಕ್ಕೆ ಕಟ್ಟಿಕೊಟ್ಟಿದ್ದ 395 ವಿಧಿಗಳಲ್ಲಿ 59 ವಿಧಿಗಳನ್ನು ಒಟ್ಟಿಗೆ ತಿರುಚಿದ ಕಪ್ಪು ದಿನವದು.

ಕೆಟಿಷಾ ಎಂಬುವರು 15, ನವೆಂಬರ್ 1948ರಲ್ಲಿ ಎರಡನೇ ಬಾರಿಗೆ ಅಂಬೇಡ್ಕರರ ಎದುರಿಗೆ ನಿಂತು ಜಾತ್ಯತೀತತೆ ಮತ್ತು ಸಮಾಜವಾದಿ ಪದವನ್ನು ಸಂವಿಧಾನದ ಭಾಗವನ್ನಾಗಿ ಮಾಡಬೇಕೆಂಬ ತಿದ್ದುಪಡಿ ಮಾಡಿಸಿದಾಗ, ಅಂಬೇಡ್ಕರರು ಅತ್ಯಂತ ಕಠೋರವಾಗಿ ಸದರಿ ತಿದ್ದುಪಡಿಗಳಿಗೆ ವಿರೋಧ ವ್ಯಕ್ತಪಡಿಸಿ ಈ ನೆಲದ ಗುಣಕ್ಕೆ ವಿರುದ್ಧವಾದ ಜಾತ್ಯತೀತತೆಯನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾರೆ ಎಂದಿದ್ದರು.

ಇಂತಹ ಆಶಯವನ್ನು ಕಡೆಗಣಿಸಿ ಪ್ರಸ್ತಾವನೆಗೆ ಎರಡು ಅಂಶಗಳನ್ನು ತುರುಕಲಾಯಿತು. (ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ) ಒಂದೇ ತಿದ್ದುಪಡಿಯಲ್ಲಿ ಅದು ಕೇವಲ 26 ವರ್ಷಗಳ ಅಂತರದಲ್ಲಿ 59 ವಿಧಿಗಳನ್ನು ಮಾರ್ಪಡಿಸುವುದು ಎಂದರೆ, ಒಂದು ಸಂವಿಧಾನ ಅಷ್ಟು ಅಶಕ್ತವಾಗಿತ್ತೇ? ಅಥವಾ ಉದ್ದೇಶಪೂರ್ವಕವಾಗಿ ಅಶಕ್ತವಾಗಿಸಲಾಯಿತೇ? ಚರ್ಚಿತ ವಿಷಯ.

ಏಪ್ರಿಲ್ 28, 1976 ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎನ್. ರೇ, ಎಚ್‌ಎಮ್ಬೇಗ್, ವೈ.ವಿ. ಚಂದ್ರಚೂಡ್, ಪಿ.ಎನ್. ಭಗವತಿ ಒಳಗೊಂಡ ನ್ಯಾಯಪೀಠವು ಅಂಬೇಡ್ಕರ್ ನೀಡಿದ್ದ ಹೇಬಿಯಸ್ ಕಾರ್ಪಸ್ (ನಾಗರೀಕನ ಅಕ್ರಮ ಬಂಧನ ಕುರಿತು ರಕ್ಷಣೆ) ಅರ್ಜಿಯನ್ನು ದಾಖಲಿಸುವ ಅಧಿಕಾರ ನಾಗರಿಕರಿಗಿಲ್ಲ ಎಂಬ ತೀರ್ಪು ನೀಡಿತು. (ನ್ಯಾಯಮೂರ್ತಿ ಎಚ್.ಆರ್. ಖನ್ನ ವಿರೋಧ ವ್ಯಕ್ತಪಡಿಸಿದ್ದರು).

ಬಹಳ ಮುಖ್ಯವಾಗಿ ಆ ಕಾಲಘಟ್ಟದಲ್ಲಿ ತಂದ ಮೀಸಾ ಕಾನೂನು1.1 ಲಕ್ಷ ಜನರನ್ನು ಬಂಧಿಸಿತ್ತು. ಈ ಕಾನೂನು ಜಗತ್ತಿನ ಯಾವ ಪ್ರಜಾಪ್ರಭುತ್ವ ರಾಷ್ಟ್ರ ಇಂದಿಗೂ ಜಾರಿಗೆ ತರಲಾರದಂತಹ ಅನಿರೀಕ್ಷಿತವಾದದ್ದು. ಬಂಧನದ ಉದ್ದೇಶ, ಬಂಧಿತರ ಬಗೆಗಿನ ಮಾಹಿತಿ ಕೇಳುವುದೇ ಅಪರಾಧ ಎನ್ನುವ ಈ ಕಾನೂನು, ಅಂಬೇಡ್ಕರರ, ಸಂವಿಧಾನದ ಮಾನವ ಸ್ಫೂರ್ತಿಯನ್ನೇ ತಿರಸ್ಕರಿಸಿ ನಿಂತದ್ದು.

ಸಂಸತ್ತು ನಡೆಸಲು ಕೋರಮ್ ಅಗತ್ಯವಿಲ್ಲವೆಂಬ ನಿಯಮ ಜಾರಿ, ಕೇವಲ ನಾಲ್ಕು ದಿನಗಳಲ್ಲಿ ಸಂವಿಧಾನಕ್ಕೆ ಮಹತ್ವದ ತಿದ್ದುಪಡಿಗಳನ್ನು ತಂದದ್ದು, 253 ಪತ್ರಕರ್ತರ ಬಂಧನ, ಈ ಎಲ್ಲಾ ಅವಗಡಗಳನ್ನು ಗಮನಿಸಿದಾಗ ಇಂದಿರಾಗಾಂಧಿಯವರನ್ನು ಅಲಹಾಬಾದ್ ಕೋರ್ಟು ಸೋಲಿಸುವ ಬದಲು ಗೆಲ್ಲಿಸಿ ಬಿಡಬೇಕಿತ್ತೇನೋ ಎನಿಸುತ್ತದೆ.

ಕೋರ್ಟ್ ಇಂದಿರಾ ಗಾಂಧಿಯನ್ನು ಸೋಲಿಸುವಾಗ, ತಾನು ಸೋಲಬಹುದು, ಪ್ರಜಾಪ್ರಭುತ್ವವು ಸೋಲಬಹುದು, ಸಂವಿಧಾನವು ಸೋಲಬಹುದು, ದೇಶವೇ ಸೋಲಬಹುದೆಂದು ಎಣಿಸಿರಲಾರದು.

ಸಂವಿಧಾನ ಮೀರುವ, ಪ್ರಜಾಪ್ರಭುತ್ವ ವಿರೋಧಿಸುವ, ಪ್ರವೃತ್ತಿ ಕಾಂಗ್ರೆಸ್‌ಗೆ ಆರಂಭದಿಂದಲೂ ಬಂದ ಬಳುವಳಿ. ವಿಶಾವಿಕಿ 1975ರಲ್ಲಿ ಹೇರಿದ್ದಲ್ಲ, ಬದಲಾಗಿ ಇದಕ್ಕೊಂದು ದೊಡ್ಡ ಹಿನ್ನೆಲೆಯೂ ಇದೆ. ಕೀನ್ಯಾ ದೇಶಕ್ಕೆ ಭೇಟಿ ಕೊಟ್ಟಾಗ ಇಂದಿರಾ ಗಾಂಧಿಯವರು, ದೇಶವನ್ನು ಬಲಾಢ್ಯವಾಗಿ ಕಟ್ಟಲು, ಬಡತನವನ್ನು ದೂರ ಮಾಡಲು ನಿರಕ್ಷರತೆಯನ್ನು ಕೊನೆಗಾಣಿಸಲು ಯಾವ ಪ್ರತಿಪಕ್ಷವೂ ಇಲ್ಲದಿರುವುದೇ ವಾಸಿ ಎಂಬ ಸರ್ವಾಧಿಕಾರದ ಸಮರ್ಥನೆ ಮಾತನ್ನು ಆಡಿದ್ದರು. (ವೈ ಎಮರ್ಜೆನ್ಸಿ? - ಅಮಿಯ ರಾವ್)

1973ರಲ್ಲಿ ಕಾಂಗ್ರೆಸ್ ಸಂಸತ್ ಸದಸ್ಯ ಶಶಿಭೂಷಣ್ ಭಾರತಕ್ಕೆ ಮರ್ಯಾದಾಧಾರಿತ ಸರ್ವಾಧಿಕಾರಿ ಸೂಕ್ತ ಎಂದು ಹೇಳಿದ್ದರು.

ಬಾಂಗ್ಲಾದೇಶದಲ್ಲಿ ಶೇಕ್ ಮುಜುಬೂರ್, ಸಂಸದೀಯ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಿ ಅಧ್ಯಕ್ಷ ಪದ್ಧತಿಯನ್ನು ಜಾರಿಗೆ ತಂದಾಗ ಇಂದಿರಾಗಾಂಧಿ ಅವರು ಆ ಕ್ರಮವನ್ನು ಸ್ವಾಗತಿಸಿ 1975ರಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಸಂದರ್ಶನ ನೀಡಿದ್ದರು.

ಈ ವೇಳೆ ಮಾತನಾಡುತ್ತಾ ಮೂಲಭೂತ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಹಲವಾರು ದೇಶಗಳು ಜನತಂತ್ರ ವಿಧಾನವನ್ನು ಕೈಬಿಟ್ಟಿವೆ. ಏಕೆಂದರೆ ಆಗ ದೇಶದ ಅಡಿಪಾಯವನ್ನು ಹಾಕಬೇಕಾಗಿರುತ್ತದೆ ಅಡಿಪಾಯ ಆಗದಿದ್ದರೆ, ಮುಂದೆ ಏನು ಮಾಡಲಿಕ್ಕೂ ಆಗದು ಎಂದಿದ್ದರು.

ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಬರುವಾ, ಭಾರತದಲ್ಲಿ ಸದ್ಯಕ್ಕೆ ವಿರೋಧ ಪಕ್ಷ ಅಪ್ರಸ್ತುತ ಎನ್ನುತ್ತಾ, 1975 ಜೂನ್ 18ರ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಇಂದಿರಾ ಅಂದರೆ ಇಂಡಿಯಾ ಅಂದರೆ ಇಂದಿರಾ ಎಂಬ ಸರ್ವಾಧಿಕಾರಿ ಹೇಳಿಕೆ ನೀಡಿದ್ದರು. ಇಂತಹ ಘಟನಾವಳಿಗಳನ್ನು ಪರಾಮರ್ಶೆ ಮಾಡಿದರೆ, ಕಾಂಗ್ರೆಸ್ ಮತ್ತು ಅದರ ನಾಯಕರು ಸಂವಿಧಾನದ ಮೇಲೆ ಮಾಡಿದ ಆಕ್ರಮಣ ಪೂರ್ವ ನಿಯೋಜಿತ ಎಂಬುದು ಲಭ್ಯವಾಗುವ ಸತ್ಯ.

ದೇಶ ಇಂತ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾಗ ಆರ್‌ಎಸ್‌ಎಸ್ ನಂತರ ಸಾಮಾಜಿಕ ಸಂಘಟನೆ ಎಂದು ಭೂಗತವಾಗಿ ತಮ್ಮ ಮೇಲೆ ಆಗಬಹುದಾದ ಎಲ್ಲಾ ಆಕ್ರಮಣಗಳನ್ನು ಸಹಿಸಿಯೂ, ಸಂವಿಧಾನದ ರಕ್ಷಣೆಗೆ ಹೋರಾಟ ಮಾಡುವ ಮನೋಭಾವವನ್ನು ತನ್ನ ಕಾರ್ಯಕರ್ತರಲ್ಲಿ ಉಗಮಿಸುವಂತೆ ಮಾಡಿದ್ದು ಆರ್‌ಎಸ್‌ಎಸ್, ಸಂವಿಧಾನದ ಮೇಲೆ ಇರುವ ಗೌರವ ಮತ್ತು ಭಕ್ತಿಯನ್ನು ಅಭಿವ್ಯಕ್ತಗೊಳಿಸುತ್ತದೆ.

ಒಟ್ಟು ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಅತಿ ಹೆಚ್ಚು ಜನ ಬಂದನಕೊಳಗಾದವರು ಆರ್‌ಎಸ್‌ಎಸ್ ಕಾರ್ಯಕರ್ತರು ಮತ್ತು ಸ್ವಯಂಸೇವಕರು.

ಪತ್ರಿಕಾ ಮಾಧ್ಯಮದ ಮೇಲು ಅತೀವ ಎನ್ನುವಷ್ಟರಮಟ್ಟಿಗೆ ನಿರ್ಬಂಧ ಹೇರಿದಾಗಲೂ, ಭೂಗತವಾಗಿಯೇ ಕಹಳೆ ಪತ್ರಿಕೆಯ ಮೂಲಕ ಇಡೀ ದೇಶದೆಲ್ಲೆಡೆ ಜಾಗೃತಿ ಮೂಡಿಸಿದ್ದು ಸ್ವಯಂಸೇವಕರ ಅಪಾರ ಶ್ರಮದಿಂದ.

ಜಯಪ್ರಕಾಶ್ ನಾರಾಯಣರ ಲೋಕಸಂಘರ್ಷ ಸಮಿತಿಯ ನೇತೃತ್ವ, ಸುಂದರ್ ಸಿಂಗ್ ಭಂಡಾರಿ, ಆಂಧ್ರದ ಸಂಜೀವ್ ರೆಡ್ಡಿ, ತಮಿಳುನಾಡಿನ ಕೆ ಕೃಷ್ಣಮೂರ್ತಿ, ಜನ ಸಂಘದ ರಾಮನ್ ಪಿಳ್ಳೆ ಮುಂತಾದವರ ಹೋರಾಟ ಮತ್ತು ಮಾರ್ಗದರ್ಶನದ ಹೊರತಾಗಿಯೂ ಸರ್ವಾಧಿಕಾರಿಗಳು ತಲೆತಗ್ಗುವಂತೆ ಮಾಡಿದ್ದು ಆರ್‌ಎಸ್‌ಎಸ್‌ನ ಸ್ವಯಂಸೇವಕರು ಎಂಬುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇರದು.

ನವೆಂಬರ್ 14, 1975ರಂದು ಸರ್ವಾಧಿಕಾರದ ವಿರುದ್ಧ ದೇಶದಾದ್ಯಂತ ಸತ್ಯಾಗ್ರಹ ಸ್ಫೋಟವಾಯಿತು. ಸೆರೆಮನೆ ಒಳಗೆ, ಇದ್ದವರು ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದರು.

ಬಂಧಿತರ ಪ್ರವಾಹವೇ, ಸುರುವಿಟ್ಟುಕೊಂಡಿತು. ದೇಶದ ಜೈಲುಗಳೆಲ್ಲ ಹೌಸ್ ಫುಲ್. ವಿವಿಧ ಸಂಘಟನೆಗಳ ಕಾರ್ಯಕರ್ತರ ಜೊತೆಗೆ ಆರ್‌ಎಸ್‌ಎಸ್‌ನ ಸ್ವಯಂಸೇವಕರ ಜೈಲು ನೋಟ, ಮದುವೆ ಮನೆಗೆ ಗಂಡಿನ ದಿಬ್ಬಣ ಬರುವಂತೆ, ಭಾಸವಾಗುತ್ತಿತ್ತು. ಸ್ವಯಂಸೇವಕರು ಚೀಲ ಹಿಡಿದು ಠಾಕು-ಠೀಕಾಗಿ ಜೈಲು ಸೇರುತ್ತಿದ್ದರು. ಸೆರೆಮನೆಯೊಳಗು ಸ್ವಯಂಸೇವಕರಿಂದ ಸಾಮೂಹಿಕವಾಗಿ ಪ್ರಾತಃಸ್ಮರಣೆ ಪುಸ್ತಕ ವಾಚನ ಮತ್ತು ಆಟ ಆಡುವುದು ಸಂಘದ ಶಾಖೆಯನ್ನೇ ನೆನಪು ಮಾಡುವಂತಿತ್ತು.

ಸಂಘದ ಸರಸಂಘಚಾಲಕರಾದ, ಬಾಳ ಸಾಹೇಬ ದೇವರಸ್ ವಿಶೇಷ ಮಾರ್ಗದರ್ಶನ ಮಾಡಿದ್ದರು. ಮುಂದೆ ಇಂಥದ್ದೊಂದು ವಿಷಕಾಲ ಮುಕ್ತಾಯವಾದ ಮೇಲೆ 1977ರಲ್ಲಿ ಸಂಘದ ಪ್ರೇರಣೆಯಿಂದ ಬೆಳೆದ ಅನೇಕ ನಾಯಕರುಗಳು ಇಂದಿರಾ ಗಾಂಧಿ ಅವರ ವಿರುದ್ಧ ಚುನಾವಣೆಯಲ್ಲಿ ಜನತಾ ಪಕ್ಷದ ಮೂಲಕ ಜಯಭೇರಿ ಬಾರಿಸಿ,

1976ರಲ್ಲಿ 42ನೇ ತಿದ್ದುಪಡಿಯ ಮೂಲಕ ವಿರೂಪ ಗೊಳಿಸಿದ್ದ ಸಂವಿಧಾನದ ಅನೇಕ ವಿಧಿಗಳನ್ನು ಜನತಾ ಸರ್ಕಾರವು 44ನೇ ತಿದ್ದುಪಡಿಯಲ್ಲಿ ಸಂವಿಧಾನದಿಂದ ಹೊರದಬ್ಬಿತು. ಇದರಲ್ಲೂ ಕೂಡ ಆರ್‌ಎಸ್‌ಎಸ್ ಪಾತ್ರ ಮತ್ತು ಪ್ರೇರಣೆ ಹಿರಿದಾದದ್ದೆ.

ಹೀಗೆ ತಾನು ಮಾಡಿದ ಸಂವಿಧಾನ ರಕ್ಷಣೆಯ ಕಾರ್ಯ, ಸಮಾಜ ಮುಖಿ ಕಾರ್ಯಗಳ ಕಾರಣದಿಂದಲೇ ಇಂದು ಆರೆಸ್ಸೆಸ್ ಅಂಬೇಡ್ಕರರ ಆಶಯದಂತೆ ಹಳ್ಳಿ ಹಳ್ಳಿಗೂ ಭಾರತದ ಮೂಲೆ ಮೂಲೆಗೂ ವಿಸ್ತಾರಗೊಳ್ಳಲು ಸಾಧ್ಯವಾಗಿದೆ.

ಸಂಘಕ್ಕೆ ನೂರು ವರ್ಷ ತುಂಬಿದ ಈ ದಿನಮಾನಗಳಲ್ಲಿ ನೈಜ ಸಂವಿಧಾನ ರಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಅವಿಸ್ಮರಣೀಯ ನಡಾವಳಿ.

ಆಧಾರ

ತುರ್ತು ಪರಿಸ್ಥಿತಿ, ಭಾರತದ ಪ್ರಜಾಪ್ರಭುತ್ವದ ಕರಾಳ ಅವಧಿ, ಪುಸ್ತಕ, ಲೇಖಕರು: ಎ ಸೂರ್ಯ ಪ್ರಕಾಶ್.

ಭುಗಿಲು, ರಾಷ್ಟ್ರೋತ್ಥಾನ ಸಾಹಿತ್ಯ, ಸಂವಿಧಾನ ರಚನಾ ಸಭೆಯ ಚರ್ಚೆಗಳು, ವೈ ಎಮರ್ಜೆನ್ಸಿ- ಅಮಿಯಾ ರಾವ್.

ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ ಯುಎಸ್‌ಎ, ಮೆಕ್ಸಿಕೋ, ಕೆನಡಾ ಜೂನ್ 11-ಜುಲೈ 19

[illegible]

ದ.ಆಫ್ರಿಕಾ-ದ.ಕೊರಿಯಾ, (ಬೆಳಗ್ಗೆ 6:30)

ಜೆಕ್-ಮೆಕ್ಸಿಕೊ, (ಬೆಳಗ್ಗೆ 6:30)

ಕುರಾಕಾವೊ-ಐವರಿ ಕೋಸ್ಟ್, (ಮಧ್ಯರಾತ್ರಿ 1:30)

ಎಕ್ವಾಡಾರ್-ಜರ್ಮನಿ, (ಮಧ್ಯರಾತ್ರಿ 1:30)

ಕಿರುಸುದ್ದಿ

ವಂಶಿಕಾ-ಶಿವಗೆ ಬೆಳ್ಳಿ

• **ಹೊಸದಿಲ್ಲಿ:** ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಜೋಡಿ ವಂಶಿಕಾ ಚೌಧರಿ ಮತ್ತು ಶಿವ ನರ್ವಾಲ್ ಅವರು 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಭಾರತೀಯ ಜೋಡಿ ಒಟ್ಟು 469.7 ಅಂಕಗಳನ್ನು ಗಳಿಸಿ ಪೋಲೆಂಡ್‌ನ ಮಾಲ್ಗೋರ್ಜಾಟಾ ಮತ್ತು ಇವಾನ್ ಅವರಿಗಿಂತ ಹಿಂದಿದೆ. ಈ ಜೋಡಿ ಒಟ್ಟು 471.9 ಅಂಕಗಳನ್ನು ಗಳಿಸಿತು. ಮಂಗಳವಾರದ ಬೆಳ್ಳಿ ಪದಕದೊಂದಿಗೆ, ಭಾರತ ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಒಟ್ಟಾರೆ ಪದಕಗಳ ಸಂಖ್ಯೆ ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಒಳಗೊಂಡಂತೆ 16 ಪದಕಗಳಿಗೆ ಏರಿದೆ.

ಆಶೀರ್ವಾದ್ ಸೂರ್ಯವಂಶಿ ಮತ್ತೆ ಶತಕ

• **ಜಾರ್ಖಂಡ್:** ಮೊನ್ನೆಯಷ್ಟೇ ಶತಕ ಬಾರಿಸಿ ಗಮನ ಸೆಳೆದಿದ್ದ ವೈಭವ್ ಸೂರ್ಯವಂಶಿ ಸಹೋದರ ಆಶೀರ್ವಾದ್ ಸೂರ್ಯವಂಶಿ ಬುಧವಾರ ಸ್ಥಳೀಯ ಕ್ಲಬ್ ಪಂದ್ಯದಲ್ಲಿ ಮತ್ತೊಂದು ಶತಕ ಬಾರಿಸಿ ಮಿಂಚಿದ್ದಾರೆ. 10 ವರ್ಷದ ಆಶೀರ್ವಾದ್, ರಿಷವ್ 11 ಎಂಬ ತಂಡವನ್ನು ಪ್ರತಿನಿಧಿಸಿ 119 ಬಾಲ್‌ಗಳಲ್ಲಿ 168 ರನ್ ಬಾರಿಸಿದ್ದಾರೆ. ಈ ಇನ್ನಿಂಗ್ಸ್‌ನಲ್ಲಿ 19 ಬೌಂಡರಿ, 6 ಸಿಕ್ಸರ್ ಸೇರಿವೆ.

ವೈಭವ್‌ಗೆ ಬೇರೆ ಡ್ರೆಸ್ಸಿಂಗ್ ರೂಮ್

• **ಲಂಡನ್:** ಐರ್ಲೆಂಡ್ ಮತ್ತು ಇಂಗ್ಲೆಂಡ್ ಸರಣಿಗಳಿಗೆ ಆಯ್ಕೆಯಾಗಿರುವ 15 ವರ್ಷದ ವೈಭವ್ ಸೂರ್ಯವಂಶಿಗೆ ಬೇರೆ ಡ್ರೆಸ್ಸಿಂಗ್ ರೂಮ್ ಒದಗಿಸಲು ಬಿಸಿಸಿಐ ಮತ್ತು ಸಂಬಂಧಿತ ಸಂಸ್ಥೆಗಳು ನಿರ್ಧರಿಸಿವೆ. ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಆಯ್ಕೆಯಾಗಿರುವ ಅತಿ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ವೈಭವ್ ಸೂರ್ಯವಂಶಿ ತಂಡದೊಂದಿಗೆ ಆಡಲಿದ್ದರೂ, ವಾಸ್ತವ್ಯ ತಂಡದೊಂದಿಗೆ ಮಾಡುವಂತಿಲ್ಲ. 16ರಿಗಿಂತಲೂ ಕಡಿಮೆ ವಯಸ್ಸನ್ನು ಹೊಂದಿರುವ ವೈಭವ್ ವೈಯಕ್ತಿಕ ಡ್ರೆಸ್ಸಿಂಗ್ ರೂಮ್ ಹೊಂದಿರಬೇಕೆಂಬುದು ಇಸಿಬಿ ಮತ್ತು ಐಸಿಸಿ ನಿಯಮವಾಗಿದೆ.

ಪಾಕ್‌ಗೆ ಹೀನಾಯ ಸೋಲು

• **ಬ್ರಿಸ್ಟಲ್:** ಪಾಕಿಸ್ತಾನ ತಂಡವನ್ನು ಹೀನಾಯವಾಗಿ ಸೋಲಿಸಿರುವ ಆಸ್ಟ್ರೇಲಿಯಾ ಮಹಿಳೆಯರ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಸೂಪರ್-8ಕ್ಕೆ ಲಗ್ಗೆ ಹಾಕಿದಂತಿದೆ. ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಆಸೀಸ್ ಪಾಕ್ ತಂಡವನ್ನು ಬರೋಬ್ಬರಿ 113 ರನ್‌ಗಳಿಂದ ಮಣಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ಎಲ್ಲಿಸ್ ಪೆರ್ರಿ 48 ಬಾಲ್‌ಗಳಲ್ಲಿ 71 ರನ್ ಗಳಿಸಿದರು. ಜಾರ್ಜಿಯಾ ವಾಲ್ 39 ರನ್ ಗಳಿಸಿದರು. ಸುದರ್‌ಲೆಂಡ್ 27, ಕ್ಯಾರಿ 26 ರನ್‌ಗಳ ಕೊಡುಗೆ ನೀಡಿದರು. ಪಾಕ್ ಪರ ಸಾದಿಯಾ, ನಶಾರಾ ಮತ್ತು ರಾಮೀನ್ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಪಾಕಿಸ್ತಾನ 86 ರನ್‌ಗಳಿಗೆ ಆಲೌಟ್ ಆಯಿತು. ಮುಬೀನಾ 32 ರನ್ ಗಳಿಸಿದ್ದೇ ಹೆಚ್ಚಾಗಿತ್ತು. ಆಸ್ಟ್ರೇಲಿಯಾ ಪರ ಪೆರ್ರಿ, ಸುದರ್‌ಲೆಂಡ್, ಸೋಫಿ ತಲಾ ಎರಡು ವಿಕೆಟ್ ಕಿತ್ತರು. ವಾರೆಹಮ್ 1 ವಿಕೆಟ್ ಕಿತ್ತರು.

ರಗ್ಬಿ: ಸೆಮಿಗೆ ಬೆಂಗಳೂರು

• **ಹೈದರಾಬಾದ್:** ಗಚಿಬೌಲ್‌ನ ಗಂಗಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ಕೋಲ್ಕತ್ತಾ ಬಂಗಾ ಟೈಗರ್ಸ್ ವಿರುದ್ಧ 26-21 ಅಂತರದ ಜಯ ಸಾಧಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆದಿತು. ಬೆಂಗಳೂರು ಬ್ರೇವ್‌ಹಾರ್ಟ್ಸ್ 26-21ರಿಂದ ಕೋಲ್ಕತ್ತಾ ಬಂಗಾ ಟೈಗರ್ಸ್‌ನ್ನು ಮಣಿಸಿತು.

5-0
ಪೋರ್ಚುಗಲ್ ಉಜ್ಬೇಕಿಸ್ತಾನ

ಫಿಫಾ ಸ್ಟಾರ್‌ನಿಂದ ಮೊದಲನೇ ಗೋಲ್! ಪೋರ್ಚುಗಲ್‌ಗೆ 5-0 ಭರ್ಜರಿ ಗೆಲುವು

ರೊನಾಲ್ಡೊ ಕಿಕ್!

• **ಹ್ಯೂಸ್ಟನ್:** ಈ ಬಾರಿಯ ಫಿಫಾ ವಿಶ್ವಕಪ್‌ನಲ್ಲಿ 41 ವರ್ಷದ ಕ್ರಿಸ್ಟಿಯಾನೋ ರೊನಾಲ್ಡೊ ಮೊದಲ ಗೋಲು ಗಳಿಸಿದ್ದು, ಅವರ ದ್ವಿಗೋಲು ಪ್ರದರ್ಶನದೊಂದಿಗೆ ಪೋರ್ಚುಗಲ್ ತಂಡವು ಉಜ್ಬೇಕಿಸ್ತಾನ ವಿರುದ್ಧದ ಪಂದ್ಯದಲ್ಲಿ 5-0ರಿಂದ ಭರ್ಜರಿ ಗೆಲುವು ಸಾಧಿಸಿದೆ. ವಿಶ್ವಕಪ್‌ನಲ್ಲಿ ಎಂಬಾಪ್ಪೆ, ಮೆಸ್ಸಿ ಮ್ಯಾಜಿಕ್ ನಡೆಯುತ್ತಿತ್ತು. ಅಭಿಮಾನಿಗಳ ಪೈಸಾ ವಸೂಲ್ ಆವೃತ್ತಿಗಾಗಿ ರೊನಾಲ್ಡೊ ಗೋಲು ಬಾರಿಸಬೇಕಿತ್ತು. ಅದು ಮಂಗಳವಾರ ನಡೆಯಿತು.

41 ವರ್ಷದ ರೊನಾಲ್ಡೊ ಈ ಪಂದ್ಯದಲ್ಲಿ ದಾಖಲಿಸಿದ ಎರಡು ಗೋಲುಗಳ ಮೂಲಕ ಆರು ವಿಭಿನ್ನ ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆ ಮಾಡಿದರು. ಅವರ ಅದ್ಭುತ ಪ್ರದರ್ಶನಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಯೂ ಲಭಿಸಿತು. ಕಾಂಗೊ ವಿರುದ್ಧದ ಮೊದಲ ಪಂದ್ಯದಲ್ಲಿ ನಿರಾಸೆ ಮೂಡಿಸಿದ್ದ ರೊನಾಲ್ಡೊ ಅವರನ್ನು ಆರಂಭಿಕ ತಂಡದಲ್ಲೇ ಮುಂದುವರಿಸಿದ್ದ ಕೋಚ್ ರೊಬೆರ್ಟೊ ಮಾರ್ಟಿನೆಜ್ ಅವರ ನಿರ್ಧಾರ ಸಾರ್ಥಕವಾಯಿತು. ಪಂದ್ಯ ಆರಂಭವಾಗಿ ಕೇವಲ ಆರನೇ ನಿಮಿಷದಲ್ಲಿ ಜೋವೊ ಕಾನ್ಸೆಲೊ ನೀಡಿದ ಕ್ರಾಸ್ ಅನ್ನು ಗೋಲಾಗಿ ಪರಿವರ್ತಿಸಿದ ರೊನಾಲ್ಡೊ ಪೋರ್ಚುಗಲ್‌ಗೆ ಮುನ್ನಡೆ ತಂದುಕೊಟ್ಟರು. 17ನೇ ನಿಮಿಷದಲ್ಲಿ ನುನೊ ಮೆಂಡೆಸ್ ಫ್ರೀ-ಕಿಕ್ ಮೂಲಕ ಮತ್ತೊಂದು ಗೋಲು ದಾಖಲಿಸಿ ಅಂತರವನ್ನು 2-0ಕ್ಕೆ ಏರಿಸಿದರು. 39ನೇ ನಿಮಿಷದಲ್ಲಿ ಬ್ರುನೊ ಫರ್ನಾಂಡಿಸ್ ಪಾಸ್ ಅನ್ನು ಸದುಪಯೋಗಪಡಿಸಿಕೊಂಡ ರೊನಾಲ್ಡೊ ತಮ್ಮ ಎರಡನೇ ಗೋಲು ಬಾರಿಸಿ ಪೋರ್ಚುಗಲ್‌ಗೆ 3-0 ಮುನ್ನಡೆ ನೀಡಿದರು. ಎರಡನೇ ಅರ್ಧದಲ್ಲಿ ಉಜ್ಬೇಕಿಸ್ತಾನದ ಆತ್ಮಹತ್ಯಾ ಗೋಲಿನಿಂದ ಪೋರ್ಚುಗಲ್ 4-0 ಮುನ್ನಡೆ ಸಾಧಿಸಿತು. 87ನೇ ನಿಮಿಷದಲ್ಲಿ ಬದಲಿ ಆಟಗಾರ ರಫೇಲ್ ಲಿಯೊ ಐದನೇ ಗೋಲು ದಾಖಲಿಸಿ ತಂಡದ ಗೆಲುವಿಗೆ ಮೆರಗು ನೀಡಿದರು. ಈ ಜಯದೊಂದಿಗೆ ಪೋರ್ಚುಗಲ್ ಕೆ ಗುಂಪಿನಲ್ಲಿ ನಾಲ್ಕು ಅಂಕಗಳನ್ನು ಗಳಿಸಿ ತನ್ನ ನಾಕೌಟ್ ಹಂತದ ಆಸೆಗಳನ್ನು ಬಲಪಡಿಸಿಕೊಂಡಿದೆ.

ಅಂಕಿ-ಅಂಶ

- ರೊನಾಲ್ಡೊ ವಿಶ್ವಕಪ್ ಇತಿಹಾಸದಲ್ಲಿ ಆರು ವಿಭಿನ್ನ ಆವೃತ್ತಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ
- ರೊನಾಲ್ಡೊ ಎರಡು ಗೋಲು, ಪಂದ್ಯಶ್ರೇಷ್ಠ ಪ್ರಶಸ್ತಿ
- ನುನೊ ಮೆಂಡೆಸ್ ಮತ್ತು ರಫೇಲ್ ಲಿಯೊ ತಲಾ ಒಂದು ಗೋಲು

ನಾಕೌಟ್‌ಗೇರಿದ ಕೊಲಂಬಿಯಾ

• **ಗ್ವಾಡಲಜಾರಾ:** ಡ್ಯಾನಿಯಲ್ ಮುನೋಸ್ ದಾಖಲಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಕೊಲಂಬಿಯಾ ತಂಡ ಕಾಂಗೊ ವಿರುದ್ಧ 1-0 ಅಂತರದ ಗೆಲುವು ಸಾಧಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ.

ಪಂದ್ಯದ ಬಹುತೇಕ ಅವಧಿಯಲ್ಲಿ ಕಾಂಗೊ ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಅದ್ಭುತ ಪ್ರದರ್ಶನ ನೀಡಿ ಕೊಲಂಬಿಯಾದ ದಾಳಿಯನ್ನು ತಡೆದಿದ್ದರು. ಆರಂಭದ 20 ನಿಮಿಷಗಳಲ್ಲೇ ಐದು ಕಠಿಣ ಸೇವ್‌ಗಳನ್ನು ಮಾಡಿ ಕೊಲಂಬಿಯಾ ಆಟಗಾರರನ್ನು ನಿರಾಸೆಗೊಳಿಸಿದ್ದರು. ಆದರೆ 76ನೇ ನಿಮಿಷದಲ್ಲಿ ಡ್ಯಾನಿಯಲ್ ಮುನೋಸ್ ಅವಕಾಶವನ್ನು ಕೈಚೆಲ್ಲಲಿಲ್ಲ. ರಕ್ಷಣಾ ಆಟಗಾರನ ಕಾಲಿಗೆ ತಾಗಿ ಬಂದ ಚೆಂಡನ್ನು ಎಡಗಾಲಿನ ಶಾಟ್ ಮೂಲಕ ಗೋಲಾಗಿ ಪರಿವರ್ತಿಸಿ ಕೊಲಂಬಿಯಾಗೆ ಅಮೂಲ್ಯ ಮುನ್ನಡೆ ನೀಡಿದರು. ಈ ಗೋಲನ್ನು ತಡೆಯಲು ಎಂಪಾಸಿಗೆ ಯಾವುದೇ ಅವಕಾಶ ಇರಲಿಲ್ಲ. ಈ ಗೆಲುವಿನೊಂದಿಗೆ ಕೊಲಂಬಿಯಾ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಗಳಿಸಿ ಕೆ ಗುಂಪಿನಿಂದ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎನಿಸಿತು. ಈಗ ಕೊನೆಯ ಲೀಗ್ ಪಂದ್ಯದಲ್ಲಿ ಕೊಲಂಬಿಯಾ ಮತ್ತು ಪೋರ್ಚುಗಲ್ ಮುಖಾಮುಖಿಯಾಗಲಿವೆ. ಆ ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಕೊಲಂಬಿಯಾ ಗುಂಪಿನ ಬೆಸ್ಟ್ ತಂಡವಾಗಲಿದೆ. ಅದೇ ಫಲಿತಾಂಶ ಪೋರ್ಚುಗಲ್ ತಂಡಕ್ಕೂ ನಾಕೌಟ್ ಹಂತದ ಟಿಕೆಟ್ ನೀಡಲಿದೆ.

- ಡ್ಯಾನಿಯಲ್ ಮುನೋಸ್ (76ನೇ ನಿಮಿಷ) ನಿರ್ಣಾಯಕ ಗೋಲು
- ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಐದು ಅದ್ಭುತ ಸೇವ್

ಕ್ರೊಯೇಷ್ಯಾ ಆಸೆ ಜೀವಂತ

• **ಟೊರೊಂಟೊ:** ಅನುಭವಿ ನಾಯಕ ಲೂಕಾ ಮೊಡ್ರಿಚ್ ಅವರ 200ನೇ ಅಂತಾರಾಷ್ಟ್ರೀಯ ಪಂದ್ಯದಲ್ಲಿ, ಬದಲಿ ಆಟಗಾರ ಅಂಟೆ ಬುಡಿಮಿರ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಕ್ರೊಯೇಷ್ಯಾ 1-0 ಅಂತರದಲ್ಲಿ ಪನಾಮಾವನ್ನು ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಮೊದಲಾರ್ಧದಲ್ಲಿ ಉಭಯ ತಂಡಗಳು ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಆದರೆ ದ್ವಿತೀಯಾರ್ಧ ಆರಂಭವಾದ ಕೆಲವೇ ಕ್ಷಣಗಳಲ್ಲಿ ಕ್ರೊಯೇಷ್ಯಾ ಪಂದ್ಯದ ಮೇಲೆ ಹಿಡಿತ ಸಾಧಿಸಿತು. 54ನೇ ನಿಮಿಷದಲ್ಲಿ ಜೋಸಿಪ್ ಸ್ಟಾನಿಸಿಚ್ ನೀಡಿದ ನಿಖರ ಕ್ರಾಸ್ ಅನ್ನು ಅಂಟೆ ಬುಡಿಮಿರ್ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. ಅದೇ ಗೋಲಿನ ಬಲದಿಂದ ಕ್ರೊಯೇಷ್ಯಾ ಪಂದ್ಯವನ್ನು ಗೆದ್ದುಕೊಂಡಿತು.

ಇಂಗ್ಲೆಂಡ್-ಘಾನಾ ಪಂದ್ಯ ಡ್ರಾ

• **ಫಾಕ್ಸ್‌ಬರೋ:** ಚೆಂಡಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ, ಗೋಲು ಅವಕಾಶಗಳ ಸುರಿಮಳೆಯನ್ನೇ ಸೃಷ್ಟಿಸಿದರೂ ಇಂಗ್ಲೆಂಡ್‌ಗೆ ಗೆಲುವು ಸಿಗಲಿಲ್ಲ. ಘಾನಾ ವಿರುದ್ಧದ ವಿಶ್ವಕಪ್ ಎಲ್ ಗುಂಪಿನ ಪಂದ್ಯ 0-0 ಗೋಲುರಹಿತ ಡ್ರಾದಲ್ಲಿ ಅಂತ್ಯಗೊಂಡಿತು. ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ ಇಂಗ್ಲೆಂಡ್ 19 ಶಾಟ್‌ಗಳನ್ನು ಪ್ರಯತ್ನಿಸಿದರೆ, ಘಾನಾ ಕೇವಲ ಒಂದು ಪ್ರಯತ್ನಕ್ಕೆ ಸೀಮಿತವಾಯಿತು. ಆದರೆ ಗೋಲು ಮಾತ್ರ ಎರಡೂ ತಂಡಗಳಿಂದ ಬರಲಿಲ್ಲ. ಮೊದಲಾರ್ಧದಲ್ಲಿ 60 ಶೇಕಡಾ ಚೆಂಡಿನ ಹಿಡಿತ ಹೊಂದಿದ್ದ ಇಂಗ್ಲೆಂಡ್ ಹಲವು ದಾಳಿಗಳನ್ನು ನಡೆಸಿದರೂ ಗೋಲು ಖಾತೆ ತೆರೆಯಲಿಲ್ಲ. ದ್ವಿತೀಯಾರ್ಧದಲ್ಲಿ ಘಾನಾ ಹೆಚ್ಚು ಆಕ್ರಮಣಕಾರಿ ಆಟವಾಡಿ ಇಂಗ್ಲೆಂಡ್‌ಗೆ ಸವಾಲೊಡ್ಡಿತು. ಈ ಫಲಿತಾಂಶದೊಂದಿಗೆ ಗುಂಪು ಎಲ್‌ನಲ್ಲಿ ನಾಕೌಟ್ ಪ್ರವೇಶದ ಹೋರಾಟ ಮತ್ತಷ್ಟು ರೋಚಕವಾಗಿದೆ. ಇಂಗ್ಲೆಂಡ್ ಮತ್ತು ಘಾನಾ ಎರಡೂ ತಂಡಗಳು ತಮ್ಮ ಅಂತಿಮ ಗುಂಪು ಪಂದ್ಯಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಕಾದಿವೆ.

ತ್ರಿಶಾ-ಗಾಯತ್ರಿ ಮುನ್ನಡೆ

• **ಫುಲ್ಲರ್‌ಟನ್(ಅಮೆರಿಕ):** ಮೂರು ಸುತ್ತುಗಳ ರೋಚಕ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ ಜೋಡಿ ಇಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದಿದೆ.

[illegible]

ಬುಧವಾರ ಶುರುವಾಗಿರುವ ಬ್ಯಾಡ್ಮಿಂಟನ್ ಕ್ಷೇತ್ರದ ಉತ್ತುಂಗ ಪಂದ್ಯಾವಳಿಯಲ್ಲಿ ಒಂದಾದ ಯುಎಸ್ ಓಪನ್ ಟೂರ್‌ನಲ್ಲಿ ಸ್ಪೇನ್‌ನ ಪೌಲಾ ಲೊಪೇಜ್ ಮತ್ತು ಲೂಸಿಯಾ ಅವರನ್ನು ಎದುರಿಸಿದ್ದ ಭಾರತ ಜೋಡಿ 21-12, 14-21, 21-13ರಿಂದ ಮೇಲುಗೈ ಸಾಧಿಸಿತು. ಗಾಯದ ಕಾರಣದಿಂದಾಗಿ ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ನಿಂದ ದೂರ ಉಳಿದಿದ್ದ ತ್ರಿಶಾ ಕಂಬ್ಯಾಕ್ ಮಾಡಿದರು. ಅವರಿಗೆ ಗಾಯತ್ರಿ ಸಾಥ್ ಸಿಕ್ಕಿತು. ಇಬ್ಬರೂ ಮೊದಲಿನಿಂದಲೂ ಕರಾರುವಾಕ್ ದಾಳಿ ಸಂಘಟಿಸಿದರು. ಆಕ್ರಮಣಕಾರಿ ಆಟದೊಂದಿಗೆ ಮೊದಲ ಸೆಟ್ ಅನ್ನು 21-12ರಿಂದ ಗೆದ್ದರು. ಎರಡನೇ ಸೆಟ್‌ನಲ್ಲಿ ಹಿನ್ನಡೆಯಾಯಿತು. ಎದುರಾಳಿ ಲೂಸಿಯಾ ಮತ್ತು ಪೌಲಾ ಎರಡನೇ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ 21-14ರಿಂದ ಗೆದ್ದರು. ಮೂರನೇ ಸೆಟ್‌ನಲ್ಲಿ ಮತ್ತೆ ದಾಳಿಗಿಳಿದ ಭಾರತ 21-13ರೊಂದಿಗೆ ಗೆದ್ದು ಎರಡನೇ ಸೆಟ್‌ಗೆ ಲಗ್ಗೆ ಹಾಕಿತು. ಮುಂದಿನ ಸೆಟ್‌ನಲ್ಲಿ ಈ ಜೋಡಿ, ಜಪಾನ್‌ನ ನಕಾಡೆ ಮತ್ತು ಮಿಯು ಅವರನ್ನು ಎದುರಿಸಲಿದೆ.

ಮುಖ್ಯ ಡ್ರಾಗೆ ರೌನಕ್: ಭಾರತದ ಉದಯೋನ್ಮುಖ ಆಟಗಾರ ರೌನಕ್ ಚೌಹಾಣ್ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮಿಂಚುವುದರೊಂದಿಗೆ ಮೊದಲ ಸ್ಥಾನ ಪಡೆದು ಮುಖ್ಯ ಡ್ರಾಗೆ ಅರ್ಹರಾದರು. ಸತತ ಎರಡು ಗೆಲುವು ಸಾಧಿಸಿದ ಅವರು, ಮೊದಲಿಗೆ ಇನೊಗಾಟ್ ಎರಡನೇ ಸುತ್ತಿನಲ್ಲಿ ಕುವೊ ಕುವಾನ್ ಅವರನ್ನು ಎದುರಿಸಿದ್ದರು. ದಿನದ ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಇನೊಗಾಟ್ ರಾಯ್ ಅವರನ್ನು ಎದುರಿಸಿ 21-19, 21-16ರಿಂದ ಗೆದ್ದರು. ಎರಡನೇ ಪಂದ್ಯದಲ್ಲಿ ತೈವಾನ್‌ನ ಕುವಾನ್ ಅವರೊಂದಿಗೆ 13-21 21-14 21-10 ರಿಂದ ಗೆದ್ದರು.

ಶುಭಮನ್ ಗಿಲ್‌ಗೆ 2ನೇ ಶ್ರೇಯಾಂಕ

• **ದುಬೈ:** ಟೆಸ್ಟ್ ಹಾಗೂ ಏಕದಿನ ತಂಡಗಳ ನಾಯಕ ಶುಭಮನ್ ಗಿಲ್ ಅವರು ಏಕದಿನ ಮಾದರಿಯಲ್ಲಿ ನಂಬರ್ 1 ಆಗುವತ್ತ ಸಾಗಿದ್ದು, ಪ್ರಕಟಗೊಂಡ ಶ್ರೇಯಾಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.

ಅಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಅವರು, ತಮ್ಮ ಮೊದಲ ಸ್ಥಾನಕ್ಕೇಗ ದೂರವೇನಿಲ್ಲ. ಮೊದಲಿನಿಂದಲೂ ಏಕದಿನ ಮಾದರಿಯಲ್ಲಿ ಪರಿಣಾಮಕಾರಿಯಾಗಿ ಪ್ರದರ್ಶನ ನೀಡಿರುವ ಗಿಲ್ ಅಫ್ಘಾನಿಸ್ತಾನ ವಿರುದ್ಧದ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಅನಿಸಿದ್ದರು. ಈ ಬೆನ್ನಲ್ಲೇ ನ್ಯೂಜಿಲೆಂಡ್‌ನ ಡ್ಯಾರಿಲ್ ಮಿಚೆಲ್ ಅವರ ನಂತರದ ಸ್ಥಾನ ಪಡೆದಿದ್ದಾರೆ.

ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅಫ್ಘಾನಿಸ್ತಾನ ಸರಣಿ ಆಡದ ಬೆನ್ನಲ್ಲೇ ಒಂದು ಸ್ಥಾನ ಇಳಿದಿದ್ದಾರೆ. ಇಷ್ಟು ದಿನ ಎರಡನೇ ಸ್ಥಾನದಲ್ಲಿದ್ದ ಅವರು, 768 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕಿಳಿದಿದ್ದಾರೆ. ರೋಹಿತ್ ಶರ್ಮ ನಾಲ್ಕನೇ ಸ್ಥಾನದಲ್ಲಿರುವ ಬೆನ್ನಲ್ಲೇ ಅಗ್ರ ಐದರಲ್ಲಿ ಮೂವರು ಭಾರತೀಯರಿರುವುದು ಭಾರೀ ಭರವಸೆ ಹೆಚ್ಚಿಸಿದೆ.

ಟೆಸ್ಟ್ ಬೌಲಿಂಗ್: ಬೂಮ್ರಾ ಸರಿಗಟ್ಟಿದ ಹೆನ್ರಿ: ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ವರ್ಷಾನುಗಟ್ಟಲೆ ನಂಬರ್ 1 ಆಗಿದ್ದ ಜಸ್‌ಪ್ರೀತ್ ಬೂಮ್ರಾ ಮೊದಲನೇ ಸ್ಥಾನದಲ್ಲಿದ್ದರೂ, ಅವರ ಸನಿಹಕ್ಕೂ ಯಾರೊಬ್ಬರು ಬಂದಿರಲಿಲ್ಲ. ಆದರೆ ಇತ್ತೀಚೆಗಷ್ಟೇ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ 11 ವಿಕೆಟ್ ಪಡೆದು ಗಮನ ಸೆಳೆದಿದ್ದರು. ಈ ಬೆನ್ನಲ್ಲೇ ನಂಬರ್ ಒನ್ ಸ್ಥಾನವನ್ನು ಬೂಮ್ರಾ ಅವರೊಂದಿಗೆ 870 ಅಂಕಗಳೊಂದಿಗೆ ಹಂಚಿಕೊಂಡಿದ್ದಾರೆ.

ಮಹಿಳೆಯರ ವಿಶ್ವಕಪ್ | ಇಂದು ಭಾರತ-ಬಾಂಗ್ಲಾ ಪಂದ್ಯ

ಭಾರತಕ್ಕೆ ಪುಟಿದೇಳುವ ಭರವಸೆ

• **ಬ್ರಿಸ್ಟಲ್(ಇಂಗ್ಲೆಂಡ್):** ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದರೂ ಕಳೆದ ಪಂದ್ಯದಲ್ಲಿ ಸೋಲಿನೊಂದಿಗೆ ನಿರಾಸೆ ಮೂಡಿಸಿರುವ ಭಾರತ ಮಹಿಳಾ ತಂಡವು ಗುರುವಾರದ ಮಹತ್ವ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ.

ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಎರಡನೇ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿ ವಿಶ್ವಕಪ್‌ನಲ್ಲಿ ದೊಡ್ಡ ಮುನ್ನಡೆ ಸಾಧಿಸಿದ್ದ ಭಾರತ ಮಹಿಳೆಯರ ತಂಡ ಕಳೆದ ಪಂದ್ಯದಲ್ಲಿ ದ.ಆಫ್ರಿಕಾ ವಿರುದ್ಧ ವಿರೋಚಿತ ಸೋಲನುಭವಿಸಿದ್ದು, ಗೆಲುವಿನ ಮೂಲಕ ಉತ್ತರಿಸಬೇಕಿದೆ. ಅತ್ತ ಬಾಂಗ್ಲಾದೇಶವು ಉಳಿಗಾಲಕ್ಕಾಗಿ ಹೋರಾಡಬೇಕಿದೆ. ಭಾರತದ ನಾಲ್ಕನೇ ಪಂದ್ಯ ಬ್ರಿಸ್ಟಲ್‌ನಲ್ಲಿ ನಡೆಯಲಿದೆ. ಭಾರತದ ಎಲ್ಲಾ ಪಂದ್ಯಗಳು ಸಂಜೆ ನಡೆಯಲಿವೆ.

ಮಂಧಾನ, ಕೌರ್, ಶೆಫಾಲಿ ಮತ್ತು ರಿಚಾ ಅವರ ಬ್ಯಾಟಿಂಗ್ ಬಲದೊಂದಿಗೆ ಭಾರತ ಕಣಕ್ಕಿಳಿಯುತ್ತಿದೆ. ಕಳೆದ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಬಾಂಗ್ಲಾದೇಶವು ಸಂಯೋಜಿತ ತಂಡದೊಂದಿಗೆ ಕಣಕ್ಕಿಳಿಯಲಿದೆ. ಗೆದ್ದರೆ ಭಾರತದ ಸೂಪರ್-8 ಬಹುತೇಕ ಖಚಿತವಾಗಲಿದೆ. ಅತ್ತ ಬಾಂಗ್ಲಾ ಗೆದ್ದರೆ ಸಮಾಧಾನ ಸಿಗಲಿದೆ.

ಭಾರತಕ್ಕೆ ಭರವಸೆ: ಮೂರು ಪಂದ್ಯಗಳಲ್ಲಿ ಸ್ಮೃತಿ ಮಂಧಾನ 159 ರನ್ ಗಳಿಸಿದ್ದಾರೆ. ಆ ಮೂಲಕ ಭಾರತದ ಭರವಸೆಯಾಗಿದ್ದು, ರನ್ ಗಳಿಸುವ ದೊಡ್ಡ ಜವಾಬ್ದಾರಿ ನಿಭಾಯಿಸಲು ಸಜ್ಜಾಗಿದ್ದಾರೆ. 92 ರನ್ ಗೂಡಿಸಿರುವ ಶೆಫಾಲಿ ವರ್ಮಾ ಕೂಡ ಪರಿಣಾಮಕಾರಿ ಪ್ರದರ್ಶನ ನೀಡುವುದಕ್ಕೆ ಸಿದ್ಧರಾಗಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಹರ್ಮನ್‌ಪ್ರೀತ್ ಕೌರ್ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಮಾಡಬೇಕಿದೆ. 72 ರನ್ ಮಾಡಿರುವ ಅವರು, ದೊಡ್ಡ ಇನ್ನಿಂಗ್ಸ್ ಕಟ್ಟಬೇಕಿದೆ. ಏಕದಿನ ವಿಶ್ವಕಪ್‌ನ ಗೆಲುವಿನ ರೂವಾರಿಯಾಗಿದ್ದ ಜೆಮಿಮಾ ರಾಡ್ರಿಗ್ಸ್ ಬ್ಯಾಟ್‌ನಿಂದ ರನ್ ಬರಬೇಕಿದೆ. ರಿಚಾ ಘೋಷ್ ಕೊನೆಯಲ್ಲಿ ಲಯದಲ್ಲಿದ್ದು, ಕೊನೆಯ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಈ ವರೆಗೂ 69 ರನ್ ಗಳಿಸಿದ್ದಾರೆ.

ಚಾರಣಿ ಬಲ: ಭಾರತಕ್ಕಿರುವ ದೊಡ್ಡ ಬಲವೇ ಶ್ರೀ ಚಾರಣಿ ಅವರ ಅದ್ಭುತ ಪ್ರದರ್ಶನ. ಪಾಕಿಸ್ತಾನ ವಿರುದ್ಧದ ಪಂದ್ಯದಿಂದಲೂ ಕರಾರುವಾಕ್ ದಾಳಿಯೊಂದಿಗೆ ಗೆಲುವಿನಲ್ಲಿ ಮಿಂಚುತ್ತಿರುವ ಅವರು, ಭಾರತದ ದೊಡ್ಡ ಶಕ್ತಿ. ಆಡಿರುವ ಮೂರೇ ಪಂದ್ಯಗಳಲ್ಲಿ ಈಗಾಗಲೇ 10 ವಿಕೆಟ್ ಕಿತ್ತಿದ್ದಾರೆ. ಉಳಿದಂತೆ ದೀಪ್ತಿ ಶರ್ಮಾ ಮೊದಲನೇ ಪಂದ್ಯದಲ್ಲಿ ಐದು ವಿಕೆಟ್ ಕಿತ್ತಿದ್ದರು. ಪರಿಣಾಮ ಅವರೂ ಭರ್ಜರಿ ಲಯದಲ್ಲಿದ್ದಾರೆ. ಬ್ಯಾಟಿಂಗ್‌ನಲ್ಲಿ ಮಿಂಚುವ ಶೆಫಾಲಿ ವರ್ಮಾ ಬೌಲಿಂಗ್‌ನಲ್ಲೂ ಮಿಂಚಿದ್ದಾರೆ. ಚಾರಣಿ ಅವರ ಬಲದೊಂದಿಗೆ ಭಾರತ ಗೆಲುವಿನ ಹಾದಿಯಲ್ಲಿರುವ ಭರವಸೆಯಲ್ಲಿದೆ.

ಪಿಚ್

ಇಂಗ್ಲೆಂಡ್‌ನ ಬ್ರಿಸ್ಟಲ್ ಕ್ರೀಡಾಂಗಣ ಸಮತೋಲಿತ ಟ್ರ್ಯಾಕ್ ಅನ್ನು ಹೊಂದಿದೆ. ಆಸ್ಟ್ರೇಲಿಯಾ ಅಂಥ ತಂಡಗಳು ಭರ್ಜರಿ ಬ್ಯಾಟಿಂಗ್ ಮಾಡಿದ್ದರೂ ಬೌಲಿಂಗ್ ಮಾಡುವ ವೇಳೆ ಎದುರಾಳಿಗಳು ಪರದಾಡಿದ್ದಾರೆ. ಹಾಗೆಂದರೆ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡನ್ನೂ ಮಾಡಬಹುದಾದ ಪಿಚ್ ಹೊಂದಿದೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಅಲ್ಪ ಲಾಭ ಸಿಗಲಿದೆ.

ಮೈಸೂರು ವಾರಿಯರ್ಸ್‌ಗೆ ಮೊದಲ ಗೆಲುವು

• **ಮೈಸೂರು/ಬೆಂಗಳೂರು:** ಸತತ ಎರಡು ಸೋಲಿನ ಬಳಿಕ ಕೊನೆಗೂ ಗೆಲುವು ಸಾಧಿಸಿರುವ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಖಾತೆ ತೆರೆದಿದೆ. ಅತ್ತ ಬೆಂಗಳೂರು ಬ್ಲಾಸ್ಟರ್ಸ್ ಮೊದಲ ಸೋಲು ಕಂಡರೂ ಬುಧವಾರದ ಪಂದ್ಯದಲ್ಲಿ ಮತ್ತೆ ಗೆಲುವು ಸಾಧಿಸಿದೆ.

ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಮೈಸೂರು ದೊಡ್ಡ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿ 203 ರನ್ ಗಳಿಸಿದ ಮೈಸೂರು ಬೆಂಗಳೂರು ತಂಡವನ್ನು 131 ರನ್‌ಗಳಿಗೆ ಆಲೌಟ್ ಮಾಡುವುದಕ್ಕೆ 16 ಓವರ್ ತೆಗೆದುಕೊಂಡಿತು. ಚೇತನ್ ಎಲ್.ಆರ್. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 60 ಬಾಲ್‌ಗಳಲ್ಲಿ 9 ಬೌಂಡರಿ, 7 ಸಿಕ್ಸರ್ ಬಾರಿಸಿ 100 ರನ್ ಗಳಿಸಿದರು. ಅತ್ತ ಕೆಪಿ ಕಾರ್ತಿಕ್ ಕೂಡ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 41 ಬಾಲ್ ಎದುರಿಸಿದ ಕಾರ್ತಿಕ್ ಔಟಾಗದೆ 61 ರನ್ ಗಳಿಸಿದರು. ಗುರಿ ಬೆನ್ನತ್ತುವಾಗ ಬೆಂಗಳೂರು ಪರ ಸಮಿತ್ ದ್ರಾವಿಡ್ 30, ಪ್ರವೀಣ್ ದುಬೆ 36 ರನ್ ಗಳಿಸಿದರು. ಮೈಸೂರು ಪರ ಅರ್ವಿಂದ್ ಕುಮಾರ್ 17 ರನ್ ಮಾತ್ರಕ್ಕೆ 4 ವಿಕೆಟ್ ಕಿತ್ತರು.

ಮಂಗಳೂರು-ಬೆಂಗಳೂರು ಪಂದ್ಯದ ವೇಳೆ ಮಿಂಚಿದ ಸೂರಜ್ ಅಹುಜಾ.

ಮಂಗಳೂರು ವಿರುದ್ಧ ಗೆದ್ದ ಬ್ಲಾಸ್ಟರ್ಸ್: ಸಾಂಘಿಕ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಮಂಗಳೂರು ತಂಡದ ಮೇಲೆ ಒತ್ತಡ ಹೇರಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮತ್ತೆ ಗೆಲುವಿನ ನಗೆ ಬೀರಿತು. ಮಂಗಳವಾರ ರಾತ್ರಿಯಷ್ಟೇ ಸೋಲನುಭವಿಸಿದ್ದ ಕಲ್ಯಾಣಿ ತಂಡವು, ಗೆಲುವಿನ ಹಾದಿಗೆ ಮರಳಿಯೇ ಬಿಟ್ಟಿತು.

ಮೈಸೂರಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 226 ರನ್ ಗಳಿಸಿತು. ರೋಹನ್ ಪಾಟೀಲ್ 30, ಕೃಷ್ಣನ್ ಶ್ರೀಜಿತ್ 59, ಸಮಿತ್ ದ್ರಾವಿಡ್ 39, ಶುಭಾಂಗ್ ಹೆಗ್ಡೆ 34 ಮತ್ತು ಪ್ರವೀಣ್ ದುಬೆ 45 ರನ್ ಗಳಿಸಿದರು. ಮಂಗಳೂರು ಪರ ಕೋದಂಡ ಅಜಿತ್ 3 ವಿಕೆಟ್ ಕಿತ್ತರು.

ಸೂರಜ್ ಹೋರಾಟ ವ್ಯರ್ಥ: ಗುರಿ ಬೆನ್ನತ್ತಿದ ಮಂಗಳೂರು ಕೂಡ ಹೋರಾಟ ನಡೆಸಿತು. 8 ಸಿಕ್ಸರ್ ಹಾಗೂ 5 ಬೌಂಡರಿಗಳನ್ನು ಬಾರಿಸಿದ ಮಂಗಳೂರು ವಿಕೆಟ್ ಕೀಪರ್ ಸೂರಜ್ ಅಹುಜಾ 38 ಬಾಲ್ ಮಾತ್ರದಲ್ಲಿ 96 ರನ್ ಬಾರಿಸಿದರು. ಆರಂಭಿಕರಿಂದ ರನ್ ಬರದಿದ್ದಾಗ ಮಿಂಚಿದ ಅವರು, ಗಮನ ಸೆಳೆದಿದ್ದಂತೂ ಸುಳ್ಳಲ್ಲ. ಅಜಿತ್ ಕೂಡ 27 ಬಾಲ್‌ಗಳಲ್ಲಿ 49 ರನ್ ಬಾರಿಸಿದರು. ಇವರಿಬ್ಬರ ಶತಪ್ರಯತ್ನ ಹೊರತಾಗ್ಯೂ 5 ವಿಕೆಟ್ ಕಳೆದುಕೊಂಡ ಮಂಗಳೂರು 20 ಓವರ್‌ಗಳಲ್ಲಿ 206 ರನ್ ಮಾತ್ರವೇ ಗಳಿಸಿತು.

ಪದಬಂಧ

6025

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

1.ಮಂಚ-ಪಲ್ಲಂಗದ ಸಮಾನಪದ (3)
4.ಈತ ಸತ್ಕಾರ್ಯಗಳನ್ನು ಮಾಡುವವನು (5)
6.ಜಲದಲ್ಲಿ ಹುಟ್ಟಿದ್ದು- ತಾವರೆ (3)
7.ಎಲ್ಲರ ಕಾಲೆಳೆಯುವ ಸಮಯ (3)
9.ನಕುಲವನ್ನೊಳಗೊಂಡ ಮನುಷ್ಯಜಾತಿ (4)
10.ಈಕೆ ದುರ್ಯೋಧನನ ಹೆಂಡತಿ (4)
12.ಗಣಪತಿಯಿಂದ ಹಾರೈಸಿಕೊಂಡ ಪತಿವ್ರತೆ (3)
14.ಒಂದು ವಿಷಯದಲ್ಲಿ ಪಂಡಿತನೀತ (3)
15.ವಧೂವರರ ನಡುವೆ ಹಿಡಿದ ಬಟ್ಟೆ (5)
17.ಉಗುರು ಮುಂತಾದವುಗಳಿಂದ ಗೀಬರು (3)

ಮೇಲಿನಿಂದ ಕೆಳಕ್ಕೆ

1.ಪರಿಹಾರ ಪಡೆದು ಮಾಡಿದ ಆಣಕ (4)
2.ಎಣಿಸತಕ್ಕದ್ದು- ಲಕ್ಷಿಸಬೇಕಾದುದು (4)
3.ತಂಪು- ನೆಗಡಿಯ ಸಮಾನಪದ (2)
4.ಇವರು ಒಳ್ಳೆಯ ಮಂದಿ (3)
5.ಕರ ಕೀಡುತ್ತಾ ಹೋದದ್ದು ಈ ಸಮುದ್ರದಂಡೆಯೆಡೆಗೆ (5)
8.ಕೌರವ- ಪಾಂಡವರ ಕಥೆ ಹೇಳುವ ಕಾವ್ಯ (5)
11.ಮಹಾರಾಷ್ಟ್ರ ಗಡಿಯಲ್ಲಿರುವ ವಿಜಯಪುರ ಜಿಲ್ಲೆಯ ತಾಲ್ಲೂಕು (3)
12.ಜೋರು ಮಾತಾಡಿ ಹೆದರಿಸುವುದು (4)
13.ಅನ್ನದೊಂದಿಗೆ ಸೇವಿಸುವ ತೆಳ್ಳನೆಯ ಮೇಲೋಗರ (4)
16.ಸರಕನ್ನು ಹೊರದೇಶಕ್ಕೆ ಕಳಿಸುವುದು (2)

6024 ಉತ್ತರ

ಎಡದಿಂದ ಬಲಕ್ಕೆ:

1.ಕೋರಿಕೆ
3.ಸುಗಂಧರಾಜ
5.ಸಹಿತ 7.ರಿಕ್ತ
8.ಗಣಿತಜ್ಞ 9.ರಸಾಯನ
11.ಕಂಸ 13.ನಟ್ಟುವ
15.ದಂತಧಾವನ
16.ಉದಾತ್ತ

ಮೇಲಿನಿಂದ ಕೆಳಕ್ಕೆ :

1.ಕೋತಾಮರಿ 2.ಕೆಲಸ
3.ಸುನೀತ 4.ರಾಜದೂತ
6.ಹಿರಿತನ 8.ಗದಗುಟ್ಟು
10.ಸಾಲಂಕೃತ
12.ಸಮುಚಿತ 13.ನಮನ
14.ಉದ್ಭವ

ಕಿರುಸುದ್ದಿ

ಗಾಂಜಾ ಸಾಗಾಟ: ಇಬ್ಬರು ಆರೋಪಿಗಳಿಗೆ ಕಠಿಣ ಜೈಲು ಶಿಕ್ಷೆ

• **ಕಾಸರಗೋಡು:** ಮಾದಕ ದ್ರವ್ಯ ಗಾಂಜಾವನ್ನು ಬೈಕ್‌ನಲ್ಲಿ ಸಾಗಿಸಿದ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ಕಾಸರಗೋಡಿನ ನ್ಯಾಯಾಲಯವು ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ. ಮೊದಲ ಆರೋಪಿ ಕಲಂದರ್ ಶಾಫಿ (34) ಮತ್ತು ಎರಡನೇ ಆರೋಪಿ ಸಂದೇಶ್ ಬಿ. (27) ಎಂಬವರಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ದ್ವಿತೀಯ) ನ್ಯಾಯಾಧೀಶ ರಾಮು ರಮೇಶಚಂದ್ರಭಾನು ಈ ಶಿಕ್ಷೆ ವಿಧಿಸಿದ್ದಾರೆ. ದಂಡ ಪಾವತಿಸದಿದ್ದಲ್ಲಿ ಹೆಚ್ಚುವರಿಯಾಗಿ ಎರಡು ತಿಂಗಳು ಜೈಲು ಶಿಕ್ಷೆ ಅನುಭವಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಗಾಂಜಾ ಸಸಿಗಳು ಪತ್ತೆ

• **ಕಾಸರಗೋಡು:** ಆಪರೇಶನ್ ತೂಫಾನ್‌ನ ಅಂಗವಾಗಿ ಬೇಕಲ ಪೊಲೀಸರು ಪೆರಿಯ ಸಮೀಪದ ಆಯಂಪಾರ ಚೆಕ್ಕಿಪಳ್ಳ ಎಂಬಲ್ಲಿ ಬಾಡಿಗೆ ಕ್ವಾರ್ಟರ್ಸ್ ಪರಿಸರದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ನೆಟ್ಟು ಬೆಳೆಸಿದ ಗಾಂಜಾ ಸಸಿಗಳನ್ನು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದಾರೆ.

ವಲಸೆ ಕಾರ್ಮಿಕರು ಹೆಚ್ಚಾಗಿ ವಾಸಿಸುವ ಬಾಡಿಗೆ ಕ್ವಾರ್ಟರ್ಸ್ ಸಮೀಪದಲ್ಲಿ ಗಾಂಜಾ ಗಿಡಗಳು ಪತ್ತೆಯಾಗಿವೆ. ಈ ಸಸಿಗಳು ಎತ್ತರಕ್ಕೆ ಬೆಳೆದಿದ್ದವು. ಈ ಬಗ್ಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

ಗುತ್ಯಡ್ಕದಲ್ಲಿ ಚಿರತೆ ಆತಂಕ: ಸಾಕುಪ್ರಾಣಿಗಳು ನಿಗೂಢ ನಾಪತ್ತೆ

• **ಮುಳ್ಳೇರಿಯ:** ಕೇರಳ – ಕರ್ನಾಟಕ ಗಡಿಪ್ರದೇಶವಾದ ಗುತ್ಯಡ್ಕದ ಮನೆ ಪರಿಸರದಲ್ಲಿ ಕಟ್ಟಿ ಹಾಕಿದ್ದ ಎರಡು ಸಾಕುನಾಯಿಗಳು ನಿಗೂಢವಾಗಿ ನಾಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳಲ್ಲಿ ಚಿರತೆ ಭೀತಿ ಆವರಿಸಿದೆ. ಬೆಳ್ಳೂರು ಗ್ರಾಮ ಪಂಚಾಯತ್‌ನ ಕಾಯರ್ ಪದವು ಮೂಲಕ ಕರ್ನಾಟಕದ ಈಶ್ವರಮಂಗಲವನ್ನು ಸಂಪರ್ಕಿಸುವ ಗಡಿಭಾಗದಲ್ಲಿ ಈ ಘಟನೆ ನಡೆದಿದ್ದು, ಮಂಗಳವಾರ ಬೆಳಗ್ಗೆ ಮನೆಯವರು ನೋಡಿದಾಗ ಕಟ್ಟಿ ಹಾಕಿದ್ದ ನಾಯಿಗಳು ನಾಪತ್ತೆಯಾಗಿರುವುದು ಕಂಡುಬಂದಿದೆ. ಆದರೆ ಘಟನಾಸ್ಥಳದಲ್ಲಿ ಯಾವುದೇ ರಕ್ತದ ಕಲೆ ಅಥವಾ ಕಾಡುಪ್ರಾಣಿಗಳ ದಾಳಿಯ ಕುರುಹು ಗೋಚರಿಸಿಲ್ಲ. ಮಾತ್ರವಲ್ಲದೆ ಈ ಪರಿಸರದಲ್ಲಿ ನಾಯಿಗಳ ಅವಶೇಷಗಳು ಕಂಡುಬಂದಿಲ್ಲ.

ಈ ನಿಟ್ಟಿನಲ್ಲಿ ಹುಡುಕಾಡಿದಾಗ ಕೆಲವು ಪ್ರಾಣಿಗಳ ಹೆಜ್ಜೆ ಗುರುತುಗಳು ಗೋಚರಿಸಿದ್ದು, ಇದು ಚಿರತೆಯದ್ದಾಗಿರಬಹುದೇ ಎಂಬ ಬಗ್ಗೆ ಇನ್ನೂ ದೃಢಪಟ್ಟಿಲ್ಲ. ನಾಟೆಕಲ್ಲು ಬಳಿಯ ಚಾಲುಮೂಲೆಯಲ್ಲಿ ಇತ್ತೀಚೆಗೆ ಸಾಕುನಾಯಿಯೊಂದನ್ನು ಅಪರಿಚಿತ ಪ್ರಾಣಿ ತಿಂದು ಹಾಕಿದ ಸ್ಥಿತಿಯಲ್ಲಿತ್ತು. ಇದು ಚಿರತೆಯಾಗಿರಬಹುದೆಂದು ಸಂಶಯಿಸಲಾಗಿತ್ತು. ಇದೀಗ ಗುತ್ಯಡ್ಕದಲ್ಲೂ ಸ್ಥಳೀಯರು ಚಿರತೆ ಬಗ್ಗೆ ಭೀತರಾಗಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ತಲಪಾಡಿಯಲ್ಲಿ ಸರಣಿ ಅಪಘಾತ: ಹಲವರಿಗೆ ಗಾಯ

• **ಮಂಜೇಶ್ವರ:** ತಲಪಾಡಿಯಲ್ಲಿ ಸಂಭವಿಸಿದ ಸರಣಿ ಅಪಘಾತದಲ್ಲಿ ಆಟೋರಿಕ್ಷಾ ಚಾಲಕನೊಬ್ಬ ಗಂಭೀರ ಗಾಯಗೊಂಡಿದ್ದು, ಅದರಲ್ಲಿದ್ದ ಇಬ್ಬರು ಮತ್ತು ಕಾರುಗಳಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಮಂಗಳವಾರ ಸಂಜೆ ಈ ಅಪಘಾತ ಸಂಭವಿಸಿದೆ. ಕಾಸರಗೋಡು ಕಡೆಯಿಂದ ಮಂಗಳೂರಿಗೆ ತೆರಳುತ್ತಿದ್ದ ಕಂಟೈನರ್ ಲಾರಿ ಆಟೋರಿಕ್ಷಾಕ್ಕೆ ಡಿಕ್ಕಿಯಾಗುವುದನ್ನು ತಪ್ಪಿಸಲು ಚಾಲಕ ಬಲಭಾಗಕ್ಕೆ ತಿರುಗಿಸಿದಾಗ ಎದುರಿನಿಂದ ಬರುತ್ತಿದ್ದ ಮತ್ತೊಂದು ಲಾರಿ ಹಾಗೂ ಮೂರು ಕಾರು, ಆಟೋರಿಕ್ಷಾಕ್ಕೆ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಆಟೋ ಚಾಲಕ, ಕನ್ಯಾನ ನಿವಾಸಿ ಅಬ್ದುಲ್ ಅಜೀಜ್ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಮಂಜೇಶ್ವರ ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿ ಸೂಕ್ತ ಕ್ರಮಗಳನ್ನು ಕೈಗೊಂಡರು. ಕಂಟೈನರ್ ಲಾರಿಯ ಚಾಲಕ, ಬೆಂಗಳೂರು ನಿವಾಸಿ ವಡಿವೇಲು ಎಂಬಾತ ಮದ್ಯಪಾನಗೈದ ಹಿನ್ನೆಲೆಯಲ್ಲಿ ಈ ಅವಘಡಕ್ಕೆ ಕಾರಣವಾಯಿತೆಂದು ಪೊಲೀಸರು ತಿಳಿಸಿದ್ದಾರೆ.

ಲೈಂಗಿಕ ಕಿರುಕುಳ ಆರೋಪ: ಫಾರ್ಮಸಿ ಅಧಿಕಾರಿ ಅಮಾನತು

• **ಬೆಳ್ತಂಗಡಿ:** ಸರ್ಕಾರಿ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಮಹಿಳಾ ನೌಕರರೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿರುವ ಬಗ್ಗೆ ಆಸ್ಪತ್ರೆಯ ಫಾರ್ಮಸಿ ಅಧಿಕಾರಿ ಚಂದ್ರಶೇಖರ್ ಅವರನ್ನು ಜೂ 23 ರಂದು ಅಮಾನತು ಮಾಡಲಾಗಿದೆ.

ಬೆಳ್ತಂಗಡಿ ತಾಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಸಿಬ್ಬಂದಿಯೊಬ್ಬರಿಗೆ ಚಂದ್ರಶೇಖರ್ ಅವರು ಲೈಂಗಿಕ ಕಿರುಕುಳ ನೀಡುತ್ತಿರುವ ಬಗ್ಗೆ ಜೂ. 11 ರಂದು ದೂರು ನೀಡಿದ್ದು, ಈ ಬಗ್ಗೆ ಆಂತರಿಕ ದೂರು ಸಮಿತಿ ಸಭೆ ನಡೆಸಿ ಫಾರ್ಮಸಿ ಅಧಿಕಾರಿ ಚಂದ್ರ ಶೇಖರ್ ವಿರುದ್ಧ ಕಾನೂನು ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕೋರಿದ್ದು ಸದರಿ ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅಗತ್ಯ ಸೂಕ್ತ ದಾಖಲೆಗಳು ಹಾಗೂ ಆಂತರಿಕ ದೂರು ಸಮಿತಿ ಸಭೆಯ ಅಭಿಪ್ರಾಯ ಮತ್ತು ಶಿಫಾರಸ್ಸು ಇಲ್ಲದೇ ಇದುದರಿಂದ ಸಮಿತಿಯಿಂದ ದಾಖಲಾತಿಗಳನ್ನು ಪಡೆದು ಹಾಗೂ ಎಫ್ ಐಆರ್ ಸೇರಿದಂತೆ ಸಾಕ್ಷಿದಾರರ ಲಿಖಿತ ಹೇಳಿಕೆಯನ್ನು ಹಾಗೂ ದೂರುದಾರರು ತನಿಖೆಗೆ ಹಾಜರಾಗದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಚಂದ್ರಶೇಖರ್ ವಿರುದ್ಧದ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತ್ತುಗೊಳಿಸಲು ತೀರ್ಮಾನಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ನಿರ್ದೇಶಕಿ ಡಾ. ರಜನಿ ಎಂ. ತಕ್ಷಣದಿಂದಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿಟ್ಟು, ಅಮಾನತ್ತಿನ ಸಮಯದಲ್ಲಿ ಸಕ್ಷಮ ಪ್ರಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡುತಕ್ಕದ್ದಲ್ಲವೆಂದು ಆದೇಶಿಸಿದ್ದಾರೆ.

ಕಾರ್ಖಾನೆಯಿಂದ ಪರಿಸರಕ್ಕೆ ರಾಸಾಯನಿಕಯುಕ್ತ ನೀರು | ಆಡಳಿತ ವ್ಯವಸ್ಥೆ ಮಾತ್ರ ಇನ್ನೂ ಮೌನ

ಸ್ಥಳೀಯರ ಸಮಸ್ಯೆಗೆ ಈಗ 12ರ ಹರೆಯ!

ಈ ಕಾರ್ಖಾನೆ ಆರಂಭಗೊಂಡ ಬಳಿಕ ಇಲ್ಲಿ ಆಗುತ್ತಿರುವ ಜನಾರೋಗ್ಯದ ಸಮಸ್ಯೆ ಬಗ್ಗೆ ಕಳೆದ 12 ವರ್ಷಗಳಿಂದ ಸ್ಥಳೀಯ ಗ್ರಾ.ಪಂ.ನಿಂದ ಹಿಡಿದು ಪರಿಸರ ಮಾಲಿನ್ಯ ಇಲಾಖೆಯ ಉನ್ನತಾಧಿಕಾರಿಗಳ ತನಕ ದೂರನ್ನು ಸ್ಥಳೀಯರು ನೀಡುತ್ತಿದ್ದಾರೆ. ಜನಪ್ರತಿನಿಧಿಗಳಲ್ಲಿಯೂ ತಮ್ಮ ಬದುಕಿನ ಸಂಕಷ್ಟವನ್ನು ಹೇಳಿಕೊಂಡಿದ್ದಾರೆ. ಆದರೆ ಈ ತನಕ ಯಾವುದೇ ಪ್ರಯೋಜನವಾಗಿಲ್ಲ. ಮಳೆಗಾಲ ಆರಂಭಗೊಳ್ಳುತ್ತಿರುವಂತೆ ಈ ಪುರುಷರಕಟ್ಟೆ ಮುಕ್ವೆ ಮತ್ತು ಬೆದ್ರಾಳ ಭಾಗದ ಜನತೆಗೆ ಆತಂಕ ಪ್ರಾರಂಭವಾಗುತ್ತದೆ. ಕಾರ್ಖಾನೆಯ ತ್ಯಾಜ್ಯದಿಂದ ಮಕ್ಕಳ ಆರೋಗ್ಯ ಎಲ್ಲಿ ಕೆಡುತ್ತದೆಯೋ.. ನಮ್ಮ ಆರೋಗ್ಯಕ್ಕೆ ಯಾವ ಕುತ್ತು ಉಂಟಾಗುತ್ತಿದೆಯೋ ಎಂಬ ಭಯ ಕಾಡುತ್ತದೆ ಎನ್ನುತ್ತಾರೆ ಸ್ಥಳೀಯ ನಿವಾಸಿಗಳು.

12 ವರ್ಷಗಳಿಂದ ದೂರು

• **ಪುತ್ತೂರು:** ಪರಿಸರ ಸ್ವಚ್ಛತೆ, ಜೀವನಾರೋಗ್ಯ ರಕ್ಷಣೆ ಬಗ್ಗೆ ಮಾತನಾಡುವ ಅಧಿಕಾರಿಗಳು- ಜನಪ್ರತಿನಿಧಿಗಳು ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಬರುವ ರಾಸಾಯನಿಕಯುಕ್ತ ನೀರನ್ನು ಅಸಮರ್ಪಕವಾಗಿ ಹೊರಗೆ ಬಿಟ್ಟು ಜನರ ಆರೋಗ್ಯವನ್ನು ಹಾಳು ಮಾಡುತ್ತಿರುವ ವ್ಯವಸ್ಥೆ ಕುರಿತು ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ದೂರು ಕೊಟ್ಟರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಪುತ್ತೂರಿನ ಗ್ರಾಮಾಂತರ ಪ್ರದೇಶದ ಕಾರ್ಖಾನೆಯೊಂದರಿಂದ ಆಗುತ್ತಿರುವ ತೊಂದರೆಗಳ ಕುರಿತು ಕಳೆದ 12 ವರ್ಷಗಳಿಂದ ಸ್ಥಳೀಯ ಸಾರ್ವಜನಿಕರು ದೂರು ನೀಡಲಾಗುತ್ತಿದ್ದರೂ ಅಧಿಕಾರಿ ವರ್ಗ ಸ್ಪಂದನೆ ಮಾಡುತ್ತಿಲ್ಲ ಎಂಬುದು ಇದಕ್ಕೆ ದೊಡ್ಡ ಉದಾಹರಣೆಯಾಗಿದೆ.

ಕುಮಾರಧಾರಾ ನದಿಗೆ

ನರಿಮೊಗರು ಗ್ರಾಮದ ಪುರುಷರಕಟ್ಟೆ ಎಂಬಲ್ಲಿರುವ ಈ ದೊಡ್ಡ ಕಾರ್ಖಾನೆಯಿಂದ ಉಂಟಾಗುವ ತ್ಯಾಜ್ಯ ವಸ್ತುಗಳು ಹಾಗೂ ರಾಸಾಯನಿಕಯುಕ್ತ ನೀರನ್ನು ಸಮೀಪದ ತೋಡಿಗೆ ಬಿಡಲಾಗುತ್ತಿದ್ದು, ಇದು ಪುರುಷರಕಟ್ಟೆಯಿಂದ ಬೆದ್ರಾಳ ತೋಡಿನ ಮೂಲಕ ಕುಮಾರಧಾರಾ ನದಿಗೆ ಸೇರುತ್ತಿದೆ. ಇದೇ ನೀರನ್ನು ಪುತ್ತೂರು ನಗರದ ಜನತೆ ಕುಡಿಯಲು ಬಳಕೆ ಮಾಡುತ್ತಿದ್ದಾರೆ. ಈ ಕಾರ್ಖಾನೆಯವರು ಒಂದು ವರ್ಷದ ತ್ಯಾಜ್ಯಗಳನ್ನು ಶೇಖರಿಸಿಟ್ಟುಕೊಂಡು ಮಳೆಗಾಲ ಆರಂಭವಾದ ತಕ್ಷಣ ಅದನ್ನು ಪರಿಸರಕ್ಕೆ ಬಿಡುತ್ತಾರೆ. ಪ್ರತೀ ವರ್ಷವೂ ಇದೇ ಸಮಸ್ಯೆ. ಈ ಬಾರಿ ಮಳೆಗಾಲ ಆರಂಭಗೊಂಡರೂ ಸಮರ್ಪಕವಾಗಿ ಮಳೆ ಸುರಿಯದ ಕಾರಣ ತೋಡಿನಲ್ಲಿ ಈ ರಾಸಾಯನಿಕ ನೀರು ಅಲ್ಲಲ್ಲಿ ಶೇಖರಣೆಗೊಂಡಿದೆ. ಇದರಿಂದ ಪರಿಸರದ ತುಂಬಾ ಅಸಾಧ್ಯವಾದ ವಾಸನೆ ಉಂಟಾಗುತ್ತಿದೆ. ಪುರುಷರಕಟ್ಟೆ, ಬೆದ್ರಾಳ, ಮುಕ್ವೆ ಭಾಗದ ಸುಮಾರು 500 ಕುಟುಂಬಗಳ ಪಾಲಿಗೆ ನರಕದರ್ಶನವಾಗುವಂತೆ ಮಾಡುತ್ತಿದೆ.

ಕಾನೂನು ಕ್ರಮಕ್ಕೆ ಸ್ಥಳೀಯರ ಆಗ್ರಹ

ಕಾರ್ಖಾನೆಯಿಂದ ಉಂಟಾಗುತ್ತಿರುವ ಹಲವಾರು ಸಮಸ್ಯೆಗಳಿಂದ ಈ ಭಾಗದ ಜನತೆಯ ಬದುಕನ್ನು ಅಧಿಕಾರಿಗಳು ರಕ್ಷಿಸಬೇಕಾಗಿದೆ. ಕಾರ್ಖಾನೆಯಲ್ಲಿ ಇಂಗುಗುಂಡಿ ನಿರ್ಮಾಣ ಮಾಡುವ ಹಾಗೂ ಸ್ಟೋರೇಜ್ ವ್ಯವಸ್ಥೆಯನ್ನು ಕೈಗೊಳ್ಳುವ ವ್ಯವಸ್ಥೆಗಳು ತಕ್ಷಣ ನಡೆಯಬೇಕು. ಇಲ್ಲವಾದರೆ ಈ ಪರಿಸರ ಮಾಲಿನ್ಯದಿಂದ ಜನಾರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ. ಈ ಬಗ್ಗೆ ಅಧಿಕಾರಿಗಳು ಸ್ಥಳಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದ್ದಾರೆ.

ಸೂಕ್ತ ಕಾನೂನು ಕ್ರಮ

ಪುರುಷರಕಟ್ಟೆಯಲ್ಲಿ ಇರುವ ಫ್ಯಾಕ್ಟರಿಯಿಂದ ಕಲುಷಿತ ನೀರನ್ನು ಸಾರ್ವಜನಿಕ ಚರಂಡಿಯಲ್ಲಿ ಹರಿಯಬಿಡುವುದು ಕಾನೂನು ಪ್ರಕಾರ ತಪ್ಪು. ಜನತೆಯ ದೂರಿನ ಹಿನ್ನಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಚರಂಡಿ–ತೋಡಿಗೆ ಕಲುಷಿತ ನೀರು ಬಿಡದಂತೆ ಸಂಬಂಧಪಟ್ಟವರಿಗೆ ನೊಟೀಸು ನೀಡಲಾಗಿದೆ. ಮುಂದುವರಿದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು

■ **ಆಶಾ,** ಪಿಡಿಒ ನರಿಮೊಗರು ಗ್ರಾ.ಪಂ.

- ಪುರುಷರಕಟ್ಟೆ, ಬೆದ್ರಾಳ, ಮುಕ್ವೆ ಭಾಗದ ಸುಮಾರು 500 ಕುಟುಂಬಗಳ ಪಾಲಿಗೆ ನರಕದರ್ಶನ
- ಕಲ್ಮಶ ನೀರಿನಿಂದ ಪರಿಸರದಲ್ಲಿ ದುರ್ವಾಸನೆ ಜತೆಗೆ ಸೊಳ್ಳೆ ಉತ್ಪಾದನಾ ತಾಣವಾಗುತ್ತಿದೆ.

ಆರೋಗ್ಯಕ್ಕೆ ಹಾನಿಕರ

ಈ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ-ರಾಸಾಯನಿಕಯುಕ್ತ ನೀರಿನಿಂದ ಈ ಭಾಗದಲ್ಲಿ ಜನರ ಆರೋಗ್ಯ ಕೆಡುತ್ತಿದೆ. ತೋಡುಗಳಲ್ಲಿ ಶೇಖರಣೆಯಾಗಿರುವ ಕಲ್ಮಶ ನೀರಿನಿಂದ ಪರಿಸರದಲ್ಲಿ ದುರ್ವಾಸನೆ ಜತೆಗೆ ಸೊಳ್ಳೆ ಉತ್ಪಾದನಾ ತಾಣವಾಗುತ್ತಿದೆ. ದೂರು ಕೊಟ್ಟಾಗ ಒಮ್ಮೆ ಪರಿಶೀಲನೆ ನಾಟಕವಾಡಿ ಮತ್ತೆ ಮೌನವಾಗಿ ಬಿಡುತ್ತಾರೆ. ಜನರ ವಾಸಕ್ಕೂ ಕಷ್ಟವಾಗಿರುವ ಸ್ಥಿತಿ ಒಂದು ಕಡೆಯಾದರೆ, ಪರಿಸರ ಮಾಲಿನ್ಯ ಉಂಟಾಗುತ್ತಿದ್ದರೂ ಈ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳಲು ಅಧಿಕಾರಿಗಳು ಮುಂದಾಗುತ್ತಿಲ್ಲ ಎಂಬ ಆರೋಪ ಸ್ಥಳೀಯರಿಂದ ವ್ಯಕ್ತವಾಗುತ್ತಿದೆ.

ಜಿಲ್ಲೆಯ ವಿವಿಧ ಅಗತ್ಯಗಳ ಕುರಿತು ಮನವಿ ಸಲ್ಲಿಕೆ

ಸಿಎಂ, ಸಚಿವರನ್ನು ಭೇಟಿ ಮಾಡಿದ ಕಾಸರಗೋಡಿನ ಜನಪ್ರತಿನಿಧಿಗಳು

• **ಕಾಸರಗೋಡು:** ಜಿಲ್ಲೆಯ ಜನಪ್ರತಿನಿಧಿಗಳು ಮುಖ್ಯಮಂತ್ರಿ ಮತ್ತು ವಿವಿಧ ಇಲಾಖೆಗಳ ಸಚಿವರನ್ನು ತಿರುವನಂತಪುರದಲ್ಲಿ ಭೇಟಿ ಮಾಡಿ ಜಿಲ್ಲೆಯ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಬೆಂಬಲ ನೀಡುವಂತೆ ಕೋರಿ ಮನವಿ ಪತ್ರ ಸಲ್ಲಿಸಿದರು.

ಕಾಸರಗೋಡು ಜಿಲ್ಲೆಯ ಹಿಂದುಳಿದಿರುವಿಕೆಯನ್ನು ಪರಿಹರಿಸಲು ಡಾ.ಪಿ.ಪ್ರಭಾಕರನ್ ಆಯೋಗದ ಶಿಫಾರಸುಗಳ ಪ್ರಕಾರ ಕೇರಳ ಸರಕಾರವು ಕಾಸರಗೋಡಿಗೆ ವಿಶೇಷ ಪ್ಯಾಕೇಜ್‌ನ್ನು ರೂಪಿಸಿದೆ. ಜಿಲ್ಲೆಯ ಹೆಚ್ಚುತ್ತಿರುವ ಸಾಮಾಜಿಕ – ಆರ್ಥಿಕ ಅಗತ್ಯಗಳನ್ನು ಪೂರೈಸಲು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ಗೆ 100 ಕೋಟಿ ರೂ.ಗಳನ್ನು ಮಂಜೂರು ಮಾಡಲು ಸಂದರ್ಶನದ ಸಂದರ್ಭ ಕೋರಲಾಗಿದೆ.

ಸ್ಥಳೀಯಾಡಳಿತ ಸಂಸ್ಥೆಗಳಿಗೆ ಸ್ವಂತ ಪಾಲು ಮತ್ತು ಸಿಎಸ್‌ಆರ್ ನಿಧಿ ಹಂಚಿಕೆಯಲ್ಲಿನ ಕೊರತೆಯಿಂದಾಗಿ ಜಿಲ್ಲಾ ಪಂಚಾಯತ್ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿನ ತೊಂದರೆಗಳ ಬಗ್ಗೆ ಸ್ಥಳೀಯಾಡಳಿತ ಇಲಾಖೆ ಸಚಿವರಿಗೆ ಮನವರಿಕೆ ಮಾಡಲಾಯಿತು.

ಒಂದೆಡೆ ಮಳೆಗಾಲದ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿದ್ದು, ಇನ್ನೊಂದೆಡೆ ಜಿಲ್ಲಾಸ್ಪತ್ರೆ ಸೇರಿದಂತೆ ಜಿಲ್ಲೆಯ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ 143 ಮಂದಿ ವೈದ್ಯರ ಕೊರತೆಯಿದೆ. ಜಿಲ್ಲಾಸ್ಪತ್ರೆಯಲ್ಲಿ ವಿಧಿವಿಜ್ಞಾನ ಶಸ್ತ್ರಚಿಕಿತ್ಸಕರಿಗೆ ಅವಕಾಶ ನೀಡಬೇಕೆಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬೀಜ ಸಾಕಣೆ ಕೇಂದ್ರದ ಅಭಿವೃದ್ಧಿ, ಜಿಲ್ಲೆಗೆ ಹೊಸ ಮಣ್ಣು ಪರೀಕ್ಷಾ ಕೇಂದ್ರವನ್ನು ಮಂಜೂರು ಮಾಡುವುದು, ಟಾಟಾ ಸರಕಾರಿ ಆಸ್ಪತ್ರೆಯನ್ನು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಅಗತ್ಯದ ಕ್ರಮ ಮತ್ತು ಪಿಡಬ್ಲ್ಯೂಡಿ ಇಲಾಖೆಗೆ ಹಸ್ತಾಂತರಿಸಿದ ರಸ್ತೆಗಳನ್ನು ವಹಿಸಿ ಅಭಿವೃದ್ಧಿಪಡಿಸುವುದು ಮುಂತಾದ ಜಿಲ್ಲೆಯ ಪ್ರಮುಖ ಯೋಜನೆಗಳನ್ನು ಮತ್ತು ಸಮಸ್ಯೆಗಳನ್ನು ರಾಜ್ಯ ಸರಕಾರದ ಗಮನಕ್ಕೆ ತಂದು ಬೆಂಬಲ ಕೋರಲಾಯಿತು.

ಮುಖ್ಯಮಂತ್ರಿ ವಿ.ಡಿ.ಸತೀಶನ್, ಸ್ಥಳೀಯಾಡಳಿತ ಇಲಾಖೆ ಸಚಿವ ಕೆ.ಎಂ. ಶಾಜಿ, ಆರೋಗ್ಯ ಇಲಾಖೆ ಸಚಿವ ಕೆ.ಮುರಲೀಧರನ್, ಕೈಗಾರಿಕಾ ಸಚಿವ ಪಿ.ಕೆ. ಕುಞಾಲಿಕುಟ್ಟಿ, ಲೋಕೋಪಯೋಗಿ ಸಚಿವ ಪಿ.ಕೆ.ಬಶೀರ್ ಅವರನ್ನು ಜಿಲ್ಲೆಯ ಜನಪ್ರತಿನಿಧಿಗಳು ಭೇಟಿ ಮಾಡಿದರು.

ಶಾಸಕರಾದ ಎ.ಕೆ.ಎಂ.ಅಶ್ರಫ್, ವಕೀಲ ಗೋವಿಂದನ್ ಪಳ್ಳಿಕಾಪಿಲ್, ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ. ಸೋಯಾ, ಜಿಲ್ಲಾ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಮನು, ಜಿ.ಪಂ. ಸದಸ್ಯರಾದ ಅಜೀಜ್ ಕಳತ್ತೂರು, ಸೋಮಶೇಖರ ಜೆ.ಎಸ್., ಪಿ.ಬಿ.ಶಫೀಕ್, ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಎಸ್.ಬಿಜು ಮತ್ತಿತರರು ಮನವಿ ಸಲ್ಲಿಕೆ ತಂಡದೊಂದಿಗೆ ಹಾಜರಿದ್ದರು.

ಜೂ.30: ಲವ್ ಜಿಹಾದ್, ಮತಾಂತರ ವಿರುದ್ಧ ಜನಜಾಗೃತಿ ಜನಾಂದೋಲನ

• **ಮಡಿಕೇರಿ:** ಲವ್ ಜಿಹಾದ್ ಮತ್ತು ಮತಾಂತರ ಪ್ರಕರಣಗಳನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬೇಡಿಕೆಯೊಂದಿಗೆ ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಜೂ.30 ರಂದು ಕುಶಾಲನಗರದಲ್ಲಿ ಬೃಹತ್ ಜನಜಾಗೃತಿ ಜನಾಂದೋಲನ ನಡೆಯಲಿದೆ.

ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಸಂಯೋಜಕ ಭೋಜೇಗೌಡ ಅವರು ಈ ಜನಾಂದೋಲನಕ್ಕೆ ಹಿಂದೂ ಜಾಗರಣಾ ವೇದಿಕೆ ಸಂಪೂರ್ಣ ಬೆಂಬಲ ನೀಡಲಿದೆ ಎಂದರು.

ಕುಶಾಲನಗರದ ಹಿಂದೂ ಮಹಿಳೆ ಹಾಗೂ ಆಕೆಯ ಮಗನನ್ನು ಮತಾಂತರ ಮಾಡಲಾಗಿದೆ. ಪೊಲೀಸ್ ಇಲಾಖೆ ಈ ಸಂಬಂಧ ಎರಡು ಮೇಗಳನ್ನು ಮುಚ್ಚಿಸಿರುವುದನ್ನು ಹೊರತು ಪಡಿಸಿದರೆ ಸಮಗ್ರ ತನಿಖೆಗೆ ಮುಂದಾಗಿಲ್ಲ. ಈ ಹಿಂದೆ ಗುಡ್ಡೆಹೊಸೂರು ವಿಭಾಗದ ಹಿಂದೂ ಮಹಿಳೆಯೊಬ್ಬರು ಲವ್ ಜಿಹಾದ್‌ಗೆ ಸಿಲುಕಿ ಮತಾಂತರಗೊಂಡಿದ್ದಳು. ಬಳಿಕ ಎನ್‌ಐಎ ತನಿಖೆಯೊಂದರ ಸಂದರ್ಭ ಮಹಿಳೆ ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿತ್ತು. ಲವ್ ಜಿಹಾದ್ ಮತ್ತು ಮತಾಂತರಗಳ ಬಗ್ಗೆ ಹಿಂದೂ ಸಮಾಜ ಮೊದಲು ಜಾಗೃತವಾಗಬೇಕೆಂದು ಕರೆ ನೀಡಿದರು.

ಹಿಂದೂ ಜಾಗರಣಾ ವೇದಿಕೆಯ ಪ್ರಾಂತ ಕಾರ್ಯಕಾರಿಣಿ ಸದಸ್ಯ ಕುಕ್ಕೇರ ಅಜಿತ್ ಅವರು ಮಾತನಾಡಿ, ಜೂ.30 ರಂದು ಬೆಳಗ್ಗೆ 10.30 ಗಂಟೆಗೆ ನಿಸರ್ಗಧಾಮದ ಬಳಿಯಿಂದ ಕುಶಾಲನಗರದ ಗಣಪತಿ ದೇವಸ್ಥಾನದ ಬಳಿಯ ಕಾರು ನಿಲ್ದಾಣದವರೆಗೆ ಬೃಹತ್ ಜನಜಾಗೃತಿ ಮೆರವಣಿಗೆ ಸಾಗಲಿದೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು. ನಿಸರ್ಗಧಾಮದ ಮಳಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹಿಳೆ ಮತ್ತು ಆಕೆಯ ಮಗನನ್ನು ಕೇರಳದ ಮಲಪ್ಪುರಂನಲ್ಲಿ ಮತಾಂತರಗೊಳಿಸಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಮತಾಂತರಕ್ಕೆ ಕಾರಣರಾಗಿರುವ ಪ್ರಮುಖರನ್ನು ತನಿಖೆಗೆ ಒಳಪಡಿಸಬೇಕು. ಮತಾಂತರಗಳ ಹಿಂದಿರುವ ಶಕ್ತಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವ ಕಾರ್ಯ ಮಾಡಬೇಕು. ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೋಹತ್ಯೆಗೆ ಪೂರ್ಣವಿರಾಮ ಹಾಕಬೇಕು, ಮತಾಂತರ ತಡೆಗಟ್ಟಬೇಕು, ಅಕ್ರಮ ಬಾಂಗ್ಲಾ ದೇಶಿಗರನ್ನು ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಬೀದಿಗಿಳಿದು ಹೋರಾಟ ನಡೆಸಲು ಹಿಂದೇಟು ಹಾಕುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಹಿಂದೂ ಜಾಗರಣಾ ಸಮಿತಿಯ ಜಿಲ್ಲಾ ಸದಸ್ಯ ಶಾಂತೆಯಂಡ ತಿಮ್ಮಯ್ಯ, ಪ್ರಚಾರ ಪ್ರಮುಖ್ ಭುವನ್ ಮೇಕೇರಿ, ತಾಲೂಕು ಸಂಯೋಜಕ ಅಪ್ಪು ಬಾಲಕೃಷ್ಣ ರೈ ಹಾಗೂ ಜಿಲ್ಲಾ ಸದಸ್ಯ ಸುನಿಲ್ ಮಾದಾಪುರ ಉಪಸ್ಥಿತರಿದ್ದರು.

ರಸ್ತೆ ಬದಿ ಮಲಗಿದ್ದ ಶ್ವಾನಗಳ ಮೇಲೆ ಜೀಪು ಚಾಲನೆ

ಆರೋಪಿ ಚಾಲಕನ ವಿರುದ್ಧ ಪ್ರಕರಣ ದಾಖಲು

• **ಮಡಿಕೇರಿ:** ಕುಶಾಲನಗರ ಬಳಿಯ ಮಾದಾಪಟ್ಟಣ ಗ್ರಾಮದಲ್ಲಿ ಚಾಲಕನೊಬ್ಬ ರಸ್ತೆ ಬದಿಯಲ್ಲಿ ಮಲಗಿದ್ದ ನಾಯಿಗಳ ಮೇಲೆ ಜೀಪು ಚಲಾಯಿಸಿ ಅಮಾನವೀಯವಾಗಿ ವರ್ತಿಸಿದ ಘಟನೆ ನಡೆದಿದ್ದು, ಇದೀಗ ಪೊಲೀಸರು ಆತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮಂಗಳವಾರ ಬೆಳಗ್ಗೆ 7 ಗಂಟೆ ಸುಮಾರಿಗೆ ಮಾದಾಪಟ್ಟಣದ ಶ್ರೀ ಕಾಶಿ ವಿಶ್ವನಾಥ ದೇವಾಲಯದ ಮುಂಭಾಗದ ರಸ್ತೆಯಲ್ಲಿ ಚಾಲಕನೊಬ್ಬ ಜೀಪನ್ನು ನಿರ್ಲಕ್ಷ್ಯದಿಂದ ಚಲಾಯಿಸಿ ರಸ್ತೆ ಬದಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ನಾಯಿಗಳ ಗುಂಪಿನ ಮೇಲೆ ಹರಿಸಿದ್ದ ಈ ದೃಶ್ಯ ಸಿಸಿಟಿವಿ ಕ್ಯಾಮರಾಗಳಲ್ಲಿ ಸೆರೆಯಾಗಿತ್ತಲ್ಲದೆ, ಗ್ರಾಮಸ್ಥರ ಮತ್ತು ಪ್ರಾಣಿ ಪ್ರಿಯರ ವ್ಯಾಪಕ ಆಕ್ರೋಶಕ್ಕೂ ಕಾರಣವಾಗಿತ್ತು. ಘಟನೆಯಲ್ಲಿ ಮೂರು ನಾಯಿಗಳಿಗೆ ಸೊಂಟ ಮುರಿತ ಸೇರಿದಂತೆ ಗಂಭೀರ ಗಾಯಗಳಾಗಿದ್ದು, ಅವುಗಳಿಗೆ ಸ್ಥಳೀಯ ನಿವಾಸಿಗಳು ಮತ್ತು ಸ್ವಯಂಸೇವಕರು ಆರೈಕೆ ಮಾಡಿದ್ದರು.

ಘಟನೆಯನ್ನು ತೀವ್ರವಾಗಿ ಖಂಡಿಸಿದ್ದ ಸ್ಥಳೀಯರು, ಮೂಕ ಪ್ರಾಣಿಗಳ ಮೇಲೆ ಜೀಪು ಹರಿಸಿ ಗಾಯಗೊಳಿಸಿದ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಅಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕೆಂದು ಪೊಲೀಸರನ್ನು ಒತ್ತಾಯಿಸಿದ್ದರು.

ಸ್ಥಳೀಯರ ದೂರುಗಳು ಮತ್ತು ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಕುಶಾಲನಗರ ಪಟ್ಟಣ ಪೊಲೀಸರು ಆರೋಪಿ ಜೀಪು ಚಾಲಕನ ವಿರುದ್ಧ ಬಿಎನ್ ಎಸ್ ಆಕ್ಟ್ ಕಲಂ 281, 325 ಹಾಗೂ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ (ಪಿಸಿಎ) ಕಾಯ್ದೆ, 1960ರ ಕಲಂ 11ರ ಅನ್ವಯ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾದಕ ದ್ರವ್ಯ ಮುಕ್ತ ಸಮಾಜಕ್ಕೆ ಉಡುಪಿ ಪೊಲೀಸರ ಜಾಗೃತಿ ವಿಡಿಯೋ ಬಿಡುಗಡೆ

• **ಉಡುಪಿ:** ಯುವಜನತೆಯನ್ನು ಬಲಿ ತೆಗೆದುಕೊಳ್ಳುತ್ತಿರುವ ಮಾದಕ ದ್ರವ್ಯ ಜಾಲದ ವಿರುದ್ಧ ಉಡುಪಿ ಜಿಲ್ಲಾ ಪೊಲೀಸ್ ಹಾಗೂ ಇಲ್ಯೂಷನಾಕ್ಸ್ ಸ್ಟುಡಿಯೋ ಜಂಟಿಯಾಗಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ 'ಬೇಡ' (ಎಂಬ ವಿಶೇಷ ಕಿರುಚಿತ್ರ/ ವಿಡಿಯೋವನ್ನು ಬಿಡುಗಡೆಗೊಳಿಸಿದೆ.

ಕ್ಷಣಿಕ ಸುಖಕ್ಕಾಗಿ ಡ್ರಗ್ಸ್ ಮಾತ್ರೆಗಳ ಮೊರೆಹೋಗುವ ಯುವಕನೊಬ್ಬ, ನಂತರ ಹೇಗೆ ತನ್ನ ಹತೋಟಿ ಕಳೆದುಕೊಂಡು ದೈಹಿಕವಾಗಿ ಹಾಗೂ ಮಾನಸಿಕವಾಗಿ ನರಕಯಾತನೆ ಅನುಭವಿಸುತ್ತಾನೆ ಎಂಬುದನ್ನು ಈ ವಿಡಿಯೋದಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಹಾದಿ ತಪ್ಪುವ ಯುವಕರು ಹೇಗೆ ತಮ್ಮ ಸುಂದರ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ ಮತ್ತು ಒಂಟಿತನ ಹಾಗೂ ದುರಂತಕ್ಕೆ ತುತ್ತಾಗುತ್ತಾರೆ ಎಂಬುದನ್ನು ಇದರಲ್ಲಿ ತೋರಿಸಲಾಗಿದೆ.

ಡ್ರಗ್ಸ್ ಮುಕ್ತ ಸಮಾಜಕ್ಕೆ ಎಸ್ಪಿ ಕರೆ

ವಿಡಿಯೋದ ಕೊನೆಯಲ್ಲಿ ಸಂದೇಶ ನೀಡಿರುವ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಅವರು, 'ಡ್ರಗ್ಸ್‌ಗೆ ನಿಮ್ಮ ಇವತ್ತಿನ 'ಬೇಡ' ಎನ್ನುವ ನಿರ್ಧಾರ, ನಿಮ್ಮ ನಾಳಿನ ಭವಿಷ್ಯವನ್ನು ಕಾಪಾಡುತ್ತದೆ' ಎಂದು ಯುವ ಪೀಳಿಗೆಗೆ ಕರೆ ನೀಡಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಎಲ್ಲೇ ಆಗಲಿ ಮಾದಕ ವಸ್ತುಗಳನ್ನು ಬಳಸುವವರ ಹಾಗೂ ಮಾರಾಟ ಮಾಡುವವರ ಬಗ್ಗೆ ಮಾಹಿತಿ ಇದ್ದಲ್ಲಿ, ವಿಡಿಯೋದಲ್ಲಿ ನೀಡಲಾದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಪೊಲೀಸರಿಗೆ ಅನಾಮಧೇಯವಾಗಿ ದೂರು ಸಲ್ಲಿಸಲು ಕೋರಿದ್ದಾರೆ. ದೂರು ನೀಡುವವರ ವಿವರಗಳನ್ನು ಗೌಪ್ಯವಾಗಿಡಲಾಗುವುದು ಎಂದು ಇಲಾಖೆ ತಿಳಿಸಿದೆ.

ಪದ ವಿ ಪೂರ್ವ ಉಪನ್ಯಾಸಕರನ್ನು ಪ್ರೌಢಶಾಲಾ ತರಗತಿಗಳಿಗೆ ನಿಯೋಜನೆಗೆ ಆಕ್ರೋಶ

ಶಿಕ್ಷಣ ತಜ್ಞರು, ಬೋಧಕರ ಜಂಟಿ ಸಮಿತಿ ರಚನೆಗೆ ಒತ್ತಾಯ

• **ಮಂಗಳೂರು:** ಪದವಿ ಪೂರ್ವ ಕಾಲೇಜು ಉಪನ್ಯಾಸಕರನ್ನು ಪ್ರೌಢಶಾಲಾ ತರಗತಿಗಳಿಗೆ ನಿಯೋಜಿಸುವ ಸರ್ಕಾರದ ಪ್ರಸ್ತಾವನೆಯನ್ನು ಖಂಡಿಸಿರುವ ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ ಸರ್ಕಾರ ಪ್ರಸ್ತಾವನೆ ಹಿಂಪಡೆಯದಿದ್ದಲ್ಲಿ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನೀಡಿದೆ.

ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದ.ಕ. ಜಿಲ್ಲಾ ಪ.ಪೂ. ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ಡಾ.ನವೀನ್ ಶೆಟ್ಟಿ ಕೆ, ಈ ಬಗ್ಗೆ ಶಿಕ್ಷಣ ತಜ್ಞರು ಹಾಗೂ ಬೋಧಕ ವರ್ಗದ ಜಂಟಿ ಸಮಿತಿ ರಚಿಸಿ ಪ್ರಾಯೋಗಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ನಿರ್ಧರಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಎನ್‌ಇಪಿ ಜಾರಿಯ ಹಂತದಲ್ಲಿ ಈ ರೀತಿಯ ತುರ್ತು ಬದಲಾವಣೆಯ ಅಗತ್ಯವಿಲ್ಲ. ನಿಯಮ ರೂಪಿಸುವ ಮುನ್ನ ಪದವಿ ಪೂರ್ವ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯ ಶೈಕ್ಷಣಿಕ ಮನೋ ವಿಜ್ಞಾನದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದರು.

ಸರಕಾರಿ, ಅನುದಾನಿತ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ನೇಮಕಾತಿ ವಿಧಾನ, ಪಠ್ಯಕ್ರಮ ಮತ್ತು ಬೋಧನಾ ಕ್ರಮದಲ್ಲಿ ಏಕರೂಪತೆಯನ್ನು ಜಾರಿಗೊಳಿಸಲು ಕ್ರಮ ವಹಿಸಬೇಕು. ಶಿಕ್ಷಣ ವ್ಯವಸ್ಥೆಯ ಸಂರಚನೆಯನ್ನೇ ಪುನರ್ವಿನ್ಯಾಸ ಮಾಡಿಕೊಳ್ಳದೆ, ಸೀಮಿತವಾದ ಕೆಲಸವೇ ಸರಕಾರಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಅನ್ವಯಿಸುವ ನಿಯಮ ರೂಪಿಸುವುದು ಏಕರೂಪದ ಶಿಕ್ಷಣ ವ್ಯವಸ್ಥೆಗೆ ವಿರುದ್ಧವಾಗಿದೆ. ಶಿಕ್ಷಣದಲ್ಲಿ ಬದಲಾವಣೆ, ಸುಧಾರಣೆ ಮಾಡುವ ಸಂದರ್ಭ ಪ್ರಾಥಮಿಕ ಅಥವಾ ಶಿಕ್ಷಣದ ಮೂಲದಿಂದಲೇ ಹಂತ ಹಂತವಾಗಿ ಯಾವುದೇ

ಪ್ರಾತಿನಿಧಿಕ ಚಿತ್ರ



ನಿಯಮಗಳನ್ನು ಜಾರಿಗೆ ತರುವುದು ಉತ್ತಮ ಮತ್ತು ಅಧಿಕಾರಿ ವರ್ಗಗಳ ಉತ್ತರದಾಯಿತ್ವದ ಬಗ್ಗೆ ನಿರ್ಧಾರವಾಗಬೇಕು ಎಂದು ಅವರು ಆಗ್ರಹಿಸಿದರು.

ಸರಕಾರದ ಈ ನಡೆಯಿಂದ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ತರಗತಿಗಳಿಗೆ ಎರಡೂ ಕಡೆ ಪಬ್ಲಿಕ್ ಪರೀಕ್ಷೆಗಳಿಗೆ ಓರ್ವ ಶಿಕ್ಷಕ ವಿದ್ಯಾರ್ಥಿಗಳನ್ನು ತಯಾರಿಗೊಳಿಸಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಲಿದೆ. ಈ ಎರಡೂ ತರಗತಿಗಳ ಬೋಧನಾ ಕ್ರಮ ಭಿನ್ನವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ನ್ಯಾಯ ನೀಡಲು ಸಾಧ್ಯವಾಗದು. ಪ್ರೌಢಶಾಲೆಯಿಂದ ಅರ್ಹತಾ ಪರೀಕ್ಷೆ ನಡೆಸಿ ಪದವಿ ಪೂರ್ವ ಉಪನ್ಯಾಸಕರಾಗಿ ಭಡ್ತಿ ನೀಡಲು ನಿರ್ಧರಿಸಿ ಪರೀಕ್ಷೆ ನಡೆಸಲಾಗಿದೆ. ಭಡ್ತಿ ನೀಡಿದ ನಂತರ ಮತ್ತೆ 9 ಮತ್ತು 10ನೆ ತರಗತಿಗೆ ಬೋಧಿಸಲು ಒತ್ತಾಯಿಸಿದರೆ ಭಡ್ತಿಯ ಉದ್ದೇಶವೇ ನಿರರ್ಥಕವಾಗುತ್ತದೆ ಎಂದು ಅವರು ಹೇಳಿದರು.

- ಪ್ರೌಢಶಾಲೆಯಿಂದ ಅರ್ಹತಾ ಪರೀಕ್ಷೆ ನಡೆಸಿ ಪದವಿ ಪೂರ್ವ ಉನ್ಯಾಸಕರಾಗಿ ಭಡ್ತಿ ನೀಡಲು ನಿರ್ಧರಿಸಿ ಪರೀಕ್ಷೆ ನಡೆಸಲಾಗಿದೆ.
- ಭಡ್ತಿ ನೀಡಿದ ನಂತರ ಮತ್ತೆ 9 ಮತ್ತು 10ನೆ ತರಗತಿಗೆ ಬೋಧಿಸಲು ಒತ್ತಾಯಿಸಿದರೆ ಭಡ್ತಿಯ ಉದ್ದೇಶವೇ ನಿರರ್ಥಕವಾಗುತ್ತದೆ

ಸರಕಾರವು ತೆಗೆದುಕೊಳ್ಳಲು ಮುಂದಾದ ಪ್ರಸ್ತಾವನೆಯ ಜಾರಿ ಆತುರದ ನಿರ್ಧಾರವಾಗಬಾರದು. ಈ ಬಗ್ಗೆ ಈಗಾಗಲೇ ಜನಪ್ರತಿನಿಧಿಗಳ ಮೂಲಕ ಸರಕಾರದ ಗಮನ ಸೆಳೆಯುವ ಪ್ರಯತ್ನ ನಡೆಸಲಾಗಿದ್ದು, ಸರಕಾರ ಈ ಬಗ್ಗೆ ಸೂಕ್ತ ಕ್ರಮ ವಹಿಸದಿದ್ದರೆ ಪ್ರತಿಭಟನೆಯನ್ನು ಮಾಡಲಾಗುವುದು ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹರಿಪ್ರಕಾಶ್, ರಾಜ್ಯ ಸಂಘದ ಜಂಟಿ ಕಾರ್ಯದರ್ಶಿ ವಿಠಲ, ದ.ಕ.ಜಿಲ್ಲಾ ಪ್ರಾಂಶುಪಾಲರ ಸಂಘದ ಶೀನಪ್ಪ, ಪ್ರಮುಖರಾದ ಸಚೇತ್ ಸುವರ್ಣ, ಸೀಮಾ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone 2497091 to 2497093 Fax 2497098 RNI 29813/78,
Printed at Digantha Mudrana Ltd., D/No 5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 28° 24°
ಉಡುಪಿ 28° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 25, ಜೂನ್ 2026
e-mail diganthamlr@gmail.com | Website www.hosadiganth a.com | e-paper epaper.hosadigantha.com | MANGALURU


ಪುಟ 2
ಕಣಿಯೂರು ಕಾಡಿನ ರಸ್ತೆ ಬದಿ ಕಸ ಎಸೆದವರಿಗೆ ರೂ.10,000 ದಂಡ!

ಪುಟ 8
ಜಾಲಾಡಿ - ಹೊಸ್ಕಳಿ ಭಾಗದ ಗದ್ದೆಗಳು ಮುಳುಗಡೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಕಾಸರಗೋಡಿನಲ್ಲಿ ಕಣ್ಮನ ಸೆಳೆಯಿತು ಅಂತಾರಾಷ್ಟ್ರೀಯ ಒಲಿಂಪಿಕ್ಸ್ ದಿನದ ಆಚರಣೆ

ಕಾಸರಗೋಡು ಜಿಲ್ಲಾ ಕ್ರೀಡಾ ಮಂಡಲಿ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಒಲಿಂಪಿಕ್ಸ್ ಓಟಕ್ಕೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹಸಿರು ನಿಶಾನೆ ತೋರಿ ಶುಭಹಾರೈಸಿದರು. ಅಂತಾರಾಷ್ಟ್ರೀಯ ಒಲಿಂಪಿಕ್ಸ್ ದಿನಾಚರಣೆ ಅಂಗವಾಗಿ ಜಿಲ್ಲಾ ಕ್ರೀಡಾ ಮಂಡಲಿಯ ನೇತೃತ್ವದಲ್ಲಿ ವಿದ್ಯಾನಗರ ಸಿವಿಲ್ ಸ್ಟೇಷನ್‌ನ ಆವರಣದಿಂದ ಪ್ರಾರಂಭವಾದ ಓಟವು ಉದಯಗಿರಿ ಜಿಲ್ಲಾ ಕ್ರೀಡಾ ಅಕಾಡೆಮಿ ಆವರಣದಲ್ಲಿ ಮುಕ್ತಾಯಗೊಂಡಿತು.

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ

ಚಂದಾ ಮಾಡಿಸಲು ನಮ್ಮನ್ನು ಇಲ್ಲಿ ಸಂಪರ್ಕಿಸಿ
88612 09102
88612 09100

ಸುತ್ತಮುತ್ತ

ಕರಾವಳಿಯ ವಿವಿಧ ಭಾಗಗಳಲ್ಲಿ ಸಾಧಾರಣ ಮಳೆ: ಉಡುಪಿ ನಂ.1

ಮಂಗಳೂರು: ಬುಧವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳ ಅವಧಿಯಲ್ಲಿ ಕರಾವಳಿ ಭಾಗದಲ್ಲೇ ಅತೀ ಹೆಚ್ಚು 4 ಸೆಂ.ಮೀ. ಮಳೆ ಉಡುಪಿ ನಗರದಲ್ಲಿ ಸುರಿದಿದೆ. ಉಳಿದಂತೆ ಬ್ರಹ್ಮಾವರದಲ್ಲಿ 3, ಕುಂದಾಪುರ, ಕಾರ್ಕಳ, ಮೂಡುಬಿದ್ರೆ, ಬೆಳ್ತಂಗಡಿಗಳಲ್ಲಿ 2, ಮಂಗಳೂರಿನಲ್ಲಿ 1 ಸೆಂ.ಮೀ. ಮಳೆ ಪ್ರಮಾಣ ದಾಖಲಾಗಿದೆ. ಮಂಗಳೂರು ನಗರದ ಸಹಿತ ಕೆಲವೆಡೆ ಬುಧವಾರ ಸಾಧಾರಣ ಪ್ರಮಾಣದ ಮಳೆಯಾಗಿದೆ.

ಇಂದು ಮತ್ತೆ ಹಲವೆಡೆ ಭಾರೀ ಮಳೆ ಸಾಧ್ಯತೆ: ಕಡಲ ತೀರದಲ್ಲಿ ಕಟ್ಟೆಚ್ಚರ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಇಂದು (ಜೂ.25) ಗಾಳಿ ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಳೆಯ ಜೊತೆ ಗಾಳಿಯ ತೀವ್ರತೆ ಹೆಚ್ಚಾಗಿರಲಿದ್ದು, ಗಂಟೆಗೆ 40 ರಿಂದ 50 ಕಿಲೋ ಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇರುವುದರಿಂದ ಸಮುದ್ರ ತೀರದ ಜನತೆ ಹಾಗೂ ಪ್ರವಾಸಿಗರು ಕಡಲಿನ ಬಳಿಗೆ ತೆರಳದಂತೆ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್: ಜೀವನದಿಗಿಲ್ಲ ಜೀವಕಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಎರಡು ದಿನಗಳ ಕೇಂದ್ರ ಹವಾಮಾನ ಇಲಾಖೆ ಕಾಲ ಆರೆಂಜ್ ಅಲರ್ಟ್ ಘೋಷಿಸಿದೆ. ಈ ಅವಧಿಯಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಈ ನಡುವೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಿರೀಕ್ಷಿತ ಪ್ರಮಾಣದ ಮಳೆ ಬೀಳದ ಕಾರಣ ನದಿಗಳ ನೀರಿನಮಟ್ಟದಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ, ಜೀವನದಿ ನೇತ್ರಾವತಿಯ ಮಡಿಲು ಬರಿದಾಗಿದೆ.

ಕಾಸರಗೋಡು ಜಿಲ್ಲೆಯ ವಿವಿಧ ಕಡೆಗಳಲ್ಲಿ ಕಂಡಿತು ಸಾಧಾರಣ ಮಳೆ

ಕಾಸರಗೋಡು: ಜಿಲ್ಲೆಯ ಕೆಲವು ಭಾಗಗಳಲ್ಲಿ ಬುಧವಾರ ಸಾಧಾರಣ ಮಳೆಯಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ ಇಂದು (ಜೂ.25)ರಂದು ಕೂಡಾ ವಿವಿಧೆಡೆಗೆ ಮಳೆಯ ಸಾಧ್ಯತೆ ಇದೆ.

ಹೊಸ ದಾಖಲೆಯತ್ತ ಧಾರಣೆ ದಾಪುಗಾಲು

ಮೊಟ್ಟೆ ಇನ್ನಷ್ಟು ಭಾರ!

ಗ್ರಾಹಕರ ಜೇಬಿಗೆ ಮತ್ತೊಂದು ಹೊಡೆತ

ಮಂಗಳೂರು/ ಕಾಸರಗೋಡು: ಕರಾವಳಿ ಜಿಲ್ಲೆಗಳಲ್ಲಿ ಕೋಳಿ ಮೊಟ್ಟೆ ದರವು ಈಗ ಸಾರ್ವಕಾಲಿಕ ದಾಖಲೆಯತ್ತ ಮುನ್ನುಗ್ಗುತ್ತಿದ್ದು, ಗ್ರಾಹಕರ ಜೇಬಿಗೆ ಮತ್ತೊಂದು ಹೊಡೆತ ನೀಡಿದೆ.

ಈಗ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ 7.50ರಿಂದ 8 ರೂ.ಗಳಿಗೆ ಏರಿಕೆಯಾಗಿದ್ದು, ಈ ಏರಿಕೆ ಮೊಟ್ಟೆ ಪ್ರಿಯರ ಹೊಟ್ಟೆ ಸುಡುತ್ತಿದೆ.

ಕಾಸರಗೋಡಲ್ಲೂ ಏರಿಕೆ

ಕಾಸರಗೋಡು ಜಿಲ್ಲೆಗೆ ಪ್ರಧಾನವಾಗಿ ತಮಿಳುನಾಡಿನಿಂದ ಮೊಟ್ಟೆ ಪೂರೈಕೆಯಾಗುತ್ತಿದೆ. ಇಲ್ಲಿ ಈಗ ಮೊಟ್ಟೆಯೊಂದಕ್ಕೆ 6.45 ರೂ. ದರವಿದೆ. ಆದರೆ ಜಿಲ್ಲೆಯ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆ ಬೆಲೆ 7.50 ರೂ.ನಿಂದ 8ರೂ.ಗೆ ಏರಿದೆ. ಎಲ್ಲೆಡೆ ಈಗ ಕಾಡುತ್ತಿರುವ ಮೊಟ್ಟೆಯ ಅಲಭ್ಯತೆ, ಹೆಚ್ಚುತ್ತಿರುವ ಬೇಡಿಕೆ ಉತ್ಪಾದನಾ ವೆಚ್ಚ ಇತ್ಯಾದಿ ಕೂಡಾ ದರ ಏರಿಕೆಗೆ ಇತರ ಕಾರಣಗಳಾಗಿವೆ.

⋙ಪುಟ 8

ಪ್ರತೀ ದಿನ ಇಲ್ಲಿಗೆ 75 ಲಕ್ಷ ಮೊಟ್ಟೆ ಬೇಕು

ತಮಿಳುನಾಡಿನ ನಾಮಕ್ಕಲ್‌ನಲ್ಲಿ ದೈನಂದಿನ ಐದೂವರೆ ಕೋಟಿ ಮೊಟ್ಟೆಗಳನ್ನು ಉತ್ಪಾದಿಸಲಾಗುತ್ತಿದೆ. ಅದರಲ್ಲಿ ಮೂರೂವರೆ ಕೋಟಿ ಮೊಟ್ಟೆಗಳು ಕಾಸರಗೋಡು ಸಹಿತ ಕೇರಳಕ್ಕೆ ರವಾನೆಯಾಗುತ್ತವೆ. ಶಾಲೆಗಳ ಮಧ್ಯಾಹ್ನದೂಟ ಯೋಜನೆಗಾಗಿ ಪ್ರತೀ ದಿನ 75 ಲಕ್ಷದಷ್ಟು ಮೊಟ್ಟೆಗಳು ಬೇಕಾಗುತ್ತವೆ.

ಪಪ್ಸ್, ಕೇಕ್, ಆಮ್ಲೆಟ್‌ಗೂ ಏರಿಕೆ ಆದೀತೇ ಬೆಲೆ?

ಮೊಟ್ಟೆ ಬೆಲೆ ಏರಿಕೆಯಿಂದ ಪಪ್ಸ್, ಕೇಕ್ ಮುಂತಾದ ಮೊಟ್ಟೆಯಿಂದ ತಯಾರಿಸುವ ಖಾದ್ಯ ತಯಾರಿಸುವ ಗೂಡಂಗಡಿಗಳಿಗೆ ಬಿಸಿ ತಟ್ಟುತ್ತಿದೆ. ಇದರ ಜೊತೆಗೆ ಅವರು ಕೂಡಾ ತಮ್ಮ ಉತ್ಪನ್ನಗಳ ಬೆಲೆ ಹೆಚ್ಚಿಸಲು ಅಥವಾ ಪ್ರಮಾಣ ಕಡಿಮೆ ಮಾಡಲು ಈ ಮೂಲಕ ದಾರಿಮಾಡಿ ಕೊಟ್ಟಂತಾಗಿದೆ ಎನ್ನುತ್ತಿದ್ದಾರೆ ಈಗ ನಾಗರಿಕರು. ಸಹಜವಾಗಿಯೇ ಮೊಟ್ಟೆ ಈಗ ಚರ್ಚಿತ ವಿಷಯವಾಗುತ್ತಿದೆ.

ಮೊಟ್ಟೆ ಬೆಲೆ ಏರಿಕೆಗೆ ನೈಜ ಕಾರಣವೇನು?

ಟ್ರಾಲಿಂಗ್ ನಿಷೇಧದ ಪ್ರಯುಕ್ತ ಜಿಲ್ಲೆಯಲ್ಲಿ ಮೀನಿನ ಬೆಲೆ ವಿಪರೀತವಾಗಿ ಹೆಚ್ಚಳಗೊಂಡ ಹಿನ್ನೆಲೆಯಲ್ಲಿ ಮೊಟ್ಟೆಗೆ ಬೇಡಿಕೆ ಹೆಚ್ಚಾಗಿದೆ. ಮಾರುಕಟ್ಟೆಯಲ್ಲಿ ಮೊಟ್ಟೆಗೆ ಬೇಡಿಕೆ ಹೆಚ್ಚಿರುವುದೇ ಬೆಲೆಯೇರಿಕೆಗೆ ಕಾರಣವೆಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಕೋಳಿ ಆಹಾರ ಬೆಲೆಯಲ್ಲೂ ಏರಿಕೆ

ಸಂಸ್ಕರಿತ ವಸ್ತುಗಳ ಬೆಲೆ ಹೆಚ್ಚಿರುವುದರಿಂದ ಕೋಳಿ ಆಹಾರದ ಬೆಲೆಯಲ್ಲೂ ಏರಿಕೆ ಕಂಡುಬಂದಿದೆ. 50 ಕಿಲೋದ ಒಂದು ಗೋಣಿ ಕೋಳಿ ಆಹಾರಕ್ಕೆ ಈಗ 2,300 ರೂ. ನೀಡಬೇಕಾಗಿ ಬಂದಿದೆ.

ಆಳ ಸಮುದ್ರ ಸೇರಿದ ಮತ್ಸ್ಯಗಳು

ಕಡಲಿನಲ್ಲಿ ಬಲೆಗೆ 'ಬರ'ದ ಮೀನು?

ಕಡಲಿಗೆ ಇಳಿಯದ ನಾಡದೋಣಿ

ಕರಾವಳಿಯಲ್ಲಿ ನಿರೀಕ್ಷಿತ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಸಮುದ್ರದಲ್ಲಿ ಮೀನುಗಳ ಲಭ್ಯತೆ ತೀವ್ರವಾಗಿ ಕುಸಿದಿದೆ. ಮೀನು ಸಿಗದೆ ಸಾವಿರಾರು ಸಾಂಪ್ರದಾಯಿಕ ಮೀನುಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಮಾರುಕಟ್ಟೆಯಲ್ಲೂ ತಾಜಾ ಮೀನುಗಳ ಕೊರತೆ ಎದುರಾಗಿದೆ.

ಮಂಗಳೂರು: ಕಡಲತಡಿ ಕರಾವಳಿಯಲ್ಲಿಯೇ ಈಗ ಮೀನಿಗೆ ಅಭಾವ ಎದುರಾಗಿದೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ಬಿರುಗಾಳಿ ಮತ್ತು ಸಿಹಿನೀರು ಸಮುದ್ರ ಸೇರುವುದರಿಂದ ಮೀನುಗಳು ದಡದತ್ತ ಬರುತ್ತವೆ. ಆದರೆ ಈ ಬಾರಿ ಮಳೆ ಕೊರತೆ ಹಾಗೂ ಸಮುದ್ರದಲ್ಲಿ ತೂಫಾನ್‌ನ ವಾತಾವರಣ ಇಲ್ಲದ ಕಾರಣ ಮೀನುಗಳು ಆಳ ಸಮುದ್ರದಲ್ಲೇ ಉಳಿದಿವೆ ಎಂದು ಮೀನುಗಾರರು ತಿಳಿಸಿದ್ದಾರೆ.

ಜೂ. 1ರಿಂದ 61 ದಿನಗಳ ಯಾಂತ್ರೀಕೃತ ಮೀನುಗಾರಿಕೆ ನಿಷೇಧ ಜಾರಿಯಲ್ಲಿದೆ. ಈಗ ಸಾಂಪ್ರದಾಯಿಕ ಮೀನುಗಾರಿಕೆ ಸಾವಿರಾರು ಕುಟುಂಬಗಳ ಜೀವನಾಧಾರವಾಗಿದೆ. ಆದರೆ ಮೀನು ಸಿಗದ ಕಾರಣ ಮೀನುಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಾರುಕಟ್ಟೆಯಲ್ಲೂ ತಾಜಾ ಮೀನುಗಳ ಕೊರತೆ ಉಂಟಾಗಿದ್ದು, ಸಿಗುತ್ತಿರುವ ಅಲ್ಪ ಪ್ರಮಾಣದ ಮೀನುಗಳಿಗೆ ಬೆಲೆ ಗಗನಕ್ಕೇರಿದೆ.

ಸದ್ಯಕ್ಕೀಗ ಕೋಲ್ಡ್ ಸ್ಟೋರೇಜ್ ಮೀನೇ

ಸದ್ಯ ಕೇರಳ ಮತ್ತು ತಮಿಳುನಾಡಿನಿಂದ ಮೀನುಗಳನ್ನು ತರಿಸಿಕೊಳ್ಳಲಾಗುತ್ತಿದ್ದು, ಗ್ರಾಹಕರು ಕೋಲ್ಡ್ ಸ್ಟೋರೇಜ್ ಮೀನುಗಳನ್ನೇ ಅವಲಂಬಿಸುವಂತಾಗಿದೆ. ಈ ಮಳೆ ಕೈಕೊಟ್ಟಿರುವುದು ಮೀನುಗಾರರ, ಗ್ರಾಹಕರ ಚಿಂತೆ ಹೆಚ್ಚಿಸಿದೆ.

ಪುರಸಭೆಯ 23 ವಾರ್ಡ್‌ಗಳಲ್ಲಿ ಸ್ಥಳ ಗುರುತು | ಉಳಿದ ಆಹಾರ ಹಾಕಲು ಅವಕಾಶ

ಕುಂದಾಪುರದ ಸ್ಟ್ರೀಟೀಸ್‌ಗಳಿಗೆ ಫುಡ್ ಝೋನ್

ಕುಂದಾಪುರ: ಸಾರ್ವಜನಿಕ ಆರೋಗ್ಯ, ಸುರಕ್ಷತೆ, ಪ್ರಾಣಿ ಕಲ್ಯಾಣದ ಸಮತೋಲನ ಜೊತೆಗೆ ಕಾಪಾಡುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕುಂದಾಪುರ ಪುರಸಭೆಯ ಎಲ್ಲ 23 ವಾರ್ಡ್‌ಗಳಲ್ಲೂ ಬೀದಿನಾಯಿಗಳಿಗೆ ಆಹಾರ ನೀಡುವ ವಲಯಗಳನ್ನು ಗುರುತಿಸಲಾಗಿದೆ.

ಇನ್ನು ತಮ್ಮ ಮನೆಗಳು, ಹೋಟೆಲ್‌ಗಳಲ್ಲಿ ಉಳಿದ ಅನ್ನ ತಿಂಡಿಗಳನ್ನು ಈ ಆಹಾರ ತಾಣಗಳಲ್ಲಿ ತಂದು ಹಾಕಬಹುದು.

ಫಲಕ ಕೂಡಾ ಅಳವಡಿಸಲಾಗಿತ್ತು

ಸುಪ್ರೀಂ ಕೋರ್ಟ್ ಆದೇಶದ ಅನ್ವಯ, ಜಿಲ್ಲಾ ಸಮಿತಿ ನಿರ್ದೇಶನದಂತೆ ಕುಂದಾಪುರ ಪುರಸಭೆಯಿಂದ ತಿಂಗಳ ಹಿಂದೆ ಮೊದಲ ಬಾರಿಗೆ ಐದು ಕಡೆಗಳಲ್ಲಿ ಆಹಾರ ವಲಯ ಆರಂಭಿಸಲಾಗಿತ್ತು. ಫೆರ್ರಿ ಪಾರ್ಕ್ ಸಮೀಪ, ಪಶು ಆಸ್ಪತ್ರೆ ಬಳಿ, ನೆಹರೂ ಮೈದಾನ ಹತ್ತಿರ, ಸಂಗಮ್‌ನ ಹಳೆಕೋಟೆ ಬಳಿ ಹಾಗೂ ಕೋಡಿಯಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವ ಸ್ಥಳಗಳನ್ನು ಗುರುತಿಸಿ, ಫಲಕಗಳನ್ನು ಸಹ ಅಳವಡಿಸಲಾಗಿತ್ತು.

⋙ಪುಟ 8

ಸಹಕಾರ ಅಗತ್ಯ

ಇಲ್ಲಿ ಜನರ ಸಹಕಾರ ಬಹಳ ಮುಖ್ಯ. ಮಕ್ಕಳನ್ನು ಆದಷ್ಟು ಬೀದಿಗೆ ಬಿಡದಂತೆ ಎಚ್ಚರ ವಹಿಸಿದರೆ ಸಾಕು, ಪುರಸಭೆಯಿಂದ ಬೀದಿ ನಾಯಿಗಳನ್ನು ಗುರುತಿಸಿ, ಸಂತಾನಹರಣ ಚಿಕಿತ್ಸೆ ನಡೆಸಿ ಸಂತತಿ ಹೆಚ್ಚದಂತೆ ಮಾಡಲಾಗುತ್ತಿದೆ.

- ಆನಂದ್ ಜೆ., ಪುರಸಭೆ ಮುಖ್ಯಾಧಿಕಾರಿ, ಪುರಸಭೆ

ಭಿನ್ನಾಭಿಪ್ರಾಯಗಳಿವೆ

ಈ ಆಹಾರ ಹಾಕುವ ತಾಣಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಭಿನ್ನಾಭಿಪ್ರಾಯಗಳೂ ಇವೆ. ಮಕ್ಕಳ ಮತ್ತು ಹಿರಿಯ ನಾಗರಿಕರ ಸುರಕ್ಷೆ, ಸ್ವಚ್ಛತೆ, ಆರೋಗ್ಯ ಮಾನದಂಡಗಳು, ವಾಹನ ಸಂಚಾರದ ಮೇಲೆ ಪರಿಣಾಮ, ಸ್ಥಳೀಯರ ಅಭಿಪ್ರಾಯ, ನಾಯಿಗಳ ವರ್ತನೆ ಹಾಗೂ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗಳಿಗೆ ಧಕ್ಕೆಯಾಗದಂತೆ ಪುರಸಭೆ ಗಮನಹರಿಸಬೇಕಾಗಿದೆ ಎಂಬುದು ಸಾರ್ವಜನಿಕರ ಮನವಿ.

ಕೊಡಗಿನಲ್ಲಿ ನಾಣ್ಯ, ನೋಟು ಪ್ರದರ್ಶನ

ಹೆಸರಾಂತ ನಾಣ್ಯ ಸಂಗ್ರಹಕಾರ ಪಿ.ಕೆ. ಕೇಶವಮೂರ್ತಿ ಅವರಿಂದ ಮಡಿಕೇರಿ ನಗರದ ಕೊಡಗು ವಿದ್ಯಾಲಯದಲ್ಲಿ 177ನೇ ನಾಣ್ಯ ಮತ್ತು ನೋಟುಗಳ ಪ್ರದರ್ಶನ ನಡೆಯಿತು. ವಿದ್ಯಾರ್ಥಿಗಳು ಅಪರೂಪದ ಹಾಗೂ ಐತಿಹಾಸಿಕ ಮಹತ್ವವುಳ್ಳ ನಾಣ್ಯಗಳು ಮತ್ತು ಕರೆನ್ಸಿ ನೋಟುಗಳನ್ನು ವೀಕ್ಷಿಸಿದರು.

ಐದು ವಾಹನಗಳಿಗೆ ನೋಟಿಸ್ | ಪರವಾನಿಗೆ ರೂಟ್ ಪಾಲನೆಗೆ ಹುಕುಂ | ಕಟ್ಟುನಿಟ್ಟಿನ ಕ್ರಮ ಎಚ್ಚರಿಕೆ

ರೂಟ್ ಬದಲಿಸಿ ಓಡಿಸುವ ಬಸ್‌ಗಳಿಗೆ ಆರ್‌ಟಿಒ ಬ್ರೇಕ್!

ಮಂಗಳೂರು: ನಗರದಲ್ಲಿ ನಿರ್ದಿಷ್ಟ ರೂಟ ಪರವಾನಿಗೆ ಪಡೆದು ಬದಲಿ ರೂಟ್‌ನಲ್ಲಿ ಸಂಚರಿಸುವ ಖಾಸಗಿ ಬಸ್‌ಗಳ ವಿರುದ್ಧ ಪ್ರಾದೇಶಿಕ ಸಾರಿಗೆ ಕಚೇರಿ ಕಾರ್ಯಾಚರಣೆ ನಡೆಸಿ, ಕ್ರಮ ಜಾರಿ ಆರಂಭಿಸಿದೆ.

ಆರೋಪಗಳು ಕೇಳಿಬಂದಿದ್ದವು

ಪ್ರಮುಖವಾಗಿ ನಗರದ ಸ್ಟೇಟ್ ಬ್ಯಾಂಕ್‌ನಿಂದ ವಯಾ ಮರೋಳಿ ಪಡೀಲ್‌ಗೆ ಪರವಾನಿಗೆ ಪಡೆದ ಬಸ್‌ಗಳು ಈ ರೂಟ್‌ನಲ್ಲಿ ಸಂಚರಿಸದೇ ಬೇರೆ ರೂಟ್‌ಗಳಲ್ಲಿ ಸಂಚರಿಸುತ್ತಿವೆ ಎಂಬ ಆರೋಪಗಳಿದ್ದವು. ಈ ಹಿನ್ನೆಲೆಯಲ್ಲಿ ಆರ್‌ಟಿಒ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದು, ಈ ರೂಟ್‌ನ ಒಟ್ಟು ನಾಲ್ಕು ಬಸ್‌ಗಳಿಗೆ ನೋಟಿಸ್ ನೀಡಿದ್ದಾರೆ. ಜತೆಗೆ ಜಲ್ಲಿಗುಡ್ಡೆಗೆ ಪರವಾನಿಗೆ ಪಡೆದು ಫೈಸಲ್‌ನಗರಕ್ಕೆ ಸಂಚರಿಸುತ್ತಿದ್ದ ಒಂದು ಬಸ್‌ಗೂ ನೋಟಿಸ್ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರು ವರ್ಷಗಳಿಂದ ಬಂದಿಲ್ಲ ಬಸ್!

ಮರೋಳಿಗೆ ಕಳೆದ ಆರು ವರ್ಷಗಳಿಂದ ಖಾಸಗಿ ಬಸ್‌ಗಳು ಆಗಮಿಸುತ್ತಿಲ್ಲ ಎಂಬುದು ಸ್ಥಳೀಯರ ಆರೋಪವಾಗಿದೆ. ರೂಟ್ ನಂಬರ್ 30 ಸ್ಟೇಟ್‌ಬ್ಯಾಂಕ್‌ನಿಂದ ಮರೋಳಿ ಪಡೀಲ್‌ಗೆ ಎರಡು ಬಸ್‌ಗಳು ಪರವಾನಿಗೆ ಪಡೆದುಕೊಂಡಿವೆ.

⋙ಪುಟ 8

- ಮಂಗಳೂರಿನ ಕೆಲವೆಡೆಗಳಲ್ಲಿ ರೂಟ್ ತಪ್ಪಿಸಿ ಓಡಿದ ಬಸ್‌ಗಳು
- ಆರ್‌ಟಿಒ ಅಧಿಕಾರಿಗಳ ತಂಡದ ದಿಢೀರ್ ಕಾರ್ಯಾಚರಣೆ
- ಐದು ಬಸ್‌ಗಳಿಗೆ ನೋಟಿಸ್ ನಿಯಮ ಉಲ್ಲಂಘನೆಗೆ ಬ್ರೇಕ್
- ಖಾಸಗಿ ಬಸ್‌ಗಳಿಗೆ ದಂಡ, ರೂಟ್ ಪಾಲನೆಗೆ ಸೂಚನೆ

ಇಲ್ಲಿ ಸರ್ಕಾರಿ ಬಸ್‌ಗೆ ಹೆಚ್ಚುತ್ತಿದೆ ನಾಗರಿಕರ ಬೇಡಿಕೆ

ಸ್ಟೇಟ್‌ಬ್ಯಾಂಕ್ ಹಾಗೂ ಇತರೆಡೆಯಿಂದ ಮರೋಳಿ ಮಾರ್ಗವಾಗಿ ಪಡೀಲ್ ಕಡೆಗೆ ಸಂಚರಿಸಲು ಪರವಾನಿಗೆ ಪಡೆದ ಖಾಸಗಿ ಬಸ್‌ಗಳು ಈ ರೂಟ್‌ನಲ್ಲಿ ಸಂಚಾರ ನಡೆಸುತ್ತಿಲ್ಲ. ಇದರಿಂದಾಗಿ ಮರೋಳಿ ಭಾಗದ ಜನರು ಬಸ್ ವ್ಯವಸ್ಥೆ ಇಲ್ಲದೆ ತೀವ್ರ ತೊಂದರೆ ಅನುಭವಿಸುತ್ತಿದ್ದೇವೆ. ಇಲ್ಲಿ ಪರವಾನಿಗೆ ಪಡೆದು ಸಂಚಾರ ನಡೆಸದ ಬಸ್‌ಗಳ ವಿರುದ್ಧ ಆರ್‌ಟಿಒ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಖಾಸಗಿ ಬಸ್‌ಗಳ ಪರವಾನಿಗೆ ರದ್ದುಗೊಳಿಸಿ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಪರವಾನಿಗೆ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಮತ್ತೆ ತಪ್ಪೆಸಗಿದರೆ ಕೆಎಸ್ಸಾರ್ಟಿಸಿಗೆ ಲೈಸೆನ್ಸ್

ಸ್ಟೇಟ್‌ಬ್ಯಾಂಕ್‌ನಿಂದ ಮರೋಳಿ- ಪಡೀಲ್ ಪರವಾನಿಗೆ ಪಡೆದ ನಾಲ್ಕು ಬಸ್‌ಗಳು, ಸ್ಟೇಟ್‌ಬ್ಯಾಂಕ್‌ನಿಂದ ಜಲ್ಲಿಗುಡ್ಡೆಗೆ ಪರವಾನಿಗೆ ಪಡೆದ ಒಂದು ಬಸ್ ಬೇರೆ ರೂಟ್‌ನಲ್ಲಿ ಸಂಚರಿಸುತ್ತಿರುವುದು ಪತ್ತೆಯಾಗಿದ್ದು, ನೋಟಿಸ್ ನೀಡಲಾಗಿದೆ. ನೋಟಿಸ್ ಪಡೆದ ಬಸ್‌ಗಳು ದಂಡ ಪಾವತಿಸಬೇಕು. ತಪ್ಪು ಪುನರಾವರ್ತನೆ ಆದರೆ ಪರವಾನಿಗೆ ರದ್ದುಗೊಳಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಪರವಾನಿಗೆ ನೀಡಲಾಗುವುದು.

- ಮುರಗೇಂದ್ರ ಬಿ. ಶಿರೋಳ್ಕರ್, ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಂಗಳೂರು

ಪೆರಡಾಲ ಸೇತುವೆಯ ಬಳಿ ರಸ್ತೆ ಕುಸಿದ ಸ್ಥಳದಲ್ಲಿ ಕಾಮಗಾರಿ ಆರಂಭ 3
ಭರದಿಂದ ಸಾಗುತ್ತಿದೆ ಗುರುಪುರ-ಕೈಕಂಬ ಅಂಡರ್ ಪಾಸ್ ಕಾಮಗಾರಿ 4
ತುಂಬೆ ಕಾಲೇಜಿನಲ್ಲಿ 'ನಶಾ ಮುಕ್ತ ಭಾರತ್' ಜನಜಾಗೃತಿ ಅಭಿಯಾನ 5

ITECH TECHNICAL INSTITUTE
(AFFILIATED TO B.S.S.(TRVM) FOR NATIONAL DEVELOPMENT AGENCY PROMOTED BY GOVT. OF INDIA)
MILAN COMPLEX, NEAR S.G.K TEMPLE, KUMBLA
ಉದ್ಯೋಗವನ್ನು ಸೃಷ್ಟಿಸಿ ನಿರುದ್ಯೋಗವನ್ನು ಹೋಗಲಾಡಿಸುವ ಸಂಸ್ಥೆ.....
ಕೇಂದ್ರ ಸರಕಾರದಿಂದ ಮಾನ್ಯತೆ ಪಡೆದ B.S.S ಸಂಸ್ಥೆಯಿಂದ ನೊಂದಾಯಿತ ಕೋರ್ಸುಗಳಿಗೆ ಪ್ರವೇಶ ಪ್ರಾರಂಭಗೊಂಡಿರುತ್ತದೆ.
QUALIFICATION SSLC, +2, DEGREE
100% COMPANY JOB GUARANTEE
- A.C & Refrigeration Course
- Electrician wiring & Motorwinding
- Mobile Technician Course ಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.
ಬನ್ನಿ ನಿಮ್ಮ ಉತ್ತಮ ಭವಿಷ್ಯ ರೂಪಿಸೋಣ
ನಮ್ಮಲ್ಲಿ ಕಲಿತ ಶೇಕಡಾ 100% ರಷ್ಟು ಮಂದಿಗೆ ಉದ್ಯೋಗ ಕೊಡಿಸಿದ ಸಂತೃಪ್ತಿಯಲ್ಲಿ ಯಶಸ್ವಿಯಾಗಿ ಕುಂಬಳೆಯಲ್ಲಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದೇವೆ.
ITECH TECHNICAL INSTITUTE, KUMBALA
ತಕ್ಷಣವೇ ಸಂಪರ್ಕಿಸಿರಿ
☎ 9048325353, 9446660218

ಸುತ್ತಮುತ್ತ

ಕೇಸರಿ ಮಿತ್ರ ವೃಂದ ಅಧ್ಯಕ್ಷರಾಗಿ ಸುಧಾಕರ ಕುಂಪಲ ಪುನರಾಯ್ಕೆ

ಉಳ್ಳಾಲ: ಕುಂಪಲ ವ್ಯಾಸನಗರದ ಕೇಸರಿ ಮಿತ್ರ ವೃಂದ ಇದರ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರುಗಿತು.ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್‌ನ ಮಾಜಿ ಅಧ್ಯಕ್ಷ ನಾಗರಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. 2026–27ನೇ ಸಾಲಿನ ಅಧ್ಯಕ್ಷರಾಗಿ ಸುಧಾಕರ ಕುಂಪಲ ಅವರು ಪುನರಾಯ್ಕೆಗೊಂಡರು. ಟ್ರಸ್ಟಿಗಳಾಗಿ ಸತ್ಯನಾರಾಯಣ ಹೊಡೆ,ಜಯಂತ್ ಶೆಟ್ಟಿ ನಿತಿನ್ ಎನ್., ನಾರಾಯಣ ಕುಂಪಲ, ಶೇಖರ್ ಕುಂಪಲ, ನಿತಿನ್ ಜಿ., ನವೀನ್ ಕುಜುಮಗದ್ದೆ ಉಪಾಧ್ಯಕ್ಷರಾಗಿ ಶೇಖರ ಕುಂಪಲ ಹಾಗೂ ನಾಗೇಶ್ ರಾವ್, ಪ್ರಧಾನ ಕಾರ್ಯದರ್ಶಿಯಾಗಿ ವೆಂಕಟೇಶ್ ಕುಂಪಲ, ಜೊತೆ ಕಾರ್ಯದರ್ಶಿಯಾಗಿ ಕ್ಯಾಪ್ಟನ್ ಜಿ.ಎಸ್.ಪ್ರಸಾದ್, ಕೋಶಾಧಿಕಾರಿಯಾಗಿ ಜಯಂತ್ ಶೆಟ್ಟಿ ಆಂತರಿಕ ಲೆಕ್ಕ ಪರಿಶೋಧಕರಾಗಿ ರಾಕೇಶ್ ಪಿ., ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಸಂದೀಪ್ ಕುಂಪಲ ಮತ್ತು ನಿತಿನ್ ಜಿ.,ಕ್ರೀಡಾ ಕಾರ್ಯದರ್ಶಿಯಾಗಿ ಅಕ್ಷಯ್ ಮತ್ತು ಸನತ್ ಕುಂಪಲ, ಸಂಘಟನಾ ಕಾರ್ಯದರ್ಶಿಯಾಗಿ ಭರತ್ ಮತ್ತು ಗೌತಮ್ ಕುಂಪಲ,ಕ್ರೀಡಾ ನಾಯಕರಾಗಿ ಪ್ರಥಮ್, ಉಪ ನಾಯಕನಾಗಿ ಸಂದೇಶ್, ಸಬ್ ಜೂನಿಯರ್ ಕಪ್ತಾನನಾಗಿ ಪ್ರನಿತ್, ಉಪ ಕಪ್ತಾನನಾಗಿ ಶ್ರವಿತ್, ಸಭಾಭವನ ನಿರ್ವಾಹಕರಾಗಿ ಅರುಣ್ ಮತ್ತು ಮಾಧವ ಆಯ್ಕೆಗೊಂಡರು. ಕೇಸರಿ ಮಿತ್ರ ವೃಂದ ಮಾತೃ ಮಂಡಳಿ ಅಧ್ಯಕ್ಷರಾಗಿ ಶಾಲಿನಿ ದೇವದಾಸ್, ಕಾರ್ಯದರ್ಶಿಯಾಗಿ ಪೂರ್ಣಿಮಾ ಗೌತಮ್,ಕೋಶಾಧಿಕಾರಿಯಾಗಿ ವಿಮಲ ಜಯಂತ್ ಆಯ್ಕೆಗೊಂಡರು. ಸಾಂಸ್ಕೃತಿಕ ಕಾರ್ಯದರ್ಶಿ ಸಂದೀಪ್ ಕುಂಪಲ ನಿರೂಪಿಸಿದರು.

ವಾಮದಪದವು: ಜೂ.26–ಜು.3ರವರೆಗೆ 2076ನೇ ಮದ್ಯವರ್ಜನ

ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಬಂಟ್ವಾಳ ತಾಲೂಕು, ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ವಾಮದಪದವು, ಅಖಿಲ ಕರ್ನಾಟಕ ಜನ ಜಾಗೃತಿವೇದಿಕೆ ಟ್ರಸ್ಟ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ 2076ನೇ ಮದ್ಯವರ್ಜನ ಶಿಬಿರ ವಾಮದಪದವು ಬಸ್ತಿಕೋಡಿ ಶ್ರೀ ಪದ್ಮಾವತಿ ಸಭಾಭವನದಲ್ಲಿ ಜೂ.26ರಿಂದ ಜು.3 ರವರೆಗೆ ನಡೆಯಲಿದೆ ಎಂದು ಯೋಜನೆಯ ಪ್ರಕಟಣೆ ತಿಳಿಸಿದೆ. ಪುಂಜಾಲಕಟ್ಟೆ ಆರಕ್ಷಕ ಠಾಣೆ ಉಪನಿರೀಕ್ಷಕ ರಾಜೇಶ್ ಶಿಬಿರವನ್ನು ಉದ್ಘಾಟಿಸಲಿರುವರು. ಸಮಿತಿ ಗೌರವಾಧ್ಯಕ್ಷ ಹರೀಂದ್ರ ಟಿ.ಪೈ ಅಧ್ಯಕ್ಷತೆ ವಹಿಸಲಿರುವರು. ಜು.3ರಂದು ನಡೆಯುವ ಸಮಾರೋಪದಲ್ಲಿ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಗುತ್ತು, ಮಾಜಿ ಸಚಿವ ಬಿ.ರಮಾನಾಥ ರೈ ಮತ್ತಿತರರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕರಕ್ಷಕ ಸಂಘದ ಅಧ್ಯಕ್ಷರಾಗಿ ಹೇಮಲತಾ ಆಯ್ಕೆ

ಕಿನ್ನಿಗೋಳಿ: ಸಿಮಂತೂರಿನ ಶ್ರೀ ಶಾರದಾ ಸೆಂಟ್ರಲ್ ಸ್ಕೂಲ್‌ನ ಶಿಕ್ಷಕರಕ್ಷಕ ಸಂಘದ ಅಧ್ಯಕ್ಷರಾಗಿ ಹೇಮಲತಾ ದೇವಾಡಿಗ, ಉಪಾಧ್ಯಕ್ಷರಾಗಿ ಮಹಮ್ಮದ್ ಅಲಿ, ಕಾರ್ಯದರ್ಶಿಯಾಗಿ ಶಾಲೆಯ ಪ್ರಾಂಶುಪಾಲ ಜಿತೇಂದ್ರ ವಿ. ರಾವ್ ಹೆಜಮಾಡಿ, ಹಾಗೂ ಜೊತೆ ಕಾರ್ಯದರ್ಶಿಯಾಗಿ ಶ್ರೀಕಾಂತ್ ಆಯ್ಕೆಯಾದರು.



ಜೂ. 28: ಒಳಚಿಂತನ ಆಧ್ಯಾತ್ಮಿಕ ಶಿಬಿರ

ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಬಪ್ಪನಾಡು ದುರ್ಗಾ ಪಾರಾಯಣ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಶ್ರೀ ಸಾಯಿ ಈಶ್ವರ್ ಗುರೂಜಿಯವರ ಉಪಸ್ಥಿತಿಯಲ್ಲಿ, ಉಡುಪಿ ಮತ್ತು ಕುಂದಾಪುರ ಶಿಬಿರಗಳ ನಂತರ ಈಗ ಬಪ್ಪನಾಡಿನಲ್ಲಿ ಒಳಚಿಂತನ ಆಧ್ಯಾತ್ಮಿಕ ಶಿಬಿರವು ಜೂ. 28ರಂದು ಬೆಳಗ್ಗೆ 10 ಗಂಟೆಗೆ ಮೂಲ್ಕಿಯ ಬಪ್ಪನಾಡು ದೇವಳದ ಅನ್ನಪೂರ್ಣೇಶ್ವರಿ ಸಭಾಂಗಣದಲ್ಲಿ ಜರಗಲಿದೆ. ಆತ್ಮ ಜ್ಞಾನ, ಆಂತರಿಕ ಶಾಂತಿ, ಚಕ್ರ ಧ್ಯಾನ, ಗುರುಗಳ ಪ್ರವಚನ, ಪ್ರಶ್ನೆಗಳಿಗೆ ನೇರ ಉತ್ತರ, ಸಾಮೂಹಿಕ ಧ್ಯಾನ ನಡೆಯಲಿದೆಯೆಂದು ಬಪ್ಪನಾಡು ದುರ್ಗಾ ಪಾರಾಯಣ ಟ್ರಸ್ಟ್ ಟ್ರಸ್ಟಿ ತುಳು ಕೂಟ ಅಸಲ್ಫ ಘಾಟಕೋಪರ್ ಮುಂಬೈ ಅಧ್ಯಕ್ಷ ರಮನಾಥ್ ಕೋಟ್ಯಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದು ಧರ್ಮ, ಪ್ರಭು ಶ್ರೀರಾಮ, ಹಿಂದು ದೇವತೆಗಳ ಅವಹೇಳನ, ಪ್ರಚೋದನಕಾರಿ ಹೇಳಿಕೆಗೆ ಖಂಡನೆ

ಪ್ರೊ.ಭಗವಾನ್ ಬಂಧನಕ್ಕೆ ಆಗ್ರಹಿಸಿ ಮುಖ್ಯಮಂತ್ರಿಗೆ ಮನವಿ

ಮಂಗಳೂರು/ಬಂಟ್ವಾಳ: ಹಿಂದು ಧರ್ಮ, ಪ್ರಭು ಶ್ರೀರಾಮ ಹಾಗೂ ಹಿಂದು ದೇವತೆಗಳ ಕುರಿತು ಅತ್ಯಂತ ಅವಹೇಳನಕಾರಿ ಮತ್ತು ಪ್ರಚೋದನಕಾರಿ ಹೇಳಿಕೆ ನೀಡಿರುವ ಪ್ರೊ. ಕೆ.ಎಸ್. ಭಗವಾನ್ ಅವರ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ಹಿಂದೂ ಜನಜಾಗೃತಿ ಸಮಿತಿಯು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಪ್ರೊ. ಕೆ.ಎಸ್. ಭಗವಾನ್, ಪ್ರಭು ಶ್ರೀರಾಮನ ಜನನ ಮತ್ತು ಹಿಂದು ಧರ್ಮದ ಶ್ರದ್ಧಾಕೇಂದ್ರಗಳು ಹಾಗೂ ಆಚರಣೆಗಳ ಕುರಿತು ಅತ್ಯಂತ ಅಶ್ಲೀಲ, ಧರ್ಮದ್ರೋಹಿ ಮತ್ತು ಆಧಾರ ರಹಿತ ಹೇಳಿಕೆಗಳನ್ನು ನೀಡಿದ್ದಾರೆ. ಆದ್ದರಿಂದ, ಸರ್ಕಾರವು ಈ ಪ್ರಚೋದನಾತ್ಮಕ ಭಾಷಣದ ಸಂಪೂರ್ಣ ವಿಡಿಯೋ ಮತ್ತು ಧ್ವನಿಮುದ್ರಣ ಸಾಕ್ಷ್ಯಗಳನ್ನು ಗಂಭೀರವಾಗಿ ಪರಿಶೀಲಿಸಿ, ಅವರ ವಿರುದ್ಧ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಹಿನ್ನೆಲೆಯಲ್ಲಿ ಸೂಕ್ತ ಕಾನೂನು ರೀತ್ಯಾ ಪ್ರಕರಣ ದಾಖಲಿಸಿ ತಕ್ಷಣವೇ ಬಂಧಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿ ವಿನಂತಿಸಿದೆ.

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಹಿಂದೂರಾಷ್ಟ್ರ ಸಮನ್ವಯ ಸಮಿತಿಯ ದಿನಕರ್ ಬಜಾಲ್, ಸುರೇಂದ್ರ ಜಪ್ಪಿನಮೊಗರು, ಹಿಂದೂ ಸೇವಾ ಸಮಿತಿ ಜಪ್ಪಿನಮೊಗರು ಅಧ್ಯಕ್ಷ ಯೋಗೀಶ್ ರೈ, ವಕೀಲರಾದ ಈಶ್ವರ ಕೊಟ್ಟಾರಿ, ತೀರ್ಥೇಶ್, ಹರಿಶ್ಚಂದ್ರ, ಯತೀಶ್, ಹಿಂದುತ್ವವಾದಿ ರಾಜ ಗೋವಿಂದ, ಧರ್ಮಪ್ರೇಮಿಗಳಾದ ಜಯಪ್ರಕಾಶ್ ಬಜಾಲ್, ಪ್ರಕಾಶ್ ಬಜಾಲ್, ಶಶಿಕಲಾ ಕುಲಾಲ್, ಶ್ರೀಪತಿ ಕದ್ರಿ, ಚಂದ್ರಕಾಂತ್ ಕಾಮತ್, ಹಿಂದೂ ಜನಜಾಗೃತಿ ಸಮಿತಿ ಕಾರ್ಯಕರ್ತರಾದ ರೋಹಿತ್ ಕೋಟ್ಯಾನ್, ಭಾಸ್ಕರ ಆಚಾರ್ಯ, ಭಾಸ್ಕರ್ ಕೋಲ್ನಾಡ್, ಸುಧಾಕರ್ ಆಚಾರ್ಯ, ನಿತೇಶ್ ರಾವ್, ಬಾಲಗಂಗಾಧರ, ಲಕ್ಷ್ಮೀಕಾಂತ್ , ರಾಜೇಶ ಆಚಾರ್ಯ ಇದ್ದರು.

ಬಂಟ್ವಾಳದಲ್ಲಿ ಮನವಿ ಸಲ್ಲಿಕೆ

ಬಂಟ್ವಾಳದಲ್ಲಿ ಹಿಂದೂ ಜನಜಾಗೃತಿ ಸಮಿತಿ ಹಾಗೂ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ವತಿಯಿಂದ ಜಂಟಿಯಾಗಿ ಬಂಟ್ವಾಳ ತಹಶೀಲ್ದಾರರ ಮಂಜುನಾಥ್ ಅವರ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರೊ. ಕೆ. ಎಸ್. ಭಗವಾನ್ ಈ ಹಿಂದೆಯೂ ಹಲವು ಬಾರಿ ಹಿಂದು ಧರ್ಮಗ್ರಂಥಗಳು, ಪುರಾಣಗಳು ಮತ್ತು ದೇವ–ದೇವತೆಗಳ ಕುರಿತು ಇಂತಹದ್ದೇ ವಿಕೃತ ಹಾಗೂ ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸಾರ್ವಜನಿಕ ಶಾಂತಿಗೆ ಧಕ್ಕೆ ತಂದ ಇತಿಹಾಸ ಹೊಂದಿದ್ದಾರೆ. ಭಾರತೀಯ ಸಂವಿಧಾನವು ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ವೈಚಾರಿಕತೆಯ ಹೆಸರಿನಲ್ಲಿ ಯಾವುದೇ ಧರ್ಮ, ಶ್ರದ್ಧೆ ಅಥವಾ ಕೋಟ್ಯಂತರ ಜನರ ನಂಬಿಕೆಯನ್ನು ಹೀಯಾಳಿಸುವ ಮತ್ತು ಅವಹೇಳನ ಮಾಡುವ ಹಕ್ಕನ್ನು ಯಾರಿಗೂ ನೀಡಿಲ್ಲ.ಸರ್ಕಾರವು ಈ ಪ್ರಚೋದನಾತ್ಮಕ ಭಾಷಣದ ಸಂಪೂರ್ಣ ವಿಡಿಯೋ ಮತ್ತು ಧ್ವನಿಮುದ್ರಣ ಸಾಕ್ಷ್ಯಗಳನ್ನು ಗಂಭೀರವಾಗಿ ಪರಿಶೀಲಿಸಿ, ಅವರ ವಿರುದ್ಧ ಸೂಕ್ತ ಕಾನೂನು ಪ್ರಕರಣ ದಾಖಲಿಸಿ ತಕ್ಷಣವೇ ಬಂಧಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯು ಒತ್ತಾಯಿಸಿದೆ.

ತಹಶೀಲ್ದಾರರಿಗೆ ಮನವಿ ಸಲ್ಲಿಸಿದ ವೇಳೆ ಹಿಂದೂ ಮುಖಂಡರಾದ ಅಶೋಕ್ ಶೆಟ್ಟಿ ಸರಪಾಡಿ, ಪ್ರಭಾಕರ ಪ್ರಭು, ಲೋಹಿತ್ ಪನೋಲಿಬೈಲ್, ರಂಜಿತ್ ರಾವ್, ಶೇಖರ ಕೊಟ್ಟಾರಿ, ರಾಜಮಾಣಿ, ರಾಜರಾಮ ಐತಾಳ್, ನಾಗೇಶ್ ಕುದನೆ, ಪ್ರಣಾಮ್ ರಾಜ್, ರಾಮಣ್ಣ, ಗಿರೀಶ್ ಹೆಗ್ಗಡೆ, ಸುರೇಶ್ ರೈ, ಗಣೇಶ್, ನಾರಾಯಣ, ಜಯಾನಂದ, ರಾಧಾಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕಲ್ಲಡ್ಕ ಶ್ರೀರಾಮ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರವೇಶೋತ್ಸವ

ಜೀವನ ಮೌಲ್ಯಗಳ ಶಿಕ್ಷಣ ಅಗತ್ಯ: ಡಾ.ಭಟ್

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026–27ನೇ ಸಾಲಿನ ನೂತನವಾಗಿ ಸೇರ್ಪಡೆಯಾದ ವಿದ್ಯಾರ್ಥಿಗಳ ಪ್ರವೇಶೋತ್ಸವ ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕ ಡಾ.ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಹಿತ ಕಣ್ಣ ಮುಂದಿರಿಸಿ ಕೊಂಡು ಈ ಸಂಸ್ಥೆ ಆರಂಭವಾಗಿದೆ. ನಮ್ಮ ದೇಶದ ಧರ್ಮ, ಸಂಸ್ಕೃತಿ, ಜೀವನ ಮೌಲ್ಯಗಳ ಶಿಕ್ಷಣ ಇಂದಿನ ಪೀಳಿಗೆಗೆ ಕೊಡಬೇಕು, ಇತಿಹಾಸ, ಮಹಾಪುರುಷರ ಬಗ್ಗೆ ತಿಳಿಯಬೇಕು ಎಂಬ ಉದ್ದೇಶದಿಂದ ಮಾತೃಭಾಷೆ ಕನ್ನಡದಲ್ಲಿ ಶಿಕ್ಷಣ ನೀಡುತ್ತಿದ್ದೇವೆ ಎಂದರು.

1ನೇ ತರಗತಿಯ ಪುಟಾಣಿಗಳನ್ನು ಅಧ್ಯಾಪಕ ವೃಂದದವರು ಪೂರ್ಣಕುಂಭ ಸ್ವಾಗತದೊಂದಿಗೆ ಕರೆತಂದರು. ನೂತನವಾಗಿ ಸೇರಿದ ವಿದ್ಯಾರ್ಥಿಗಳಿಗೆ ಅಧ್ಯಾಪಕ ವೃಂದದವರು ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕವನ್ನಿಟ್ಟು ಸಿಹಿ ತಿನ್ನಿಸಿ ಎಂದು ಹರಸಿದರು.

ಸಂಸ್ಥೆ ವಿಶ್ವ ಮಟ್ಟದಲ್ಲಿ ಬೆಳೆದಿದೆ

ಅತಿಥಿಯಾಗಿದ್ದ ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಮಾತನಾಡಿ,ಸಂಸ್ಕಾರಯುತ ಶಿಕ್ಷಣದ ಜೊತೆ ಮಕ್ಕಳು ಬೆಳೆಯಬೇಕು. ಕನ್ನಡ ಮಾಧ್ಯಮ ಶಾಲೆಗಳ ಪೈಕಿ ಈ ಸಂಸ್ಥೆ ವಿಶ್ವ ಮಟ್ಟದಲ್ಲಿ ಬೆಳೆದು ನಿಂತಿದೆ ಎಂದರು.

ಬೆಂಗಳೂರು ಸೋನಾ ಗ್ರೂಪ್ ಆಫ್ ಇಂಡಸ್ಟ್ರೀಸ್ ನಿರ್ದೇಶಕರಾದ ಯಜ್ಞನಾರಾಯಣ ಕಮ್ಮಾಜೆ, ಉಡುಪಿ ಎಚ್‌ಪಿಸಿಲಿಮಿಟೆಡ್ ಸಿಎಂಡಿ ಚಂದ್ರಕಾಂತ ರಾವ್ ಇನ್ನ, ಕೆರಾಡಿ ವರಸಿದ್ಧಿವಿನಾಯಕ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿ ನಿರ್ದೇಶಕರಾದ ಪ್ರದೀಪ್ ಶೆಟ್ಟಿ ಬೆಂಗಳೂರು ಕ್ಷೇತ್ರಿಯ ಶಿಶುವಾಟಿಕಾ ಸಹ ಪ್ರಮುಖರು ಹರಿ ಕಾಳಿಚರಣ್ ಅತಿಥಿಗಳಾಗಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ಧಾತ್ರಿ, ಅನನ್ಯ, ಧನ್ಯಶ್ರೀ, ಶರಣ್ಯ, ಬಿನಿತ್, ನಿಶಾಂತ್, ಭವಿಷ್, ಮನಿಷ್ ವೇದಮಂತ್ರ ಪಠಿಸಿದರು. ಈ ಸಂಧರ್ಭದಲ್ಲಿ ಮಂಗಳೂರು ವಿಕಾಸ್ ಎಜುಕೇಶನ್ ಟ್ರಸ್ಟ್‌ನ ಸೂರಜ್ ಕುಮಾರ್ ಕಲ್ಯ, ಕೆರಾಡಿ ವರಸಿದ್ಧಿವಿನಾಯಕ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಯ ನಿರ್ದೇಶಕರಾದ ಸುನೀಲ್ ಚತ್ರಾಲ್, ಬೆಂಗಳೂರು ಶ್ರೀ ಸರಸ್ವತಿ ಶಿಶುಮಂದಿರ ಸರ್ಜಾಪುರ ಮುಖ್ಯ ಶಿಕ್ಷಕರಾದ ವಿನುತ, ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ಸಂಚಾಲಕ ವಸಂತ ಮಾಧವ, ರಾಷ್ಟ್ರಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯೆ ಡಾ. ಕಮಲಾ ಪ್ರಭಾಕರ್ ಭಟ್, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು, ಆಡಳಿತ ಮಂಡಳಿಯ ಸದಸ್ಯರು, ಮಾತೃಭಾರತಿ ಸಮಿತಿ ಸದಸ್ಯರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು. ಸುಧನ್ವ ಕಾಮತ್ ಸ್ವಾಗತಿಸಿ, ಭೂಮಿಕಾ ವಂದಿಸಿದರು.ತನ್ವಿ ಜೆ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಆಳ್ವಾಸ್‌ನಲ್ಲಿ 'ವ್ಯಸನಮುಕ್ತ ಜೀವನ' ಕಾರ್ಯಕ್ರಮದಲ್ಲಿ ಡಾ.ಹೆಗ್ಡೆ ಸಲಹೆ

ಯುವಜನರಿಗೆ ಆರೋಗ್ಯಕರ ಜೀವನಶೈಲಿ ಅಗತ್ಯ

ಮೂಡುಬಿದಿರೆ: ಯುವಜನರು ಮಾದಕ ವ್ಯಸನದಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡಾಗ ಮಾತ್ರ ಉತ್ತಮ ವ್ಯಕ್ತಿತ್ವ ಮತ್ತು ಸದೃಢ ಸಮಾಜ ನಿರ್ಮಾಣ ಸಾಧ್ಯ ಎಂದು ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ. ರವಿಪ್ರಸಾದ ಹೆಗ್ಡೆ ಹೇಳಿದರು.

ಕೇಂದ್ರ ಸರ್ಕಾರದ 'ನಶಾಮುಕ್ತ ಭಾರತ್ ಅಭಿಯಾನ' ಅಂಗವಾಗಿ ಆಳ್ವಾಸ್ ಪಿಯು ಕಾಲೇಜಿನ ಮಾದಕ ವಸ್ತು ನಿಯಂತ್ರಣ ಸಮಿತಿ ವತಿಯಿಂದ ಬುಧವಾರ ಕಾಲೇಜಿನ ಸಭಾಂಗಣದಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ಮಾದಕ ವಸ್ತುಗಳ ದುಷ್ಪರಿಣಾಮಗಳು ಮತ್ತು ವ್ಯಸನಮುಕ್ತ ಜೀವನ' ಕುರಿತ ಅರಿವು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು ಮಾತ್ರವಲ್ಲದೆ ಕುಟುಂಬ ಕಲಹ, ರಸ್ತೆ ಅಪಘಾತ, ಹಿಂಸಾಚಾರ ಮತ್ತು ಅಪರಾಧ ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿದೆ. ಯಾರೂ ವ್ಯಸನಿಯಾಗಬೇಕೆಂಬ ಉದ್ದೇಶದಿಂದ ಮಾದಕ ವಸ್ತುಗಳನ್ನು ಸೇವಿಸಲು ಆರಂಭಿಸುವುದಿಲ್ಲ, ಆದರೆ ಒಂದು ಬಾರಿ ಅದರ ದಾಸರಾದರೆ ಅದರಿಂದ ಹೊರಬರುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ವ್ಯಸನದ ಬಗ್ಗೆ ಕುತೂಹಲವೂ ಬೇಡ, ಪ್ರಯೋಗವೂ ಬೇಡ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಪಿಯು ಕಾಲೇಜಿನ ಪ್ರಾಂಶುಪಾಲ ಮೊಹಮ್ಮದ್ ಸದಾಕತ್, ವ್ಯಸನಮುಕ್ತ ಸಮಾಜ ನಿರ್ಮಾಣ ಪ್ರತಿಯೊಬ್ಬರ ವೈಯಕ್ತಿಕ ಸಂಕಲ್ಪದಿಂದಲೇ ಸಾಧ್ಯವಾಗಬೇಕು. ಮೊದಲು ನಾವು ಸರಿಯಾದರೆ ಕುಟುಂಬ ಸರಿಯಾಗುತ್ತದೆ, ಕುಟುಂಬ ಸರಿಯಾದರೆ ಸಮಾಜ, ಗ್ರಾಮ, ಜಿಲ್ಲೆ, ರಾಜ್ಯ ಮತ್ತು ದೇಶವೂ ಉತ್ತಮ ದಿಕ್ಕಿನಲ್ಲಿ ಸಾಗುತ್ತದೆ. ಯಾವುದೇ ಮಾದಕ ವಸ್ತುವನ್ನು ಮುಟ್ಟುವುದಿಲ್ಲ ಎಂಬ ದೃಢ ನಿರ್ಧಾರವೇ ವ್ಯಸನಕ್ಕೆ ಶಾಶ್ವತ ಪರಿಹಾರ. 'ಬೇಡ' ಎಂದು ಹೇಳುವುದು ದೌರ್ಬಲ್ಯವಲ್ಲ; ಅದು ವ್ಯಕ್ತಿಯ ಆತ್ಮವಿಶ್ವಾಸ ಮತ್ತು ವ್ಯಕ್ತಿತ್ವದ ಬಲದ ಸಂಕೇತವಾಗಿದೆ ಎಂದು ಹೇಳಿದರು.

ಉಪಪ್ರಾಂಶುಪಾಲೆ ಝಾನ್ಸಿ ಪಿ.ಎನ್., ಕಾರ್ಯಕ್ರಮ ಸಂಯೋಜಕ ಟಿ.ಎ.ಎನ್. ಖಂಡಿಗೆ, ಇದ್ದರು. ಜೇಸನ್ ಕ್ಯಾಸ್ಟಲಿನೋ ಕಾರ್ಯಕ್ರಮ ನಿರೂಪಿಸಿದರು.

ಪ್ರತಿಜ್ಞೆ ಸ್ವೀಕಾರ

ಕಾರ್ಯಕ್ರಮದ ಅಂಗವಾಗಿ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ನಶಾಮುಕ್ತ ಭಾರತ್ ಪ್ರತಿಜ್ಞೆ ಬೋಧಿಸಿದರು. ವಿದ್ಯಾರ್ಥಿಗಳು ಯಾವುದೇ ಮಾದಕ ವಸ್ತುಗಳನ್ನು ಸೇವಿಸದಿರುವುದಾಗಿ ಹಾಗೂ ಸಮಾಜದಲ್ಲಿಯೂ ವ್ಯಸನಮುಕ್ತ ಬದುಕಿನ ಬಗ್ಗೆ ಅರಿವು ಮೂಡಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಶಬರಿಮಲೆಯಲ್ಲಿ ಮೂಲಸೌಕರ್ಯ ಒದಗಿಸಲು ರಾಜ್ಯಪಾಲರಿಗೆ ಮನವಿ

ಮಂಗಳೂರು: ಮಂಗಳೂರಿನ ಓಂ ಮಠದ ಶ್ರೀ ಮಹಾಮಂಡಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಅಖಂಡ ಭಾರತ ಸನಾತನ ಸಂತ ಸಮಿತಿಯು ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರನ್ನು ಭೇಟಿ ಮಾಡಿ ಶಬರಿಮಲೆ ಭಕ್ತರು ಎದುರಿಸುತ್ತಿರುವ ತೊಂದರೆ ಪರಿಹರಿಸಲು ಮಧ್ಯಪ್ರವೇಶಿಸುವಂತೆ ವಿನಂತಿಸಿತ್ತು.

ತಿರುಪತಿ ಮಾದರಿ ಮಾರ್ಗ ಪ್ರಾರಂಭಿಸುವುದು, ನೀಲಕ್ಕಲ್‌ನಿಂದ ಪಂಬಾಗೆ ಉಚಿತ ಬಸ್, ನೀಲಕ್ಕಲ್‌ನಿಂದ ಪಂಬಾಗೆ ನಿರಂತರ ಬಸ್ ಸೇವೆ, ನೀಲಕ್ಕಲ್‌ನಲ್ಲಿ ಭಕ್ತರಿಗೆ ಕಾಯುವ ಸೌಲಭ್ಯ ಮತ್ತು ಪಂಬಾದಲ್ಲಿ ಸಾಕಷ್ಟು ಪಾರ್ಕಿಂಗ್ ಸೌಲಭ್ಯ ಇತ್ಯಾದಿ ಪ್ರಮುಖ ಬೇಡಿಕೆಗಳಾಗಿವೆ. ಇದಕ್ಕೂ ಮೊದಲು,ಈ ನಿಯೋಗವು ಮುಖ್ಯಮಂತ್ರಿ, ಗೃಹ ಸಚಿವರು, ದೇವಸ್ವಂ ಸಚಿವರು, ಸಾರಿಗೆ ಸಚಿವರು, ಕೈಗಾರಿಕಾ ಸಚಿವರು ಮುಂತಾದವರನ್ನು ಭೇಟಿ ಮಾಡಿತು. ನಿಯೋಗದ ಮುಖ್ಯಸ್ಥರ ಪ್ರಕಾರ, ಕೇರಳ ಸರ್ಕಾರ ನೀಡಿದ ಪ್ರತಿಕ್ರಿಯೆ ತುಂಬಾ ಸಕಾರಾತ್ಮಕವಾಗಿತ್ತು ಮತ್ತು ಈ ನಿಯೋಗವು ಎತ್ತಿರುವ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಲಾಗುವುದು.

ಶ್ರೀ ರಾಜೇಶ್‌ನಾಥ್ ಗುರೂಜಿ, ಸ್ವಾಮಿ ಕೃಷ್ಣಾನಂದ ಸರಸ್ವತಿ, ಸ್ವಾಮಿ ಅಗಸ್ತ್ಯ ಶ್ರೀ ಮೋಹನಾನಂದ ಸರಸ್ವತಿ, ಶ್ರೀ ರಾಮಪ್ರಸಾದಾನಂದ ಸಾರಸ್ವತಿ ಮತ್ತು ಶ್ರೀ ಸುಂದರೇಶಾನಂದ ಗಿರಿ ಸ್ವಾಮೀಜಿ ಕೂಡ ಈ ನಿಯೋಗದ ಭಾಗವಾಗಿದ್ದರು. ಈ ಹಿಂದೆ ಶಬರಿಮಲೆ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್) ರಾಷ್ಟ್ರೀಯ ಸಮಿತಿ ಶ್ರೀ ಮುರುಗನ್ ಸೆಲ್ವಂಜೀ ಅವರು ತಿರುವನಂತಪುರದಲ್ಲಿ ಪತ್ರಿಕಾಗೋಷ್ಠಿಯ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬಿಜೆಪಿಯಿಂದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಸಂಸ್ಮರಣೆ, ಬಲಿದಾನ ದಿನ

ಮಂಗಳೂರು: ಬಿಜೆಪಿ ಮಂಗಳೂರು ದಕ್ಷಿಣ ಮಂಡಲದಿಂದ ಜನಸಂಘ ಸ್ಥಾಪಕ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಸಂಸ್ಮರಣಾ ಕಾರ್ಯಕ್ರಮವು ನಗರದ ಅಟಲ್ ಸೇವಾ ಕೇಂದ್ರದಲ್ಲಿ ನಡೆಯಿತು.

ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ಅವರನ್ನು ಕೇವಲ ಜನಸಂಘದ ಸಂಸ್ಥಾಪಕರು ಎಂಬ ಕಾರಣಕ್ಕೆ ಸ್ಮರಿಸುವುದು ಅಲ್ಲ ಬದಲಿಗೆ ಭಾರತದ ಏಕತೆಯ ರಕ್ಷಣೆ, ಬಂಗಾಳ ಹಾಗೂ ಕಾಶ್ಮೀರವನ್ನು ಭಾರತದ ಅವಿಭಾಜ್ಯ ಅಂಗವನ್ನಾಗಿ ಉಳಿಸುವುದು ಸಹಿತ ರಾಷ್ಟ್ರಪರ ಅನೇಕ ಹೋರಾಟಕ್ಕೆ ಸರ್ವಸ್ವವನ್ನು ಅರ್ಪಿಸಿದ ಮಹಾನ್ ವ್ಯಕ್ತಿ. ಅವರ ಬಲಿದಾನಕ್ಕೆ ಕಾರಣವಾದ ಜಮ್ಮು ಕಾಶ್ಮೀರದ 370 ವಿಧಿಯನ್ನು ನರೇಂದ್ರ ಮೋದಿ ಸರ್ಕಾರವು ಕಿತ್ತೆಸೆದು ಮುಖರ್ಜಿ ಅವರ ಕನಸು ನನಸು ಮಾಡಿರುವುದು ಹೆಮ್ಮೆಯ ಸಂಗತಿ. ರಾಷ್ಟ್ರ ನಿರ್ಮಾಣದಲ್ಲಿ ಅವರು ತೋರಿದ ಹಾದಿ, ಹಾಕಿಕೊಟ್ಟ ಆದರ್ಶಗಳು ನಮ್ಮಂತಹ ಪ್ರತಿಯೊಬ್ಬ ಕಾರ್ಯಕರ್ತನಿಗೂ ದಾರಿ ದೀಪ ಎಂದರು.

ಈ ಸಂದರ್ಭದಲ್ಲಿ ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಕಾರ್ಯದರ್ಶಿ ಪೂರ್ಣಿಮಾ, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಹೆಗ್ಡೆ ಹಾಗೂ ಲಲೇಶ್ ಕುಮಾರ್, ಮಂಡಲದ ಎಸ್‌ಐಆರ್ ಪ್ರಭಾರಿ ಹಾಗೂ ಮಾಜಿ ಮೇಯರ್ ಗಣೇಶ್ ಹೊಸಬೆಟ್ಟು, ಸುಧೀರ್ ಶೆಟ್ಟಿ ಕಣ್ಣೂರು, ನಿಕಟಪೂರ್ವ ಪಾಲಿಕೆ ಸದಸ್ಯರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಉಪಸ್ಥಿತರಿದ್ದರು.

ಕಣಿಯೂರು ಕಾಡಿನ ರಸ್ತೆ ಬದಿ ಕಸ ಎಸೆದವರಿಗೆ ರೂ.10,000 ದಂಡ!

ಪುತ್ತೂರು: ಗ್ರಾಮಾಂತರದ ಕೆಯ್ಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಣಿಯಾರು ಕಾಡು ರಸ್ತೆಯ ಬದಿಯಲ್ಲಿ ಕಸದ ರಾಶಿಯನ್ನು ಎಸೆದು ಪರಿಸರ ಮಾಲಿನ್ಯಕ್ಕೆ ಕಾರಣರಾದವರ ವಿರುದ್ಧ ಗ್ರಾ.ಪಂ. ಆಡಳಿತ ಮಂಡಳಿ ಕಠಿಣ ಕ್ರಮ ಕೈಗೊಂಡಿದೆ. ಕಸ ಎಸೆದವರನ್ನು ಪತ್ತೆ ಹಚ್ಚಿ ರೂ.10 ಸಾವಿರ ದಂಡ ವಿಧಿಸಲಾಗಿದೆ.

ಕೆಯ್ಯೂರು ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯ ಜಯಂತ ಪೂಜಾರಿ ಕೆಂಗುಡೇಲು ಅವರು ನಿತ್ಯದಂತೆ ಬೆಳಗ್ಗೆ ವಾಕಿಂಗ್‌ಗೆ ತೆರಳಿದ ಸಂದರ್ಭದಲ್ಲಿ ಕೆಯ್ಯೂರು–ಕಣಿಯಾರು ರಸ್ತೆಯಲ್ಲಿ ಕಣಿಯಾರು ಕಾಡು ರಸ್ತೆಯ ಬದಿಯಲ್ಲಿ ಕಿಡಿಗೇಡಿಗಳು ಕಸದ ಚೀಲವನ್ನು ಎಸೆದು ಹೋಗಿರುವುದು ಗಮನಕ್ಕೆ ಬಂದಿದೆ. ಕೂಡಲೇ ಈ ವಿಷಯವನ್ನು ಅವರು ಗ್ರಾ.ಪಂ. ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ಆರೋಪಿಗಳ ಸುಳಿವು

ಸ್ಥಳಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಮಿತಾ ಎ.ಕೆ. ಮತ್ತು ಸಿಬ್ಬಂದಿ ಆಗಮಿಸಿ, ರಸ್ತೆ ಬದಿಯಲ್ಲಿದ್ದ ಕಸದ ಚೀಲವನ್ನು ಪರಿಶೀಲಿಸಿದ್ದಾರೆ. ಈ ವೇಳೆ, ಆ ಕಸದ ಚೀಲದೊಳಗೆ, ಇತ್ತೀಚೆಗೆ ಎಲೆಕ್ಟ್ರಾನಿಕ್ ಅಂಗಡಿಯೊಂದರಲ್ಲಿ ಖರೀದಿಸಿದ್ದ ಮಿಕ್ಸಿಯ ಖರೀದಿ ಬಿಲ್ ಪತ್ತೆಯಾಗಿದೆ. ಬಿಲ್‌ನಲ್ಲಿ ಇದ್ದ ಮೊಬೈಲ್ ಸಂಖ್ಯೆಯನ್ನು ಆಧರಿಸಿ ಪಂಚಾಯತ್ ಅಧಿಕಾರಿಗಳು ಕರೆ ಮಾಡಿ ವಿಚಾರಿಸಿದಾಗ, ಕಸ ಎಸೆದ ವ್ಯಕ್ತಿಗಳ ಸುಳಿವು ಸಿಕ್ಕಿದೆ.

ಪರಿಸರ ಸೂಕ್ಷ್ಮ ಪ್ರದೇಶವಾದ ಕಾಡಿನ ಹಾದಿಯಲ್ಲಿ ಅಜಾಗರೂಕತೆಯಿಂದ ಕಸ ಎಸೆದು ಸ್ವಚ್ಛತೆಗೆ ಭಂಗ ತಂದಿದ್ದಕ್ಕಾಗಿ, ಗ್ರಾಮ ಪಂಚಾಯತ್ ವತಿಯಿಂದ ಆರೋಪಿಗಳಿಗೆ 10,000 ದಂಡವನ್ನು ವಿಧಿಸಲಾಗಿದೆ.

ಈ ಸಂದರ್ಭದಲ್ಲಿ ಪಂಚಾಯತ್‌ನ ನಿಕಟಪೂರ್ವ ಅಧ್ಯಕ್ಷ ಶರತ್ ಕುಮಾರ್ ಮಾಡಾವು, ನಿಕಟಪೂರ್ವ ಸದಸ್ಯ ಜಯಂತ ಪೂಜಾರಿ ಕೆಂಗುಡೇಲು, ಗ್ರಾ.ಪಂ. ಸಿಬ್ಬಂದಿ ರಾಕೇಶ್ ಮೊದಲಾದವರು ಉಪಸ್ಥಿತರಿದ್ದರು.

ಕೋಟೆಕಾರು ಪಟ್ಟಣ ಪಂಚಾಯತ್ ಸಾಮಾನ್ಯಸಭೆ । ಪ್ರತಿ ಸಭೆಯಲ್ಲೂ ವಿಷಯ ಪ್ರಸ್ತಾಪಿಸಿದರೂ ಸಮಸ್ಯೆಗಳು ಬಗೆಹರಿಯದಿರುವ ಬಗ್ಗೆ ಸದಸ್ಯರ ಆರೋಪ

ವಾರ್ಡ್ ಸಭೆಯ ಅರ್ಜಿಗಳನ್ನು ಅಧಿಕಾರಿಗಳು ಬರೆದಿಡುತ್ತಾರೆಯೇ ಹೊರತು ಫಲಿತಾಂಶ ಶೂನ್ಯ

ಉಳ್ಳಾಲ: ಪ್ರತೀ ಸಾಮಾನ್ಯ ಸಭೆಗಳಲ್ಲೂ ನಾವು ಪ್ರಸ್ತಾಪಿಸುವ ವಾರ್ಡ್ ಸಮಸ್ಯೆಗಳ ಅರ್ಜಿಗಳನ್ನು ಅಧಿಕಾರಿಗಳು ಪುಸ್ತಕದಲ್ಲಿ ಬರೆದಿಡುತ್ತಾರೆಯೇ ಹೊರತು ಫಲಿತಾಂಶ ಮಾತ್ರ ಶೂನ್ಯ. ಜನಪ್ರತಿನಿಧಿಗಳ ಮನವಿಗೆ ಸ್ಪಂದನೆ ಸಿಗದಿದ್ದರೆ, ಜನಸಾಮಾನ್ಯರ ಮನವಿಗಳು ಈಡೇರಲು ಸಾಧ್ಯವೇ ಎಂದು ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯ ಸುಜಿತ್ ಮಾಡೂರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಅಧ್ಯಕ್ಷ ದಿವ್ಯ ಸತೀಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಾಮಾನ್ಯಸಭೆಯಲ್ಲಿ ಅವರು ಮಾತನಾಡಿದರು. ಮಾಡೂರು ಜಂಕ್ಷನ್‌ನ ಶೌಚಾಲಯದ ಬಗ್ಗೆ ಮನವಿ ಕೊಟ್ಟು ಆರು ತಿಂಗಳಾಯಿತು. ಮಾಡೂರು ಸರ್ಕಾರಿ ಶಾಲೆಗೆ ಬಹಳ ಕಷ್ಟಪಟ್ಟು ಪುನರ್ ಜೀವ ನೀಡಿದ್ದರೂ ಸಹ ಶಾಲೆಗೆ ನೀರಿನ ಸಂಪರ್ಕ ಇಷ್ಟರವರೆಗೂ ನೀಡಿಲ್ಲ. ವಾರ್ಡ್ ವ್ಯಾಪ್ತಿಯ ಜಯರಾಜ್ ಶೆಟ್ಟಿ,ಅರ್ಜುನ್, ವಿನೋದ್ ಅವರ ಮನೆ ಬಳಿಯ ಡ್ರೈನೇಜ್ ಸಮಸ್ಯೆ ಬಗೆಹರಿಸಲು ನಾಲ್ಕು ಸಲ ಇಂಜಿನಿಯರ್ ಮತ್ತು ಗುತ್ತಿಗೆದಾರರನ್ನು ಕರೆದುಕೊಂಡು ಹೋದರೂ ಪ್ರಯೋಜನವಾಗಿಲ್ಲ,ಎಂದರು. ಇದಕ್ಕೆ ಉತ್ತರಿಸಿದ ಇಂಜಿನಿಯರ್ ದಿನೇಶ್, ಡ್ರೈನೇಜ್ ಕಾಮಗಾರಿ ಟೆಂಡರ್ ವಹಿಸಿದ ಗುತ್ತಿಗೆದಾರರಿಗೆ ಈಗಾಗಲೇ 2 ನೋಟೀಸು ನೀಡಲಾಗಿದೆಯೆಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಧೀರಜ್ ಕುಸಾಲ್ ನಗರ ಮಾತನಾಡಿ, ಸುಜಿತ್ ಅವರು ಈಗಲೇ ಕಾಮಗಾರಿಯ ವಿರುದ್ಧ ಆಕ್ಷೇಪದ ಲೆಟರ್ ನೀಡಿ, ಸಭೆಯಲ್ಲಿ ನಿರ್ಣಯ ತೆಗೆದು ಗುತ್ತಿಗೆದಾರರಿಗೆ ಮೂರನೇ ನೋಟೀಸು ನೀಡಿ ಟೆಂಡರನ್ನೇ ರದ್ದುಗೊಳಿಸೋಣವೆಂದರು.

ಉಪಾಧ್ಯಕ್ಷ ಪ್ರವೀಣ್ ಬಗಂಬಿಲ,ಮುಖ್ಯಾಧಿಕಾರಿ ಮಾಲಿನಿ ಉಪಸ್ಥಿತರಿದ್ದರು.

ಪಕ್ಷೇತರ ಸದಸ್ಯರಿಂದ ಸಮಸ್ಯೆಗಳ ಸುರಿಮಳೆ

ಪಕ್ಷೇತರ ಸದಸ್ಯ ಹರೀಶ್ ರಾವ್ ಮಡ್ಯಾರ್ ಮಾತನಾಡಿ, ತನ್ನ ವಾರ್ಡ್ ವ್ಯಾಪ್ತಿಗೆ ಎರಡು ವರ್ಷದ ಹಿಂದೆ ಹದಿನೈದನೆ ಹಣಕಾಸಿನ ಯೋಜನೆಯಲ್ಲಿ ರಸ್ತೆ ಹಾಗೂ ತಡೆಗೋಡೆ ನಿರ್ಮಾಣಕ್ಕೆ ಮಂಜೂರಾದ 3 ಲಕ್ಷ ರೂ. ಅನುದಾನದಲ್ಲಿ ಡಾಕ್ಟರ್ ಕಾಲನಿಯಲ್ಲಿ ರಸ್ತೆ ಮಾತ್ರ ನಿರ್ಮಾಣವಾಗಿದೆ. ಸಣ್ಣ ತಡೆಗೋಡೆಯನ್ನು ಇನ್ನೂ ನಿರ್ಮಿಸಿಲ್ಲ, ಭಾರೀ ಮಳೆ ಸುರಿದಲ್ಲಿ ರಸ್ತೆಯೇ ಮಳೆ ನೀರಿಗೆ ಕೊಚ್ಚಿ ಹೋಗುವ ಭೀತಿ ಎದುರಾಗಿದೆ ಎಂದು ಎಚ್ಚರಿಸಿದರು. ಕರಾಟೆಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುವ ಬಾಲಕ ತನುಷ್ ಶೆಟ್ಟಿಗೆ ಪಟ್ಟಣ ಪಂಚಾಯತ್ ವತಿಯಿಂದ ಪ್ರೋತ್ಸಾಹ ಧನ ನೀಡುವ ನಿಟ್ಟಿನಲ್ಲಿ ಸಂಬಂಧಪಟ್ಟ ದಾಖಲೆಗಳನ್ನ ಸಲ್ಲಿಸಿ ನಾಲ್ಕು ತಿಂಗಳಾದರೂ ಅದರಲ್ಲೊಂದು ಕ್ರೀಡಾ ಪ್ರತಿಭೆಯನ್ನ ಗುರುತಿಸಲು ವಿಳಂಬವೇಕೆಂದು ಸಭೆಯಲ್ಲಿ ಪ್ರಶ್ನಿಸಿದರು. ಮೆಸ್ಕಾಂ ಇಲಾಖೆಯ ದಾರಿ ದೀಪ ವಿಸ್ತರಣೆ(ಸಿಂಗಲ್ ಲೈನ್)ಮಾಡುವ ಕುರಿತಂತೆ ಶೀಘ್ರ ಟೆಂಡರ್ ಕರೆಯುವ ಬಗ್ಗೆ ಆಗ್ರಹ ಸೇರಿದಂತೆ ತಮ್ಮ ವಾರ್ಡ್‌ನ ಹತ್ತಾರು ಸಮಸ್ಯೆಗಳನ್ನ ಬಗೆಹರಿಸುವಂತೆ ಸಭೆಯಲ್ಲಿ ಹರೀಶ್ ರಾವ್ ಅವರು ವಿಚಾರ ಪ್ರಸ್ತಾಪಿಸಿದರು.

ಗೃಹಲಕ್ಷ್ಮಿಗೆ ಅಪ್ಡೇಟ್ ನೀಡಿ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ರೇಣುಕಾ ಮಾತನಾಡಿ, ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಎರಡು ಬ್ಯಾಂಕ್ ಖಾತೆಗಳನ್ನು ಹೊಂದಿದ್ದಲ್ಲಿ ಇಲಾಖೆಯ ಕರೆ ಬಂದರೆ ತಕ್ಷಣ ಮಂಗಳೂರಿನ ಉರ್ವ ಮಾರ್ಕೆಟ್ ಬಳಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಚೇರಿಗೆ ತೆರಳಿ ಯೋಜನೆಗೆ ಜೋಡಣೆಯಾಗಿರುವ ತಮ್ಮ ಬ್ಯಾಂಕ್ ಖಾತೆ ಮತ್ತು ರೇಷನ್ ಕಾರ್ಡ್ ನಕಲು ಪ್ರತಿ ದಾಖಲೆಗಳನ್ನು ಅಪ್ಡೇಟ್ ಮಾಡಬೇಕೆಂದು ಮಾಹಿತಿ ನೀಡಿದರು.

ಸುತ್ತಮುತ್ತ

ಶಿಕ್ಷಕ ಹುದ್ದೆಗೆ ಸಂದರ್ಶನ

ಕುಂಬಳೆ: ಸೂರಂಬೈಲು ಸರಕಾರಿ ಪ್ರೌಢಶಾಲೆಯಲ್ಲಿ ಖಾಲಿಯಿರುವ ಹೈಸ್ಕೂಲ್ ವಿಭಾಗದ ಇಂಗ್ಲಿಷ್ ಶಿಕ್ಷಕ (ಎಚ್‌ಎಸ್‌ಟಿ ಇಂಗ್ಲಿಷ್) ಹುದ್ದೆಗಾಗಿ ದಿನವೇತನ ಆಧಾರದಲ್ಲಿ ನೇಮಕಾತಿ ನಡೆಸಲು ಸಂದರ್ಶನವು ಜೂ.27ರಂದು ಬೆಳಗ್ಗೆ 10.30ಕ್ಕೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಅಸಲಿ ದಾಖಲೆ ಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ 9495094859 ಕರೆ ಮಾಡಬಹುದು.

ನಾರಿ ಚಿನ್ನಾರಿ ಸಂಸ್ಥೆಯ ನೂತನ ಪದಾಧಿಕಾರಿಗಳು

ಕಾಸರಗೋಡು: ಕಾಸರಗೋಡಿನ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಯಾದ ರಂಗ ಚಿನ್ನಾರಿ ಕಾಸರಗೋಡು ಇದರ ಮಹಿಳಾ ಘಟಕವಾದ ನಾರಿ ಚಿನ್ನಾರಿ ಸಂಸ್ಥೆಗೆ ನೂತನ ಪದಾಧಿಕಾರಿಗಳನ್ನು ನೇಮಿಸಲಾಗಿದೆ. ಗೌರವ ಸಲಹೆಗಾರರಾಗಿ ಸಿ.ಮೀರಾ ಕಾಮತ್, ಡಾ.ಯು.ಮಹೇಶ್ವರಿ, ಪದ್ಮಾವತಿ ಎಸ್. ರಾವ್, ಸರೋಜಿನಿ ಕೆ.ಭಟ್ ಆಯ್ಕೆಯಾದರು. ಗೌರವಾಧ್ಯಕ್ಷೆಯಾಗಿ ತಾರಾ ಜಗದೀಶ್, ಅಧ್ಯಕ್ಷೆಯಾಗಿ ಸವಿತಾ ಬಿ.ಭಟ್, ಉಪಾಧ್ಯಕ್ಷೆಯರಾಗಿ ವೀಣಾ ಅರುಣ್ ಶೆಟ್ಟಿ ದಿವ್ಯಾ ಗಟ್ಟಿ ಪರಕ್ಕಿಲ, ಕಾರ್ಯದರ್ಶಿಯಾಗಿ ವಿಜಯಲಕ್ಷ್ಮಿ ಶ್ಯಾನುಭೋಗ್, ಜೊತೆ ಕಾರ್ಯದರ್ಶಿಯಾಗಿ ಸರ್ವಮಂಗಳಾ, ಕೋಶಾಧಿಕಾರಿಯಾಗಿ ಸೂರ್ಯಕಾಂತಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆಯರಾಗಿ ಶ್ರೀಲತಾ, ಡಾ.ರೇಖಾ ರೈ, ಸೌಮ್ಯಾ ಪ್ರವೀಣ್, ಅನುಪಮಾ ಉಡುಪುಮೂಲೆ, ಶಾಹಿರತ್ನ ಸ್ನೇಹಲತಾ ದಿವಾಕರ್, ಗೀತಾ ಎಂ.ಭಟ್, ಕಿಶೋರಿ ಡಿ.ಆಚಾರ್ಯ, ಧನ್ಯಶ್ರೀ ಆಚಾರ್ಯ ಅವರನ್ನು ಆರಿಸಲಾಯಿತು.

ಕುಂಬಳೆ ಪ್ರೆಸ್ ಫಾರಂಗೆ ನೂತನ ಪದಾಧಿಕಾರಿಗಳ ಆಯ್ಕೆ

ಕುಂಬಳೆ: ಕುಂಬಳೆ ಪ್ರೆಸ್ ಫಾರಂಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಬಗ್ಗೆ ಕುಂಬಳೆಯಲ್ಲಿ ನಡೆದ ಮಹಾಸಭೆಯಲ್ಲಿ ಉಪಾಧ್ಯಕ್ಷ ಪುರುಷೋತ್ತಮ ಭಟ್ ಕೆ. ಅಧ್ಯಕ್ಷತೆ ವಹಿಸಿದ್ದರು. ಕೆ.ಎಂ.ಎ.ಸತ್ತಾರ್, ಅಬ್ದುಲ್ಲ ಕುಂಬಳೆ ಮಾತನಾಡಿದರು. ಕಾರ್ಯದರ್ಶಿ ಅಬ್ದುಲ್ ಲತೀಫ್ ಉಳುವಾರು ಸ್ವಾಗತಿಸಿ ವಂದಿಸಿದರು.
ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಅಬ್ದುಲ್ಲ ಕುಂಬಳೆ, ಕಾರ್ಯದರ್ಶಿಯಾಗಿ ಐ.ಮುಹಮ್ಮದ್ ರಫೀಕ್, ಕೋಶಾಧಿಕಾರಿಯಾಗಿ ಅಬ್ದುಲ್ ಲತೀಫ್, ಉಪಾಧ್ಯಕ್ಷರಾಗಿ ಪುರುಷೋತ್ತಮ ಭಟ್ ಕೆ., ಅಬ್ದುಲ್ ಲತೀಫ್, ಜೊತೆ ಕಾರ್ಯದರ್ಶಿಗಳಾಗಿ ಅಬ್ದುಲ್ ಲತೀಫ್ ಉಳುವಾರು, ಅಬ್ದುಲ್ ರಶೀದ್ ಆಯ್ಕೆಯಾದರು.

ಲ್ಯಾಟರಲ್ ಎಂಟ್ರಿ: ಸ್ಪಾಟ್ ಅಡ್ಮಿಷನ್

ಕಾಸರಗೋಡು: ಪೆರಿಯದ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಎರಡನೇ ವರ್ಷದ ಇಂಜಿನಿಯರಿಂಗ್ ಡಿಪ್ಲೊಮಾ ಕೋರ್ಸ್‌ಗಳಿಗೆ ನೇರ ಆಯ್ಕೆಗಾಗಿ ಲ್ಯಾಟರಲ್ ಎಂಟ್ರಿ ಪ್ರವೇಶಕ್ಕಾಗಿ ಸ್ಪಾಟ್ ಅಡ್ಮಿಷನ್ ಜೂ.29ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನಲ್ಲಿ ನಡೆಯಲಿದೆ. ಲ್ಯಾಟರಲ್ ಎಂಟ್ರಿ ರ‍್ಯಾಂಕ್ ಪಟ್ಟಿಯಲ್ಲಿ ಸೇರ್ಪಡೆಗೊಂಡವರು, ಈಗಾಗಲೇ ಪ್ರವೇಶ ಪಡೆದಿರುವ ಶಾಖೆ ಅಥವಾ ಸಂಸ್ಥೆಯನ್ನು ಬದಲಾಯಿಸಲು ಬಯಸುವವರು ಮತ್ತು ಪ್ರವೇಶಕ್ಕಾಗಿ ಹೊಸ ಅರ್ಜಿಗಳನ್ನು ಸಲ್ಲಿಸಿದವರು ಈ ಸಂದರ್ಭ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ 0467 2234020, 9446168969 ಸಂಪರ್ಕಿಸಬಹುದು.

ಜೂ.29: ಶಿಕ್ಷಕರ ಹುದ್ದೆ ಖಾಲಿಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಅರೇಬಿಕ್ ವಿಷಯದ ಶಿಕ್ಷಕರ ನೇಮಕಾತಿಗಾಗಿ ಜೂ.29ರಂದು ಬೆಳಗ್ಗೆ 10.30ಕ್ಕೆ ಸಂದರ್ಶನ ನಡೆಯಲಿದೆ. ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಮತ್ತು ನೆಟ್ ವಿದ್ಯಾರ್ಹತೆಯಾಗಿದೆ. ಒಂದು ವೇಳೆ ನೆಟ್ ಪಡೆದ ಅಭ್ಯರ್ಥಿಗಳ ಅನುಪಸ್ಥಿತಿಯಲ್ಲಿ ಸ್ನಾತಕೋತ್ತರ ಪದವೀಧರರನ್ನು ಸಹ ಪರಿಗಣಿಸಲಾಗುತ್ತದೆ. ಕಾಲೇಜು ಶಿಕ್ಷಣ ನಿರ್ದೇಶಕರ ಕಚೇರಿಯಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 256027 ಕರೆ ಮಾಡಬಹುದು.

ನಾಳೆ ಮೊಹರಂ ರಜೆ

ಕಾಸರಗೋಡು: ಮೊಹರಂ ಹಬ್ಬದ ಪ್ರಯುಕ್ತ ಕೇರಳದಲ್ಲಿ ಸಾರ್ವಜನಿಕ ರಜೆ ಜೂ.26ರಂದು ಆಗಿರಲಿದೆ ಎಂದು ರಾಜ್ಯ ಸರಕಾರವು ತಿಳಿಸಿದೆ. ಈ ಮಧ್ಯೆ ಸರಕಾರದ ಕ್ಯಾಲೆಂಡರ್‌ನಲ್ಲಿ ಮೊಹರಂ ರಜೆ ಜೂ.25 ಎಂದು ನಮೂದಿಸಲಾಗಿದೆ. ಆದರೆ ಮೊಹರಂ ಜೂ.26ರಂದು ಆಗಿದೆ ಎಂದು ಸಂಬಂಧಪಟ್ಟವರು ತಿಳಿಸಿದ ಹಿನ್ನೆಲೆಯಲ್ಲಿ ರಜಾ ದಿನಾಂಕವನ್ನು ಬದಲಾಯಿಸಲಾಗಿದೆ.

ಗುಮಾಸ್ತರ ನೇಮಕಾತಿ

ಕಾಸರಗೋಡು: ಪಿಲಿಕೋಡು ಪಂಚಾಯತ್‌ನ ಸಹಾಯಕ ಇಂಜಿನಿಯರ್ ಕಚೇರಿಗೆ ಗುಮಾಸ್ತರ ನೇಮಕಾತಿ ಸಂದರ್ಶನವು ಜೂ.29ರಂದು ಬೆಳಗ್ಗೆ 11 ಗಂಟೆಗೆ ಗ್ರಾ.ಪಂ. ಕಚೇರಿಯಲ್ಲಿ ನಡೆಯಲಿದೆ. ಪ್ಲಸ್ ಟು, ಕಂಪ್ಯೂಟರ್ ಜ್ಞಾನ, ಮಲೆಯಾಳ ಟೈಪಿಂಗ್, ಎಂಎಸ್ ಆಫೀಸ್, ಕೆಲಸದ ಅನುಭವ ಹೊಂದಿರಬೇಕು. ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುವವರಿಗೆ ಆದ್ಯತೆ ನೀಡಲಾಗುವುದು. ವಯೋಮಿತಿ 18 ರಿಂದ 41 ಆಗಿದೆ. ಹೆಚ್ಚಿನ ವಿವರಗಳಿಗೆ 0467 2211504 ಸಂಪರ್ಕಿಸಬಹುದು.

ಮಲೆಯಾಳ ಭಾಷಾ ಮಸೂದೆ | ಮಂಜೇಶ್ವರ ಶಾಸಕರೊಂದಿಗೆ ಕರ್ನಾಟಕ ಸಮಿತಿ ಸಮಾಲೋಚನೆ

ಗಡಿನಾಡಿನಲ್ಲಿ ಕನ್ನಡ ಸಂಸ್ಕೃತಿ ಭಾಷೆ ಉಳಿವಿಗೆ ಸಕಲ ಪ್ರಯತ್ನ

ಮಂಜೇಶ್ವರ: ಕೇರಳಸರ್ಕಾರವುಅನುಮೋದಿಸಿರುವ ಮಲೆಯಾಳ ಭಾಷಾ ಮಸೂದೆ ಮತ್ತು ಕಾಸರಗೋಡಿನ ಭಾಷಾ ಅಲ್ಪಸಂಖ್ಯಾತ ಕನ್ನಡಿಗರ ಮೇಲೆ ಈ ಮಸೂದೆ ಬೀರುವ ಪರಿಣಾಮಗಳ ಬಗ್ಗೆ ಸಮಗ್ರ ಮಾಹಿತಿಗಳೊಂದಿಗೆ ಕರ್ನಾಟಕ ಸಮಿತಿ ಕಾಸರಗೋಡು ನೇತೃತ್ವದಲ್ಲಿ ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಅವರೊಂದಿಗೆ ವಿಸ್ತೃತ ಸಮಾಲೋಚನೆಯು ಉಪ್ಪಳ ಮಣ್ಣಂಗುಳಿಯ ಸರಕಾರಿ ಅತಿಥಿಗೃಹದಲ್ಲಿ ನಡೆಯಿತು.

ಕೇರಳ ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಿ ಅನುಮೋದನೆಗೊಂಡಿರುವ ಮಲೆಯಾಳ ಭಾಷಾ ಮಸೂದೆಯು ಕಾಸರಗೋಡಿನ ಕನ್ನಡ ಭಾಷಾ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕು ಸ್ವಾತಂತ್ರ್ಯ, ಸವಲತ್ತುಗಳಿಗೆಚ್ಯುತಿತರುವಂತದ್ದಾಗಿದ್ದು ಗಡಿನಾಡಿನ ಸಾವಿರಾರು ಕನ್ನಡ ವಿದ್ಯಾರ್ಥಿಗಳು, ಶಿಕ್ಷಕರು, ಉದ್ಯೋಗಿಗಳು ಸಹಿತ ಬಹುದೊಡ್ಡ ವಲಯಕ್ಕೆ ಧಮನಕಾರಿಯಾಗಿ ಪರಿಣಮಿಸಲಿರುವುದರಿಂದ ಈ ಮಸೂದೆಗೆ ಸೂಕ್ತ ತಿದ್ದುಪಡಿಗಳನ್ನು ತರುವಲ್ಲಿ ಮಂಜೇಶ್ವರ ಶಾಸಕರಲ್ಲಿ ಮನವಿ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಾಸಕರು, ಕನ್ನಡ ಮಾಧ್ಯಮದಲ್ಲೇ ವ್ಯಾಸಂಗಗೈದು ಅಚ್ಚ ಕನ್ನಡಿಗನಾಗಿರುವ ತಾನು ಈ ನಿಟ್ಟಿನಲ್ಲಿ ಪೂರ್ಣ ಕಾನೂನು ಪ್ರಕ್ರಿಯೆ ಅಧ್ಯಯಿಸಿ ವ್ಯತಿರಿಕ್ತ ಪರಿಣಾಮಗಳಾಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ವಿಧಾನಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸುವುದಷ್ಟೇ ಅಲ್ಲದೆ, ಇತ್ತೀಚೆಗೆ ನಡೆದ ಅಧಿವೇಶನದ ವೇಳೆ ಬಸವಣ್ಣನ ವಚನ ಉಲ್ಲೇಖಿಸಿ ಕನ್ನಡ ಧ್ವನಿಯನ್ನು ಕೇರಳ ವಿಧಾನಸಭೆಯಲ್ಲಿ ಮೊಳಗಿಸಿದ ಶಾಸಕರನ್ನು ಈ ವೇಳೆ ಕಾಸರಗೋಡು ಕರ್ನಾಟಕ ಸಮಿತಿ, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕ ಸಂಘದಿಂದ ಅಭಿನಂದಿಸಲಾಯಿತು.

ಈ ಸಂದರ್ಭ ನಿವೃತ್ತ ಉಪಜಿಲ್ಲಾ ಶಿಕ್ಷಣಾಧಿಕಾರಿ, ವಕೀಲ ಎನ್.ಕೆ. ಮೋಹನದಾಸ್, ನಿವೃತ್ತ ಡಿಡಿಇ ಡಿ. ಮಹಾಲಿಂಗೇಶ್ವರ ರಾಜ್, ನಿವೃತ್ತ ಶಿಕ್ಷಣಾಧಿಕಾರಿ ಪುಂಡರೀಕಾಕ್ಷ ಆಚಾರ್ಯ, ಹಿರಿಯ ಹೋರಾಟಗಾರ ರಾಮಮೂರ್ತಿ, ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್. ಸುಬ್ಬಯ್ಯಕಟ್ಟೆ ನಿವೃತ್ತ ಶಿಕ್ಷಣಾಧಿಕಾರಿ ಸತ್ಯನಾರಾಯಣ, ಗಮಕ ಕಲಾ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೇಕೆರೆ ಶಂಕರನಾರಾಯಣ ಭಟ್, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕ ಸಂಘದ ಅಧ್ಯಕ್ಷ ಸುಕೇಶ್ ಮಾಸ್ತರ್, ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶೆಟ್ಟಿ ಬೇಳ, ಸಂಘಟನಾ ಕಾರ್ಯದರ್ಶಿ ಜಬ್ಬಾರ್ ಮಾಸ್ತರ್ ಮುಂತಾದವರು ಇದ್ದರು.

ಕನ್ನಡ ಕಾಸರಗೋಡಿನ ಮಾತೃಭಾಷೆ

ಕಾಸರಗೋಡು ಜಿಲ್ಲೆಯು ಬಹುಭಾಷೆಗಳ ಸಂಗಮ ಭೂಮಿಯಾಗಿದೆ. ಕಾಸರಗೋಡಿನ ಮಾತೃಭಾಷೆ ಕನ್ನಡವಾಗಿದ್ದು, ಜಿಲ್ಲೆಯಲ್ಲಿ ಕನ್ನಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ, ನೆಲ, ಜಲ, ಶೈಕ್ಷಣಿಕ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಸೂಕ್ತ ಅನುಕೂಲಕರ ವ್ಯವಸ್ಥೆಗಳನ್ನು ಸಂವಿಧಾನದ ಪ್ರಕಾರ ಜಾರಿ ಗೊಳಿಸಬೇಕು. ಭಾರತದ ಸಂವಿಧಾನದಲ್ಲಿ ಭಾಷಾ ಅಲ್ಪಸಂಖ್ಯಾತ ಪ್ರದೇಶವಾದ ಕಾಸರಗೋಡಿನ ಕನ್ನಡ ಸಂಸ್ಕೃತಿಗೆ ವಿಶೇಷ ಸ್ಥಾನಮಾನವಿದೆ. ಆದ್ದರಿಂದ ಕೇರಳ ಸರ್ಕಾರವು ಮಲೆಯಾಳ ಭಾಷಾ ಮಸೂದೆಯಿಂದ ಕಾಸರಗೋಡು ಪ್ರದೇಶ ಹೊರತುಪಡಿಸಬೇಕು. ಮಾತ್ರವಲ್ಲದೆ ಗಡಿನಾಡು ಭಾಗದಲ್ಲಿ ಕನ್ನಡದ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಿ ಯೋಜನೆಗಳನ್ನು ರೂಪಿಸಬೇಕು ಎಂಬುದು ಜಿಲ್ಲೆಯ ಕನ್ನಡಪರ ಸಂಘ ಸಂಸ್ಥೆಗಳ ಆಗ್ರಹವಾಗಿದೆ. ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳನ್ನು ಅಚ್ಚಗನ್ನಡ ಪ್ರದೇಶವಾಗಿ ಉಳಿಸುವ ನಿಟ್ಟಿನಲ್ಲಿ ಕನ್ನಡಿಗರು ಇನ್ನಷ್ಟು ಸಂಘಟನಾತ್ಮಕವಾಗಿ ಪ್ರಯತ್ನ ನಡೆಸಬೇಕಿದೆ.

ಧರ್ಮತ್ತಡ್ಕ: ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಾಧಕರಿಗೆ ಸನ್ಮಾನ



ಮಂಜೇಶ್ವರ: ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರೀ ಹೈಯರ್ ಸೆಕೆಂಡರಿ ವಿದ್ಯಾಸಂಸ್ಥೆಯಲ್ಲಿ ಕಳೆದ ಶೈಕ್ಷಣಿಕ ವರ್ಷದ ಪ್ಲಸ್ ಟು ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ 16 ಮಂದಿ ವಿದ್ಯಾರ್ಥಿಗಳನ್ನು ಶಾಲಾ ರಕ್ಷಕ ಶಿಕ್ಷಕ ಸಂಘದ ಸಭೆಯಲ್ಲಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಮಂಜೇಶ್ವರ ಜಿಪಿಎಂಸರಕಾರಿಕಾಲೇಜಿನಸಹಪ್ರಾಧ್ಯಾಪಕ ಶಿವಶಂಕರ ಪಿ. ಮಾತನಾಡಿ, ಆಸಕ್ತಿಯಿಂದ ಶ್ರಮಪಟ್ಟು ಕಲಿತ ವಿದ್ಯಾರ್ಥಿಗಳೊಂದಿಗೆ ಸದಾಕಾಲ ವಿಜಯಲಕ್ಷ್ಮಿ ಇರುತ್ತಾಳೆ ಎಂದು ನುಡಿದರು.

ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಅಶೋಕ ಭಂಡಾರಿ ಕುಡಾಲು ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಸತೀಶ್ ಶೆಟ್ಟಿ ಒಡ್ಡಂಬೆಟ್ಟು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಿಶ್ರಾಂತ ಪ್ರಾಂಶುಪಾಲ ಎನ್.ರಾಮಚಂದ್ರ ಭಟ್, ಸಂಸ್ಥೆಯ ಮೆನೇಜರ್ ಎನ್. ಶಂಕರನಾರಾಯಣ ಭಟ್, ಎಂಪಿಟಿಎ ಅಧ್ಯಕ್ಷೆ ದಿವ್ಯಭಾರತಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶಶಿಕುಮಾರ್ ಪಿ., ಯುಪಿಶಾಲಾಮುಖ್ಯೋಪಾಧ್ಯಾಯಎನ್. ಮಹಾಲಿಂಗ ಭಟ್ ಶುಭಹಾರೈಸಿದರು.

ಸಂಸ್ಥೆಯ ವತಿಯಿಂದ ಸಾಧಕ ವಿದ್ಯಾರ್ಥಿಗಳಿಗೆನಗದುಪುರಸ್ಕಾರದೊಂದಿಗೆ ಸ್ಮರಣಿಕೆಗಳನ್ನಿತ್ತು ಸನ್ಮಾನಿಸಲಾಯಿತು. ಸಭೆಯಲ್ಲಿ ಒಡಂಬೆಟ್ಟುಗುತ್ತು ದಿ.ವಿಠಲ ಶೆಟ್ಟಿ ಅವರ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ನೀಡುವ ದತ್ತಿನಿಧಿಯನ್ನು ವಿತರಿಸಲಾಯಿತು.

ವಿದ್ಯಾರ್ಥಿನಿಯರು ಪ್ರಾರ್ಥನೆಗೈದರು. ಶ್ವೇತಾಕುಮಾರಿ ಸ್ವಾಗತಿಸಿ, ವೆಂಕಟೇಶ ಬಿ.ವಿ. ಧನ್ಯವಾದವಿತ್ತರು. ದೇವಿಶ್ರೀ ಮತ್ತು ಚೇತನಾ ಕಾರ್ಯಕ್ರಮ ನಿರೂಪಿಸಿದರು.

ಕುಂಟಿಕಾನ ಅನುದಾನಿತ ಹಿರಿಯ ಬುನಾದಿ ಶಾಲೆಯಲ್ಲಿ ಯೋಗ ದಿನಾಚರಣೆ

ಬದಿಯಡ್ಕ: ಕುಂಟಿಕಾನ ಅನುದಾನಿತ ಹಿರಿಯ ಬುನಾದಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಪ್ರಶಾಂತ್‌ಕುಮಾರ್ ಕೆ. ಉದ್ಘಾಟಿಸಿ, ಶುಭಕೋರಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮಾಯಿಪ್ಪಾಡಿ ಡಯಟ್‌ನ ಉಪನ್ಯಾಸಕ ಕುಮಾರ ಸುಬ್ರಹ್ಮಣ್ಯ ಯೋಗ ತರಬೇತಿ ನೀಡಿ, ಭಾರತವು ಜಗತ್ತಿಗೇ ನೀಡಿದ ಅಮೂಲ್ಯ ಕೊಡುಗೆಯಾಗಿದೆ ಯೋಗ. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ನಮಗೆ ಯೋಗದ ಮಹತ್ವವನ್ನು ನೆನಪಿಸುವ ದಿನವಾಗಿದೆ. ಅದನ್ನು ಕೇವಲ ವರ್ಷದ ಒಂದು ದಿನಕ್ಕೆ ಸೀಮಿತಗೊಳಿಸದೆ ನಮ್ಮ ದೈನಂದಿನ ಜೀವನದ ಒಂದು ಭಾಗವಾಗಿಸಿಕೊಂಡಾಗ ಮಾತ್ರ ಯೋಗ ದಿನಾಚರಣೆಯ ನಿಜವಾದ ಉದ್ದೇಶ ಸಾರ್ಥಕವಾಗುತ್ತದೆ ಎಂದು ಅವರು ಹೇಳಿದರು.

ಯೋಗವು ಕೇವಲ ದೈಹಿಕ ಕಸರತ್ತಲ್ಲ, ಬದಲಾಗಿ ಅದು ದೇಹ ಮತ್ತು ಮನಸ್ಸನ್ನು ಜೋಡಿಸುವ ಕಲೆ. ನಿಯಮಿತ ಯೋಗಾಭ್ಯಾಸದಿಂದ ದೇಹದ ನಮ್ಯತೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ರಕ್ತದೊತ್ತಡ ಮತ್ತು ಮಧುಮೇಹದಂತಹ ದೀರ್ಘಕಾಲದಕಾಯಿಲೆಗಳುನಿಯಂತ್ರಣಕ್ಕೆ ಬರುತ್ತವೆ. ಮಾನಸಿಕ ಒತ್ತಡ, ಆತಂಕ ಮತ್ತು ಚಿಂತೆ ಕಡಿಮೆಯಾಗಿ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದು ಅವರು ನುಡಿದರು.

ಸ್ಟಾಫ್ ಸೆಕ್ರೆಟರಿ ಸುಭಾಷ್ ಇ.ಕೆ., ಎಸ್ ಆರ್‌ಜಿ ಕನ್ವೀನರ್ ಶರತ್ ಕುಮಾರ್ ಶುಭಹಾರೈಸಿದರು. ಅಧ್ಯಾಪಕ ಅಬ್ದುಲ್ ಸಲಾಂ ಕಾರ್ಯಕ್ರಮ ನಿರೂಪಿಸಿದರು. ಅಧ್ಯಾಪಿಕೆ ಅಖಿಲ ಲಕ್ಷ್ಮಿ ಸ್ವಾಗತಿಸಿ, ಹಿರಿಯ ಅಧ್ಯಾಪಿಕೆ ಜ್ಯೋತಿ ಕೆ. ವಂದಿಸಿದರು.

ಕಾಸರಗೋಡು ಜಿಲ್ಲಾ ಕ್ರೀಡಾ ಮಂಡಳಿ ಒಲಿಂಪಿಕ್ಸ್ ಓಟಕ್ಕೆ ನಿಶಾನೆ

ಕಾಸರಗೋಡು: ಜಿಲ್ಲಾ ಕ್ರೀಡಾ ಮಂಡಳಿ ನೇತೃತ್ವದಲ್ಲಿಆಯೋಜಿಸಲಾಗಿದ್ದ ಒಲಿಂಪಿಕ್ಸ್ ಓಟಕ್ಕೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹಸಿರು ನಿಶಾನೆ ತೋರಿ ಶುಭಹಾರೈಸಿ ಮಾತನಾಡಿದರು.

ಅಂತಾರಾಷ್ಟ್ರೀಯ ಒಲಿಂಪಿಕ್ಸ್ ದಿನಾಚರಣೆ ಅಂಗವಾಗಿ ಕಾಸರಗೋಡು ಜಿಲ್ಲಾ ಕ್ರೀಡಾ ಮಂಡಳಿಯ ನೇತೃತ್ವದಲ್ಲಿ ವಿದ್ಯಾನಗರ ಸಿವಿಲ್ ಸ್ಟೇಷನ್‌ನ ಆವರಣದಿಂದ ಪ್ರಾರಂಭವಾದ ಒಲಿಂಪಿಕ್ಸ್ ಓಟವು ಉದಯಗಿರಿ ಜಿಲ್ಲಾ ಕ್ರೀಡಾ ಅಕಾಡೆಮಿ ಆವರಣದಲ್ಲಿ ಮುಕ್ತಾಯಗೊಂಡಿತು. ಒಲಿಂಪಿಕ್ಸ್ ಓಟಕ್ಕೂ ಮುನ್ನ ಜುಂಬಾ ನೃತ್ಯ ಕಾರ್ಯಕ್ರಮ ನಡೆಯಿತು. ವಿಶೇಷವೆಂದರೆ ಜಿಲ್ಲಾಧಿಕಾರಿಗಳು ಒಲಿಂಪಿಕ್ಸ್ ಓಟದ ಉದ್ದಕ್ಕೂ ಓಡಿದರು. ರಾಷ್ಟ್ರೀಯ ಫೆನ್ಸಿಂಗ್ ಕೆಡೆಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ ಅನ್ವಿತಾ ನಂಬಿಯಾರ್ ಅವರನ್ನು ಜಿಲ್ಲಾಧಿಕಾರಿ ಅಭಿನಂದಿಸಿದರು. ಜಿಲ್ಲಾ ಕ್ರೀಡಾ ಮಂಡಳಿ ಅಧ್ಯಕ್ಷ ಪಿ.ರಘುನಾಥ್ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾ ಕ್ರೀಡಾ ಮಂಡಳಿ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಉಡುಗೊರೆಯನ್ನು ಪ್ರದಾನ ಮಾಡಿದರು. ಕ್ರೀಡಾ ಮಂಡಳಿ ಉಪಾಧ್ಯಕ್ಷ ಪಳ್ಳಂ ನಾರಾಯಣನ್, ರಾಜ್ಯ ಕ್ರೀಡಾ ಮಂಡಳಿ ಪ್ರತಿನಿಧಿ ಪಿ.ಪಿ. ಅಶೋಕನ್ ಮಾಸ್ಟರ್ ಮತ್ತು ಜಿಲ್ಲಾ ಕ್ರೀಡಾ ಮಂಡಳಿ ಕಾರ್ಯಕಾರಿ ಸದಸ್ಯ ಅಶೋಕನ್ ಧರ್ಮತ್ತಡ್ಕ ಮಾತನಾಡಿದರು. ಜಿಲ್ಲಾ ಕ್ರೀಡಾ ಮಂಡಳಿ ಆಡಳಿತ ಸಮಿತಿ ಸದಸ್ಯರು, ಕ್ರೀಡಾ ಸಂಘದ ಪ್ರತಿನಿಧಿಗಳು, ಕ್ರೀಡಾ ಅಕಾಡೆಮಿಯ ಕ್ರೀಡಾಪಟುಗಳು ಮತ್ತು ವಿವಿಧ ಕ್ಲಬ್‌ಗಳ ಪ್ರತಿನಿಧಿಗಳು ಒಲಿಂಪಿಕ್ಸ್ ಓಟದಲ್ಲಿ ಭಾಗವಹಿಸಿದ್ದರು. ಸಮಾರೋಪ ಕಾರ್ಯಕ್ರಮದಲ್ಲಿ ಕ್ರೀಡಾ ಆಯುರ್ವೇದ ಜಾಗೃತಿ ತರಗತಿಯನ್ನು ನಡೆಸಲಾಯಿತು.

ಪೆರಡಾಲ ಸೇತುವೆಯ ಬಳಿ ರಸ್ತೆ ಕುಸಿದ ಸ್ಥಳದಲ್ಲಿ ಕಾಮಗಾರಿ ಆರಂಭ

ಬದಿಯಡ್ಕ: ಸಾರ್ವಜನಿಕರ ಒತ್ತಡದ ಮೇರೆಗೆ ಕುಂಬಳೆ – ಮುಳ್ಳೇರಿಯ ಕೆಎಸ್‌ಟಿಪಿ ರಸ್ತೆಯ ಪೆರಡಾಲ ಸೇತುವೆಯ ಸಮೀಪ ರಸ್ತೆಯ ಬದಿ ಕುಸಿದು ವಾಹನ ಸವಾರರು ಹಾಗೂ ಸಾರ್ವಜನಿಕರು ಎದುರಿಸುತ್ತಿದ್ದ ಗಂಭೀರ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುತ್ತಿದೆ.

ಕುಂಬಳೆ ಮತ್ತು ಮುಳ್ಳೇರಿಯವನ್ನು ಸಂಪರ್ಕಿಸುವ ಪ್ರಮುಖ ರಸ್ತೆಯಾದ ಪೆರಡಾಲ ಸೇತುವೆಯ ಪಕ್ಕದಲ್ಲಿ ಕಳೆದ ಮಳೆಗಾಲಕ್ಕೆ ಮೊದಲೇ ರಸ್ತೆಯ ಪಾರ್ಶ್ವ ಭಾಗವು ಕುಸಿದುಹೋಗಿತ್ತು. ನಿತ್ಯವೂ ನೂರಾರು ಬಸ್‌ಗಳು, ಖಾಸಗಿ ವಾಹನಗಳು ಹಾಗೂ ಶಾಲಾ ವಾಹನಗಳು ಸಂಚರಿಸುವ ರಸ್ತೆಯ ಕುಸಿತ ಉಂಟಾದ ಜಾಗವು ಭಾರಿ ಅಪಾಯವನ್ನು ಕೈಬೀಸಿ ಕರೆಯುತ್ತಿತ್ತು. ಸ್ಥಳೀಯರ ಮನವಿಗಳಿಗೆ ಅಧಿಕಾರಿಗಳು ಸ್ಪಂದಿಸದಿದ್ದಾಗ ಮಾಧ್ಯಮಗಳ ಮೂಲಕ ಈ ಸಮಸ್ಯೆಯ ತೀವ್ರತೆಯನ್ನು ಅರಿತು ಸವಿಸ್ತಾರವಾಗಿ ಪ್ರಕಟವಾದ ವರದಿಗೆ ಸೂಕ್ತ ಸ್ಪಂದನೆ ಲಭಿಸಿದೆ. ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷಶಂಕರಡಿ., ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಸಹಿತ ಜನಪ್ರತಿನಿಧಿಗಳು ಈ ವಿಚಾರದ ಬಗ್ಗೆ ಕೆಎಸ್‌ಟಿಪಿ ಇಲಾಖೆಯ ಗಮನಕ್ಕೆ ತಂದರು. ಕೂಡಲೇ ಅಗತ್ಯದ ವ್ಯವಸ್ಥೆಯನ್ನು ಮಾಡುವಂತೆ ಸೂಚಿಸಿದ್ದರು.

ರಸ್ತೆ ದುರಸ್ತಿ ಕಾರ್ಯದ ಚಾಲನೆ

ಕುಸಿದ ಭಾಗದಲ್ಲಿ ಭದ್ರವಾದ ಗೋಡೆಯನ್ನು ಕಟ್ಟುವ ಸಲುವಾಗಿ ಕಲ್ಲು ಹಾಗೂ ಅಗತ್ಯ ವಸ್ತುಗಳನ್ನು ಜೋಡಿಸಿ ಈಗಾಗಲೇ ಕಾಮಗಾರಿ ಆರಂಭವಾಗಿದೆ. ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸಮಸ್ಯೆಗೆ ಕೆಲವೇ ದಿನಗಳಲ್ಲಿ ಪರಿಹಾರ ಲಭಿಸಿರುವುದರಿಂದ ಸ್ಥಳೀಯ ನಿವಾಸಿಗಳು, ವಾಹನ ಚಾಲಕರು ಹಾಗೂ ಸಾರ್ವಜನಿಕರು ಸಂತಸಗೊಂಡಿದ್ದಾರೆ.

ದಿ.ಯು.ಕೆ. ಗಟ್ಟಿ, ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಸಂಸ್ಮರಣೆ

ಕಾಸರಗೋಡು: ಕೇರಳದಲ್ಲಿ ಮೊತ್ತಮೊದಲ ಬಾರಿಗೆ ಒಂದು ಗ್ರಾ.ಪಂ.ನಲ್ಲಿ ಬಿಜೆಪಿಗೆ ಅಧಿಕಾರ ಲಭಿಸಿರುವುದು ಮಧೂರು ಗ್ರಾ.ಪಂ.ನಲ್ಲಿ ಮಾತ್ರ ಆಗಿದೆ. ಈ ಗ್ರಾಮ ಪಂಚಾಯತ್‌ನಲ್ಲಿ ಬಿಜೆಪಿಗೆ ಅಧಿಕಾರ ದೊರೆಯಲು ದಿ.ಯು.ಕೆ. ಗಟ್ಟಿ ಮಾಸ್ತರ್‌ರ ಸಂಘಟನಾ ಕೌಶಲ್ಯವು ಪ್ರಮುಖ ಕಾರಣವಾಗಿದೆ ಎಂದು ಬಿಜೆಪಿ ಜಿಲ್ಲಾ ಮಾಜಿ ಕೋಶಾಧಿಕಾರಿ ಮಹಾಬಲ ರೈ ಹೇಳಿದ್ದಾರೆ.

ಕೂಡ್ಲು ರಾಮದಾಸನಗರದ ಬಿಜೆಪಿ ಮಧೂರು ಪಂಚಾಯತ್ ಸಮಿತಿ ಕಾರ್ಯಾಲಯವಾದ ಮಾರಾರ್ಜಿ ಭವನದಲ್ಲಿ ಮಂಗಳವಾರ ಸಂಜೆ ಜರಗಿದ ದಿ.ಯು.ಕೆ.ಗಟ್ಟಿ ಮಾಸ್ತರ್, ದಿ.ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಸಂಸ್ಮರಣೆಯಲ್ಲಿ ಯು.ಕೆ. ಗಟ್ಟಿ ಮಾಸ್ತರ್ ಕುರಿತು ಅವರು ಮಾತನಾಡಿದರು.

ಯು.ಕೆ.ಗಟ್ಟಿ ಅವರ ಉತ್ತಮ ಆಡಳಿತದಿಂದಾಗಿ ಮಧೂರು ಗ್ರಾ.ಪಂ.ಗೆ ಉತ್ತಮ ಗ್ರಾ.ಪಂ. ಪ್ರಶಸ್ತಿ ಲಭಿಸಿದೆ. ಅವರು ಎಲ್ಲರೊಡನೆ ಆತ್ಮೀಯತೆಯಿಂದ ಬೆರೆಯುವ ಓರ್ವ ಸಜ್ಜನ ವ್ಯಕ್ತಿಯಾಗಿದ್ದರು ಎಂದರು.

1975ರ ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲಿ ಮಧೂರು ಪಂಚಾಯತ್‌ನಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮತ್ತು ಜನಸಂಘದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು. ಯು.ಕೆ. ಗಟ್ಟಿಯವರ ಆದರ್ಶವನ್ನು ಪಕ್ಷದ ಪ್ರತಿಯೋರ್ವ ಕಾರ್ಯಕರ್ತರು ಜೀವನದಲ್ಲಿ ಮೈಗೂಡಿಸಿ ಪಕ್ಷ ಇನ್ನಷ್ಟು ಬಲಪಡಿಸಲು ಯತ್ನಿಸಬೇಕೆಂದು ಮಹಾಬಲ ರೈ ಹೇಳಿದರು.

ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಕುರಿತು ಬಿಜೆಪಿ ಕಾಸರಗೋಡು ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ ಮಾತನಾಡಿ, ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರು ಸ್ವಾತಂತ್ರ್ಯೋತ್ತರದಲ್ಲಿ ಹಿಂದುಗಳ ಶೋಷಣೆಯ ವಿರುದ್ಧ ಪ್ರಮುಖ ಧ್ವನಿಯಾಗಿ ಹೋರಾಡಿದ ಓರ್ವ ಮಹಾನ್ ವ್ಯಕ್ತಿಯಾಗಿದ್ದರು ಎಂದರು.

ಬಿಜೆಪಿ ಪಂಚಾಯತ್ ಪೂರ್ವ ವಲಯ ಸಮಿತಿ ಅಧ್ಯಕ್ಷ ಎಂ. ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ಪಂಚಾಯತ್ ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಮಾಧವ ಮಾಸ್ತರ್, ಪಂಚಾಯತ್ ಮಾಜಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಉಮೇಶ್ ಗಟ್ಟಿ ಗ್ರಾ.ಪಂ. ಸದಸ್ಯೆ ಪುಷ್ಪಾ ಗೋಪಾಲನ್ ಮಾತನಾಡಿದರು. ಶಶಿಕುಮಾರ್ ಸ್ವಾಗತಿಸಿ, ರತೀಶ್ ವಂದಿಸಿದರು.

ನಡಕ್ಕಾವು ಕ್ರೀಡಾಂಗಣ ಶೀಘ್ರ ಸಾರ್ವಜನಿಕರಿಗೆ ಲಭ್ಯ: ಅರ್ಜುನ್

ಕಾಸರಗೋಡು: ನಡಕ್ಕಾವು ಒಳಾಂಗಣ ಕ್ರೀಡಾಂಗಣ ಮತ್ತು ಫುಟ್ಬಾಲ್ ಕ್ರೀಡಾಂಗಣದ ಗರಿಷ್ಠ ಪ್ರಯೋಜನಗಳನ್ನು ಕ್ರೀಡಾ ಉತ್ಸಾಹಿಗಳುಮತ್ತುಕ್ರೀಡಾಪಟುಗಳಿಗೆ ಲಭ್ಯವಾಗುವಂತೆ ಕ್ರೀಡಾಂಗಣಗಳನ್ನು ಶೀಘ್ರದಲ್ಲೇ ಸಾರ್ವಜನಿಕರಿಗೆ ಲಭ್ಯಗೊಳಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತ್ವರಿತಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ತೃಕ್ಕರಿಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಡಕ್ಕಾವು ಒಳಾಂಗಣ ಕ್ರೀಡಾಂಗಣ ಮತ್ತು ಫುಟ್ಬಾಲ್ ಕ್ರೀಡಾಂಗಣಕ್ಕೆ ಭೇಟಿ ನೀಡಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಕ್ರೀಡಾ ಇಲಾಖೆ, ಗ್ರಾ.ಪಂ. ಸಹಿತ ಇತರ ಇಲಾಖೆಗಳ ಸಮನ್ವಯದೊಂದಿಗೆ ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುವುದು. ಜನಪ್ರತಿನಿಧಿಗಳು ಮತ್ತು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಚಟುವಟಿಕೆಗಳನ್ನು ತೀವ್ರಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಕ್ರೀಡಾಂಗಣಕ್ಕೆ ಭೇಟಿ ನೀಡಿದ ಸಂದರ್ಭ ತೃಕ್ಕರೀಪುರ ಗ್ರಾಮ ಪಂಚಾಯತ್ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಚರ್ಚೆ ನಡೆಸಿದರು. ಜಿಲ್ಲಾಧಿಕಾರಿಯೊಂದಿಗೆ ತೃಕ್ಕರೀಪುರ ಗ್ರಾಮ ಪಂಚಾಯತ್ ಅಧ್ಯಕ್ಷೆ ಸಜಿತಾ ಸಫರುಲ್ಲಾ, ಉಪಾಧ್ಯಕ್ಷ ಎಂ.ರಾಜೀಶ್ ಬಾಬು, ಪಂಚಾಯತ್ ಸದಸ್ಯ ಫೈಜ್ ಯು.ಪಿ. ಹಾಜರಿದ್ದರು.

ಕೇರಳ ಸರ್ಕಾರದ ಮಹಿಳೆಯರ ಉಚಿತ ಪ್ರಯಾಣ ಪರಿಣಾಮ | ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯ ಇಳಿಕೆ

ಕಾಸರಗೋಡಿನಲ್ಲಿ ಖಾಸಗಿ ಬಸ್ ಉದ್ಯಮಕ್ಕೆ ಪ್ರಿಯದರ್ಶಿನಿ ಯೋಜನೆ ಏಟು

ಕಾಸರಗೋಡು: ಕೇರಳದ ಯುಡಿಎಫ್ ಸರ್ಕಾರವು ಜಾರಿಗೆ ತಂದಿರುವ ಮಹಿಳೆಯರ ಉಚಿತ ಬಸ್ ಪ್ರಯಾಣವಾದ ಪ್ರಿಯದರ್ಶಿನಿ ಯೋಜನೆಯ ಪರಿಣಾಮವಾಗಿ ಕಾಸರಗೋಡು ಜಿಲ್ಲೆಯಲ್ಲಿ ಖಾಸಗಿ ಬಸ್ ಉದ್ಯಮವು ಗಂಭೀರ ಸಂಕಷ್ಟವನ್ನು ಎದುರಿಸುತ್ತಿದೆ ಎಂಬ ಆತಂಕ ಸಾರಿಗೆ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಸಾರ್ವಜನಿಕರಿಗೆ ನೆರವಾಗುವ ಉದ್ದೇಶದಿಂದ ಜಾರಿಗೊಂಡಿರುವ ಪ್ರಿಯದರ್ಶಿನಿ ಯೋಜನೆಯ ಅಂಗವಾಗಿ ಖಾಸಗಿ ಬಸ್ ಮಾಲಕರು, ಸಿಬ್ಬಂದಿ ಜೀವನೋಪಾಯದ ಮೇಲೆಯೂ ಪರಿಣಾಮ ಬೀರಿದೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಉಚಿತ ಪ್ರಯಾಣ ಯೋಜನೆ ಆರಂಭವಾದ ಬಳಿಕ ಜಿಲ್ಲೆಯ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ

ಸಂಖ್ಯೆ ಗಣನೀಯವಾಗಿ ಕುಸಿದಿದೆ ಎಂದು ಬಸ್ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ. ಅದರಲ್ಲೂ ಗ್ರಾಮೀಣ ಮತ್ತು ನಗರ ಎಂಬ ವ್ಯತ್ಯಾಸವಿಲ್ಲದೆ ಖಾಸಗಿ ಬಸ್‌ಗಳಲ್ಲಿ ಕಲೆಕ್ಷನ್ ಭಾರೀ ಪ್ರಮಾಣದಲ್ಲಿ ಇಳಿಮುಖಗೊಂಡಿದೆ.

ಕೆಲವು ಖಾಸಗಿ ಬಸ್‌ಗಳಲ್ಲಿ ದಿನದ ಆದಾಯ 1000 ರೂ.ನಿಂದ 2000 ರೂಪಾಯಿಗೆ ಸೀಮಿತವಾಗಿದ್ದು ಇಂಧನ ವೆಚ್ಚವನ್ನೇ ಭರಿಸಲು ಕಷ್ಟವಾಗುತ್ತಿದೆ. ಬಸ್ ನಿರ್ವಹಣೆ, ಚಾಲಕ, ನಿರ್ವಾಹಕರ ವೇತನ ಹಾಗೂ ಇತರ ಖರ್ಚುಗಳನ್ನು ನಿಭಾಯಿಸುವುದು ದುಸ್ತರವಾಗಿದೆ ಎಂದು ಬಸ್ ಮಾಲಕರು ಹೇಳಿದ್ದಾರೆ. ಪ್ರಯಾಣಿಕರ ಕೊರತೆಯಿಂದ ಕೆಲವು ಬಸ್‌ಗಳು ಪೂರ್ಣ ಮಾರ್ಗದಲ್ಲಿ ಸಂಚರಿಸಲು ಸಾಧ್ಯವಾಗದ ಅರ್ಧದಲ್ಲೇ ಸೇವೆ ಸ್ಥಗಿತಗೊಳಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಖಾಸಗಿ ಸಾರಿಗೆ ಕ್ಷೇತ್ರದ ಭವಿಷ್ಯದ ಬಗ್ಗೆ ಆತಂಕ ಹೆಚ್ಚಾಗಿದೆ.

ಸರ್ಕಾರವು ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರಿಗೆ ಉಚಿತ ಪ್ರಯಾಣ ಸೌಲಭ್ಯ ನೀಡಿದ್ದರೆ ಹೆಚ್ಚು ಸಮಂಜಸವಾಗುತ್ತಿತ್ತು. ಆದರೆ ಎಲ್ಲಾ ಮಹಿಳೆಯರಿಗೂ ಉಚಿತ ಪ್ರಯಾಣ ಸೌಲಭ್ಯ ವಿಸ್ತರಿಸಿರುವುದರಿಂದ ಖಾಸಗಿ ಬಸ್ ಉದ್ಯಮಕ್ಕೆ ಬಹುದೊಡ್ಡ ಹೊಡೆತ ಬಿದ್ದಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಒಟ್ಟಾರೆಯಾಗಿ ಸಾರ್ವಜನಿಕ ಕಲ್ಯಾಣ ಯೋಜನೆಗಳ ಜಾರಿಯೊಂದಿಗೆ ಖಾಸಗಿ ಸಾರಿಗೆ ಕ್ಷೇತ್ರದ ಹಿತಾಸಕ್ತಿಯನ್ನೂ ಸಮತೋಲನದಲ್ಲಿ ಕಾಪಾಡುವ ಅಗತ್ಯವಿದೆ ಎಂಬುದು ಖಾಸಗಿ ಬಸ್ ಮಾಲಕರು ಮತ್ತು ಪ್ರಯಾಣಿಕರ ಅಭಿಮತವಾಗಿದೆ. ಇನ್ನಾದರೂ ಕಾಸರಗೋಡು ಜಿಲ್ಲೆಯ ಖಾಸಗಿ ಬಸ್ ವಲಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು. ಮಾತ್ರವಲ್ಲದೆ ಈ ವಲಯವನ್ನೇ ನಂಬಿ ಜೀವನ ನಡೆಸುತ್ತಿರುವವರ ಬದುಕಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂಬುದು ಸಾರ್ವಜನಿಕ ವಲಯದ ಆಶಯವಾಗಿದೆ.

ಪರ್ಯಾಯ ವ್ಯವಸ್ಥೆ ಪರಿಗಣಿಸಲು ಸಲಹೆ

ಸಾರಿಗೆ ವಲಯದ ತಜ್ಞರ ಪ್ರಕಾರ ಸಾರ್ವಜನಿಕ ಹಿತಾಸಕ್ತಿ ಮತ್ತು ಖಾಸಗಿ ಸಾರಿಗೆ ವ್ಯವಸ್ಥೆ ಅಸ್ತಿತ್ವ ಎರಡನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರವು ಉಚಿತ ಬಸ್ ಪ್ರಯಾಣ ಯೋಜನೆಯಲ್ಲಿ ಅಗತ್ಯದ ಪರಿಷ್ಕರಣೆ ಮಾಡಬೇಕಾಗಿದೆ. ಕೆಎಸ್‌ಆರ್‌ಟಿಸಿ ಪ್ರಮುಖ ಬಸ್‌ಗಳ ಬದಲಾಗಿ ನಿರ್ದಿಷ್ಟ ಅವಧಿಗೊಮ್ಮೆ ವಿಶೇಷ ಮಹಿಳಾ ಬಸ್ ಕಾರ್ಯಾಚರಿಸುವ ಪರ್ಯಾಯ ವ್ಯವಸ್ಥೆ ಪರಿಗಣಿಸಬಹುದು ಎಂಬ ಸಲಹೆಗಳು ಕೇಳಿಬರುತ್ತಿವೆ.

ಮುಲ್ಕಿ ಸರಕಾರಿ ಪಿಯು ಕಾಲೇಜಿನಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಕಥನಗಳ ಕುರಿತು ವಿಶೇಷ ಉಪನ್ಯಾಸ

ತೇಜಸ್ವಿಯವರ ನಡೆ ನುಡಿ, ಬರಹದ ಶೈಲಿ ಕಾಲಕಾಲಕ್ಕೂ ಪ್ರಸ್ತುತ

- ತೇಜಸ್ವಿಯವರ ಕಥನಗಳಲ್ಲಿ 'ಪರಿಸರ ಪ್ರಜ್ಞೆ' ಕುರಿತು ವಿಶೇಷ ಉಪನ್ಯಾಸ
- ಭಾವಚಿತ್ರಕ್ಕೆ ಮಾಲಾರ್ಪಣೆ ಹಾಗೂ ಪಾರಿವಾಳ ಹಾರಿಸುವ ಮೂಲಕ ಕಾರ್ಯಕ್ರಮದ ಉದ್ಘಾಟನೆ

ಮುಲ್ಕಿ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ದಕ್ಷಿಣ ಕನ್ನಡ ಚಕೋರ ಸಾಹಿತ್ಯ ವಿಚಾರ ವೇದಿಕೆ ಮತ್ತು ಮುಲ್ಕಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಹಯೋಗದೊಂದಿಗೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥನಗಳಲ್ಲಿ 'ಪರಿಸರ ಪ್ರಜ್ಞೆ' ವಿಶೇಷ ಉಪನ್ಯಾಸ ಕಾರ್ಯಕ್ರಮವು ಬುಧವಾರ ಸರಕಾರಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಸಾಹಿತಿ ಹಾಗೂ ಬರಹಗಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಹಾಗೂ ಪಾರಿವಾಳಗಳನ್ನು ಹಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಮತ್ತು ಹಿರಿಯಡ್ಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಜಯಪ್ರಕಾಶ್ ಶೆಟ್ಟಿ ಪ್ರಸ್ತಾವನೆಗೈದು ಮಾತನಾಡಿ, ಪೂರ್ಣಚಂದ್ರ ತೇಜಸ್ವಿರವರು ನಿಸರ್ಗದ ಒಡನಾಡಿಯಾಗಿ ಮನುಷ್ಯ ಹೇಗೆ ಬದುಕಬೇಕು ಎಂದು ತೋರಿಸಿಕೊಟ್ಟ ಮಹಾನುಭಾವರಾಗಿದ್ದರು. ಜನರ ಅವಿವೇಕದಿಂದ ಪರಿಸರ ನಾಶವಾಗುತ್ತಿದೆ ನದಿಯಲ್ಲಿರುವ ಸಂಪತ್ತು ಲೂಟಿಯಾಗುತ್ತಿದೆ ಎಂದು ತಮ್ಮ ಕೃತಿಗಳಲ್ಲಿ ಅವರ ಬರಹ ಅದ್ಭುತವಾಗಿತ್ತು ಎಂದು ಹೇಳಿದರು.

ಗಾಂಧಿ ಹಾಗೂ ಅಂಬೇಡ್ಕರ್ ಅವರು ಸಮಾಜದ ಎರಡು ಕಣ್ಣುಗಳು ಇದ್ದಂತೆ. ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ನೀಡಲು ಪ್ರಯತ್ನಿಸಿದ ಮಹಾನುಭಾವರು. ಸಂವಿಧಾನವನ್ನು ಅರ್ಥ ಮಾಡಿಕೊಂಡು ಬದುಕಿದರೆ ಯಾವುದೇ ಸಮಸ್ಯೆ ಬರಲಾರದು. ಇದಕ್ಕೆ ಪೂರಕವೆಂಬಂತೆ ಪೂರ್ಣಚಂದ್ರ ತೇಜಸ್ವಿರವರು ತಮ್ಮ ಲೇಖನಗಳಲ್ಲಿ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಇದನ್ನು ಅರ್ಥ ಮಾಡಿಕೊಂಡರೆ ಬದುಕು ಸಾರ್ಥಕ. ಆಧುನಿಕ ಯುಗದಲ್ಲಿ ವಾಟ್ಸಪ್ ಯುನಿವರ್ಸಿಟಿ ಜನರ ನೆಮ್ಮದಿ ಹಾಳುಮಾಡುತ್ತದೆ. ಸರಕಾರಿ ಯುನಿವರ್ಸಿಟಿಗಳಲ್ಲಿ ಓದಿದರೆ ಮಾತ್ರ ಉತ್ತಮ ಶಿಕ್ಷಣ ಪಡೆಯಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ವಾಸುದೇವ ಬೆಳ್ಳೆ ವಹಿಸಿದ್ದರು.

ಪಡುಬಿದ್ರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಡಾ. ಸುಮಾ ಎಸ್. ಉಪನ್ಯಾಸ ನೀಡಿ, ಕರ್ನಾಟಕ ಕಂಡಂತಹ ಬಹುಮುಖ ಪ್ರತಿಭೆಯ ವ್ಯಕ್ತಿತ್ವ ಪೂರ್ಣಚಂದ್ರ ತೇಜಸ್ವಿ ಅವರದ್ದು. ತೇಜಸ್ವಿರವರ ಸಾಹಿತ್ಯ ಫೋಟೋಗ್ರಾಫಿ ಸಂಗೀತ ಹಾಗೂ ಚಿತ್ರಕಲೆಯಂತಹ ಬಹುಮುಖ ವಿಚಾರಗಳು ಅದ್ಭುತ, ಕನ್ನಡ ತಂತ್ರಾಂಶದ ಅಭಿವೃದ್ಧಿಗೆ ತೇಜಸ್ವಿ ಕೊಡುಗೆ ಅಪಾರ. ಕನ್ನಡ ನಾಡಿನಲ್ಲಿ ಬದುಕು, ಜಾತಿ ಪದ್ಧತಿ ಹಾಗೂ ಅಭಿವೃದ್ಧಿ ಹೆಸರಿನಲ್ಲಿ ಪರಿಸರ ದೌರ್ಜನ್ಯದ ವಿರುದ್ಧ ಹೋರಾಟ ನಡೆಸುವುದರಲ್ಲಿ ತೇಜಸ್ವಿ ರವರು ಮುಂಚೂಣಿಯಲ್ಲಿದ್ದರು. ಪ್ರಕೃತಿ ಆರಾಧಕರಾಗಿ ಕೃತಿಗಳಲ್ಲಿ ವ್ಯಕ್ತಿತ್ವ ಅನಾವರಣಗೊಳಿಸುತ್ತಿದ್ದರು. ಮನುಷ್ಯನ ಸ್ವಾರ್ಥದಿಂದ ಪರಿಸರ ವಿನಾಶದ ಅಂಚಿಗೆ ಬಂದಿದೆ ಎಂದು ಎಚ್ಚರಿಸುತ್ತಿದ್ದರು. ವೈಜ್ಞಾನಿಕ ವಿಷಯಗಳನ್ನು ಕಥನದ ರೂಪದಲ್ಲಿ ಜನರಿಗೆ ತಲುಪಿಸುತ್ತಿದ್ದರು. ಅವರ ನಡೆ ನುಡಿ ಹಾಗೂ ಬರಹದ ಶೈಲಿ ಕಾಲಕಾಲಕ್ಕೂ ಪ್ರಸ್ತುತ ಎಂದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕಾಲೇಜಿನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಜಯಲಕ್ಷ್ಮಿ ಟಿ. ನಾಯಕ್, ಚಕೋರ ದ.ಕ .ಜಿಲ್ಲಾ ಸಂಚಾಲಕರಾದ ಸುಚೇತ್, ಉಪನ್ಯಾಸಕಿ ರೇಖಾ, ಉಪನ್ಯಾಸಕ ರಮಾನಂದ ಮತ್ತಿತರರು ಉಪಸ್ಥಿತರಿದ್ದರು.

ಕಾಲೇಜು ಪ್ರಾಂಶುಪಾಲ ಡಾ. ವಾಸುದೇವ ಬೆಳ್ಳೆ ಸ್ವಾಗತಿಸಿದರು. ಉಪನ್ಯಾಸಕಿ ಗಾಯತ್ರಿ ನಿರೂಪಿಸಿದರು.

ಸುತ್ತಮುತ್ತ

ಕಾಸರಗೋಡು: ಪಶುವೈದ್ಯ ಶಸಚಿಕಿತಕರ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಿಂದ ಜಾರಿಗೆ ತರಲಾದ ಸಂಚಾರಿ ಪಶು ವೈದ್ಯಕೀಯ ಘಟಕಕ್ಕೆ ಪಶು ವೈದ್ಯಕೀಯ ಶಸ್ತ್ರಚಿಕಿತ್ಸಕರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವು ಜೂ.26ರಂದು ಮಧ್ಯಾಹ್ನ 12.30ಕ್ಕೆ ಕಾಸರಗೋಡು ಸಿವಿಲ್ ಸ್ಟೇಷನ್‌ನ ಜಿಲ್ಲಾ ಪಶುಸಂಗೋಪನಾ ಕಚೇರಿಯಲ್ಲಿ ನಡೆಯಲಿದೆ. ವಿದ್ಯಾರ್ಹತೆಯು ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ, ಶಸ್ತ್ರಚಿಕಿತ್ಸೆಯಲ್ಲಿ ಸ್ನಾತಕೋತ್ತರ ಪದವಿ ಮತ್ತು ಕೇರಳ ಪಶುವೈದ್ಯಕೀಯ ಮಂಡಳಿಯ ನೋಂದಣಿಯಾಗಿದೆ. ಕಾಸರಗೋಡು ಮತ್ತು ಕಾರಡ್ಕ ಬ್ಲಾಕ್‌ಗಳಲ್ಲಿ ನೇಮಕಾತಿ ನಡೆಯಲಿದೆ. ವಿವರಗಳಿಗೆ 04994 255483 ಸಂಪರ್ಕಿಸಬಹುದು.

ಐದು ವರ್ಷದ ಮಗಳ ಜೊತೆ ಬೀದಿ ಪಾಲಾದ ತಾಯಿಯ ರಕ್ಷಣೆ

ಉಡುಪಿ: ಮಹಾರಾಷ್ಟ್ರದ ಮನೋರೋಗಿ ಮಹಿಳೆಯೊಬ್ಬರು ತನ್ನ 5 ವರ್ಷದ ಮಗಳ ಜೊತೆ ಮಣಿಪಾಲದ ಮುಖ್ಯ ರಸ್ತೆಯಲ್ಲಿ ಅಡ್ಡಾದಿಡ್ಡಿ ಚಲಿಸುತ್ತಾ, ಸಾರ್ವಜನಿಕರ ವಾಹನಗಳಲ್ಲಿ ಹತ್ತಿ ಕೂರುತ್ತಾ, ಬೊಬ್ಬಿಡುತ್ತಿದ್ದು ಮಾಹಿತಿ ಪಡೆದ ವಿಶು ಶೆಟ್ಟಿ ಅಂಬಲಪಾಡಿ ತಾಯಿ ಮಗಳನ್ನು ರಕ್ಷಿಸಿ, ಜಿಲ್ಲಾಸ್ಪತ್ರೆಗೆ ದಾಖಲಿಸಿದ ಘಟನೆ ನಡೆದಿದೆ.

ಮಹಿಳೆ ನೀತು ಠಾಕೂರ್ (35) ಮಗಳು ಸೋನಿಯಾ ಠಾಕೂರ್(5) ಮುಂಬೈನ ಮಲಾಡ್ ಮೂಲದವಳೆಂದು ಮಾಹಿತಿ ನೀಡಿದ್ದು, ತನಗೆ ಒಟ್ಟು ನಾಲ್ಕು ಮಕ್ಕಳಿದ್ದಾರೆ ಎಂದಿದ್ದಾಳೆ. ಮಹಿಳೆ ಮಗುವಿನೊಂದಿಗೆ ಬೀದಿ ಪಾಲಾಗಿ ಬಹಳ ಸಮಯವಾಗಿದೆ. ಸ್ನಾನ ಮಾಡದೆ ಅದೆಷ್ಟೋ ದಿನಗಳಾಗಿವೆ. ಈವರೆಗೆ ತಾಯಿ ಮಗಳ ರಕ್ಷಣೆ ಆಗದೇ ಇರುವುದು ಖೇದಕರ. ಬಾಲಕಿಗೆ ಮಕ್ಕಳ ಇಲಾಖೆ ಕೂಡಲೇ ಕಾನೂನು ಪ್ರಕ್ರಿಯೆ ನಡೆಸಿ ಸಹಕರಿಸಬೇಕು ಎಂದು ವಿಶು ಶೆಟ್ಟಿ ಆಗ್ರಹಿಸಿದ್ದಾರೆ. ರಕ್ಷಣಾ ಸಮಯ ಮಣಿಪಾಲ ಠಾಣೆಯ ದೀಪಾ ಶೆಟ್ಟಿ ಸಹಕರಿಸಿದ್ದಾರೆ. ಸಂಬಂಧಿಕರು ಮಣಿಪಾಲ ಠಾಣೆ ಅಥವಾ ಜಿಲ್ಲಾಸ್ಪತ್ರೆ ಸಂಪರ್ಕಿಸಬೇಕಾಗಿ ವಿಶು ಶೆಟ್ಟಿ ವಿನಂತಿಸಿದ್ದಾರೆ.

ಮೂಲ್ಕಿ: ಮಾದಿಗ ಸಮುದಾಯದಿಂದ ಸಾಧಕರಿಗೆ ಸನ್ಮಾನ

ಮುಲ್ಕಿ: ಆದಿಜಾಂಬವ ಅಭಿವೃದ್ಧಿ ಸಮಿತಿ ದಕ್ಷಿಣ ಕನ್ನಡ–ಉಡುಪಿ ಜಿಲ್ಲೆ ಹಾಗೂ ಮಾದಿಗ ಸಮುದಾಯದ ನೌಕರರ ಸಂಘದ ಸಂಯುಕ್ತ ಆಶ್ರಯದಲ್ಲಿ 2026ನೇ ಸಾಲಿನ ಎಸ್‌ಎಸ್ ಎಲ್‌ಸಿ ಮತ್ತು ಪಿಯು ಮಾದಿಗ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಮುದಾಯದ ವಿಶೇಷ ಸಾಧಕರಿಗೆ ಸನ್ಮಾನ ಕಾರ್ಯಕ್ರಮವು ಜೂನ್ 28 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಮೂಲ್ಕಿಯ ಹೊಟೇಲ್ ಆದಿಧನ್ ಸಭಾಂಗಣ ದಲ್ಲಿ ಜರಗಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವ ಆರ್. ಬಿ. ತಿಮ್ಮಾಪೂರ ವಹಿಸಲಿದ್ದು, ಶಾಸಕ ಉಮಾನಾಥ ಎ. ಕೋಟ್ಯಾನ್,ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ,ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು,ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕಿ ಸುನೀತಾ ಎಸ್. ಐಹೊಳೆ,ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ,ಉಡುಪಿಯ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಯಲ್ಲಮ್ಮ ಬಿಜೆಪಿಯ ಜಿಲ್ಲಾ ಉಪಾಧ್ಯಕ್ಷ ಸುನೀಲ್ ಆಳ್ವ,ಮೂಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್,ಮಾದರ ಚೆನ್ನಯ್ಯ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಹೂಡಿ ಮಂಜುನಾಥ,ಹೈಕೋರ್ಟ್ ವಕೀಲ ಟಿ. ಎಂ. ಮಂಜುನಾಥ್,ಕಲಬುರಗಿ ಜಿಲ್ಲಾ ಸಮುದಾಯ ಮುಖಂಡ ಶ್ಯಾಮ್ ನಾಟಿಕಾರ್, ಮೈಸೂರು ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ ಸಿಂಡಿಕೇಟ್ ನ ನಿರ್ದೇಶಕ ರಮೇಶ ಗುಬ್ಬೇವಾಡ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಶಿಕ್ಷಕರ ನೇಮಕಾತಿ

ಕಾಸರಗೋಡು: ಪೆರಿಂಗೋಮ್‌ನ ಕರಿಂದಳಂ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ತಾತ್ಕಾಲಿಕ ಶಿಕ್ಷಕರ (ಪಿಜಿಟಿ - ಮಹಿಳೆಯರು) ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಜುಲೈ 4ರೊಳಗೆ ಪ್ರಾಂಶುಪಾಲ, ಕರಿಂದಳಂ ಏಕಲವ್ಯ ಮಾದರಿ ವಸತಿ ಶಾಲೆ, ಪೆರಿಂಗೋಮ್ ಎಂಬ ವಿಳಾಸಕ್ಕೆ ಅಥವಾ ಖುದ್ದಾಗಿ ಸಲ್ಲಿಸಬೇಕು. ವಿವರಗಳಿಗೆ 0467 2960111, 8848554706 ಕರೆ ಮಾಡಬಹುದು.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ: ಒಕ್ಕೂಟದಿಂದ ಶಾಸಕ ಭರತ್‌ಗೆ ಮನವಿ

- ಗ್ರಾಹಕರಿಗೆ ವಿದ್ಯುತ್ ದರ ಹೆಚ್ಚಳವಾಗುವ ಆತಂಕ
- ಖಾಸಗಿ ಕಂಪೆನಿ ಸಲ್ಲಿಸಿರುವ ಅರ್ಜಿಯನ್ನು ರದ್ದುಪಡಿಸಲು ಮನವಿ

ಸುರತ್ಕಲ್: ಮೆಸ್ಕಾಂ ವ್ಯಾಪ್ತಿಯಲ್ಲಿ ಸಮಾನಾಂತರ ವಿದ್ಯುತ್ ಪರವಾನಿಗೆಗಾಗಿ ಟಾಟಾ ಪವರ್ ಕಾರ್ಪೋರೇಷನ್ ಸಲ್ಲಿಸಿರುವ ಅರ್ಜಿಯನ್ನು ರದ್ದುಪಡಿಸಲು ಕೋರಿ ವಿದ್ಯುತ್ ನೌಕರರ ಒಕ್ಕೂಟದ ಪದಾಧಿಕಾರಿಗಳು ಮಂಗಳೂರು ನಗರ ಉತ್ತರ ಶಾಸಕ ಭರತ್ ಶೆಟ್ಟಿ ವೈ. ಅವರಿಗೆ ಮನವಿ ಸಲ್ಲಿಸಿದರು.

ಮಂಗಳವಾರ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಒಕ್ಕೂಟದ ಪದಾಧಿಕಾರಿಗಳು ಮಾಹಿತಿ ನೀಡಿದರು. ಮೆಸ್ಕಾಂನ 100 ವರ್ಷಗಳ ಹಳೆಯ ಜಾಲವನ್ನು ಬಳಸಿ ಖಾಸಗಿ ಸಂಸ್ಥೆ ನಗರ ಪ್ರದೇಶದ ಕೈಗಾರಿಕಾ, ವಾಣಿಜ್ಯ ಗ್ರಾಹಕರಿಗೆ ಮಾತ್ರ ವಿದ್ಯುತ್ ಪೂರೈಸಲು ಮುಂದಾಗಿದೆ. ಇದರಿಂದ ಗ್ರಾಮೀಣ, ಬಡ, ಮಧ್ಯಮ ವರ್ಗದ ಗ್ರಾಹಕರ ವಿದ್ಯುತ್ ದರ ಹೆಚ್ಚಳವಾಗಲಿದೆ. ಸಾಮಾಜಿಕ ಭದ್ರತೆ, ಮೀಸಲಾತಿಗೆ ಧಕ್ಕೆ ಆಗಲಿದೆ ಎಂದು ಒಕ್ಕೂಟ ಆತಂಕ ವ್ಯಕ್ತಪಡಿಸಿತು. ವಿದ್ಯುಚ್ಛಕ್ತಿ ಕಾಯ್ದೆ 108ನೇ ಪರಿಚ್ಛೇದದಡಿ ಅರ್ಜಿ ರದ್ದುಪಡಿಸಲು ಸರಕಾರ ಕೆಇಆರ್‌ಸಿಗೆ ನಿರ್ದೇಶನ ನೀಡುವಂತೆ ಒತ್ತಡ ಹೇರುವಂತೆ ಮನವಿ ಮಾಡಿದರು.

ಈ ವೇಳೆ ವಿವಿಧ ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ಮನವಿ ಸ್ವೀಕರಿಸಿದರು.

ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಶಾಸಕ ಭರತ್ ಶೆಟ್ಟಿ ರಾಜ್ಯದ ಕಾಂಗ್ರೆಸ್ ಸರಕಾರ ಕೇಂದ್ರ ಸರ್ಕಾರದ ವಿರುದ್ಧ ಖಾಸಗೀಕರಣ ಮಾಡುತ್ತಿರುವ ಕುರಿತು ಗೂಬೆ ಕೂರಿಸುವ ಕೆಲಸ ಮಾಡುತ್ತಾ ಬಂದಿದೆ. ಇದೀಗ ಮೆಸ್ಕಾಂ ವಿಭಾಗ ಸೇರಿದಂತೆ ರಾಜ್ಯದ ಆದಾಯದ ಮೂಲ ಇರುವ ವ್ಯಾಪ್ತಿಗಳನ್ನು ಖಾಸಗಿ ಸಂಸ್ಥೆಗೆ ವಹಿಸಲು ತುದಿಗಾಲಲ್ಲಿ ನಿಂತಿದೆ. ಇದು ಕಾರ್ಮಿಕರ ಭದ್ರತೆಗೆ ಹಾಗೂ ಸಾರ್ವಜನಿಕರಿಗೆ ಅನ್ಯಾಯವಾಗುವಂತಿದ್ದು ವಿದ್ಯುತ್ ಇಲಾಖೆ ಜವಾಬ್ದಾರಿ ವಹಿಸಿ ಕೊಂಡಿರುವ ಸಚಿವರು ಈ ಒಪ್ಪಂದವನ್ನು ಜಾರಿಗೊಳಿಸಬಾರದು ಎಂದು ಆಗ್ರಹಿಸಿದರು.

ಹೋರಾಟಕ್ಕೆ ಸಿಕ್ಕ ಫಲ: ಭರದಿಂದ ಸಾಗುತ್ತಿದೆ ಗುರುಪುರ-ಕೈಕಂಬ ಅಂಡರ್ ಪಾಸ್ ಕಾಮಗಾರಿ

ಕೈಕಂಬ: ಮಂಗಳೂರು– ಮೂಡಬಿದ್ರೆ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಕೈಕಂಬದ ಮಾರುಕಟ್ಟೆ ಬಳಿ ಪೊಂಪೈ ದ್ವಾರದ ಎದುರು ಅಂಡರ್ ಪಾಸ್ ನಿರ್ಮಾಣ ಕಾಮಗಾರಿ ಭರದಿಂದ ನಡೆಯುತ್ತಿದ್ದು ಶೀಘ್ರ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಕೈಕಂಬ ಜಂಕ್ಷನ್‌ನಲ್ಲಿ ಹೆದ್ದಾರಿ ವಿಸ್ತರಣೆಯ ಮೂಲ ನಕಾಶೆಯಲ್ಲಿ ಕಂದಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರ ವಾಹನಗಳಿಗೆ ಪೊಂಪೈ ದ್ವಾರದ ಮೂಲಕ ಸಂಚರಿಸಲು ಯಾವುದೇ ವ್ಯವಸ್ಥೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಗುರುಪುರ-ಕೈಕಂಬ ನಾಗರಿಕ ಹೋರಾಟ ಸಮಿತಿಯು ಪೊಂಪೈ ದ್ವಾರದ ಬಳಿ ಅಂಡರ್ ಪಾಸ್ ನಿರ್ಮಿಸುವಂತೆ ಆಗ್ರಹಿಸಿ ಹಲವು ಬಾರಿ ಪ್ರತಿಭಟನೆ ನಡೆಸಿತ್ತು. ಅಲ್ಲದೇ ಸಂಸದರು, ಶಾಸಕರಿಗೆ ಈ ಬಗ್ಗೆ ಮನವಿ ಸಲ್ಲಿಸಿ ಅಂಡರ್ ಪಾಸ್ ನಿರ್ಮಾಣಕ್ಕೆ ಆಗ್ರಹಿಸಿತ್ತು. ಇದೀಗ ಇಲ್ಲಿ ಅಂಡರ್ ಪಾಸ್ ನಿರ್ಮಾಣವಾಗುತ್ತಿದೆ. ಅಂಡರ್ ಪಾಸ್ ನಿರ್ಮಾಣವಾಗದೆ ಇರುತ್ತಿದ್ದರೆ ಈ ಭಾಗದ ಜನರು ತೀವ್ರ ತೊಂದರೆ ಅನುಭವಿಸಬೇಕಿತ್ತು.

ಗುರುಪುರ ಕೈಕಂಬದಲ್ಲಿ ನಡೆಯುತ್ತಿರುವ ಹೆದ್ದಾರಿ ವಿಸ್ತರಣೆಯಲ್ಲಿ ಪೊಂಪೈ ದ್ವಾರದ ಎದುರು ಹೆದ್ದಾರಿಗೆ ಹೊಂದಿಕೊಂಡಿರುವ ಎರಡು ಸರ್ವಿಸ್ ರಸ್ತೆಗಳನ್ನು ಸಂಪರ್ಕಿಸಲು ಅಂಡರ್ ಪಾಸ್ ನಿರ್ಮಿಸಲು ಕೇಂದ್ರ ಸರಕಾರದ ಹೆದ್ದಾರಿ ಸಚಿವಾಲಯ ಹಸಿರು ನಿಶಾನೆ ನೀಡಿದ ಬೆನ್ನಲ್ಲೇ ಕಾಮಗಾರಿ ಆರಂಭಗೊಂಡಿತ್ತು. ಈ ಮೂಲಕ ಈ ಭಾಗದ ಜನರ ಸಂಚಾರ ಸಮಸ್ಯೆಗೆ ಪರಿಹಾರ ದೊರಕಿದ್ದು, ಗುರುಪುರ-ಕೈಕಂಬ ನಾಗರಿಕ ಹೋರಾಟ ಸಮಿತಿ ಅವಿರತ ಹೋರಾಟಕ್ಕೆ ಫಲ ಸಿಕ್ಕಿದಂತಾಗಿದೆ.

ಮನವಿಗೆ ಸ್ಪಂದಿಸಿದ್ದಕ್ಕೆ ಧನ್ಯವಾದ

ನಮ್ಮ ನಾಗರಿಕ ಹೋರಾಟ ಸಮಿತಿ ಅಂಡರ್ ಪಾಸ್‌ಗಾಗಿ ನಡೆಸಿದ ಹೋರಾಟಕ್ಕೆ ಬೆಲೆ ಸಿಕ್ಕಿದೆ. ನಮ್ಮ ಹೋರಾಟಕ್ಕೆ ಬೆಂಬಲ ನೀಡಿದ ಸಾರ್ವಜನಿಕರು ಮತ್ತು ನಮ್ಮ ಮನವಿಗೆ ಸ್ಪಂದಿಸಿದ ಎಲ್ಲರಿಗೂ ಧನ್ಯವಾದ ಎಂದು ಹೋರಾಟ ಸಮಿತಿಯ ವಿಜಯಾ ಜಿ. ಸುವರ್ಣ ಹೇಳಿದ್ದಾರೆ.

ಸಮಿತಿಯ ಹೋರಾಟದ ಫಲವಾಗಿ ಇಲ್ಲಿ ಅಂಡರ್ ಪಾಸ್ ನಿರ್ಮಾಣವಾಗಿದೆ. ನಮ್ಮ ಹೋರಾಟಕ್ಕೆ ಬೆಂಬಲ ನೀಡಿದ ಈ ಭಾಗದ ಜನರಿಗೆ ಮತ್ತು ನಮ್ಮ ಬೇಡಿಕೆಗೆ ಸ್ಪಂದಿಸಿದ ಹೆದ್ದಾರಿ ಇಲಾಖೆ, ಸ್ಥಳೀಯ ಶಾಸಕರು ಮತ್ತು ಸಂಸದರಿಗೆ ಹೋರಾಟ ಸಮಿತಿ ಮತ್ತು ಸಾರ್ವಜನಿಕರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ನಾಗರಿಕ ಹೋರಾಟ ಸಮಿತಿಯ ಹರೀಶ್ ಮಟ್ಟ ಹೇಳಿದರು.

ದೇಶದ ಪ್ರತಿಯೊಂದು ಗಲ್ಲಿಗಳೂ ಅಭಿವೃದ್ಧಿಯಾಗಬೇಕು: ಕಿಶೋರ್

ಉಳ್ಳಾಲ: ರಸ್ತೆ ಕಾಂಕ್ರಿಟೀಕರಣ, ಹೆದ್ದಾರಿ, ಚರಂಡಿ ನಿರ್ಮಾಣದಿಂದ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲ, ದೇಶದ ಪ್ರತಿಯೊಂದು ಗಲ್ಲಿಗಳೂ ಅಭಿವೃದ್ಧಿಗೊಂಡು, ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಅಂತ್ಯೋದಯ ಪರಿಕಲ್ಪನೆಯಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕುವಂತಾಗುವುದೇ ಬಿಜೆಪಿಯ ಧ್ಯೇಯೋದ್ದೇಶವಾಗಿದೆ ಎಂದು ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಪುತ್ತೂರು ಹೇಳಿದರು.

ಉಳ್ಳಾಲ ಬೈಲು ವೈದ್ಯನಾಥ ನಗರ ಒಂದನೇ ಅಡ್ಡ ರಸ್ತೆಯಲ್ಲಿ ವಿಧಾನ ಪರಿಷತ್‌ನ ಶಾಸಕ ನಿಧಿಯ 8 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡ ಮಳೆ ನೀರಿನ ಚರಂಡಿಯನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿದರು. ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕ ಮಂಜಪ್ಪ ಕಾರ್ನವರ್, ಬಿಜೆಪಿ ಕ್ಷೇತ್ರಾಧ್ಯಕ್ಷ ಜಗದೀಶ ಆಳ್ವ ಕುವೆತ್ತಬೈಲು, ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ, ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ.ಆರ್., ಮುಖಂಡರಾದ ಬಾಬು ಬಂಗೇರ, ಯಶವಂತ ಅಮೀನ್, ಮೀರಾ, ಮಹಿಳಾ ಮೋರ್ಚಾದ ಮಂಡಲ ಅಧ್ಯಕ್ಷೆ ಮಾಧವಿ ಉಳ್ಳಾಲ್, ಯುವ ಮೋರ್ಚಾದ ಅಧ್ಯಕ್ಷ ಮುರಳಿ ಕೊಣಾಜೆ, ರೈತ ಮೋರ್ಚಾದ ಪದ್ಮನಾಭ ಗಟ್ಟಿ ಪ್ರಮುಖರಾದ ಜಿತೇಂದ್ರ ಶೆಟ್ಟಿ ತಲಪಾಡಿಗುತ್ತು, ಸುಜಾತಾ ಶೆಟ್ಟಿ, ಉದಯ ಆರ್.ಕೆ., ಪ್ರಕಾಶ್, ವಿಜಯ್, ಗುಣವತಿ ರೋಹಿದಾಸ್ ಬಂಗೇರ, ಜೀವನ್ ಉಳ್ಳಾಲ್, ಸೋಮೇಶ್ವರ ಪುರಸಭಾ ಸದಸ್ಯೆ ಸ್ವಪ್ನ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಬಿಜೆಪಿ ಮಂಡಲ ಪ್ರ.ಕಾ ದಯಾನಂದ ತೊಕ್ಕೊಟ್ಟು ಸ್ವಾಗತಿಸಿದರು.ಜಿಲ್ಲಾ ವಕ್ತಾರ ಜೀವನ್ ಕುಮಾರ್ ತೊಕ್ಕೊಟ್ಟು ನಿರೂಪಿಸಿದರು.

ಬಂಟ್ವಾಳ: ಶಾಲಾ ವಠಾರದಲ್ಲಿ ಪರಿಸರ ಮಾಹಿತಿ, ಗಿಡ ನಾಟಿ ಕಾರ್ಯಕ್ರಮ

ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಬಂಟ್ವಾಳ ತಾಲೂಕು ಸರಪಾಡಿ ವಲಯ ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಟ್ಟಿಕಲ ಇದರ ಸಂಯುಕ್ತಾಶ್ರಯದಲ್ಲಿ ಪರಿಸರ ಮಾಹಿತಿ ಮತ್ತು ಗಿಡ ನಾಟಿ ಕಾರ್ಯಕ್ರಮವು ಶಾಲಾ ವಠಾರದಲ್ಲಿ ನಡೆಯಿತು.

ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆಯ ಸದಸ್ಯರಾದ ಪುರುಷೋತ್ತಮ್ ಅವರು ಕಾರ್ಯಕ್ರಮ ಉದ್ಘಾಟಿಸಿ ಪರಿಸರ ಸಂರಕ್ಷಣೆಯ ಬಗ್ಗೆ ಮಾಹಿತಿ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಂಟ್ವಾಳ ತಾಲೂಕಿನ ಕೃಷಿ ಅಧಿಕಾರಿ ಭಾಸ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಮಲ್ಲೇಶಪ್ಪ ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಈ ಕಾರ್ಯಕ್ರಮವು ಮಕ್ಕಳಿಗೆ ಸ್ಫೂರ್ತಿದಾಯಕವಾಗಿದೆ ಎಂದರು.

ಶಾಲಾ ಮಕ್ಕಳಿಗೆ ಪರಿಸರದ ಕುರಿತಾಗಿ ಚಿತ್ರಕಲೆ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಪರಿಸರ ಗೀತೆ ಸ್ಪರ್ಧೆ ನಡೆಸಲಾಯಿತು. ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷರಾದ ದಮಯಂತಿ, ಒಕ್ಕೂಟದ ಪದಾಧಿಕಾರಿ ಪೂರ್ಣಿಮಾ , ಸೇವಾ ಪ್ರತಿನಿಧಿ ಗುಣವತಿ, ಶಾಲಾ ಸಹ ಶಿಕ್ಷಕರು ಶಾಲಾ ಮಕ್ಕಳು ಉಪಸ್ಥಿತರಿದ್ದರು. ಸಹ ಶಿಕ್ಷಕರಾದ ವಿದ್ಯಾ ಸ್ವಾಗತಿಸಿದರು. ಕೇಶವ ಮತ್ತು ಸಂಗಡಿಗರು ಪರಿಸರ ಗೀತೆ ಹಾಡಿದರು ಶಿಕ್ಷಕಿ ಪವಿತ್ರಾ ಕಾರ್ಯಕ್ರಮ ನಿರ್ವಹಿಸಿದರು.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮಕ್ಕಳ ಮೂಳೆ ಮಜ್ಜೆ ಕಸಿ ಘಟಕ ಉದ್ಘಾಟನೆ

ಉಡುಪಿ: ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ಆಂಕೊಲಾಜಿ ವಿಭಾಗದ ವತಿಯಿಂದ ವಿಶ್ವ ಸಿಕಲ್ ಸೆಲ್ ಜಾಗೃತಿ ದಿನದ ಅಂಗವಾಗಿ 'ಮಕ್ಕಳ ಮೂಳೆ ಮಜ್ಜೆ ಕಸಿ ಮತ್ತು ಜೀವಕೋಶ ಚಿಕಿತ್ಸಾ ವಿಭಾಗ' ಘಟಕವನ್ನು ಉದ್ಘಾಟಿಸಲಾಯಿತು. ಶಾರದಾ ಮಾಧವ ಪೈ ಸ್ಮಾರಕ ಹೊರರೋಗಿ ವಿಭಾಗದ ಆವರಣದಲ್ಲಿ ಈ ಸಮಾರಂಭ ಜರಗಿತು.

ಈ ಹೊಸ ಘಟಕವು ಸಂಕೀರ್ಣ ರಕ್ತ ರೋಗಗಳು, ರೋಗನಿರೋಧಕ ಕೊರತೆ ಹಾಗೂ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳಿಗೆ ಮೂಳೆ ಮಜ್ಜೆಯ ಕಸಿ ಮತ್ತು ಸೆಲ್ಯುಲಾರ್ ಥೆರಪಿಯಂತಹ ಅತ್ಯಾಧುನಿಕ, ಸುಧಾರಿತ ಚಿಕಿತ್ಸೆಗಳನ್ನು ಒದಗಿಸಲಿದೆ. ಇದು ಕರ್ನಾಟಕ ಮತ್ತು ನೆರೆಯ ರಾಜ್ಯಗಳ ರೋಗಿಗಳಿಗೆ ಪ್ರಾದೇಶಿಕ ಉಲ್ಲೇಖ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ.

ಮಾಹೆ ಮಣಿಪಾಲದ ಕುಲಪತಿ ಡಾ. ಶರತ್ ಕೆ. ರಾವ್ ಘಟಕವನ್ನು ಉದ್ಘಾಟಿಸಿ, ದೇಶದ ಆರೋಗ್ಯ ಅಗತ್ಯಗಳನ್ನು ಪೂರೈಸಲು ಇಂತಹ ಉನ್ನತ ಮಟ್ಟದ ವಿಶೇಷ ಶ್ರೇಷ್ಠತಾ ಕೇಂದ್ರಗಳ ಅಭಿವೃದ್ಧಿ ಅತ್ಯಗತ್ಯ ಎಂದರು.

ಘಟಕದ ಉಸ್ತುವಾರಿ ಡಾ. ಅರ್ಚನಾ ಎಂ.ವಿ. ಹೊಸ ಘಟಕದ ದೃಷ್ಟಿಕೋನವನ್ನು ವಿವರಿಸಿದರು. ಮಕ್ಕಳ ಆಂಕೊಲಾಜಿ ವಿಭಾಗದ ಮುಖ್ಯಸ್ಥ ಡಾ. ವಾಸುದೇವ ಭಟ್ ಕೆ., ಮಾಹೆ ಬೋಧನಾ ಆಸ್ಪತ್ರೆಗಳ ಮುಖ್ಯ ಸಿಒಒ ಡಾ. ಸುಧಾಕರ್ ಕಂಟಿಪುಡಿ ಹಾಗೂ ಕೆಎಂಸಿ ಡೀನ್ ಡಾ. ಅನಿಲ್ ಕೆ. ಭಟ್ ಉಪಸ್ಥಿತರಿದ್ದರು. ಡಾ. ಎಮಿನ್ ರಹಿಮಾನ್ ಧನ್ಯವಾದ ಅರ್ಪಿಸಿದರೆ, ಡಾ. ಸ್ವಾತಿ ಪಿ.ಎಂ. ಕಾರ್ಯಕ್ರಮ ನಿರೂಪಿಸಿದರು.

ರೋಟರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಯೋಗ ದಿನಾಚರಣೆ

ಮಂಗಳೂರು: ಮೂಡುಬಿದಿರೆಯ ರೋಟರಿ ಆಂಗ್ಲಮಾಧ್ಯಮ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಭಾನುವಾರ ಆಚರಿಸಲಾಯಿತು.

ಮಕ್ಕಳಿಗೆ ತರಬೇತಿ

ಸಂಸ್ಥೆಯ ಎನ್‌ಸಿಸಿ, ಇಂಟರಾಕ್ಟ್ ಮತ್ತು ಸ್ಕೌಟ್ ಗೈಡ್ಸ್ ಘಟಕದ ಸುಮಾರು 200 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಆಳ್ವಾಸ್ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸ್ ವಿಭಾಗದ ಡಾಕ್ಟರ್‌ಗಳಾದ ರೂಪಾ , ಅಲೀನಾ, ಅಮೂಲ್ಯ ಮತ್ತು ಗೌತಮಿ ಇವರು ಸುಮಾರು ಒಂದುವರೆ ಗಂಟೆಗಳ ಅವಧಿಯ ಯೋಗಾಸನ ಚಟುವಟಿಕೆಗಳ ವಿವರಣೆ ಹಾಗೂ ಪ್ರದರ್ಶನದ ಮೂಲಕ ಮಕ್ಕಳಿಗೆ ತರಬೇತಿ ನೀಡಿದರು. ಡಾಕ್ಟರ್ ರೂಪ ಕಾರ್ಯಕ್ರಮ ಉದ್ಘಾಟಿಸಿದರು.

ಹಿರಿಯ ಸಂಯೋಜಕ ಗಜಾನನ ಮರಾಠೆ ಆಡಳಿತಾಧಿಕಾರಿ ಪ್ರವುಲ್ ಡಿಸೋಜ, ಸಂಸ್ಥೆಯ ಯೋಗ ಶಿಕ್ಷಕಿ ಸುಚರಿತ, ಎನ್‌ಸಿಸಿ ವಿಭಾಗದ ಮೇಲ್ವಿಚಾರಕಿ ಪ್ರೀತಿಕಾ ಮತ್ತಿತರರು ಉಪಸ್ಥಿತರಿದ್ದರು.

ಶಾಲಾ ಮುಖ್ಯೋಪಾಧ್ಯಾಯನಿ ತಿಲಕಾ ಅನಂತವೀರ ಜೈನ್ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು.

ಅಂತಾರಾಷ್ಟ್ರೀಯ ಹಲಸು ರಾಯಭಾರಿ ಶ್ರೀಪಡ್ರೆಯಿಂದ ಭಾಷಣ | ಇಲ್ಲಿ ಇರಲಿವೆ ಹಲಸು ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಮಳಿಗೆ

ಜೂ.26–28ರ ವರೆಗೆ ಕಡಬದಲ್ಲಿ ಹಲಸು ಮೇಳ–ಕೃಷಿ ಉತ್ಸವದ ಸಂಭ್ರಮ!

ಕಡಬ: ಜೆಸಿಐ ಕಡಬ ಕದಂಬ ಹಾಗೂ ರೈತಕುಡ್ಲ ಪ್ರತಿಷ್ಠಾನದ ಆಶ್ರಯದಲ್ಲಿ ಜೂ.26ರಿಂದ ಮೂರು ದಿನಗಳ ಕಾಲ ಕಡಬದ ಅನುಗ್ರಹ ಸಭಾಂಗಣದಲ್ಲಿ ಹಲಸು ಮೇಳ–ಕೃಷಿ ಉತ್ಸವ ಆಯೋಜಿಸಲಾಗಿದೆ ಎಂದು ರೈತ ಕುಡ್ಲ ಪ್ರತಿಷ್ಠಾನದ ಮುಂದಾಳು, ವಲಯ ಅಧಿಕಾರಿ ಜೇಸಿ ಸುಹಾಸ್ ಮರಿಕೆ ತಿಳಿಸಿದ್ದಾರೆ.

ಅವರು ಮಂಗಳವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲೂಕು ಕೃಷಿಕ ಸಮಾಜ, ಕ್ಯಾಂಪ್ಕೋ ಲಿಮಿಟೆಡ್ ಮಂಗಳೂರು, ರೈತ ಉತ್ಪಾದಕ ಕಂಪನಿ ಕಡಬ, ಕೃಷಿ ಪ್ರಾ.ಪ.ಸ.ಸಂ. ಕಡಬ, ಕೃಷಿ ಪ್ರಾ.ಪ.ಸ. ಸಂ. ಕುಟ್ರುಪ್ಪಾಡಿ, ಕೃಷಿ ಪ್ರಾ.ಪ.ಸ. ಸಂ. ನೆಲ್ಯಾಡಿ ಹಾಗೂ ಕಡಬ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜೂ.26ರಂದು ಬೆಳಗ್ಗೆ 10.30ಕ್ಕೆ ಕಡಬದ ಹಿರಿಯ ಕೃಷಿಕ ಪಿ. ವಿಶ್ವೇಶ್ವರ ಭಟ್ ಎಲಿಯೂರು ಮಳಿಗೆ ಉದ್ಘಾಟಿಸುವರು. ಕಡಬದ ಸೈಂಟ್ ಜೋಕಿಮ್ ಚರ್ಚ್‌ನ ಧರ್ಮಗುರು ರೆ.ಫಾ. ಪೌಲ್ ಪ್ರಕಾಶ್ ಡಿ'ಸೋಜ, ಜಿಲ್ಲಾ ಪರಿಷತ್ತು ಮಾಜಿ ಸದಸ್ಯ ಸಯ್ಯದ್ ಮೀರಾ ಸಾಹೇಬ್, ಆಯುರ್ವೇದ ವೈದ್ಯರು ಮತ್ತು ಕೃಷಿಕ ಡಾ. ಸುರೇಶ್ ಕುಮಾರ್ ಕೂಡೂರು, ನಿವೃತ್ತ ಅರಣ್ಯಾಧಿಕಾರಿ ಸದಾಶಿವ ಭಟ್ ಇರಲಿದ್ದಾರೆ ಎಂದರು.

ಜೂ.26ರಂದು ಸಂಜೆ 3.30ಕ್ಕೆ ವಿಧಾನ ಪರಿಷತ್ ಸದಸ್ಯ ಕಿಶೋರ್ ಬೊಟ್ಯಾಡಿ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಡಬ ಕದಂಬ ಜೇಸಿಐ ಅಧ್ಯಕ್ಷ ಜೇಮ್ಸ್ ಕ್ರಿಶಲ್ ಡಿ'ಸೋಜ ಅಧ್ಯಕ್ಷತೆ ವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಹಲಸು ರಾಯಭಾರಿ ಶ್ರೀಪಡ್ರೆ ಅವರು ಭಾಷಣಗೈಯಲಿದ್ದಾರೆ. ಕಡಬ ಪ. ಪಂ. ಅಧ್ಯಕ್ಷೆ ತಮನ್ನಾ ಜಬೀನ್, ಕಡಬ ತಾಲೂಕು ಕೃಷಿಕ ಸಮಾಜ ಅಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಜೇಸಿಐ ವಲಯ ಅಧ್ಯಕ್ಷ ಸಂತೋಷ್ ಶೆಟ್ಟಿ ಕಡಬ ಕದಂಬ ಜೆಸಿಐ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನಾಗರಾಜ್ ಎನ್.ಕೆ. ಉಪಸ್ಥಿತರಿರುವರು ಎಂದು ಹೇಳಿದರು.

ಜೂ.27ರಂದು 'ಹಣ್ಣುಗಳೊಂದಿಗೆ ನಾವು ನೀವು' ಮಾತುಕತೆಯಲ್ಲಿ ಹಣ್ಣು ಬೆಳೆಗಾರ ಕೃಷ್ಣ ಶೆಟ್ಟಿ ಕಡಬ ಭಾಗವಹಿಸುವರು. ಜೂ.28ರಂದು ಕಸಿ ಕಟ್ಟುವ ತರಬೇತಿಯನ್ನು ನೇತ್ರಾವತಿ ನರ್ಸರಿ ಮಾಲೀಕ ಚೇತನ್ ನಡೆಸಿ ಕೊಡಲಿದ್ದಾರೆ. ಬಳಿಕ ವಿವಿಧ ಸ್ಪರ್ಧೆಗಳು ನಡೆಯಲಿವೆ ಎಂದು ಅವರು ವಿವರಿಸಿದರು.

ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್‌ರಾಜ್ ಸೊರಕೆ ಮಾತನಾಡಿ, ರೈತರ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಹಲಸು ಮೌಲ್ಯವರ್ಧನೆ ಕುರಿತು ಮಾಹಿತಿ ನೀಡುವ ಉದ್ದೇಶದಿಂದ ಕಾರ್ಯಕ್ರಮ ನಡೆಯಲಿದ್ದು,ರೈತರು ಹಲಸು ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಮಳಿಗೆ ತೆರೆಯಲಿದ್ದಾರೆ. ಕೃಷಿ ಯಂತ್ರ ಪ್ರದರ್ಶನ ಮತ್ತು ಮಾಹಿತಿ ಮಳಿಗೆ, ದೋಟಿ, ಸ್ಪ್ರೇಯರ್, ಕೃಷಿ ಸಲಕರಣೆಗಳ ಮಾರಾಟ, ಹಲಸಿನ ಹಪ್ಪಳ, ಚಿಪ್ಸ್, ವಿವಿಧ ಹಣ್ಣಿನ ಐಸ್ ಕ್ರೀಂ, ಹಲಸಿನ ದೋಸೆ, ಗಟ್ಟಿ ಸಾಂಪ್ರದಾಯಿಕ ತಿನಿಸುಗಳ ಮಾರಾಟ ಮಳಿಗೆ, ಸಾವಯವ ಸಿರಿಧಾನ್ಯ ಉತ್ಪನ್ನ ಮಾರಾಟ ಮಳಿಗೆಗಳು ಇರಲಿವೆ ಎಂದರು.

ಜೇಸಿಐ ವಲಯ ಅಧಿಕಾರಿಗಳಾದ ಕಾಶೀನಾಥ್ ಗೋಗಟೆ, ವಿನುತಾ ರಾಜೇಶ್, ಜೇಸಿಐ ಕಡಬ ಕದಂಬದ ಅಧ್ಯಕ್ಷ ಜೇಮ್ಸ್ ಕ್ರಿಶಲ್ ಡಿ'ಸೋಜಾ, ಕಾರ್ಯದರ್ಶಿ ಅಬ್ದುಲ್ ರಹಿಮಾನ್ ಉಪಸ್ಥಿತರಿದ್ದರು.

ವಿಶೇಷ ಬೆಳೆ ತನ್ನಿ ಬಹುಮಾನ ಗೆಲ್ಲಿ

ಕಡಬ ತಾಲೂಕಿನ ಕೃಷಿಕರಿಗೆ ವಿಶೇಷ ಸ್ಪರ್ಧೆ ಏರ್ಪಡಿಸಲಾಗಿದೆ. ಕೃಷಿಕರು ಬೆಳೆದಿರುವ ಯಾವುದಾದರೂ ಬಣ್ಣ, ಆಕಾರ, ತಳಿಗಳಲ್ಲಿ ಅಪರೂಪದ ಅಥವಾ ಆಕರ್ಷಕ ಎನಿಸುವ ಬೆಳೆಗಳನ್ನು ತಂದು ಪ್ರದರ್ಶನಕ್ಕೆ ಇಡಲು ಅವಕಾಶವಿದೆ. ಒಂದು ವಿಶೇಷ ಬೆಳೆಗೆ ನಗದು ಬಹುಮಾನ ನೀಡಲಾಗುವುದು. ಪ್ರದರ್ಶನಕ್ಕೆ ಇಟ್ಟ ಬೆಳೆಯನ್ನು ಭಾನುವಾರ ಮಧ್ಯಾಹ್ನದ ಬಳಿಕ ಸ್ಥಳದಲ್ಲೇ ಮಾರಾಟ ಮಾಡಬಹುದು ಎಂದು ಭರತ್ ತಿಳಿಸಿದರು.

ಸುತ್ತಮುತ್ತ

ಕಟಪಾಡಿ ಗ್ರಾ.ಪಂ.: ಮಹಿಳಾ ಗ್ರಾಮಸಭೆ

ಕಟಪಾಡಿ: ಕಟಪಾಡಿ ಗ್ರಾ.ಪಂ. ಇದರ ಮಹಿಳಾ ಗ್ರಾಮಸಭೆಯು ಆಡಳಿತಾಧಿಕಾರಿ ಗುರುಪ್ರಸಾದ್ ಅಧ್ಯಕ್ಷತೆಯಲ್ಲಿ ಪಂ. ಸಭಾಂಗಣದಲ್ಲಿ ನಡೆಯಿತು.

ಪಿಡಿಒ ಶಿಲಕ್ ರಾಜ್, ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆಯ ಫಿಲೋಮಿನಾ, ಎಎಸ್‌ಐ ಅಮೃತೇಶ್, ಆರಕ್ಷಕ ರಾದ ಲಕ್ಕವ್ವ ಬಿರದಾರ್, ವಲಯ ಮೇಲ್ವಿಚಾರಕಿ ಶ್ರೀಮತಿ, ಕೌಶಲ್ಯ ಅಭಿವೃದ್ಧಿ ಇಲಾಖೆಯ ಗೀತಾ, ವಿಷ್ಣುಮೂರ್ತಿ ಸಂಜೀವಿನಿ ಒಕ್ಕೂಟದ ಅಧ್ಯಕ್ಷರಾದ ಸಗೀನಾ ರಹೀಂ, ಬಿಆರ್‌ಪಿ ಲಕ್ಷ್ಮೀ, ನಿಕಟಪೂರ್ವ ಉಪಾಧ್ಯಕ್ಷರು, ಸದಸ್ಯರು, ಸಂಜೀವಿನಿ ಒಕ್ಕೂಟದ ಸದಸ್ಯರು, ಎಂಬಿಕೆ, ಎಲ್‌ಸಿಆರ್‌ಪಿ, ಎಸ್‌ಎಲ್‌ಆರ್‌ಎಂ ಮೇಲ್ವಿಚಾರಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು. ಶೋಭಾ ಸ್ವಾಗತಿಸಿದರು. ಪಶುಸಖಿ ಸವಿತಾ ವಂದಿಸಿದರು. ಕಾರ್ಯದರ್ಶಿ ವಿಮಲಾ ನಿರೂಪಿಸಿದರು.

ಜೂನ್ 28: ಉಳ್ಳಾಲದಲ್ಲಿ ಉಚಿತ ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ ಶಿಬಿರ

ಉಳ್ಳಾಲ: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಉಳ್ಳಾಲ ಶಾಖೆಯ ಹನ್ನೊಂದನೇಯ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ವೈದ್ಯಕೀಯ, ನೇತ್ರ ತಪಾಸಣಾ ಹಾಗೂ ದಂತ ಚಿಕಿತ್ಸಾ ಶಿಬಿರವನ್ನು ಜೂನ್ 28 ಭಾನುವಾರ ಪೂರ್ವಾಹ್ನ 9.30 ರಿಂದ ಅಪರಾಹ್ನ 12.30ರ ವರೆಗೆ ಸಮುದಾಯ ಭವನ, ಉಳ್ಳಾಲ ನಗರಸಭೆ ಆವರಣದಲ್ಲಿ ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ಮಂಗಳೂರು ಎ.ಜೆ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್‌ನ ನುರಿತ ತಜ್ಞ ವೈದ್ಯರ ತಂಡದಿಂದ ದಂತ ತಪಾಸಣೆ ಮತ್ತು ಸಲಹೆ, ಅನಾರೋಗ್ಯಕರ ಹಲ್ಲುಗಳನ್ನು ಕೀಳುವುದು, ಹುಳುಕು ಹಲ್ಲುಗಳನ್ನು ಭರ್ತಿ ಮಾಡುವುದು, ಹಲ್ಲುಗಳನ್ನು ಸ್ವಚ್ಛಗೊಳಿಸುವುದು ಹಾಗೂ ನಾಟೆಕಲ್‌ನ ಕಣಚೂರು ಮೆಡಿಕಲ್ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನುರಿತ ತಜ್ಞ ವೈದ್ಯರ ತಂಡದಿಂದ ಕಣ್ಣಿನ ತಪಾಸಣೆ, ಅಗತ್ಯವುಳ್ಳವರಿಗೆ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ, ಮಧುಮೇಹ ತಪಾಸಣೆ, ಬಿ.ಪಿ. ತಪಾಸಣೆ, ಸಾಮಾನ್ಯ ವೈದ್ಯಕೀಯ ಸಮಾಲೋಚನೆ, ಕಿವಿ, ಮೂಗು ಮತ್ತು ಗಂಟಲು ತಪಾಸಣೆ, ಹೆಚ್ಚಿನ ಚಿಕಿತ್ಸೆಗೆ ಹಸಿರು ಕಾರ್ಡನ್ನು ನೀಡುವುದು ಹಾಗೂ ಇನ್ನಿತರ ಸೇವೆಗಳು ಲಭ್ಯವಿದೆ. ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಣೆಯನ್ನು ಮಾಡಲಾಗುವುದು.

ಈ ವೈದ್ಯಕೀಯ ಶಿಬಿರವನ್ನು ನಾರಾಯಣ ಗುರು ಸ್ವಾಮಿ ಪ್ರಕಾಶನ ಮತ್ತು ಚಾರಿಟೇಬಲ್ ಟ್ರಸ್ಟ್ ಪಡೀಲ್, ನಾರಾಯಣಗುರು ಬಿಲ್ಲವ ಸೇವಾ ಸಂಘ ಮತ್ತು ಮಹಿಳಾ ವಿಭಾಗ ಬಂಡಿಕೊಟ್ಯ, ಉಳ್ಳಾಲ ಮತ್ತು ವಿದ್ಯಾರಣ್ಯ ಯುವಕ ವೃಂದ ಮತ್ತು ವಿದ್ಯಾರಣ್ಯ ಕಲಾವೃಂದ, ಶಿವಶಕ್ತಿ ಯುವಕ ಮಂಡಲ ಉಳ್ಳಾಲ ಹಾಗೂ ಉಳ್ಳಾಲ ತಾಲೂಕು ಮಹಿಳಾ ಮಂಡಳಿಗಳ ಒಕ್ಕೂಟ ಇವರುಗಳ ಜಂಟಿ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಸಂಘದ ಸದಸ್ಯರು ಮತ್ತು ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಬೇಕಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಮಹಿಳೆಯರಿಗಾಗಿ ಉಚಿತ ಯೋಗ ತರಬೇತಿ

ಕೊಣಾಜೆ: ಜನ ಶಿಕ್ಷಣ ಟ್ರಸ್ಟ್‌ನ ಸರ್ವೋದಯ ಮಂಟಪದಲ್ಲಿ ಮಹಿಳೆಯರಿಗಾಗಿ ಒಂದು ದಿನದ ಉಚಿತ ಯೋಗ ತರಬೇತಿ ನಡೆಯಿತು.

ಯೆನೆಪೋಯ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾ ವಿದ್ಯಾಲಯದ ಸಹಯೋಗದಲ್ಲಿ ನಡೆದ ಶಿಬಿರದಲ್ಲಿ ಯೋಗಾಭ್ಯಾಸ ಮತ್ತು ಸುಸ್ಥಿರ ಆರೋಗ್ಯ, ಸ್ತ್ರೀ ಸ್ವಾಸ್ಥ್ಯದ ಅರಿವು ಮೂಡಿಸಿ ಸ್ವಾಸ್ಥ್ಯ ರಕ್ಷಣೆಗೆ ಮಾನಸಿಕ ಒತ್ತಡ ನಿರ್ವಹಣೆ ಮತ್ತು ಮಹಿಳೆಯರ ಸಹಜ ತೊಂದರೆಗಳಿಗೆ ಸರಳ ಯೋಗಾಭ್ಯಾಸಗಳನ್ನು ಮಾಡಿಸಲಾಯಿತು.

ಡಾ. ಸೌಮ್ಯ ಮಹೇಶ್ ಮತ್ತು ವೈದ್ಯ ವಿದ್ಯಾರ್ಥಿಗಳ ತಂಡ ಶಿಬಿರವನ್ನು ನಿರ್ವಹಿಸಿತು. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ, ಟ್ರಸ್ಟ್ ನಿರ್ದೇಶಕರು, ಶಿಬಿರ ಸಂಯೋಜಕ ಅಬ್ದುಲ್ ರಝಾಕ್ ಭಾಗವಹಿಸಿದ್ದರು.

ಕುರ್ಕಾಲು ಗ್ರಾ.ಪಂ.: ಮಹಿಳಾ ಗ್ರಾಮ ಸಭೆ

ಕಟಪಾಡಿ: ಕುರ್ಕಾಲು ಗ್ರಾ.ಪಂ. ಇದರ 2026-27ನೇ ಸಾಲಿನ ಮಹಿಳಾ ಗ್ರಾಮ ಸಭೆಯು ಪಂಚಾಯತ್ ಸಭಾಭವನದಲ್ಲಿ ಜೂ .30ರಂದು ಬೆಳಗ್ಗೆ ಗಂಟೆ 11ಕ್ಕೆ ನಡೆಯಲಿದೆ.

ವಿಟ್ಲ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆ ನಾಗರಿಕರ ಪ್ರಶ್ನೆ | ವಿವಿಧ ಸಮಸ್ಯೆಗಳ ಚರ್ಚೆ

ವಿದ್ಯುತ್ ಕಡಿತ ಸಮಸ್ಯೆಗೆ ಯಾವಾಗ ಸಿಗಲಿದೆ ಮುಕ್ತಿ?

ವಿಟ್ಲ: ಬಿಲ್ಲಿಂಗ್ ವ್ಯವಸ್ಥೆಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿದ ರೀತಿಯಲ್ಲೇ ಜನರಿಗೆ ನೀಡುವ ಸೇವೆಯನ್ನು ಉತ್ತಮಗೊಳಿಸಬೇಕು. ಬುಧವಾರ ಮರಗಳನ್ನು ಕಡಿದರೂ, ಕೆಲವು ಭಾಗದಲ್ಲಿ ದಿನಕ್ಕೆ 30-40 ಬಾರಿ ಕರೆಂಟ್ ಹೋಗುತ್ತಿದೆ. ಮಳೆ ಹನಿ ಹಾಕಿದರೆ, ವಿದ್ಯುತ್ ಕಡಿತ ಆಗುತ್ತಿದ್ದು ಫಾಲ್ಟ್ ಯಾವಾಗ ಸರಿ ಮಾಡುವಿರಿ ಎಂದು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪದ್ಮನಾಭ ಪೂಜಾರಿ ಸಣ್ಣಗುತ್ತು ಅಧಿಕಾರಿಗಳಲ್ಲಿ ಪ್ರಶ್ನಿಸಿದರು.

ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನ ಸಭಾಂಗಣದಲ್ಲಿ ನಡೆದ ವಿಟ್ಲ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆಯಲ್ಲಿ ಸಮಸ್ಯೆಯನ್ನು ತಿಳಿಸಿದರು. ಅಳಿಕೆ ಕಳಗಿನ ಮುಳಿಯದಲ್ಲಿ ಟಿ.ಸಿ. ದುರಸ್ತಿಗೆ 15 ದಿನ ತೆಗೆದುಕೊಳ್ಳಲಾಗಿದೆ. ಪೆರುವಾಯಿ ಭಾಗದಲ್ಲಿ ಸಂಜೆ ಸಮಯ ಹೋದ ವಿದ್ಯುತ್ ಮಾರನೇ ದಿನ ಬೆಳಗ್ಗೆ ಬರುತ್ತಿದೆ. ಸರಿಯಾದ ಸ್ಪಂದನೆಯೂ ಆಗುತ್ತಿಲ್ಲ ಎಂದು ಹೇಳಿದರು.

ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ

ಕನ್ಯಾನ ಕರೋಪಾಡಿಯ ಭಾಗಕ್ಕೆ ಸಾಲೆತ್ತೂರು ಕೇಂದ್ರದಿಂದ ವಿತರಣೆ ನಡೆಯುವುದರಿಂದ ಸಮಸ್ಯೆ ನಿವಾರಣೆಯಾಗಿದೆ. ಕೇಪು ಸಬ್ ಸ್ಟೇಷನ್ ಬೇಗ ಆದರೆ ಕೆಲವು ಸಮಸ್ಯೆ ಕಡಿಮೆಯಾಗುತ್ತದೆ. ಇದನ್ನು ತ್ವರಿತವಾಗಿ ನಡೆಯುವಂತೆ ಕ್ರಮ ವಹಿಸಬೇಕು ಎಂದು ಹೋರಾಟಗಾರ ರಾಮಣ್ಣ ಪಾಲಿಗೆ ಆಗ್ರಹಿಸಿದರು. ಕನ್ಯಾನ ಶಾಖೆ ಕಟ್ಟಡದ ಕಾಮಗಾರಿಯ ಬಗ್ಗೆ ಇಲಾಖೆ ಸೂಕ್ತ ರೀತಿಯಲ್ಲಿ ತಿಳಿಸುವುದು ಉತ್ತಮ. ಸೋರು ಹಂತಕ್ಕೆ ತೆರಳಿದರೆ, ಒಳ್ಳೆಯದಾಗಿ ಸರಿ ಪಡಿಸುವುದು ಉತ್ತಮ. ಒಂದು ವರ್ಷದಲ್ಲಿ ಮಳೆ ನೀರು ಸೋರುವಂತೆ ಕಾಮಗಾರಿ ನಡೆಸಿದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ಇಲ್ಲದೇ ಹೋದರೆ ಅಗತ್ಯ ಕ್ರಮ ಗ್ರಾಹಕರು ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೋರಾಟಗಾರ ಮುರುವ ಮಹಾಬಲ ಭಟ್ ಎಚ್ಚರಿಸಿದರು.

ರಸ್ತೆಗೆ ಬೀಳುತ್ತಿದೆ ವಿದ್ಯುತ್ ತಂತಿಗಳು

ವಿಟ್ಲ ಮುಡ್ನೂರು ಪೈಸಾರಿ ಭಾಗದಲ್ಲಿ ರಾತ್ರಿ ಸಮಯ ಸ್ವಿಚ್ ಆಫ್ ಮಾಡಿದರೂ, ವಿದ್ಯುತ್ ಬಲ್ಬ್ ಉರಿಯುತ್ತಿದೆ. ಒಕ್ಕೆತ್ತೂರು, ಕಳುವಾಜೆ ಭಾಗದಲ್ಲಿ ತಂತಿ ಹಳೆದಾಗಿ ತುಂಡಾಗಿ ರಸ್ತೆಗೆ ಬೀಳುತ್ತಿದ್ದು ಮಕ್ಕಳಿಗೆ ಅಪಾಯ ಆಗುವ ಸಾಧ್ಯತೆಯಿದೆ. ಟೌನ್ ಫೀಡರ್ ನಿಂದ ಬೇರೆ ಕಡೆಗೆ ಸಂಪರ್ಕ ನೀಡಿ, ಗ್ರಾಮೀಣ ಭಾಗದಲ್ಲಿ ಸಣ್ಣ ಸಮಸ್ಯೆಯಾದರೂ ಎಲ್ಲರಿಗೆ ವಿದ್ಯುತ್ ಕಡಿತ ಆಗುತ್ತಿದೆ. ಇದರಿಂದ ಕುಡಿಯುವ ನೀರಿನ ಸಂಪರ್ಕಗಳಿಗೆ ತೀವ್ರ ತೊಂದರೆಯಾಗುತ್ತಿದೆ. ರಾತ್ರಿ ಹೊತ್ತು ಎಷ್ಟು ಲೈನ್ ಮ್ಯಾನ್ ಹಾಕಲಾಗಿದೆ ಎಂದು ಪ್ರಶ್ನಿಸಿದರು.

ಬೈರಿಕಟ್ಟೆ ಕಾಡಮನೆ ಭಾಗದಲ್ಲಿ ವಿದ್ಯುತ್ ಪರಿವರ್ತಕವಿಲ್ಲದೆ, ಮಳೆಗಾಲದಲ್ಲೂ ತ್ರಿಫೇಸ್ ಪಂಪ್ ಚಾಲು ಆಗುತ್ತಿಲ್ಲ, 50 ಮನೆಗಳಿದ್ದು, 4 ವರ್ಷದಿಂದ ಮನವಿ ನೀಡಿದರೂ ಪ್ರಯೋಜನವಾಗಿಲ್ಲ. ಸಿಂಗಲ್ ಫೇಸ್ ಪಂಪ್ ಕೂಡಾ ರನ್ ಆಗದ ಸ್ಥಿತಿಯಿದ್ದು, ತ್ವರಿತ ಪರಿಹಾರವಾಗದೇ ಹೋದರೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ನಾಗರಿಕರು ಎಚ್ಚರಿಸಿದರು. ಗ್ಯಾರೆಂಟಿ ಯೋಜನೆಯ ಹೆಸರಿನಲ್ಲಿ ಜನರನ್ನು ಅಲೆದಾಡಿಸುವುದು ಸರಿಯಲ್ಲ, ಸತ್ತವರ ಹಾಗೂ ದುರುಪಯೋಗ ಪಡಿಸುವ ವಿಚಾರದಲ್ಲಿ ಸೂಕ್ತ ಕ್ರಮ ಇದಕ್ಕಿಂತ ಮೊದಲು ಪರಿಹಾರ ಕಂಡುಕೊಳ್ಳಬೇಕು ಎಂದು ಸಾರ್ವಜನಿಕರು ಹೇಳಿದರು.

ಉಕ್ಕುಡದಲ್ಲಿ ಆಗಾಗ ವಿದ್ಯುತ್ ಕೈಕೊಡುತ್ತಿದೆ. ಮೋಡ ಹಾಕಿದರೆ ವಿದ್ಯುತ್ ಹೋಗುತ್ತದೆ. ರಸ್ತೆಯ ಬದಿಯಿಂದ ಕಂಬಗಳನ್ನು ದೂರದಲ್ಲಿ ಅಪಾಯ ಆಗದ ರೀತಿ ಅಳವಡಿಸುವುದು ಉತ್ತಮ. ಮಾಡುವ ಕೆಲಸದಲ್ಲಿ ಇನ್ನಷ್ಟು ಸುಧಾರಣೆಯ ಅವಶ್ಯಕತೆಯಿದೆ. ವಿಟ್ಲದಲ್ಲಿ ನಡೆಸುವ ಜನ ಸಂಪರ್ಕ ಸಭೆಯನ್ನು ಮಾಣಿ, ಪೆರ್ನೆ ಭಾಗಕ್ಕೂ ಆದ್ಯತೆ ನೀಡಬೇಕು. ಹೆದ್ದಾರಿಯ ಬದಿಯಲ್ಲಿ 40ಅಡಿ ಎತ್ತರದಲ್ಲಿ ಇರುವ ಕಂಬಗಳಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ ಕೆ., ಕಾರ್ಯನಿರ್ವಾಹಕ ಇಂಜಿನಿಯರ್ ಸಂತೋಷ ನಾಯ್ಕ್, ಸಹಾಯಕ ಕಾರ್ಯನಿರ್ವಹಣಾ ಇಂಜಿನಿಯರ್ ಗೋವಿಂದ ರಾಜು ಎ., ಲೆಕ್ಕಾಧಿಕಾರಿ ಚಂದ್ರಶೇಖರ ಉಪಸ್ಥಿತರಿದ್ದರು.

ಸಮಸ್ಯೆಗೆ ಸ್ಪಂದನೆ ಇಲ್ಲ

ಎಚ್‌ಟಿ ಲೈನ್‌ಗಳ ಕಂಬಗಳು ತುಂಡಾಗುವ ಹಂತಕ್ಕೆ ಹೋದರೂ ತ್ವರಿತವಾಗಿ ಇತ್ಯರ್ಥ ಆಗುತ್ತಿಲ್ಲ. ತಡವಾಗಿ ಬಿಲ್ ರೀಡರ್ ಮಾಡುತ್ತಿರುವುದು ಇಲಾಖೆಯ ಸಮಸ್ಯೆಯಾದರೂ ಗ್ರಾಹಕರಿಗೆ ಬಡ್ಡಿ ಹಾಕಲಾಗಿದೆ.ಸಮಸ್ಯೆಯ ಬಗ್ಗೆ ಸರಿಯಾಗಿ ಗಮನಿಸುತ್ತಿಲ್ಲ. ಎಲ್ಲಾ ಕಡೆ ವಿದ್ಯುತ್ ತಂತಿಗಳಲ್ಲಿ ಗಿಡ ಗಂಟಿ ತುಂಬಿದೆ.

● ಅಶೋಕ್ ಕುಮಾರ್ ಶೆಟ್ಟಿ ಅಧ್ಯಕ್ಷರು, ಸ್ಥಾಯಿ ಸಮಿತಿ

ರಾತ್ರಿ ವೇಳೆಯೂ ಸಿದ್ಧ

ವಿಟ್ಲದಲ್ಲಿ ಫೀಡರ್‌ಗಳು ಅಂಡರ್ ಗ್ರೌಂಡ್ ಆಗುವುದರಿಂದ ಬಹಳ ಸಮಸ್ಯೆಯ ಕಡಿಮೆಯಾಗುವ ನಿರೀಕ್ಷೆ ಇಡಲಾಗಿದೆ. ವಿಟ್ಲ ಉಪ ವಿಭಾಗಕ್ಕೆ ಮಳೆಗಾಲ ಉತ್ತಮ ಸೇವೆ ನೀಡುವುದಕ್ಕೆ ಎರಡು ವಾಹನ ನೀಡಲಾಗಿದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವುದಕ್ಕೂ ಲೈನ್ ಮ್ಯಾನ್ ವ್ಯವಸ್ಥೆ ಮಾಡಲಾಗಿದೆ.

● ಸಂತೋಷ್ ನಾಯ್ಕ, ಕಾರ್ಯ ನಿರ್ವಾಹಕ ಇಂಜಿನಿಯರ್

ಕಂಬ ಬದಲಾಯಿಸಿ

ಒಂದೇ ಫೀಡರ್‌ನಲ್ಲಿ 8 ಫೀಡರ್ ವಯರ್‌ಗಳು ಹಾದು ಹೋಗಿರುವ ಕಾರಣ ಸಮಸ್ಯೆಯಾಗುತ್ತಿದೆ. ವಿಟ್ಲ ಭಾಗದಲ್ಲಿ ಯುಜಿ ಕೇಬಲ್ ಅಳವಡಿಸಲು ಯೋಜನೆ ಸಿದ್ಧಪಡಿಸಲಾಗಿದೆ. ಅಪಾಯಕಾರಿ ಕಂಬಗಳ ಬದಲಾವಣೆಗೆ ಕ್ರಮ ವಹಿಸಬೇಕು. ಕರ್ವೇಲು ಉಪಕೇಂದ್ರ ಸ್ಥಾಪನೆಗೆ ಲೆವೆಲಿಂಗ್ ಆಗಿದ್ದು ಟೆಂಡರ್ ಆಗಿ ಕೆಲಸ ನಡೆಯುತ್ತಿದೆ. ತಿಂಗಳ 3ನೇ ಶನಿವಾರ ಗ್ರಾಹಕರ ಸಭೆಯನ್ನು ಸ್ಥಳೀಯ ಮಟ್ಟದಲ್ಲಿ ಮಾಡಲು ಸೂಚನೆ ನೀಡಲಾಗಿದೆ.

● ಕೃಷ್ಣರಾಜ ಕೆ. ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ

ತುಂಬೆ ಕಾಲೇಜಿನಲ್ಲಿ 'ನಶಾ ಮುಕ್ತ ಭಾರತ' ಜನಜಾಗೃತಿ ಅಭಿಯಾನ

ದುಶ್ಚಟಗಳಿಂದ ದೂರವಿರಿ: ಎಸ್ಸೈ ಮಂಜುನಾಥ

ಬಂಟ್ವಾಳ: ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆಯ ವತಿಯಿಂದ ಮಾದಕ ವಸ್ತುಗಳ ದುರುಪಯೋಗ, ಅಕ್ರಮ ಸಾಗಣೆ ಹಾಗೂ ಅದರ ದುಷ್ಪರಿಣಾಮಗಳ ಕುರಿತು 'ನಶಾ ಮುಕ್ತ ಭಾರತ್' ಜನಜಾಗೃತಿ ಅಭಿಯಾನವು ತುಂಬೆ ಪದವಿ ಪೂರ್ವ ಕಾಲೇಜಿನ ಶಬನಾ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಮಂಜುನಾಥ ಅವರು ಮಾತನಾಡಿ, ಮಾದಕ ವಸ್ತುಗಳ ವ್ಯಸನವು ವ್ಯಕ್ತಿಯ ಆರೋಗ್ಯ, ಶಿಕ್ಷಣ, ಕುಟುಂಬ ಮತ್ತು ಸಮಾಜದ ಮೇಲೆ ಬೀರುವ ಗಂಭೀರ ಪರಿಣಾಮಗಳ ಕುರಿತು ಅರಿವು ಮೂಡಿಸಿದರು. ಯುವಜನರು ದುಶ್ಚಟಗಳಿಂದ ದೂರವಿದ್ದು, ಉತ್ತಮ ಗುರಿಗಳನ್ನು ಹೊಂದಿ ಜೀವನದಲ್ಲಿ ಸಾಧನೆ ಮಾಡಬೇಕು ಎಂದು ಕರೆ ನೀಡಿದರು.

ತುಂಬೆ ಪದವಿ ಪೂರ್ವ ಕಾಲೇಜು
TY COLLEGE
B.A

ಬಂಟ್ವಾಳ ಗ್ರಾಮಾಂತರ ಠಾಣೆಯ ಪರಿವೀಕ್ಷಣಾ ಅವಧಿಯ ಆರಕ್ಷಕ ಅಧಿಕಾರಿ ಶಿವರಾಮ್ ಅವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಅಕ್ರಮ ಸಾಗಣೆ, ಕಾನೂನು ಕ್ರಮಗಳು ಹಾಗೂ ಸಮಾಜದ ಸಹಭಾಗಿತ್ವದ ಅಗತ್ಯತೆಯ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ವಿ. ಸುಬ್ರಹ್ಮಣ್ಯ ಭಟ್ ವಹಿಸಿದ್ದರು.ಉಪನ್ಯಾಸಕಿ ಕವಿತಾ ಸ್ವಾಗತಿಸಿದರು. ಉಪನ್ಯಾಸಕಿ ಬೇಬಿ ವಂದಿಸಿದರು.ಉಪನ್ಯಾಸಕ ಅಬ್ದುಲ್ ರಹಿಮಾನ್ ಡಿ. ಬಿ ಕಾರ್ಯಕ್ರಮ ನಿರೂಪಿಸಿದರು,

ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭ ನಶಾ ಮುಕ್ತ ಸಮಾಜ ನಿರ್ಮಾಣದ ಸಂಕಲ್ಪವನ್ನು ಕೈಗೊಂಡರು.

ಕುಕ್ಕೆಯಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಜಾಥಾ | ಎಸ್ಸೈ ಆಂಜನೇಯ ಅಭಿಮತ

ಯುವ ಜನಾಂಗದ ಭವಿಷ್ಯಕ್ಕೆ ಡ್ರಗ್ಸ್ ಮಾರಕ

ಸುಬ್ರಹ್ಮಣ್ಯ: ಡ್ರಗ್ಸ್ ಎಂಬುದು ಮಕ್ಕಳ ಮನಸ್ಸನ್ನು ಹಾಳು ಮಾಡುತ್ತದೆ. ಇದು ಮನೆಯನ್ನು ಅವರ ಓದು ಬರಹಗಳನ್ನು ಸಂಪೂರ್ಣವಾಗಿ ನಾಶಗೊಳಿಸುತ್ತದೆ. ಯುವ ಜನಾಂಗದ ಭವಿಷ್ಯವನ್ನು ಡ್ರಗ್ಸ್ ಶೂನ್ಯಗೊಳಿಸುತ್ತದೆ. ಡ್ರಗ್ಸ್ ಎಂಬ ವಿಷಯದಿಂದ ವಿದ್ಯಾರ್ಥಿಗಳು ದೂರವಿರಬೇಕು. ಜೊತೆಗೆ ಧೂಮ ಪಾನ ಮದ್ಯಪಾನ ಮುಂತಾದ ಚಟಗಳಿಗೆ ಬಲಿಯಾಗಬಾರದು ಎಂದು ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಹೇಳಿದರು

ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜ್, ಸುಬ್ರಹ್ಮಣ್ಯ ಪೊಲೀಸ್ ಠಾಣೆ, ಪೊಲೀಸ್ ಇಲಾಖೆ ದ.ಕ., ಗ್ರಾಮ ಪಂಚಾಯತ್ ಸುಬ್ರಹ್ಮಣ್ಯ ಹಾಗೂ ಕುಮಾರಸ್ವಾಮಿ ವಿದ್ಯಾಲಯ ಸುಬ್ರಹ್ಮಣ್ಯ ಇದರ ಆಶ್ರಯದಲ್ಲಿ ಸುಬ್ರಹ್ಮಣ್ಯದಲ್ಲಿ ಜರುಗಿದ ಬೃಹತ್ ಡ್ರಗ್ಸ್ ವಿರುದ್ಧ ಜನಜಾಗೃತಿ ಜಾಥಾ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ದೇವಳದ ರಥಬೀದಿಯಿಂದ ಕುಮಾರಧಾರದ ಎಸ್‌ಎಸ್‌ಪಿಯು ಕಾಲೇಜಿನವರೆಗೆ ಜಾಥಾ ನಡೆಯಿತು. ಸುಮಾರು 1200 ವಿದ್ಯಾ ರ್ಥಿಗಳು ಮೆರವಣಿಗೆಯಲ್ಲಿ ಡ್ರಗ್ಸ್ ಜನ ಜಾಗೃತಿ ಫಲಕ ಹಿಡಿದು ಘೋಷಣೆ ಕೂಗುತ್ತಾ ಭಾಗವಹಿಸಿದರು.

ಎಸ್.ಎಸ್.ಪಿ.ಯು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ್, ಪ್ರೌಢ ಶಾಲಾ ಮುಖ್ಯ ಗುರು ನಂದಾ ಹರೀಶ್, ಪಂಚಾಯತ್ ಕಾರ್ಯದರ್ಶಿ ಮೋನಪ್ಪ ಡಿ., ಕುಮಾರಸ್ವಾಮಿ ವಿದ್ಯಾಲಯದ ಪ್ರಾಂಶುಪಾಲ ಸಂಕೀರ್ತನ ಹೆಬ್ಬಾರ್, ಕಾರ್ಯಕ್ರಮ ಸಂಘಟಕ ಹೇಮಚಂದ್ರ, ಪ್ರಮುಖರಾದ ರವಿ ಕಕ್ಕೆಪದವು, ವಿನಿತಾ, ಆನಂದ ಮತ್ತಿತರರು ಜಾಥಾದಲ್ಲಿ ಭಾಗವಹಿಸಿದ್ದರು.

ಕಲ್ಲಡ್ಕ ಶ್ರೀರಾಮ ಕಾಲೇಜಿನ ರ‍್ಯಾಂಕ್ ವಿದ್ಯಾರ್ಥಿಗೆ ಅಭಿನಂದನೆ

ಬಂಟ್ವಾಳ: ಪ್ರಸಕ್ತ ಸಾಲಿನ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 600 ರಲ್ಲಿ 594 ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ 7ನೇ ರ‍್ಯಾಂಕ್ ಹಾಗೂ ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿ, ಬಂಟ್ವಾಳ ತಾಲೂಕು ಕೊಯಿಲ ಗ್ರಾಮದ ಉಮೇಶ್ ಪೂಜಾರಿ ಹಾಗೂ ಪುಷ್ಪಾವತಿ ದಂಪತಿ ಪುತ್ರ ಪ್ರಿತೇಶ್ ಅವರನ್ನು ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಬೆಳ್ಳಿಪಾಡಿ ಕೃಷ್ಣ ರೈ ರೈತ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ವಿದ್ಯಾರ್ಥಿಯನ್ನು ಅಭಿನಂದಿಸಿ ಮಾತನಾಡಿದ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಸಿದ್ದಕಟ್ಟೆ ಸಹಕಾರ ಸಂಘದ ವ್ಯಾಪ್ತಿಗೊಳಪಟ್ಟ ವಿದ್ಯಾರ್ಥಿ ಪ್ರಿತೇಶ್ ತನ್ನ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಸರಕಾರಿ ಶಾಲೆಯಲ್ಲಿ ಪೂರೈಸಿ ಬಳಿಕ ಕಲ್ಲಡ್ಕ ಶ್ರೀರಾಮ ಕಾಲೇಜಿನಲ್ಲಿ ವಿದ್ಯಾರ್ಜನೆಗೈದು ರಾಜ್ಯ ಮಟ್ಟದಲ್ಲಿ 7ನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರವಾಗಿದೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪ್ರಿತೇಶ್, ಸಂಘದ ಆಡಳಿತ ಮಂಡಳಿಗೆ ಕೃತಜ್ಞತೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷ ಸಂದೇಶ ಶೆಟ್ಟಿ ಪೊಡುಂಬ, ನಿರ್ದೇಶಕರಾದ ಸತೀಶ್ ಪೂಜಾರಿ ಅಲೆಕ್ಕಿ, ರಕ್ಷಿತ್ ಶೆಟ್ಟಿ, ದಿನೇಶ್ ಪೂಜಾರಿ ಹುಲಿಮರು, ಚಂದ್ರಶೇಖರ ಶೆಟ್ಟಿ ಅರಳ,ವಿಶ್ವನಾಥ್ ಶೆಟ್ಟಿಗಾರ್ ಸಂಗದೆಟ್ಟು,ಜಾರಪ್ಪ ನಾಯ್ಕ, ವೀರಪ್ಪ ಪರವ, ಎ. ಶಿವಗೌಡ ಮಂದಾರತಿ ಎಸ್. ಶೆಟ್ಟಿ ಪುಷ್ಪಲತಾ ಎಸ್. ಆರ್., ರಾಜೇಶ್ ಶೆಟ್ಟಿ ಕೊನೆರಬೆಟ್ಟು ನವೀನ ಹೆಗ್ಡೆ ದ.ಕ. ಜಿ. ಕೇಂದ್ರ ಸಹಕಾರ ಬ್ಯಾಂಕ್ ಪ್ರತಿನಿಧಿ ಕೀರ್ತಿರಾಜ್, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರತಿ ಶೆಟ್ಟಿ, ಪ್ರಮುಖರಾದ ಮೋಹನ್ ಕೊಯಿಲ ಇದ್ದರು. ಸಿಬ್ಬಂದಿ ಸುಧಾಕ್ ಬಂಗೇರ ನಿರ್ವಹಿಸಿ, ವಂದಿಸಿದರು.

ಜೂ. 30: ಬೆಳ್ತಂಗಡಿ ರಬ್ಬರು ಬೆಳೆಗಾರರ ಸಂಘದ ಸಿಇಒ ಬೀಳ್ಕೊಡುಗೆ ಸಮಾರಂಭ

ಬೆಳ್ತಂಗಡಿ: ಬೆಳ್ತಂಗಡಿ ತಾಲೂಕು ರಬ್ಬರು ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಸಂಘದಲ್ಲಿ ಸುದೀರ್ಘ ಅವಧಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದುತ್ತಿರುವ ರಾಜು ಶೆಟ್ಟಿ ಅವರಿಗೆ ಬೀಳ್ಕೊಡುಗೆ ಸಮಾರಂಭ ಜೂ. 30ರಂದು ಉಜಿರೆಯ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಶ್ರೀಧರ ಜಿ. ಭಿಡೆ ಹೇಳಿದರು.

ಅವರು ಬುಧವಾರ ಬೆಳ್ತಂಗಡಿ ಪತ್ರಿಕಾ ಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು. ರಾಜು ಶೆಟ್ಟಿ ಅವರು 1989 ರಂದು ಸಂಘದಲ್ಲಿ ಸೇವೆಗೆ ನೇಮಕಗೊಂಡು 1995 ರಿಂದ ಇಲ್ಲಿಯವರೆಗೆ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ಸುದೀರ್ಘ ಅವಧಿಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ.

1994-95ನೇ ಸಾಲಿನಲ್ಲಿ ಸಂಘದ ಮುಖ್ಯ ಕಚೇರಿಗೆ ಸ್ವಂತ ಕಟ್ಟಡ ಸ್ಥಾಪನೆ, 1998-99ನೇ ಸಾಲಿನಲ್ಲಿ ಲಾಯಿಲದ ಕೊಯ್ಯೂರು ಕ್ರಾಸ್ ಬಳಿ ರಬ್ಬರ್ ಮೌಲ್ಡ್ ವಸ್ತುಗಳ ತಯಾರಿಕಾ ಘಟಕ ಸ್ಥಾಪನೆ, 2006-07ನೇ ಸಾಲಿನಲ್ಲಿ ಸುಸಜ್ಜಿತ ನರ್ಸರಿ ಸ್ಥಾಪನೆ, 2012-13ನೇ ಸಾಲಿನಲ್ಲಿ ಸದಸ್ಯರ ಅನುಕೂಲಕ್ಕಾಗಿ ಲಾಯಿಲದಲ್ಲಿ ಸುಸಜ್ಜಿತ ಗೋದಾಮು ನಿರ್ಮಾಣ, 2021-22ನೇ ಸಾಲಿನಲ್ಲಿ ಗುರುವಾಯನಕೆರೆ ಶಾಖೆಗೆ ಸ್ವಂತ ಕಟ್ಟಡ ಸ್ಥಾಪನೆ,2022-23ನೇ ಸಾಲಿನಲ್ಲಿ ಮುಂಡಾಜೆಯಲ್ಲಿ ಸಂಘಕ್ಕೆ ನಿವೇಶನ ಖರೀದಿ,2022-23ನೇ ಸಾಲಿನಲ್ಲಿ ಲ್ಯಾಟೆಕ್ಸ್ ಖರೀದಿ ಪ್ರಾರಂಭ.ಸಂಘಕ್ಕೆ 5 ಜಿಲ್ಲೆಗಳಲ್ಲಿ 33 ಕಡೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆದಿರುವುದು. ಸಂಘದ 9 ಖರೀದಿ ಕೇಂದ್ರಗಳನ್ನು ಕಂಪ್ಯೂಟರೀಕರಣಗೊಳಿಸಿ ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಿದ್ದು,ಸದಸ್ಯರ ಅನುಕೂಲಕ್ಕಾಗಿ ಲಾಯಿಲದಲ್ಲಿ ವೇಬ್ರಿಡ್ಜ್ ನಿರ್ಮಾಣ ಮೊದಲಾದ ಸಾಧನೆಯನ್ನು ಮಾಡಿ ಸಂಘದ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಜೂ. 30 ರಂದು ಬೆಳಗ್ಗೆ ಸಂಘದ ವಾರ್ಷಿಕ ಮಹಾಸಭೆ ನಡೆಯಲಿದ್ದು, ಬಳಿಕ ಬೀಳ್ಕೊಡುಗೆ ಸಮಾರಂಭ ನಡೆಯಲಿದೆ ಎಂದು ಹೇಳಿದರು.

ಈ ಸಮಾರಂಭದಲ್ಲಿ ಮಂಗಳೂರು ಕ್ಯಾಮ್ಕೋ ಅಧ್ಯಕ್ಷ ಎಸ್. ಆರ್ ಸತೀಶ್ಚಂದ್ರ, ಶಾಸಕ ಹರೀಶ್ ಪೂಂಜ, ಮಾಜಿ ಸಚಿವ ಕೆ. ಗಂಗಾಧರ ಗೌಡ, ಸಹಕಾರ ಸಂಘಗಳ ಉಪ ನಿಬಂಧಕ ರಮೇಶ್ ಎಚ್. ಎನ್. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.ಪತ್ರಿಕಾ ಗೋಷ್ಠಿಯಲ್ಲಿ ಉಪಾಧ್ಯಕ್ಷ ಅನಂತ ಭಟ್ ಮಚ್ಚಿಮಲೆ, ನಿರ್ದೇಶಕರು ಉಜಿರೆ ಸಹಕಾರ ಸಂಘದ ಅಧ್ಯಕ್ಷ ಬಾಲಕೃಷ್ಣ ಗೌಡ ಕೇರಿಮಾರು, ನಿರ್ದೇಶಕ ಗ್ರೇಸಿಯನ್ ವೇಗಸ್, ಪ್ರಭಾರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹರಿಪ್ರಸಾದ್ ಐ. ಎಸ್. ಉಪಸ್ಥಿತರಿದ್ದರು.

ಫಿಲೋಮಿನಾ ಕಾಲೇಜಿನಲ್ಲಿ ಸೇನೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ

ಸಂತ ಫಿಲೋಮಿನಾ ಕಾಲೇಜು (ಸ್ವಾಯತ್ತ)

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ಎನ್‌ಸಿಸಿ ಘಟಕದ ವತಿಯಿಂದ ಅಗ್ನಿವೀರ್ ಯೋಜನೆಯಡಿ ಭಾರತೀಯ ಸೇನೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಯಿತು.

ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಾದ ದ್ವಿತೀಯ ಬಿಎ ವಿಭಾಗದ ವಿಜಿತ್ ಎಂ., ದ್ವಿತೀಯ ಬಿಸಿಎ ವಿಭಾಗದ ಭವಿತ್, ಎಂ.ಎಸ್. ಸೋನಲ್ ಹಾಗೂ ಪ್ರಪಂಚ್ ಅವರನ್ನು ಅವರ ಸಾಧನೆಗಾಗಿ ಸನ್ಮಾನಿಸಿದ ಕಾಲೇಜಿನ ಸಂಚಾಲಕ ರೆ.ಫಾ. ಡಾ.ಜೆ.ಬಿ. ಸಾಲ್ದಾನಾ ಅವರು, ವಿದ್ಯಾರ್ಥಿಗಳನ್ನು ಅಭಿನಂದಿಸಿ, ವಿದ್ಯಾರ್ಥಿಗಳ ಈ ಸಾಧನೆ ಮತ್ತು ಧೈರ್ಯದ ಬಗ್ಗೆ ಕಾಲೇಜಿಗೆ ಹೆಮ್ಮೆ ಇದೆ. ಅವರು ಮುಂದಿನ ದಿನಗಳಲ್ಲಿ ಇನ್ನೂ ಉನ್ನತ ಹುದ್ದೆಗಳನ್ನು ಅಲಂಕರಿಸಲಿ ಎಂದು ಶುಭ ಹಾರೈಸಿದರು.

ಇತರ ವಿದ್ಯಾರ್ಥಿಗಳಿಗೆ ಪ್ರೇರಣೆ

ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆಂಟನಿ ಪ್ರಕಾಶ್ ಮೊಂತೆರೋ ಸಾಧಕರನ್ನು ಅಭಿನಂದಿಸಿ, ಅವರ ಈ ಸಾಧನೆಯು ಇತರ ವಿದ್ಯಾರ್ಥಿಗಳಿಗೆ ಸದಾ ಪ್ರೇರಣೆಯಾಗಲಿದೆ ಎಂದು ಹೇಳಿದರು.

ಕಾಲೇಜಿನ ಎನ್‌ಸಿಸಿ ಅಧಿಕಾರಿ ಕ್ಯಾಪ್ಟನ್ ಜಾನ್ಸನ್ ಡೇವಿಡ್ ಸಿಕ್ವೇರಾ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲ ಡಾ. ವಿಜಯ ಕುಮಾರ್ ಎಂ., ಕುಲಸಚಿವರಾದ(ಶೈಕ್ಷಣಿಕ) ಡಾ. ನಾರ್ಬರ್ಟ್ ಮಸ್ಕರೇನ್ಹಸ್, (ಪರೀಕ್ಷಾಂಗ) ಡಾ. ವಿನಯಚಂದ್ರ, ಹಣಕಾಸು ಅಧಿಕಾರಿ ಡಾ. ಎಡ್ವಿನ್ ಡಿ'ಸೋಜಾ, ಹಾಗೂ ಕಚೇರಿ ಅಧೀಕ್ಷಕಿ ರುಫಿನಾ ಡಿ'ಸೋಜಾ ಮೊದಲಾದವರು ಉಪಸ್ಥಿತರಿದ್ದರು.

ವಿಟ್ಲ ತಾಲೂಕು, ವಿಧಾನಸಭಾ ಕ್ಷೇತ್ರ ಮರುಸ್ಥಾಪನೆಯ ಹಕ್ಕೊತ್ತಾಯಕ್ಕಾಗಿ ಜನ ಜಾಗೃತಿ ಜಾಥಾ

ವಿಟ್ಲ ತಾಲೂಕು ಮರು ಸ್ಥಾಪನೆ ಕೆಲಸ ನಡೆಯಲಿ: ಮಹಾಬಲ ಭಟ್

ವಿಟ್ಲ: ಜನರು ತಾಲೂಕು ಕೇಂದ್ರಕ್ಕೆ ದೂರದ ಊರಿಗೆ ಅಲೆದಾಡುವುದು ತಪ್ಪಬೇಕಾಗಿದೆ. ವಿಟ್ಲ ಹೋಬಳಿಯಲ್ಲಿ ಜನಸಾಂದ್ರತೆ ಹೆಚ್ಚಿದ್ದು ವಿಟ್ಲ ತಾಲೂಕು ನಮ್ಮ ಹಕ್ಕಾಗಿದೆ. ಇದರ ಮರು ಸ್ಥಾಪಿಸುವ ಕಾರ್ಯ ನಡೆಯಬೇಕು ಎಂದು ಹಿರಿಯ ಹೋರಾಟಗಾರ ಮುರುವ ಮಹಾಬಲ ಭಟ್ ಹೇಳಿದರು.

ವಿಟ್ಲ ತಾಲೂಕು ಮತ್ತು ವಿಟ್ಲ ವಿಧಾನ ಸಭಾ ಕ್ಷೇತ್ರ ಮರುಸ್ಥಾಪನಾ ಹೋರಾಟ ಸಮಿತಿ ವತಿಯಿಂದ ವಿಟ್ಲ ತಾಲೂಕು ಕೇಂದ್ರ ರಚನೆ ಹಾಗೂ ವಿಟ್ಲ ವಿಧಾನಸಭಾ ಕ್ಷೇತ್ರ ಮರು ಸ್ಥಾಪನೆ ಹಕ್ಕೊತ್ತಾಯಕ್ಕಾಗಿ ನಡೆದ ಜನ ಜಾಗೃತಿ ಜಾಥಾ ಉದ್ದೇಶಿಸಿ ಮಾತನಾಡಿದರು.

ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮಾನಾಥ ವಿಟ್ಲ ಮಾತನಾಡಿ, 60 ವರ್ಷಗಳ ಹಿಂದೆಯೇ ತಾಲೂಕು ರಚನೆ ಆಗಬೇಕೆಂಬ ಕೂಗು ಇತ್ತು. ಹೋರಾಟದ ಧ್ವನಿ ವಿಧಾನಸೌಧಕ್ಕೆ ಕೇಳುವ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುತ್ತಿದೆ. ಕಡಿಮೆ ಜನ ಸಂಖ್ಯೆಯಿರುವಲ್ಲಿ ತಾಲೂಕು ರಚನೆಯಾಗಿದೆ. ಮುಂದೆ ಬೆಂಗಳೂರು ಚಲೋ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯದರ್ಶಿ ಕಾನ ಈಶ್ವರ ಭಟ್ ಮಾತನಾಡಿ, ತಾಲೂಕು ಹಾಗೂ ವಿಧಾನ ಸಭಾ ಕ್ಷೇತ್ರಕ್ಕಾಗಿ ರಾಜಕೀಯ ರಹಿತವಾಗಿ ಹೋರಾಟ ನಡೆಯಲಿದೆ. ವಿಟ್ಲ ಹೋಬಳಿಯಲ್ಲಿ 1 ಲಕ್ಷಕ್ಕೂ ಅಧಿಕ ಜನ ಸಂಖ್ಯೆಯಿದೆ. 29 ಗ್ರಾಮಗಳನ್ನು ಸೇರಿಸಿ ತಾಲೂಕು ಆಗಬೇಕಾಗಿದ್ದು, ಗ್ರಾಮ ಗ್ರಾಮಕ್ಕೆ ಭೇಟಿ ನೀಡುವ ಕಾರ್ಯ ಮಾಡಲಾಗುವುದು. ಯಶಸ್ವಿಯಾಗುವ ತನಕ ಪ್ರಯತ್ನ ಬಿಡುವುದಿಲ್ಲ ಎಂದರು.

ಹೋರಾಟ ಸಮಿತಿ ಅಧ್ಯಕ್ಷ ಬಿ.ಕೆ. ಬಶೀರ್, ಶ್ರೀಧರ ಶೆಟ್ಟಿ ಬೈಲುಗುತ್ತು, ಜಯರಾಮ ಬಲ್ಲಾಳ್, ನೇಸಪ್ಪ ಬೆದ್ರಕಾಡು, ರಾಮಣ್ಣ ಪಾಲಿಗೆ, ಮುಗುಳಿ ತಿರುಮಲೇಶ್ವರ ಭಟ್, ಶ್ರೀಧರ ಬಾಳೆಕಲ್ಲು, ವಿಕೆಎಂ ಅಶ್ರಫ್, ಶ್ರೀನಿವಾಸ ಕೊಲ್ಯ, ರಾಮಣ್ಣ ವಿಟ್ಲ, ಅಬೂಬಕ್ಕರ್ ಅನಿಲಕಟ್ಟೆ, ಸುದರ್ಶನ ಪಡಿಯಾರ್, ರಾಮು, ಹಸೈನಾರ್ ಕಡಂಬು ಮತ್ತಿತರರು ಹಾಜರಿದ್ದರು.

ನಾಡಕಚೇರಿಗೆ ಪಾದಯಾತ್ರೆ

ವಿಟ್ಲ ಮೇಗಿನಪೇಟೆಯ ಪಶುವೈದ್ಯಕೀಯ ಇಲಾಖೆಯ ಸಮೀಪ ದಿಂದ ಪೇಟೆಯ ಮೂಲಕ ನಾಡಕಚೇರಿಗೆ ಪಾದಯಾತ್ರೆ ನಡೆಯಿತು. ವಿಟ್ಲ ನಾಡ ಕಚೇರಿಯಲ್ಲಿ ಸರ್ಕಾರಕ್ಕೆ ಬೇಡಿಕೆಯ ಮನವಿಯನ್ನು ಉಪ ತಹಸೀಲ್ದಾರ್ ರಶ್ಮಿ ಮೂಲಕ ಸಲ್ಲಿಸಲಾಯಿತು.

ಪರಿಶಿಷ್ಟ ಜಾತಿ ಕಾಲನಿಗಳ ಅಭಿವೃದ್ಧಿಗೆ 3 ಕೋಟಿ ರೂ. ಅನುದಾನ: ಶಾಸಕ ರೈ

ಪುತ್ತೂರು: ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಜಾತಿ ಕಾಲನಿಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ರೂ.3 ಕೋ. ಅನುದಾನ ಮಂಜೂರಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಈ ಅನುದಾನದಲ್ಲಿ ಪರಿಶಿಷ್ಟ ಜಾತಿ ಕಾಲನಿಗೆ ಕುಡಿಯುವ ನೀರು, ರಸ್ತೆ, ವಿದ್ಯುತ್, ಒಳಚರಂಡಿ, ಇತ್ಯಾದಿ ಮೂಲಭೂತ ಸೌಲಭ್ಯಗಳಿಗೆ ಈ ಅನುದಾನವನ್ನು ಬಳಕೆಮಾಡಬಹುದಾಗಿದೆ. ಪುತ್ತೂರು ಕ್ಷೇತ್ರ ವ್ಯಾಪ್ತಿಯಲ್ಲಿ ಅನೇಕ ಪ.ಜಾತಿ ಕಾಲನಿಗಳು ಇನ್ನೂ ಮೂಲಭೂತ ಸೌಲಭ್ಯದಿಂದ ವಂಚಿತವಾಗಿದೆ. ಈ ಹಿಂದೆ ಕೂಡಾ ಕಾಲನಿ ಅಭಿವೃದ್ಧಿಗೆ ಅನುದಾನ ಮಂಜೂರಾಗಿತ್ತು. ಕೆಲವೊಂದು ಕಾಲನಿಗಳಿಗೆ ಈ ಹಿಂದೆಯೂ ಅನುದಾನವನ್ನು ನೀಡಲಾಗಿದೆ. ಇನ್ನುಳಿದ ಕಾಲನಿಗಳ ಅಭಿವೃದ್ಧಿಗೆ ಅನುದಾನ ನೀಡುವಂತೆ ಸರಕಾರಕ್ಕೆ ಮನವಿ ಸಲ್ಲಿಸಿದ್ದೆ. ಇದೀಗ ರೂ.3 ಕೋಟಿ ಅನುದಾನವನ್ನು ಸರಕಾರ ಮಂಜೂರು ಮಾಡಿದೆ ಎಂದರು. ಪುತ್ತೂರು ಕ್ಷೇತ್ರದ ವಿವಿಧ ಗ್ರಾಮೀಣ ರಸ್ತೆಗಳಿಗೆ ಅನುದಾನ ಒದಗಿಸುವಂತೆ ಶಾಸಕ ರೈ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದರು.



ಸುತ್ತಮುತ್ತ

ಕುಂದಾಪುರ – ಸ್ಕೂಟರ್‌ಗೆ ಕಾರು ಡಿಕ್ಕಿ: ಸವಾರನಿಗೆ ಗಾಯ

• **ಉಡುಪಿ:** ಕುಂದಾಪುರದ ಪುರಸಭಾ ರಸ್ತೆಯ ಆಭರಣ ಜ್ಯುವೆಲ್ಲರ್ಸ್ ಬಳಿ ಕಾರೊಂದು ಸ್ಕೂಟರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸವಾರ ಕೆ. ವೆಂಕಟರಮಣ ಶೆಣೈ ಗಾಯಗೊಂಡಿದ್ದಾರೆ.

ಜೂ.23ರ ಬೆಳಗ್ಗೆ ವೆಂಕಟರಮಣ ಅವರು ತಮ್ಮ ಸ್ಕೂಟರ್‌ನಲ್ಲಿ ಕೋಟೇಶ್ವರ ಕಡೆಯಿಂದ ಕುಂದಾಪುರ ಕಡೆಗೆ ಹೋಗುತ್ತಿದ್ದಾಗ, ರಸ್ತೆ ಬದಿಯಲ್ಲಿದ್ದ ಮಾರುತಿ ಸ್ವಿಫ್ಟ್ ಕಾರನ್ನು ದಾಟುತ್ತಿದ್ದರು. ಈ ವೇಳೆ ಕಾರಿನಲ್ಲಿದ್ದ ವಿಘ್ನೇಶ್ ಎಂಬಾತ ಯಾವುದೇ ಸೂಚನೆ ನೀಡದೆ ಒಮ್ಮೆಲೆ ಕಾರನ್ನು ಮುಂದಕ್ಕೆ ಚಲಾಯಿಸಿ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ ಎನ್ನಲಾಗಿದೆ. ಅಪಘಾತದಲ್ಲಿ ಕಾಲಿಗೆ ಗಾಯಗೊಂಡಿರುವ ವೆಂಕಟರಮಣ ಶೆಣೈ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕುಂದಾಪುರ ಸಂಚಾರ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆ : ಅರ್ಜಿ ಆಹ್ವಾನ

• **ಉಡುಪಿ:** ಮೀನುಗಾರಿಕೆ ಇಲಾಖೆಯಿಂದ ಜಿಲ್ಲಾ ವಲಯ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕಾ ಸಲಕರಣೆ ಕಿಟ್ಟು ವಿತರಣೆ ಯೋಜನೆ, ಮತ್ಸ್ಯವಾಹಿನಿ ಯೋಜನೆಯಡಿ ಮೀನು ಮಾರಾಟಕ್ಕೆ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರದ ವಾಹನ ಖರೀದಿಗೆ ಸಹಾಯ ಹಾಗೂ ಕರಾವಳಿ ತಾಲೂಕುಗಳ ಅರ್ಹ ಫಲಾನುಭವಿಗಳಿಗೆ ಜೀವರಕ್ಷಕ ಸಾಧನ ಉಚಿತ ವಿತರಿಸುವ ಯೋಜನೆ ಪಾರದರ್ಶಕವಾಗಿ, ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಜಿಲ್ಲೆಯ ಅರ್ಹ ಮೀನುಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು. 31 ಕಡೇ ದಿನ. ಆಸಕ್ತ ಮೀನುಗಾರರು ಅರ್ಜಿಯನ್ನು ಸೇವಾಸಿಂಧು ಪೋರ್ಟಲ್ ನಲ್ಲಿ ಸಲ್ಲಿಸಬೇಕು. ಮೂಲ ಅರ್ಜಿಯನ್ನು ದಾಖಲಾತಿಗಳೊಂದಿಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಉಡುಪಿ, ಕುಂದಾಪುರ ಹಾಗೂ ಕಾರ್ಕಳ ಕಚೇರಿಗೆ ಸಲ್ಲಿಸಬಹುದಾಗಿದೆ. ಮಾಹಿತಿಗೆ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ರೋಟರಿ ವುಡ್ಸ್ ಅಧ್ಯಕ್ಷೆಯಾಗಿ ಪ್ರಮೀಳಾ ಶೆಟ್ಟಿ ನೇಮಕ

• **ಮಡಿಕೇರಿ:** ರೋಟರಿ ಮಡಿಕೇರಿ ವುಡ್ಸ್ ಸಂಸ್ಥೆಯ ನೂತನ ಅಧ್ಯಕ್ಷೆಯಾಗಿ ಪ್ರಮೀಳಾ ಶೆಟ್ಟಿ, ಕಾರ್ಯದರ್ಶಿಯಾಗಿ ಸ್ಮಿತಾ ಚಂಗಪ್ಪ ಮತ್ತು ವಲಯ ಸೇನಾನಿಯಾಗಿ ಕೆ. ವಸಂತ್ ಕುಮಾರ್ ನೇಮಕಗೊಂಡಿದ್ದಾರೆ. ರೋಟರಿ ವುಡ್ಸ್ ಸಂಸ್ಥೆಗೆ 5 ನೇ ವರ್ಷದ ಅಧ್ಯಕ್ಷೆಯಾಗಿ ಪ್ರಮೀಳಾ ಶೆಟ್ಟಿ ಕಾರ್ಯದರ್ಶಿಯಾಗಿ ಸ್ಮಿತಾ ಚಂಗಪ್ಪ ಆಯ್ಕೆ ಮೂಲಕ ರೋಟರಿ ವುಡ್ಸ್ ಮೊದಲ ಬಾರಿಗೆ ಮಹಿಳಾ ಅಧ್ಯಕ್ಷೆ, ಕಾರ್ಯದರ್ಶಿಯನ್ನು ಪಡೆದುಕೊಂಡ ಹಿರಿಮೆಗೆ ಪಾತ್ರವಾಗಿದೆ. ರೋಟರಿ ವುಡ್ಸ್, ಮತ್ತು ಆಲೂರು ಸಿದ್ದಾಪುರ ರೋಟರಿ ಸಂಸ್ಥೆಗಳಿಗೆ ರೋಟರಿ ವುಡ್ಸ್ ಮಾಜಿ ಅಧ್ಯಕ್ಷ ಕೆ. ವಸಂತ್ ಕುಮಾರ್ ವಲಯ ಸೇನಾನಿಯಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೆ ಪದಗ್ರಹಣ ಸಮಾರಂಭ ಜೂ.27 ರಂದು ಸಂಜೆ 6.30ಕ್ಕೆ ಮಡಿಕೇರಿ ಕೊಡವ ಸಮಾಜದಲ್ಲಿ ಆಯೋಜಿತವಾಗಿದೆ. ಬೆಂಗಳೂರು ರೋಟರಿ ಸಂಸ್ಥೆ ಮಾಜಿ ಗವರ್ನರ್ ಎಲಿಜಬೆತ್ ಚೆರಿಯನ್ ಪದಗ್ರಹಣ ನೆರವೇರಿಸಲಿದ್ದು, ರೋಟರಿ ಸಹಾಯಕ ಗವರ್ನರ್ ಎಂ.ಡಿ. ರಂಗಸ್ವಾಮಿ, ಪಿ.ಎಂ. ಧಿಲನ್ ಚಂಗಪ್ಪ, ವಲಯ ಸೇನಾನಿಗಳಾದ ಕೆ. ವಸಂತ್ ಕುಮಾರ್ ಕೆ.ಸಿ.ಕಾರ್ಯಪ್ಪ, ನಿರ್ಗಮಿತ ಅಧ್ಯಕ್ಷ ಕಿರಣ್ ಕುಂದರ್ ಪಾಲ್ಗೊಳ್ಳಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

• **ಸುಳ್ಯ:** ಸರಕಾರಿ ಉನ್ನತೀಕರಿಸಿದ ಹಿ.ಪ್ರಾ.ಶಾಲೆ ಕೋಲ್ಚಾರಿನಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಿಸಲಾಯಿತು. ಕಾರ್ಯಕ್ರಮವನ್ನು ಸುಳ್ಯ ನ್ಯಾಯಾಲಯದ ನ್ಯಾಯಾಧೀಶ ಸಿ. ಚಿರಾಗ್ ಉದ್ಘಾಟಿಸಿದರು. ಶಾಲಾ ಪಾಲನಾ –ಅಭಿವೃದ್ಧಿ ಸಮಿತಿ ಅಧ್ಯಕ್ಷ ಕರುಣಾ ಕರ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಭಾಸ್ಕರ ಪಿ. ರಾವ್ ಬಾಲ ಕಾರ್ಮಿಕ ಪದ್ಧತಿ ದುಷ್ಪರಿಣಾಮ, ಮಕ್ಕಳ ಹಕ್ಕುಗಳು, ಶಿಕ್ಷಣದ ಮಹತ್ವ ಹಾಗೂ ಬಾಲಕಾರ್ಮಿಕರನ್ನು ತಡೆಗಟ್ಟಲು ಜಾರಿಯಲ್ಲಿರುವ ಕಾನೂನುಗಳ ಬಗ್ಗೆ ಮಾಹಿತಿ ನೀಡಿದರು. ಸುಕುಮಾರ್ ಕೋಡ್ತುಗುಳಿ, ಸರಕಾರಿ ಅಭಿಯೋಜಕಿ ಪ್ರೀತಿ ಎಂ.ಸಿ., ಧರ್ಮಪಾಲ ಕೊಯಿಂಗಾಜೆ, ಮುಖ್ಯ ಶಿಕ್ಷಕ ಚಿನ್ನಸ್ವಾಮಿ ಶೆಟ್ಟಿ ಉಪಸ್ಥಿತರಿದ್ದರು. ಶಿಕ್ಷಕ. ರಂಗನಾಥ ಎಂ.ಎಸ್. ಸ್ವಾಗತಿಸಿ ಜಲಜಾಕ್ಷಿ ನಿರೂಪಿಸಿದರು.

ಕರ್ನಾಟಕ ರಾಜ್ಯ ಕಾಂಗ್ರೆಸ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಕೆ. ಹರಿಪ್ರಸಾದ್ ಅವರು ಪ್ರಥಮ ಬಾರಿಗೆ ಮಂಗಳೂರಿಗೆ ಆಗಮಿಸಿದ ಸಂದರ್ಭ ಮಂಗಳೂರಿನ ಸರ್ಕಿಟ್ ಹೌಸ್‌ನಲ್ಲಿ ಅಖಿಲ ಭಾರತ ಬಿಲ್ಲವರ ಯೂನಿಯನ್ ಅಧ್ಯಕ್ಷ ನವೀನ್ ಚಂದ್ರ ಸುವರ್ಣ ಅವರು ಭೇಟಿಯಾಗಿ ಅಭಿನಂದಿಸಿದರು. ಯೂನಿಯನ್ ಪದಾಧಿಕಾರಿಗಳಾದ ಉದಯ ಚಂದ್ರ ಡಿ.ಸುವರ್ಣ, ಲೋಕನಾಥ್ ಅಮೀನ್, ಕೆ.ಟಿ. ಸುವರ್ಣ, ಯೋಗೀಶ್ ಕುಮಾರ್, ಹರ್ಷನ್ ಸುವರ್ಣ, ಜಯಪ್ರಕಾಶ್ ಮತ್ತು ಕೀರ್ತನ್ ಉಪಸ್ಥಿತರಿದ್ದರು.

ಸಾಲಿಗ್ರಾಮ ಪಟ್ಟಣ ಪಂಚಾಯತ್: ಬೀದಿ ನಾಯಿಗಳಿಗೆ ಆಹಾರ ಹಾಕುವ ಸ್ಥಳ ನಿಗದಿ

• **ಉಡುಪಿ:** ಸಾಲಿಗ್ರಾಮ ಪ.ಪಂ.ನ 16 ವಾರ್ಡ್ ಗಳಲ್ಲಿ, ಬೀದಿನಾಯಿಗಳಿಗೆ ಆಹಾರ ಹಾಕಲು ಸ್ಥಳ ಗುರುತಿಸಲಾಗಿದೆ.

ವಾರ್ಡ್‌ಗಳ ವಿವರ : ವಾರ್ಡ್ ನಂಬ್ರ: 1–ಪಡುಕೆರೆ–ಪಡುಕೆರೆ ಸ್ಪಂದನ ಹತ್ತಿರ, ವಾರ್ಡ್ ನಂಬ್ರ: 2–ವಿಷ್ಣುಮೂರ್ತಿ – ಸಾಲಿಗ್ರಾಮ ಪಟ್ಟಣ ಪಂಚಾಯತ್ ಮುಂಭಾಗ, ವಾರ್ಡ್ ನಂಬ್ರ: 3 ಗೆಂಡೆಕೆರೆ – ಗೆಂಡೆಕೆರೆ ಸ್ಮಶಾನ ಹತ್ತಿರ, ವಾರ್ಡ್ ನಂಬ್ರ: 4 ತೋಡ್ಕಟ್ಟು– ತೋಡ್ಕಟ್ಟು ಕೆರೆ ಹತ್ತಿರ, ವಾರ್ಡ್ ನಂಬ್ರ: 5 ಕಾರ್ಕಟ್ಟು–ಬೆಲ್ಲದ ಗಣಪತಿ ದೇವಸ್ಥಾನದ ಹತ್ತಿರ, ವಾರ್ಡ್ ನಂಬ್ರ: 6 ಮಾರಿಗುಡಿ– ರೋಟರಿ ಬಿಲ್ಡಿಂಗ್ ಹತ್ತಿರ, ವಾರ್ಡ್ ನಂಬ್ರ: 7 ಪೇಟೆ– ಮೀನು ಮಾರುಕಟ್ಟೆ ಹತ್ತಿರ, ವಾರ್ಡ್ ನಂಬ್ರ: 8 ಬಡಾಹೋಳಿ– ಗುರುಧಾಮ ಸಭಾಭವನ ಹತ್ತಿರ, ವಾರ್ಡ್ ನಂಬ್ರ: 9 ಮೂಡೋಳಿ–ಪ್ರಾ. ಆರೋಗ್ಯ ಕೇಂದ್ರ ಹತ್ತಿರ ಕಾರ್ಕಡ, ವಾರ್ಡ್ ನಂಬ್ರ: 10 ತೆಂಕುಹೋಳಿ– ನೆಲ್ಲಿಬೆಟ್ಟು 2ನೇ ಕ್ರಾಸ್ ಹತ್ತಿರ, ವಾರ್ಡ್ ನಂಬ್ರ: 11 ಪಡುಹೋಳಿ– ಪಡುಬೈಲ್ ಗದ್ದೆಬೈಲು ಹತ್ತಿರ, ವಾರ್ಡ್ ನಂಬ್ರ: 12 ಭಗವತಿ– ಭಗವತಿ ಸರ್ಕಲ್ ಹತ್ತಿರ, ವಾರ್ಡ್ ನಂಬ್ರ: 13 ಪಾತಾಳಬೆಟ್ಟು– ಗುಂಡ್ಮಿ ಬಸ್ ಸ್ಟ್ಯಾಂಡ್ ಹತ್ತಿರ, ವಾರ್ಡ್ ನಂಬ್ರ: 14 ದೊಡ್ಡನೆಬೆಟ್ಟು– ಗುಂಡ್ಮಿ ಪಾರ್ಕ್ ಹತ್ತಿರ, ವಾರ್ಡ್ ನಂಬ್ರ: 15 ಚೆಲ್ಲಮಕ್ಕಿ– ಚೆಲ್ಲಮಕ್ಕಿ ನಾಗಬನ ಹತ್ತಿರ ಹಾಗೂ ವಾರ್ಡ್ ನಂಬ್ರ: 16 ಯಕ್ಷಿಮಠ–ಯಕ್ಷಿಮಠ ದೇವಳ ಹತ್ತಿರದಲ್ಲಿ ಬೀದಿನಾಯಿಗಳಿಗೆ ಆಹಾರ ಹಾಕಲು ಸ್ಥಳವನ್ನು ಪ.ಪಂ.ವತಿಯಿಂದ ಗುರುತಿಸಲಾಗಿದೆ. ಬೀದಿನಾಯಿಗೆ ಆಹಾರ ಹಾಕಲು ಪಾತ್ರೆ ಸಹ ಇರಿಸಲಾಗಿದ್ದು, ಈ ಬಗ್ಗೆ ಆಸಕ್ತವುಳ್ಳವರು ಬೀದಿನಾಯಿಗೆ ಆಹಾರ ಹಾಕುವವರು ಸಾಲಿಗ್ರಾಮ ಪ.ಪಂ. ಕಚೇರಿಗೆ ತಮ್ಮ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಗುರುತಿನ ಚೀಟಿ ಪಡೆದುಕೊಂಡು ಪ.ಪಂ. ಗುರುತಿಸಿದ ಸ್ಥಳಗಳಲ್ಲಿ ಮಾತ್ರ ಬೀದಿನಾಯಿಗಳಿಗೆ ಆಹಾರ ಹಾಕಬೇಕು. ಮಾಹಿತಿಗೆ ಕಚೇರಿ ಸಮಯದಲ್ಲಿ ಆರೋಗ್ಯ

ಶ್ರೀಕ್ಷೇತ್ರ ಕೊಲ್ಲೂರಿಗೆ ಸಂಪರ್ಕಿಸುವ ಹೆದ್ದಾರಿ | ಜಿಲ್ಲಾಧಿಕಾರಿ ಭೇಟಿಗೆ ಆಗ್ರಹ

ರಸ್ತೆ ಸಮಸ್ಯೆಗೆ ಮುಕ್ತಿ ಸಿಗುವುದೆಂದು?

ಮೃತ್ಯು ಕೂಪದಂತಾಗಿದೆ

ಕಳೆದೊಂದು ತಿಂಗಳಿಂದ ಬೈಂದೂರು– ಕೊಲ್ಲೂರು ರಾಷ್ಟ್ರೀಯ ಹೆದ್ದಾರಿ ಪ್ರಯಾಣಿಕರ ಪಾಲಿಗೆ ಮೃತ್ಯುಕೂಪದಂತಾಗಿದೆ. ದ್ವಿಪಥ ರಸ್ತೆ ನಿರ್ಮಾಣಕ್ಕಾಗಿ ನಡೆಸಿದ ಅರೆಬರೆ ಕಾಮಗಾರಿಯಿಂದಾಗಿ ಕಿರು ಸೇತುವೆಗಳು ಕೊಚ್ಚಿಹೋಗಿದೆ. ಹೀಗಾಗಿ ಈ ಬಾರಿಯ ಮಳೆಗಾಲ ಕಳೆಯುವುದು ಕಷ್ಟ ಎನ್ನುವಂತಾಗಿದೆ

■ ಸಿದ್ದೇಶ್ ಶ್ಯಾನುಭಾಗ್, ಉದ್ಯಮಿ, ಯಳಜಿತ್

• **ಬೈಂದೂರು:** ದಕ್ಷಿಣ ಭಾರತದ ಪ್ರಸಿದ್ಧ ತೀರ್ಥಕ್ಷೇತ್ರ ಈ ಬಾರಿ ಹತ್ತು ಹಲವು ಕಾರಣಗಳಿಂದ ಸುದ್ದಿಯಲ್ಲಿದೆ. ರಾಷ್ಟ್ರಮಟ್ಟದ ಭಕ್ತರ ವಿಶೇಷ ಆಗಮನ ಒಂದೆಡೆಯಾದರೆ ಕೊಲ್ಲೂರು ಸಂಪರ್ಕ ಬೆಸೆಯುವ ಪ್ರಮುಖ ಹೆದ್ದಾರಿ ಸಣ್ಣ ಮಳೆಯಾದರೂ ಕೊಚ್ಚಿ ಹೋಗುತ್ತಿರುವ ಸುದ್ದಿ ಇನ್ನೊಂದೆಡೆಯಾಗಿದೆ.

ಬೈಂದೂರು– ಕೊಲ್ಲೂರು ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತದೆ. ಬೇಸಿಗೆಯಲ್ಲಿ ಕಾಮಗಾರಿ ಆರಂಭವಾದರೂ ಸಹ ಪಶ್ಚಿಮ ಘಟ್ಟದ ತಪ್ಪಲಿನ ಮಳೆಯ ಅಬ್ಬರ ಅಧಿಕವಾಗಿರುವ ಮುಂದಾಲೋಚನೆ ಇಲ್ಲದ ಪರಿಣಾಮ ಈ ಸಮಸ್ಯೆ ಉದ್ಭವಿಸಿದೆ. ಮಳೆಗಾಲದಲ್ಲಿ ಆಗುವ ಸಮಸ್ಯೆ ಕುರಿತು 'ಹೊಸದಿಗಂತ' ಸರಣಿ ವರದಿ ಮೂಲಕ ಬೆಳಕು ಚೆಲ್ಲಿದರೂ ಕೂಡ ಇಲಾಖೆ ಗಂಭೀರವಾಗಿ ಪರಿಗಣಿಸಿಲ್ಲ. ಹೀಗಾಗಿ ಈ ರಸ್ತೆ ದಿನಕ್ಕೊಂದು ಸಮಸ್ಯೆ ಹುಟ್ಟಿಹಾಕುತ್ತಿದೆ. ರಸ್ತೆಯ ಅವ್ಯವಸ್ಥೆಯಿಂದಾಗಿ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾದ ಬಳಿಕ ಒಂದಿಷ್ಟು ಕಡೆ ತರಾತುರಿಯಲ್ಲಿ ಕೆಲಸ ನಡೆಯುತ್ತಿದೆ. ಆದರೆ ನದಿಯ ಸಮೀಪ ಮತ್ತು ಹೆದ್ದಾರಿಯಲ್ಲಿ ಬೃಹತ್ ಯಂತ್ರಗಳ ಮೂಲಕ ಕಾಮಗಾರಿ ನಡೆಸುವಾಗ ಯಾವುದೇ ಸುರಕ್ಷತಾ ಕ್ರಮ ಅನುಸರಿಸುತ್ತಿಲ್ಲ. ಇದರಿಂದ ಹೆದ್ದಾರಿಯಲ್ಲಿ ಸಂಚರಿಸುವ ಪ್ರವಾಸಿಗರಿಗೆ ಯಾವುದೇ ಎಚ್ಚರಿಕೆ ಫಲಕಗಳಿಲ್ಲದೆ ಅಪಾಯ ಎದುರಾಗುವ ಸಾಧ್ಯತೆಗಳಿವೆ. ಹೆದ್ದಾರಿ ಕಾಮಗಾರಿ ನಡೆಸುವ ಹಲವಾರು ಸುರಕ್ಷಾ ನಿಯಮ ಅನುಸರಿಸಬೇಕಾದ ಜವಾಬ್ದಾರಿ ಗಳಿದ್ದರೂ ಕಾಮಗಾರಿ ಕಂಪನಿ ಮಾತ್ರ ನಿಯಮಗಳನ್ನು ಗಾಳಿಗೆ ತೂರಿದೆ. ಈ ಬಗ್ಗೆ ಅಧಿಕಾರಿಗಳು ಕೂಡ ಗಮನಹರಿಸುತ್ತಿಲ್ಲ. ಹೆದ್ದಾರಿಯಲ್ಲಿ ಸಂಚರಿಸುವ ಪ್ರತಿ ಪ್ರಯಾಣಿಕರ ಜೀವವೂ ಅಮೂಲ್ಯವಾದ ಕಾರಣ ಇಲಾಖೆ ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಮಾತ್ರವಲ್ಲದೆ ಕೊಲ್ಲೂರು–ರಾಣೆಬೆನ್ನೂರು ಹೆದ್ದಾರಿ ಕಾಮಗಾರಿ ಸಮರ್ಪಕವಾಗಿ ಪೂರ್ಣಗೊಳ್ಳಬೇಕಿದೆ.

ಜಿಲ್ಲಾಧಿಕಾರಿ ಭೇಟಿಗೆ ಹೆಚ್ಚಿದ ಆಗ್ರಹ

ಕೊಲ್ಲೂರು –ರಾಣೆಬೆನ್ನೂರು ಕರಾವಳಿ ಮತ್ತು ಮಲೆನಾಡು ಸಂಪರ್ಕ ಬೆಸೆಯುವ ಪ್ರಮುಖ ಹೆದ್ದಾರಿಯಾಗಿದೆ. ಈಗಿರುವ ಪರಿಸ್ಥಿತಿಯಲ್ಲಿ ಮಳೆಗಾಲದಲ್ಲಿ ಕೊಲ್ಲೂರು ರಸ್ತೆ ಸಂಪೂರ್ಣ ಬಂದ್ ಆಗುವ ಸಾಧ್ಯತೆ ಹೆಚ್ಚಿದೆ. ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುವ ಜೊತೆಗೆ ಕೊಲ್ಲೂರು ಸಂಪರ್ಕಿಸಬೇಕಾದರೆ ಸುತ್ತು ಬಳಸಿ ಬರಬೇಕಾಗುತ್ತದೆ. ಹೀಗಾಗಿ ಪವಿತ್ರ ತೀರ್ಥಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಸಮಸ್ಯೆಯಾಗುವ ಸಾಧ್ಯತೆ ಇರುವ ಕಾರಣ ಜಿಲ್ಲಾಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

ಹವಾಮಾನ ಆಧಾರಿತ ಬೆಳೆವಿಮೆ ಯೋಜನೆ

• **ಬಂಟ್ವಾಳ:** ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಬೆಳೆದ ರೈತರು ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ನಷ್ಟ ಪರಿಹಾರವನ್ನು ತುಂಬಿಕೊಡುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಜಾರಿಗೊಳಿಸಿದ ರಾಜ್ಯ ಸರಕಾರದ ಸಹಭಾಗಿತ್ವದ ಮಹತ್ವಾಕಾಂಕ್ಷಿ ಯೋಜನೆಯಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯನ್ನು 2026–27 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ತೋಟಗಾರಿಕೆ ಇಲಾಖೆ ಜಾರಿಗೊಳಿಸಿದ್ದು, ರೈತರು ಇದರ ಸದುಪಯೋಗ ಪಡೆವಂತೆ ಸಿದ್ಧಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಧ್ಯಕ್ಷ ಪ್ರಭಾಕರ ಪ್ರಭು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

• ಬೆಳೆ ಸಾಲ ಹೊಂದಿಲ್ಲದ ರೈತರು ಸಹ ಈ ಯೋಜನೆಯಡಿ ಪ್ರೀಮಿಯಂ ಮೊತ್ತ ಪಾವತಿಸಿ ಯೋಜನೆಯ ಸದುಪಯೋಗ ಪಡೆಯಬಹುದಾಗಿದ್ದು, ರೈತರು ತಾವು ಬೆಳೆದ ಬೆಳೆಗಳನ್ನು ಬೆಳೆ ಸಮೀಕ್ಷೆ ಮಾಡಿಸಬೇಕು ಹಾಗೂ ಫಾರ್ಮರ್ ಐಡಿ ಹೊಂದಿರಬೇಕು ಅಡಿಕೆ ಬೆಳೆಗೆ ಸಂಬಂಧಿಸಿದಂತೆ ಎಕರೆ ಒಂದಕ್ಕೆ ರೂ. 2591 ಮತ್ತು ಕರಿಮೆಣಸು ಎಕರೆ ಒಂದಕ್ಕೆ ರೂ.951 ವಿಮೆ ಕಂತು ಪಾವತಿಸಬೇಕಾಗುತ್ತದೆ ಎಂದವರು ಮಾಹಿತಿ ನೀಡಿದ್ದಾರೆ. ಈ ಯೋಜನೆಯ ನೋಂದಾವಣೆಗೆ ಜು. 31 ಕೊನೆಯ ದಿನಾಂಕವಾಗಿದ್ದು, ಬೆಳೆಸಾಲ ಪಡೆದಿರುವ ಎಲ್ಲಾ ರೈತ ಬಾಂಧವರು ಜಮೀನಿನ ಆರ್.ಟಿ.ಸಿ ಯೊಂದಿಗೆ ಆಧಾರ್ ಕಾರ್ಡ್, ಬ್ಯಾಂಕ್ ಪುಸ್ತಕ, ಸಾಮಿನಿ ಆಧಾರ್‌ನೊಂದಿಗೆ ನಿಗದಿತ ಅವಧಿಯೊಳಗೆ ತಮ್ಮ ಕಾರ್ಯ ವ್ಯಾಪ್ತಿಯ ಪ್ರಾ.ಕೃ.ಪತ್ತಿನ ಸಹಕಾರ ಸಂಘದ ಕಚೇರಿ ಸಂಪರ್ಕಿಸಿ ಬೆಳೆವಿಮೆ ಯೋಜನೆ ಪ್ರಯೋಜನ ಪಡೆಯಬೇಕೆಂದು ಸಿದ್ಧಕಟ್ಟೆ ಪ್ರಾ. ಕೃ. ಪ. ಸ. ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಪ್ರಕಟಣೆಯ ಮೂಲಕ ರೈತರಿಗೆ ವಿನಂತಿ ಮಾಡಿದ್ದಾರೆ.

ವಿಟ್ಲದಲ್ಲಿ ಸ್ವಯಂಸೇವಕರ ತರಬೇತಿ ಕಾರ್ಯಾಗಾರ

'ಶೌರ್ಯ' ಸೇವೆ ದೇಶಸೇವೆಗೆ ಸಮಾನ

ಶೌರ್ಯ ತಂಡದ ಸದಸ್ಯರು ವಿಪತ್ತು ನಿರ್ವಹಣಾ ಸಂದರ್ಭ ತಮ್ಮ ಜೀವದ ಸುರಕ್ಷತೆ ಬಗ್ಗೆ ವಿಶೇಷ ಗಮನದಲ್ಲಿಟ್ಟು ಕಾರ್ಯ ಮಾಡಬೇಕು.

■ ರತನ್ , ಸಬ್ ಇನ್‌ಸ್ಪೆಕ್ಟರ್

• **ಬಂಟ್ವಾಳ:** ಶೌರ್ಯ ಧರ್ಮಸ್ಥಳ ವಿಪತ್ತು ನಿರ್ವಹಣಾ ಸಮಿತಿ ತಂಡದ ಕೆಲಸವು ಸೇವಾ ಮನೋಭಾವದಿಂದ ಕೂಡಿದ್ದು, ಇವರ ಈ ಸೇವೆಯು ದೇಶಸೇವೆಗೆ ಸಮಾನವಾದದು, ಸೈನಿಕನು ಗಡಿ ರಕ್ಷಿಸಿದರೆ ಸೇವಾ ಮನೋಭಾವ ಹೊಂದಿರುವ ಶೌರ್ಯ ತಂಡದ ಸದಸ್ಯರು ತಮ್ಮ ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ತಮ್ಮ ಸೇವೆಯ ಮೂಲಕ ಸಮಾಜವನ್ನು ಸರಿಪಡಿಸುತ್ತಿದ್ದೀರಿ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಕಮಾಂಡರ್ ಶಾಂತಿಲಾಲ್ ಜಟಿಯ ಹೇಳಿದ್ದಾರೆ.

ಮಂಗಳವಾರ ವಿಟ್ಲ ಅಕ್ಷಯ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವಿಟ್ಲ, ಕಾಸರಗೋಡು ಹಾಗೂ ಮಂಜೇಶ್ವರ ತಾಲೂಕು ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಸಮಿತಿಯ ಸ್ವಯಂಸೇವಕರ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿಟ್ಲ ಪೊಲೀಸ್ ಠಾಣಾ ಸಬ್ ಇನ್‌ಸ್ಪೆಕ್ಟರ್ ರತನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶೌರ್ಯ ತಂಡದ ಸದಸ್ಯರು ವಿಪತ್ತು ನಿರ್ವಹಣಾ ಸಂದರ್ಭ ತಮ್ಮ ಜೀವದ ಸುರಕ್ಷತೆ ಬಗ್ಗೆ ವಿಶೇಷ ಗಮನದಲ್ಲಿಟ್ಟು ಕಾರ್ಯ ಮಾಡಬೇಕಲ್ಲದೆ ತಮ್ಮ ಗ್ರಾಮದಲ್ಲಿ ನಡೆಯುವ ಸಮಾಜ ವಿರೋಧೀ ಕೆಲಸಗಳನ್ನು ತಡೆಗಟ್ಟುವಲ್ಲಿ ಪೊಲೀಸ ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು.

ಗ್ರಾಮಾಭಿವೃದ್ಧಿ ಯೋಜನೆ ದಕ್ಷಿಣ ಕನ್ನಡ ಜಿಲ್ಲಾ ಒಂದರ ನಿರ್ದೇಶಕ ಬಾಬು ನಾಯ್ಕ್, ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಸಮಿತಿಯ ರಚನೆಯ ಉದ್ದೇಶ ಹಾಗೂ ಅದರ ಕಾರ್ಯ ಸ್ವರೂಪಗಳ ಬಗ್ಗೆ ಮಾಹಿತಿ ನೀಡಿದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ತಾ. ಅಧ್ಯಕ್ಷ ರಾಜಾರಾಮ್ ಶೆಟ್ಟಿ, ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಕೇಂದ್ರ ಒಕ್ಕೂಟ ಅಧ್ಯಕ್ಷ ನವೀನ್ ಚಂದ್ರ, ಗೌಡರ ಯಾನೆ ಒಕ್ಕಲಿಗರ ಸಂಘ ಅಧ್ಯಕ್ಷ ಕುಶಾಲಪ್ಪ ಗೌಡ, ವಿಟ್ಲ ಪೊಲೀಸ್ ಠಾಣಾ ಸಿಬ್ಬಂದಿ ಹರೀಶ್, ಶೌರ್ಯ ವಿಪತ್ತು ನಿರ್ವಹಣಾ ವಿಭಾಗದ ಯೋಜನಾಧಿಕಾರಿ ಜೈವಂತ್ ಪಟಗಾರ, ಕಾಸರಗೋಡು ತಾಲೂಕು ಯೋಜನಾಧಿಕಾರಿ ದಿನೇಶ್ ಮತ್ತಿತರರಿದ್ದರು.

ಬಳಿಕ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸದಸ್ಯರಾದ ಸುಭಾಷ್ ಶಿಂಧೆ ನೇತೃತ್ವ ತಂಡದಿಂದ ತುರ್ತು ಸಂದರ್ಭ ದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ಪ್ರಾತ್ಯಕ್ಷತೆಗಳ ಮೂಲಕ ತರಬೇತಿ ನೀಡಿದರು.

ವಿಟ್ಲ, ಕಾಸರಗೋಡು, ಮಂಜೇಶ್ವರ, ಯೋಜನಾ ಕಚೇರಿ ವ್ಯಾಪ್ತಿಯ ಶೌರ್ಯ ವಿಪತ್ತು ನಿರ್ವಹಣಾ ತಂಡದ ಮಾಸ್ಟರ್, ಕ್ಯಾಪ್ಟನ್ ಗಳನ್ನು ಆಯ್ಕೆ ಮಾಡಲಾಯಿತು. ವಿಟ್ಲ ಯೋಜನಾ ಧಿಕಾರಿ ಸುರೇಶ್ ಗೌಡ ಸ್ವಾಗತಿಸಿ, ಮಂಜೇಶ್ವರ ತಾ.ಯೋಜನಾ ಧಿಕಾರಿ ಶಶಿಕಲಾ ಸುವರ್ಣ ವಂದಿಸಿದರು. ಜನಜಾಗೃತಿ ಮೇಲ್ವಿಚಾರಕ ನಿತೇಶ್ ಕೆ. ನಿರೂಪಿಸಿದರು.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆ ಅಗತ್ಯ:ಪಾರ್ವತಿ ಐತಾಳ್

» **ಮಾತೃಭಾಷೆಯ ಜೊತೆಗೆ ಬೇರೆ ಭಾಷೆಗಳನ್ನು ಕಲಿತರೆ ಲೋಕ ಜ್ಞಾನವನ್ನು ಬೇಗನೆ ತಿಳಿದುಕೊಳ್ಳಬಹುದು.**

» **ಬದುಕಿನ ಆಳ-ಆಗಲಗಳನ್ನು ಅರ್ಥಮಾಡಿಕೊಳ್ಳಲು ಸಾಹಿತ್ಯದ ಅಗತ್ಯವಿದೆ.**

• **ಕೋಟ:** ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯಪುಸ್ತಕದ ಪಾಠದೊಂದಿಗೆ ಪಾಠೇತರ ಚಟುವಟಿಕೆಗಳು ಅತೀ ಅಗತ್ಯವಾಗಿದೆ ಎಂದು ಲೇಖಕಿ ಪಾರ್ವತಿ ಜಿ. ಐತಾಳ್ ಅವರು ಅಭಿಪ್ರಾಯಪಟ್ಟರು.

ಅವರು ಇಲ್ಲಿನ ಕೋಟದ ವಿವೇಕ ಬಾಲಿಕಾ ಪ್ರೌಢಶಾಲೆಯ ಸಾಹಿತ್ಯ ಸಂಘವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮಾತೃಭಾಷೆಯ ಜೊತೆಗೆ ಬೇರೆ ಭಾಷೆಗಳನ್ನು ಕಲಿತರೆ ಲೋಕ ಜ್ಞಾನ ಬೇಗನೆ ತಿಳಿದುಕೊಳ್ಳಬಹುದು. ಕನ್ನಡದಂತೆಯೇ ಬೇರೆ ಭಾಷೆಗಳ ವ್ಯಾಕರಣ ಸರಿಯಾಗಿ ಕಲಿತರೆ ಮಾತ್ರ ಒಂದು ಭಾಷೆಯ ಸಾಹಿತ್ಯ ಇನ್ನೊಂದು ಭಾಷೆಗೆ ಯಶಸ್ವಿಯಾಗಿ ಅನುವಾದಿಸಲು ಸಾಧ್ಯವಾಗುತ್ತದೆ. ಬದುಕಿನ ಆಳ-ಆಗಲಗಳನ್ನು ಅರ್ಥಮಾಡಿಕೊಳ್ಳಲು ಸಾಹಿತ್ಯದ ಅಗತ್ಯವಿದೆ. ವಿದ್ಯಾರ್ಥಿಗಳು ಮಕ್ಕಳ ಸಾಹಿತ್ಯ, ಮಕ್ಕಳ ಸಾಹಿತ್ಯ ಸಮ್ಮೇಳನಗಳ ಮೂಲಕ ಸಿಗುವ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಹೆಚ್ಚಿದ ಮೊಬೈಲ್ ಒಲವು

ಸಾಹಿತ್ಯವು ನಾವು ಹೇಗೆ ಬದುಕಬೇಕು ಮತ್ತು ಹೇಗೆ ಬದುಕಬಾರದು ಎಂಬುದನ್ನು ಕಲಿಸಿಕೊಡುತ್ತದೆ ಎಂದ ಅವರು, ಹಿಂದಿನ ಕಾಲದಲ್ಲಿ ಪೋಷಕರು ಕಥೆಗಳನ್ನು ಹೇಳುವುದರ ಮೂಲಕ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುತ್ತಿದ್ದರು. ಆದರೆ ಇಂದು ಮೊಬೈಲ್ ಹವ್ಯಾಸಕ್ಕೆ ಬದ್ಧರುವ ವಿದ್ಯಾರ್ಥಿಗಳು ಸಾಹಿತ್ಯದ ಕಡೆಗೆ ಗಮನ ಕೊಡುತ್ತಿಲ್ಲದಿರುವುದು ಅತ್ಯಂತ ವಿಷಾದಕರ ಸಂಗತಿ. ಪ್ರತಿ ಶಾಲೆಯೂ ಸಾಹಿತ್ಯ ಸಂಘಗಳ ಮೂಲಕ ವಿದ್ಯಾರ್ಥಿಗಳಲ್ಲಿ ಕಥೆ, ಕವನ ಹಾಗೂ ನಾಟಕಗಳನ್ನು ಬರೆಯುವ ಆಸಕ್ತಿಯನ್ನು ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಮಾಲಿನಿ ರಮೇಶ್ ಅವರು ನಾಡ ಗೀತ ಗಾಯನವನ್ನು ಪ್ರಸ್ತುತಪಡಿಸಿದರು. ಶಾಲೆಯ ಮುಖ್ಯ ಶಿಕ್ಷಕ ವೆಂಕಟೇಶ್ ಉಡುಪ ಸ್ವಾಗತಿಸಿದರು.

ವೇದಿಕೆಯಲ್ಲಿ ಸಾಹಿತ್ಯ ಸಂಘದ ಸಂಚಾಲಕಿ ಮಹಾಲಕ್ಷ್ಮಿ ಹಾಗೂ ಕಾರ್ಯದರ್ಶಿ ಕುಮಾರಿ ಅನಘಾ ಎಮ್. ಹೊಳ್ಳ ಉಪಸ್ಥಿತರಿದ್ದರು. ಸೃಷ್ಟಿ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅದಾನಿ ಫೌಂಡೇಶನ್‌ನಿಂದ ಆಯೋಜನೆ | 206 ಯುನಿಟ್ ರಕ್ತ ಸಂಗ್ರಹ

'ಗೋ-ರೆಡ್' ಹೆಸರಿನಲ್ಲಿ ಬೃಹತ್ ರಕ್ತದಾನ ಶಿಬಿರ

ಹೆಮ್ಮೆಯ ವಿಷಯ

ಅದಾನಿ ಸಿಬ್ಬಂದಿ ವರ್ಗದ ಸ್ವಯಂ ಪ್ರೇರಿತರಾಗಿ ನೀಡುತ್ತಿರುವ ರಕ್ತದಾನ ಉಡುಪಿ, ಮಂಗಳೂರು ಜಿಲ್ಲಾ ಆಸ್ಪತ್ರೆಗಳ ರಕ್ತನಿಧಿ ಗಳಿಗೆ ಹೆಚ್ಚಿನ ಸಹಕಾರವಾಗಿದೆ. ಇಂತಹ ಕಾರ್ಯಕ್ರಮ ಇಡೀ ಪ್ರದೇಶಕ್ಕೆ ಹೆಮ್ಮೆಯ ವಿಷಯ.

■ ಡಾ. ಶರತ್ ಕುಮಾರ್

• **ಉಡುಪಿ:** ಅದಾನಿ ಪವರ್ ಲಿಮಿಟೆಡ್ – ಉಡುಪಿ ಟಿಪಿಪಿ ವತಿಯಿಂದ ತನ್ನ ಸಾಮಾಜಿಕ ಹೊಣೆಗಾರಿಕೆ ಜವಾಬ್ದಾರಿ (ಸಿಎಸ್ಆರ್) ಕಾರ್ಯಕ್ರಮದಡಿ ಗೋ–ರೆಡ್ ಹೆಸರಿನಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಎಲ್ಲೂರು ಗ್ರಾಮದ ತನ್ನ ಸ್ಥಾವರದಲ್ಲಿ ಯಶಸ್ವಿಯಾಗಿ ಆಯೋಜಿಸಿತು.

ಅದಾನಿ ಸಮೂಹದ ಸ್ಥಾಪಕರು ಹಾಗೂ ಅಧ್ಯಕ್ಷ ಗೌತಮ್ ಅದಾನಿ ಅವರ 64ನೇ ಜನ್ಮದಿನದ ಅಂಗವಾಗಿ ಆಯೋಜಿಸಲಾದ ಈ ಮಹತ್ವದ ಕಾರ್ಯಕ್ರಮದಲ್ಲಿ ಅದಾನಿ ಸಿಬ್ಬಂದಿ ವರ್ಗ, ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದರು.

ರಕ್ತದಾನ ಶಿಬಿರವನ್ನು ದೀಪ ಬೆಳಗಿಸುವ ಮೂಲಕ ವೆನ್‌ಲಾಕ್ ವೈದ್ಯಾಧಿಕಾರಿ ಡಾ. ಶರತ್ ಕುಮಾರ್, ಉಡುಪಿ ಜಿಲ್ಲಾಸ್ಪತ್ರೆಯ ಡಾ. ವೀಣಾ ಕುಮಾರಿ, ಅದಾನಿ ಸಮೂಹದ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕರ ನಿರ್ದೇಶಕ ಕಿಶೋರ್ ಆಳ್ವ, ಸಂಸ್ಥೆಯ ಹಿರಿಯ ಅಧಿಕಾರಿಗಳು ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರು ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಕಿಶೋರ್ ಆಳ್ವ, ಜೂನ್ 24ರ ದಿನ ಇಡೀ ಅದಾನಿ ಕುಟುಂಬಕ್ಕೆ ವಿಶೇಷ ಮಹತ್ವ ಹೊಂದಿದೆ. ದೇಶಾದ್ಯಂತ ಇರುವ ಅದಾನಿ ಸಮೂಹದ ಎಲ್ಲಾ ಘಟಕಗಳಲ್ಲಿ ಗೌತಮ್ ಅದಾನಿ ಅವರ ಜನ್ಮದಿನವನ್ನು ಮಾನವೀಯ ಸೇವೆಯ ಸಂಕೇತವಾಗಿ ಆಚರಿಸಲು ಗೋ–ರೆಡ್ ಕಾರ್ಯಕ್ರಮದ ಮೂಲಕ ಸಾವಿರಾರು ನೌಕರರು ಒಂದಾಗಿ ರಕ್ತದಾನ ಮಾಡುತ್ತಾರೆ. ರಕ್ತದಾನ ಮಾನವೀಯತೆಯ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿಗಳಲ್ಲೊಂದಾಗಿದ್ದು, ಈ ಉಪಕ್ರಮ ಆರೋಗ್ಯಕರ, ಕಾಳಜಿಯುಳ್ಳ ಸಮಾಜ ನಿರ್ಮಾಣಕ್ಕೆ ನಮ್ಮ ಕೊಡುಗೆ ಬಲಪಡಿಸುತ್ತದೆ ಎಂದರು.

ಡಾ. ಶರತ್ ಕುಮಾರ್ , ಅದಾನಿ ಸಮೂಹದ ನಿರಂತರ ಸೇವಾಚಟುವಟಿಕೆಗಳ ಶ್ಲಾಘಿಸಿ, ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಅದಾನಿ ಸಮೂಹವು ಇಂತಹ ರಕ್ತದಾನ ಶಿಬಿರಗಳನ್ನು ನಿರಂತರವಾಗಿ ಆಯೋಜಿಸುತ್ತಿದೆ ಎಂದರು.

ರಕ್ತದಾನ ಶಿಬಿರದಲ್ಲಿ ಒಟ್ಟು 206 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ಪುತ್ತೂರು–ಉಪ್ಪಿನಂಗಡಿ ರಸ್ತೆಯ ಹಾರಾಡಿಯ ರೈಲ್ವೆ ಬ್ರಿಡ್ಜ್ ಕಾಮಗಾರಿ ವೀಕ್ಷಣೆ

ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಶಾಸಕರ ಸೂಚನೆ

• **ಪುತ್ತೂರು:** ಪುತ್ತೂರು–ಉಪ್ಪಿನಂಗಡಿ ಚತುಷ್ಪಥ ರಸ್ತೆ ಅಭಿವೃದ್ಧಿಯ ಭಾಗವಾಗಿ ಹಾರಾಡಿ ರೈಲ್ವೇ ಮೇಲ್ಸೇತುವೆಯ ಕೆಳಭಾಗದಲ್ಲಿ ರಸ್ತೆ ಬಂದ್ ಮಾಡಿ ನಡೆಯುತ್ತಿರುವ ಕಾಂಕ್ರೀಟ್ ಕಾಮಗಾರಿಯನ್ನು ಮಂಗಳವಾರ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಪರಿಶೀಲನೆ ನಡೆಸಿ ಶೀಘ್ರ ಕಾಮಗಾರಿ ಮುಗಿಸಿ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸುವಂತೆ ಸೂಚಿಸಿದರು.

ಸ್ಥಳದಲ್ಲಿದ್ದ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ಮಾಹಿತಿ ಪಡೆದುಕೊಂಡ ಶಾಸಕರು, ಜೂ.25ರೊಳಗೆ ವೆಟ್‌ಮಿಕ್ಸ್ ಕಾಮಗಾರಿಯನ್ನು ಪೂರ್ತಿಗೊಳಿಸಿ, ಜೂ.29ರೊಳಗೆ ಕಾಂಕ್ರೀಟ್ ಕಾಮಗಾರಿ ಮುಗಿಸಿ 12 ದಿನಗಳ ಕ್ಯೂರಿಂಗ್ ಬಳಿಕ ರಸ್ತೆಯನ್ನು ಲಘು ವಾಹನ ಸಂಚಾರಕ್ಕೆ ಮುಕ್ತಗೊಳಿಸುವಂತೆ ಸೂಚಿಸಿದರು.

ರಸ್ತೆ ಬಂದ್ ಮಾಡಿರುವುದರಿಂದ ಶಾಲೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸ್ಥಳೀಯರು ಶಾಸಕರ ಗಮನಕ್ಕೆ ತಂದರು. ರಸ್ತೆ ಮುಚ್ಚಿದರೆ ಎಲ್ಲರಿಗೂ ಸಮಸ್ಯೆಯಾಗಲಿದ್ದು, ಆದರೆ ಇದು ಅನಿವಾರ್ಯವಾಗಿದೆ. ಹೊಂಡ ಬಿದ್ದರೂ ಬೈಯುತ್ತೀರಿ ಎಂದು ಶಾಸಕರು ಹೇಳಿದಾಗ, ಅಭಿವೃದ್ಧಿಯಾಗುವಾಗ ನಾವು ಬೈಯುವುದಿಲ್ಲ. ಕಾಮಗಾರಿ ಬೇಗ ಆಗಬೇಕೆನ್ನುವುದು ನಮ್ಮ ಒತ್ತಾಯವಾಗಿದೆ ಎಂದು ಸ್ಥಳೀಯರು ಪ್ರತಿಕ್ರಿಯಿಸಿದರು.

ಈ ವೇಳೆ ಶಾಸಕರು ಪತ್ರಕರ್ತರ ಜತೆ ಮಾತನಾಡಿ, ಹಾರಾಡಿ ಮೇಲ್ಸೇತುವೆ ಬಳಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ವೇಗಕ್ಕೆ ಸಂಬಂಧಿಸಿ ಹಲವು ಮಂದಿ ಕರೆ ಮಾಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳನ್ನು ಕರೆಸಿ ಸ್ಥಳ ಪರಿಶೀಲನೆ ಮಾಡಿ ಟಾರ್ಗೆಟ್ ನೀಡುವ ಕಾರ್ಯ ಮಾಡಿದ್ದೇನೆ. ಜೂ. 29ರೊಳಗೆ ಕಾಂಕ್ರೀಟ್ ಕಾಮಗಾರಿ ಮುಗಿಸಿ 15 ದಿನಗಳಗೆ ವಾಹನ ಸಂಚಾರಕ್ಕೆ ಅವಕಾಶ ನೀಡಲು ಸೂಚಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಪುತ್ತೂರು ಎಇಇ ರಾಜೇಶ್ ರೈ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಆಸ್ಪತ್ರೆಯಲ್ಲಿ ಬಿದ್ದು ವ್ಯಕ್ತಿ ಮೃತ್ಯು

ಅಲಂಕಾರು: ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ತನ್ನ ಸಹೋದರಿಯ ಆರೋಗ್ಯ ವಿಚಾರಿಸಲು ತೆರಳಿದ್ದ ತಮ್ಮ ಆಸ್ಪತ್ರೆಯ ಅಂಗಳದಲ್ಲಿ ಜಾರಿ ಬಿದ್ದು ಸಾವಿಗೀಡಾದ ಘಟನೆ ಜೂ23ರಂದು ತಡ ರಾತ್ರಿ ಮಂಗಳೂರಿನಲ್ಲಿ ಸಂಭವಿಸಿದೆ.

ಅಲಂಕಾರು ಗ್ರಾಮದ ಕೇಪುಳು ನಿವಾಸಿ ಲಿಂಗಪ್ಪ ಪೂಜಾರಿಯವರ ಪುತ್ರ ಶಿವರಾಮ ಕೆ. (42) ಸಾವನ್ನಪ್ಪಿದ ದುರ್ದೈವಿ. ಮೃತರು ಉಪ್ಪಿನಂಗಡಿ ಸೂರ್ಯ ಆಸ್ಪತ್ರೆಯ ಸ್ಕ್ಯಾನ್ ಸೆಂಟರ್‌ನ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಜೂ.23ರ ಬುಧವಾರ ಮಧ್ಯಾಹ್ನದ ವೇಳೆ ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ತನ್ನ ಸಹೋದರಿಯ ಆರೋಗ್ಯ ವಿಚಾರಿಸಲೆಂದು ತೆರಳಿದ್ದರು. ಆಸ್ಪತ್ರೆಯಲ್ಲಿ ಸಹೋದರಿಯೊಂದಿಗೆ ಮಾತುಕತೆ ನಡೆಸಿ ಹಿಂತಿರುಗುವ ವೇಳೆ ಆಸ್ಪತ್ರೆಯ ಅಂಗಳದ ಇಂಟರ್ ಲಾಕ್‌ನಲ್ಲಿ ಹಿಮ್ಮುಖವಾಗಿ ಜಾರಿ ಬಿದ್ದು ತಲೆಗೆ ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣ ಸ್ಥಳೀಯರು ಸೇರಿ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿ ಮನೆಗೆ ಹಿಂತಿರುಗುವ ದಾರಿ ಮಧ್ಯೆ ಗಾಯಾಳುವಿನ ಆರೋಗ್ಯದಲ್ಲಿ ತೀವ್ರ ಏರುಪೇರಾದ ಹಿನ್ನೆಲೆಯಲ್ಲಿ ಮತ್ತೆ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಗಾಯಾಳು ಬುಧವಾರ ರಾತ್ರಿ ವೇಳೆ ಸಾವನ್ನಪ್ಪಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ತಂದೆ, ತಾಯಿಯನ್ನು ಅಗಲಿದ್ದಾರೆ.

ಮಹಿಳೆ ನಾಪತ್ತೆ

ಕುಂಬಳೆ: ಸೀತಾಂಗೋಳಿ ಕ್ವಾರ್ಟರ್ಸ್‌ನಿಂದ ಮಹಿಳೆಯೋರ್ವೆ ನಾಪತ್ತೆಯಾದ ಬಗ್ಗೆ ತಿಳಿದುಬಂದಿದೆ. ಬೀವರೇಜಸ್ ಮದ್ಯದಂಗಡಿ ಬಳಿಯ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿದ್ದ ಜುನು ನರ್ಸಾರಿ (23) ಎಂಬಾಕೆ ನಾಪತ್ತೆಯಾಗಿದ್ದು, ಮಂಗಳವಾರ ಬೆಳಗ್ಗೆ ಕ್ವಾರ್ಟರ್ಸ್‌ನಿಂದ ತೆರಳಿದ್ದರು. ಆದರೆ ಮರಳಿ ಬಂದಿಲ್ಲವೆನ್ನಲಾಗಿದೆ. ಇದರಿಂದ ವಿವಿಧೆಡೆ ಹುಡುಕಾಡಿದರೂ ಪತ್ತೆಯಾಗದ ಹಿನ್ನೆಲೆಯಲ್ಲಿ ಆಕೆಯ ಪತಿ ನಿತಿನ್ ನರ್ಸಾರಿ ಅವರು ಕುಂಬಳೆ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿ ಶೋಧ ಮುಂದುವರಿಸಿದ್ದಾರೆ.

ಸ್ಕೂಟಿ ಬೆಂಕಿಗಾಹುತಿ: ಗಾಯಾಳು ಸಾವು

ಬೆಳ್ತಂಗಡಿ: ಬೆಳಾಲು ಮಿನಂದೇಲು ಬಳಿ ಸ್ಕೂಟಿಯೊಂದು ನಡು ರಸ್ತೆಯಲ್ಲಿ ಹೊತ್ತಿ ಉರಿದ ಘಟನೆ ಜೂ.12 ರಂದು ನಡೆದಿತ್ತು. ಸ್ಕೂಟರ್ ಚಲಾಯಿಸುತ್ತಿದ್ದ ಮಾಜಿ ಸೈನಿಕ ಮೋಹನ್ ಗೌಡ ಕಾಡಂಡ ಅವರು ಪುತ್ರ ದಿಯಾನ್ ಅವರನ್ನು ಕರೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಸ್ಕೂಟಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಈ ವೇಳೆ ಗಾಯಗೊಂಡಿದ್ದ ದಿಯಾನ್ ಅವರನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಜೂ.24 ರಂದು ನಿಧನರಾಗಿದ್ದಾರೆ.

ಚರಣ್ ರಾಜ್ ಗೂಂಡಾ ಕಾಯ್ದೆಯಡಿ ಬಂಧನ

ಉಡುಪಿ: ಉಡುಪಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಆರೋಪಿ ಚರಣ್ ರಾಜ್ (29) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಉಡುಪಿ ಜಿಲ್ಲಾಧಿಕಾರಿಯವರು ಜೂನ್ 24ರಂದು ಆದೇಶ ಹೊರಡಿಸಿದ್ದಾರೆ. ಉಡುಪಿ ಎಸ್ಪಿ ಅವರ ವರದಿಯ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದ್ದು, ಆರೋಪಿಯನ್ನು ಶಿವಮೊಗ್ಗ ಕೇಂದ್ರ ಕಾರಾಗೃಹದಲ್ಲಿ ಇರಿಸಲು ಆದೇಶಿಸಲಾಗಿದೆ. ಬಂಟ್ವಾಳ ತಾಲೂಕಿನ ಪುದು ಗ್ರಾಮದ ನಿವಾಸಿಯಾದ ಚರಣ್ ರಾಜ್ ವಿರುದ್ಧ ಉಡುಪಿ ನಗರ, ಬಂಟ್ವಾಳ ಗ್ರಾಮಾಂತರ, ಸುರತ್ಕಲ್ ಮತ್ತು ಮಂಗಳೂರು ಪೂರ್ವ ಪೊಲೀಸ್ ಠಾಣೆಗಳಲ್ಲಿ ಕೊಲೆಯತ್ನ, ಹಲ್ಲೆ, ಮಹಿಳೆಯರ ಮೇಲಿನ ದೌರ್ಜನ್ಯ, ಡ್ರಗ್ಸ್ ಸಾಗಾಟ ಹಾಗೂ ಎಸ್.ಸಿ./ಎಸ್.ಟಿ ಕಾಯ್ದೆ ಸೇರಿದಂತೆ ಒಟ್ಟು 10 ಗಂಭೀರ ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 3 ಪ್ರಕರಣಗಳಲ್ಲಿ ಈತನಿಗೆ ಈಗಾಗಲೇ ಶಿಕ್ಷೆಯಾಗಿದ್ದು, ಉಳಿದ ಪ್ರಕರಣಗಳು ವಿಚಾರಣೆ ಮತ್ತು ತನಿಖಾ ಹಂತದಲ್ಲಿವೆ.



ನಿಧನ ಸುದ್ದಿ

ಕೃಷ್ಣನಾಯಕ್

ಮಂಗಳೂರು: ದ.ಕ.ಜಿಲ್ಲಾ ಉಪಖಜಾನಾಧಿಕಾರಿಯಾಗಿ ನಿವೃತ್ತ ಉದ್ಯೋಗಿ, ಗಾಳದಕೊಂಕಣಿ ಸಮುದಾಯದ ಹಿರಿಯರು, ನಗರದ ಮಣ್ಣಗುಡ್ಡೆ ನಿವಾಸಿ ಕೃಷ್ಣ ನಾಯಕ್ ಮಣ್ಣಗುಡ್ಡೆ (86) ಅವರು ಸುದೀರ್ಘ ಕಾಲದ ಅಸೌಖ್ಯದಿಂದ ಜೂ.23 ರಂದು ರಾತ್ರಿ ಸ್ವಗೃಹದಲ್ಲಿ ನಿಧನ ಹೊಂದಿದರು. ನಿವೃತ್ತಿಯ ಬಳಿಕ ಸಾಮಾಜಿಕ, ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಅವರು ಗಾಳದಕೊಂಕಣಿ ಅಭ್ಯುದಯ ಸಂಘದ ಸದಸ್ಯರಾಗಿ ಸಮುದಾಯದ ಶ್ರೇಯೋಭಿವೃದ್ಧಿಗೂ ಶ್ರಮಿಸಿದ್ದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಗಾಳದಕೊಂಕಣಿ ಅಭ್ಯುದಯ ಸಂಘ ಹಾಗೂ ಶ್ರೀಕ್ಷೇತ್ರ ಸೋಮನಾಥ ಉಳಿಯ ಆಡಳಿತ ಸಮಿತಿ ಸಂತಾಪ ಸೂಚಿಸಿದೆ. ಹಲವಾರು ಗಣ್ಯರು, ಸಂಘದ ಪದಾಧಿಕಾರಿಗಳು ಅಂತಿಮ ದರ್ಶನ ಪಡೆದರು.



ಉಮೇಶ್

ಬದಿಯಡ್ಕ: ನೀರ್ಚಾಲು ಸಮೀಪದ ಪುದುಕೋಳಿ ಪರಿಶಿಷ್ಟ ಜಾತಿ ಉನ್ನತಿಯ ನಿವಾಸಿ ಉಮೇಶ್ (34) ನಿಧನ ಹೊಂದಿದರು. ಅಸೌಖ್ಯ ಬಾಧಿಸಿದ್ದ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಬಾಲಕೃಷ್ಣ ಮತ್ತು ಲಕ್ಷ್ಮಿ ದಂಪತಿಯ ಪುತ್ರನಾದ ಮೃತರು ಸಹೋದರ ಅಭಿಲಾಷ್ ಅವರನ್ನು ಅಗಲಿದ್ದಾರೆ.

ಹಾರಾಡಿ: ಹರ್ಷಿತ್ ಕುಟುಂಬಕ್ಕೆ 99ನೇ ಉಚಿತ ಮನೆ 'ಯಶೋದಾಕೃಷ್ಣ ಲೋಕಾರ್ಪಣೆ

ಯಕ್ಷಗಾನ ಕಲಾರಂಗದ ಕೊಡುಗೆ ಅದ್ಭುತ

ಉಡುಪಿ: ಯಕ್ಷಗಾನ ಕಲಾರಂಗದ ವಿದ್ಯಾಪೋಷಕ್ ಯೋಜನೆಯಡಿ ಆಶ್ರಯ ಪಡೆದಿರುವ ದ್ವಿತೀಯ ಪಿಯುಸಿಯ ಪ್ರತಿಭಾವಂತ ಬಡ ವಿದ್ಯಾರ್ಥಿ ಹರ್ಷಿತ್ ಕುಟುಂಬಕ್ಕೆ ಬ್ರಹ್ಮಾವರ ತಾಲೂಕಿನ ಹಾರಾಡಿಯ ಮೂಡು ಕುಕ್ಕುಡೆಯಲ್ಲಿ ನಿರ್ಮಿಸಲಾದ ನೂತನ ಮನೆ 'ಯಶೋದಾಕೃಷ್ಣ' ಜೂನ್ 23ರಂದು ಅತ್ಯಂತ ಯಶಸ್ವಿಯಾಗಿ ಹಸ್ತಾಂತರಗೊಂಡಿತು. ಸಂಸ್ಥೆಯ ಸರಣಿಯಲ್ಲಿ ಇದು 99ನೇ ಮನೆಯಾಗಿದೆ.

ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್‌ನ ಸೀನಿಯರ್ ಜನರಲ್ ಮ್ಯಾನೇಜರ್ ಬಿ. ನರಹರಿ ಹಾಗೂ ಅವರ ಸಹೋದರರು ತಮ್ಮ ತಾಯಿಯ ಶತಾಬ್ದಿ ಮಹೋತ್ಸವ ಮತ್ತು ಹೆತ್ತವರ ಸ್ಮರಣಾರ್ಥವಾಗಿ ಒಟ್ಟು 7 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಸುಸಜ್ಜಿತ ಮನೆಯನ್ನು ಪ್ರಾಯೋಜಿಸಿದ್ದಾರೆ.

ಬೆಳಕಾದ ಶಿಕ್ಷಣದ ಸಂದೇಶ

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಗೌತಮ್ ಪೈ ಅವರು ಮಾತನಾಡಿ, ಯಕ್ಷಗಾನ ಕಲಾರಂಗವು ಕಲೆಯ ಸಂರಕ್ಷಣೆ ಮಾತ್ರವಲ್ಲದೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಕಲಾವಿದರ ಕ್ಷೇಮಚಿಂತನೆಗೆ ನೀಡುತ್ತಿರುವ ಕೊಡುಗೆ ಅದ್ಭುತವಾದುದು. ವಿದ್ಯಾರ್ಥಿ ಹರ್ಷಿತ್ ಮುಂದೊಂದು ದಿನ ಇತರರಿಗೆ ಉದ್ಯೋಗ ಕೊಡುವಷ್ಟು ಎತ್ತರಕ್ಕೆ ಬೆಳೆಯಬೇಕು ಎಂದು ಹಾರೈಸಿದರು.

ಕಟೀಲು ದೇವಳದ ಆನುವಂಶಿಕ ಮೊಕ್ತೇಸರರಾದ ಶ್ರೀ ಹರಿನಾರಾಯಣದಾಸ ಅಸ್ರಣ್ಣರು ಆಶೀರ್ವಚನ ನೀಡಿ, ಮನೆ ಎಂಬುದು ಕೇವಲ ಆಶ್ರಯ ತಾಣವಲ್ಲ, ಮನುಷ್ಯನ ಇಷ್ಟಾರ್ಥಗಳನ್ನು ಈಡೇರಿಸುವ ಪವಿತ್ರ ಕೇಂದ್ರ. ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಕಲಾರಂಗದ ಪಾತ್ರ ಅನನ್ಯ ಎಂದರು.

ಪ್ರಾಯೋಜಕರಾದ ಬಿ. ನರಹರಿ ಅವರು ಮಾತನಾಡಿ, ಸಂಸ್ಥೆಯು ತಮ್ಮ ಹೆತ್ತವರ ನೆನಪಿನಲ್ಲಿ ಬಡವಿದ್ಯಾರ್ಥಿಗೆ ಆಸರೆಯಾಗುವ ಇಂತಹದೊಂದು ಪವಿತ್ರ ಅವಕಾಶ ಕಲ್ಪಿಸಿದ್ದು ನಮ್ಮ ಕುಟುಂಬವನ್ನು ಧನ್ಯರನ್ನಾಗಿಸಿದೆ ಎಂದರು. ಮಣಿಪಾಲ ಮೀಡಿಯಾ ಲಿಮಿಟೆಡ್‌ನ ನಿವೃತ್ತ ಅಧಿಕಾರಿ ನಾರಾಯಣ ಬಿ.ಕೆ. ಅವರು ತಮ್ಮ ತಾಯಿಯ ಪರಿಶ್ರಮ ಹಾಗೂ ಪೈ ಬಂಧುಗಳ ಔದಾರ್ಯವನ್ನು ಸ್ಮರಿಸಿದರು.

ಗಣ್ಯರ ಉಪಸ್ಥಿತಿ

ವೇದಿಕೆಯಲ್ಲಿ ಮಣಿಪಾಲ್ ಟೆಕ್ನಾಲಜೀಸ್‌ನ ಸಿ.ಇ.ಓ ಅಭಯ್ ಗುಪ್ತ, ಗ್ರೂಪ್ ಸಿ.ಎಚ್.ಆರ್.ಓ ಪ್ರಮೋದ್ ಫೆರ್ನಾಂಡಿಸ್, ಜ್ಯೋತಿ ನರಹರಿ, ಲೋಲಾಕ್ಷಿ ರತ್ನಾಕರ ಸೇರಿದಂತೆ ಬೈಕಾಡಿ ಕುಟುಂಬಸ್ಥರು ಹಾಗೂ ಮಣಿಪಾಲ್ ಗ್ರೂಪ್‌ನ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಯಕ್ಷಗಾನ ಕಲಾರಂಗದ ಉಪಾಧ್ಯಕ್ಷ ಎಸ್.ವಿ. ಭಟ್, ಕೋಶಾಧಿಕಾರಿ ಕೆ. ಸದಾಶಿವ ರಾವ್, ಜತೆಕಾರ್ಯದರ್ಶಿ ವಿದ್ಯಾಪ್ರಸಾದ್ ಹಾಗೂ ಸಂಸ್ಥೆಯ ಪ್ರಮುಖ ಸದಸ್ಯರು ಭಾಗವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿ, ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯ ದರ್ಶಿ ಮುರಲಿ ಕಡೆಕಾರ್ ಕಾರ್ಯಕ್ರಮ ನಿರೂಪಿಸಿದರು.

> ಯಕ್ಷಗಾನ ಕಲಾರಂಗವು ಕಲೆಯ ಸಂರಕ್ಷಣೆ ಮಾತ್ರವಲ್ಲದೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಕಲಾವಿದರ ಕ್ಷೇಮಚಿಂತನೆಗೆ ನೀಡುತ್ತಿರುವ ಕೊಡುಗೆ ಅದ್ಭುತವಾದುದು.
> ■ ಗೌತಮ್ ಪೈ

ಜೂ. 26ರಂದು ಬಾಳೇಪುಣಿ ದತ್ತಿನಿಧಿ ಪ್ರತಿಭಾ ಪುರಸ್ಕಾರ ವಿತರಣೆ

ಮಂಗಳೂರು: ಎಜುಕಾರುಣ್ಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಮಂಗಳೂರು ವತಿಯಿಂದ ಹಿರಿಯ ಪತ್ರಕರ್ತ ಗುರುವಪ್ಪ ಎನ್.ಟಿ. ಬಾಳೇಪುಣಿಯವರ ಸ್ಮರಣಾರ್ಥ ದತ್ತಿನಿಧಿ ಹಸ್ತಾಂತರ ಕಾರ್ಯಕ್ರಮ ಜೂ.26ರಂದು ಪೂರ್ವಾಹ್ನ 11 ಗಂಟೆಗೆ ಮಂಗಳೂರು ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಟ್ರಸ್ಟ್‌ನ ಅಧ್ಯಕ್ಷ ಮೋಹನ್ ದಾಸ್ ಮರಕಡ, ಕಳೆದ ವರ್ಷ ಮಂಗಳೂರಿನ ತ್ರಿಷಾ ಕಾಲೇಜಿನ ಧೃತಿ ಕುಂಜತ್ತಬೈಲ್ ಹಾಗೂ ಕೆನರಾ ಕಾಲೇಜಿನ ಮೇಘಾ ಸಚಿವ ಅವರಿಗೆ ದತ್ತಿನಿಧಿ ನೀಡಲಾಗಿದೆ. ಈ ಬಾರಿ ಈ ಇಬ್ಬರಿಗೆ ಮುಂದುವರಿಸುವ ಜೊತೆಗೆ ಸಂತ ಅಲೋಶಿಯಸ್ ಕಾಲೇಜಿನ ಬಿಸಿಎ ವಿದ್ಯಾರ್ಥಿನಿ ತ್ರಿಷಾ ಪಚ್ಚನಾಡಿ, ಕೆನರಾ ಕಾಲೇಜಿನ ಶ್ರೀಜಾ ಶೆಟ್ಟಿ, ಬಿ.ಸಿ.ರೋಡಿನ ಶೋಭಿತಾ, ದಡ್ಡಲಕಾಡು ಶಾಲೆಯ ಪ್ರಾಪ್ತಿ, ಕಲ್ಲಡ್ಕ ಶ್ರೀರಾಮ ಪದವಿಪೂರ್ವ ಕಾಲೇಜಿನ ಶ್ರೇಯಾ ಮತ್ತು ವಾಮದಪದವು ಸರ್ಕಾರಿ ಪದವಿಪೂರ್ವ ಕಾಲೇಜಿನ ರಕ್ಷಿತ್ ಅವರಿಗೆ ನೀಡಲಾಗುವುದು. ಒಟ್ಟು 1.50 ಲಕ್ಷ ರೂ. ಮೊತ್ತದ ದತ್ತಿನಿಧಿ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ ಖಾದರ್ . ಉದ್ಯಮಿ ರಾಧಾಕೃಷ್ಣ ಉಮಿಯ, ಮೂಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ನರಿಂಗಾನ ಕಂಬಳೋತ್ಸವ ಸಮಿತಿಯ ಅಧ್ಯಕ್ಷ ಪ್ರಶಾಂತ್ ಕಾಜವ, ಉದ್ಯಮಿ ನಿತಿನ್ ಪೂಜಾರಿ ಕಾವೂರು, ಜಿಲ್ಲಾ ವಾರ್ತಾಧಿಕಾರಿ ಬಿ.ಎ ಖಾದರ್ ಶಾ, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ ಹರೀಶ್ ರೈ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು ಭಾಗವಹಿಸಲಿದ್ದಾರೆ ಎಂದವರು ತಿಳಿಸಿದರು.

ಬಾಳೇಪುಣಿ ದತ್ತಿನಿಧಿ ಆರಂಭಿಸಿದಾಗಿನಿಂದ ನವೀನ್ ಎಲ್.ಆರ್ ಗಾಂಧಿನಗರ ಕಾವೂರು, ಗುರುಪ್ರಸಾದ್ ಬಂಗೇರ ಗಾಂಧಿನಗರ ಕೈಜೋಡಿಸಿದ್ದರು. ಕಳೆದ ವರ್ಷ ಉದ್ಯಮಿ ರಾಧಾಕೃಷ್ಣ ಉಮಿಯ, ಮೂಡಾ ಅಧ್ಯಕ್ಷ ಸದಾಶಿವ ಉಳ್ಳಾಲ್ ಅವರು ಆರ್ಥಿಕ ಸಹಕಾರ ನೀಡಿದ್ದರು. ಇದರ ಜೊತೆಗೆ ಹಲವಾರು ಪತ್ರಕರ್ತ ಮಿತ್ರರು ಜೋಡಿಸಿಕೊಂಡಿದ್ದರು. ಇವರೆಲ್ಲರ ಸಹಕಾರದಿಂದ ದೊಡ್ಡ ಮೊತ್ತವನ್ನು ತಲುಪಿಸಲು ಸಾಧ್ಯವಾಗುತ್ತಿದೆ. ಬಾಳೇಪುಣಿ ದತ್ತಿನಿಧಿಗೆ ಸಹಕಾರ ನೀಡ ಬಯಸುವವರು 9901319694 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಎಜುಕಾರುಣ್ಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ರಮೇಶ್ ಶೆಟ್ಟಿ ವಿವೇಕನಗರ, ಟ್ರಸ್ಟಿಗಳಾದ ಪ್ರಶಾಂತ್ ಅಬ್ಬೆಟ್ಟು, ದಿನೇಶ್ ನಾಯ್ಕ

ಬಾಳೇಪುಣಿಯವರ ಆಪ್ತರಾದ ನವೀನ್ ಗಾಂಧಿನಗರ, ವಿದ್ಯಾರ್ಥಿಗಳಾದ ಶ್ರೀಜಾ ಶೆಟ್ಟಿ ಅಬ್ಬೆಟ್ಟು ಮೇಘಾ ಸಚಿವ ಉಪಸ್ಥಿತರಿದ್ದರು.

ಕೇಂದ್ರ ಸಹಕಾರ ಸಚಿವಾಲಯವು ಸ್ಥಾಪನೆಯಾಗಿ 5 ವರ್ಷ

ಜೂ.29ರಂದು ವಿಶೇಷ ಸಹಕಾರ ಸಪ್ತಾಹ ಉದ್ಘಾಟನೆ

ಮಂಗಳೂರು : ರಾಷ್ಟ್ರದ ಸಹಕಾರ ಚಳುವಳಿಗೆ 122 ವರ್ಷಗಳ ಭವ್ಯ ಇತಿಹಾಸವಿದೆ. ವಿಶ್ವದಲ್ಲಿ ಅತ್ಯುತ್ತಮ ಸಹಕಾರ ಚಳುವಳಿಯನ್ನು ನಮ್ಮ ರಾಷ್ಟ್ರ ಹೊಂದಿರುತ್ತದೆ. ಸಹಕಾರ ತತ್ವದ ಮೂಲಕ ಸಮಾಜದ ಎಲ್ಲಾ ವರ್ಗದ ಆರ್ಥಿಕ ಬೆಳವಣಿಗೆಗೆ ಸಹಕಾರಿ ಕ್ಷೇತ್ರವೇ ಭದ್ರ ಬುನಾದಿಯಾಗಿದೆ. ಪ್ರಸ್ತುತ ಕೇಂದ್ರ ಸಹಕಾರ ಸಚಿವಾಲಯವು ಸ್ಥಾಪನೆಯಾಗಿ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ 'ವಿಶೇಷ ಸಹಕಾರ ಸಪ್ತಾಹವನ್ನು ಜೂ. 29ರಿಂದ ಜು. 6ರವರೆಗೆ ಭಾರತದಾದ್ಯಂತ ಆಚರಿಸಲು ಕೇಂದ್ರ ಸಹಕಾರ ಸಚಿವಾಲಯ ನಿರ್ಧರಿಸಿದೆ. ಈ ವಿಶೇಷ ಸಹಕಾರ ಸಪ್ತಾಹವನ್ನು 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯವಾಕ್ಯದೊಂದಿಗೆ ಅರ್ಥಪೂರ್ಣವಾಗಿ ರಾಜ್ಯದೆಲ್ಲೆಡೆ ಆಚರಿಸಲು ನಿರ್ಧರಿಸಲಾಗಿದೆ.

ಜೂ. 29ರಂದು ಉದ್ಘಾಟನೆ

ಜೂ. 29ರಂದು ಪೂರ್ವಾಹ್ನ 10.30 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಪ್ರಧಾನ ಕಚೇರಿಯ ಸಭಾಂಗಣದಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯವಾಕ್ಯದೊಂದಿಗೆ ವಿಶೇಷ ಸಹಕಾರ ಸಪ್ತಾಹದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಮಂಗಳೂರು, ಸಹಕಾರ ಇಲಾಖೆ, ದಕ್ಷಿಣ ಕನ್ನಡ – ಇವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಗಣ್ಯರಿಂದ ಉದ್ಘಾಟನೆ

ವಿಶೇಷ ಸಹಕಾರ ಸಪ್ತಾಹ ಆಚರಣೆಯ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ಇದರ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ವಹಿಸಲಿರುವರು. ಸಮಾರಂಭದ ಉದ್ಘಾಟನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ಕ್ಯಾ. ಬ್ರಿಜೇಶ್ ಚೌಟ ನೆರವೇರಿಸಲಿರುವರು. ಸಹಕಾರ ಸಪ್ತಾಹದ ಧ್ವಜಾರೋಹಣವನ್ನು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ವೇದವ್ಯಾಸ್ ಡಿ. ಕಾಮತ್ ನೆರವೇರಿಸಲಿರುವರು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ರವಿರಾಜ್ ಹೆಗ್ಡೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು ಇದರ ನಿರ್ದೇಶಕ ಜಯಕರ ಶೆಟ್ಟಿ ಬಿ. ಇಂದ್ರಾಳಿ, ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕ ಹೆಚ್. ಎನ್. ರಮೇಶ್ ಭಾಗವಹಿಸಲಿರುವರು.

ಈ ವಿಶೇಷ ಸಹಕಾರ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಉಭಯ ಜಿಲ್ಲೆಗಳ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಮಾರಂಭವನ್ನು ಯಶಸ್ವಿಗೊಳಿಸುಂತೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೋಟ್ಟು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಎ ಫೈನಲ್ ಪರೀಕ್ಷೆ | ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜ್

ತ್ರಿಶಾ ಕ್ಲಾಸಸ್ ವಿದ್ಯಾರ್ಥಿಗಳ ಸಾಧನೆ

ಮಂಗಳೂರು: ಹೊಸದಿಲ್ಲಿಯ ಲೆಕ್ಕಪರಿಶೋಧಕರ ಸಂಸ್ಥೆ (ಐಸಿಎಐ) ಮೇ 2026ರಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ತ್ರಿಶಾ ಕ್ಲಾಸಸ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಶ್ರೀಕರ್ ಎಂ.ಶೆಟ್ಟಿ ಉತ್ತೀರ್ಣರಾಗಿದ್ದು, ಇವರು ಉಡುಪಿಯ ಮನೋಜ್ ಎನ್. ಶೆಟ್ಟಿ ಹಾಗೂ ಶುಭ ಎಂ. ಶೆಟ್ಟಿ ದಂಪತಿಯ ಪುತ್ರ. ತಮ್ಮ ಆರ್ಟಿಕಲ್ ಶಿಪ್‌ನ್ನು ಉಡುಪಿಯ ದೇವ್ ಆನಂದ್ ಎಂಡ್ ಕೋ.ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎಫೌಂಡೇಶನ್, ಇಂಟರ್‌ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಅಚ್ಯುತ ಎಸ್. ಕಾಮತ್ ಉತ್ತೀರ್ಣರಾಗಿದು, ಇವರು ಉಡುಪಿಯ ಎಂ. ಶೇಷಗಿರಿ ಕಾಮತ್ ಹಾಗೂ ಸೌಮ್ಯ ಎಸ್.ಕಾಮತ್ ದಂಪತಿಯ ಪುತ್ರ. ತಮ್ಮ ಆರ್ಟಿಕಲ್ ಶಿಪ್‌ನ್ನು ಉಡುಪಿಯ ಪೈ ನಾಯಕ್ ಎಂಡ್ ಅಸೋಸಿಯೇಟ್ಸ್‌ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎಫೌಂಡೇಶನ್, ಇಂಟರ್‌ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಕ್ಷಿತೀಜ ಶೆಟ್ಟಿ ಎಂ.ಸಿ. ಉತ್ತೀರ್ಣರಾಗಿದ್ದು, ಇವರು ಉಡುಪಿಯ ಬಿ. ಚಂದ್ರಶೇಖರ್ ಶೆಟ್ಟಿ ಹಾಗೂ ಪ್ರೇಮ ಸಿ. ಶೆಟ್ಟಿ ದಂಪತಿಯ ಪುತ್ರಿ. ತಮ್ಮ ಆರ್ಟಿಕಲ್ ಶಿಪ್‌ನ್ನು ಉಡುಪಿಯ ಸಿಎ ಸುರೇಂದ್ರ ನಾಯಕ್ ಎಂಡ್ ಅಸೋಸಿಯೇಟ್ಸ್‌ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎ ಫೌಂಡೇಶನ್, ಇಂಟರ್‌ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಪ್ಯಾಟ್ರಿಕ್ ಲೋಬೊ ಅವರು ಉತ್ತೀರ್ಣರಾಗಿದ್ದು, ಇವರು ಬೈಂದೂರು ಪೌಲ್ ಲೋಬೊ ಹಾಗೂ ಗ್ರೇಟ್ಟ ಲೋಬೊ ದಂಪತಿಯ ಪುತ್ರ. ತಮ್ಮ ಆರ್ಟಿಕಲ್ ಶಿಪ್‌ನ್ನು ಬೆಂಗಳೂರಿನ ವಿ. ಎಂ. ಎಸ್. ಜುಂಜುನ್ ವಾಲಾ ಎಂಡ್ ಕೋ.ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎ ಫೌಂಡೇಶನ್, ಇಂಟರ್ ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಆಶಿಶ್ ಶೆಟ್ಟಿ ಅವರು ಉತ್ತೀರ್ಣರಾಗಿದ್ದು, ಇವರು ಶಿರೂರು ದಿನೇಶ್ ಶೆಟ್ಟಿ ಹಾಗೂ ಅನಿತಾ ಶೆಟ್ಟಿ ದಂಪತಿಯ ಪುತ್ರ. ತಮ್ಮ ಆರ್ಟಿಕಲ್ ಶಿಪ್‌ನ್ನು ಮಂಗಳೂರಿನ ನಿತಿನ್ ಜೆ. ಶೆಟ್ಟಿ ಎಂಡ್ ಕೋ.ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎಫೌಂಡೇಶನ್, ಇಂಟರ್ ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಅನಘ ಶೆಟ್ಟಿ ಅವರು ಉತ್ತೀರ್ಣರಾಗಿದ್ದು, ಇವರು ಕೋಟೇಶ್ವರ ರವಿರಾಜ್ ಶೆಟ್ಟಿ ಹಾಗೂ ವೀಣಾ ಆರ್. ಶೆಟ್ಟಿ ದಂಪತಿಯ ಪುತ್ರಿ. ತಮ್ಮ ಆರ್ಟಿಕಲ್ ಶಿಪ್‌ನ್ನು ಮಂಗಳೂರಿನ ನಿತಿನ್ ಜೆ. ಶೆಟ್ಟಿ ಎಂಡ್ ಕೋ.ನಲ್ಲಿ ಪೂರೈಸಿಕೊಂಡಿದ್ದಾರೆ. ಸಿಎ ಫೌಂಡೇಶನ್, ಇಂಟರ್ ಮೀಡಿಯಟ್ ತರಬೇತಿಯನ್ನು ತ್ರಿಶಾ ಕ್ಲಾಸಸ್‌ನಲ್ಲಿ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕಟಪಾಡಿಯ ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜಿನಲ್ಲಿ ಪಡೆದುಕೊಂಡಿದ್ದಾರೆ.

ಉಡುಪಿ: ಎಸ್ಸೆಸ್ಸೆಲ್ಸಿ, ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ನಾಳೆ 'ಪ್ರತಿಭಾ ಪುರಸ್ಕಾರ'

ಉಡುಪಿ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಉಡುಪಿ ಜಿಲ್ಲಾ ಸಂಸ್ಥೆ ಹಾಗೂ ಪರ್ಯಾಯ ಶಿರೂರು ಮಠದ ಜಂಟಿ ಆಶ್ರಯದಲ್ಲಿ, ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕೂ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವು ಜೂನ್ 26ರಂದು ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾ ಮುಖ್ಯ ಆಯುಕ್ತ ಇಂದ್ರಾಳಿ ಜಯಕರ ಶೆಟ್ಟಿ ತಿಳಿಸಿದ್ದಾರೆ.

1,200 ವಿದ್ಯಾರ್ಥಿಗಳಿಗೆ ಪುರಸ್ಕಾರ

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಜಿಲ್ಲೆಯ ಸುಮಾರು 1,200 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಪುರಸ್ಕಾರವು ಪ್ರಶಸ್ತಿ ಪತ್ರ ಹಾಗೂ 1,000 ನಗದು ಬಹುಮಾನವನ್ನು ಒಳಗೊಂಡಿರುತ್ತದೆ ಎಂದರು.

ಸಮಾರಂಭವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಹಾಗೂ ಮಾಜಿ ಸಚಿವ ಡಾ. ಪಿ.ಜಿ.ಆರ್. ಸಿಂಧ್ಯ ಉದ್ಘಾಟಿಸಲಿದ್ದಾರೆ. ಶಿರೂರು ಮಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಆಶೀರ್ವಚನ ನೀಡಲಿದ್ದಾರೆ. ಆರೋಗ್ಯ ಸಚಿವ ಯು.ಟಿ. ಖಾದರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಜೂನ್ 27ರಿಂದ ರಾಜ್ಯ ಮಟ್ಟದ ವಿಶೇಷ ಶಿಬಿರ

ಜೂನ್ 27ರಿಂದ ಜೂನ್ 29ರವರೆಗೆ ಅತ್ರಾಡಿ ವಂಡ್ಸೆಯ 'ವಿಜಯ ಮಕ್ಕಳ ಕೂಟ'ದಲ್ಲಿ 'ಏಕತಾ' ಸಾಮಾಜಿಕ ಸಾಮರಸ್ಯ ರಾಜ್ಯ ಮಟ್ಟದ ವಿಶೇಷ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಇಂದ್ರಾಳಿ ಜಯಕರ ಶೆಟ್ಟಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಜ್ಯೋತಿ ಜೆ. ಪೈ, ಜಿಲ್ಲಾ ಕಾರ್ಯದರ್ಶಿ ಆನಂದ ಬಿ. ಅಡಿಗ, ಜಿಲ್ಲಾ ಖಜಾಂಚಿ ಹರಿಪ್ರಸಾದ್ ರೈ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಸುಮನ ಶೇಖರ್ ಉಪಸ್ಥಿತರಿದ್ದರು.

ಜೂ. 28, ಆ. 2ರಂದು ಎಂಸಿಸಿ ಬ್ಯಾಂಕ್‌ನ ನೂತನ ಎರಡು ಶಾಖೆಗಳ ಉದ್ಘಾಟನೆ | ಗ್ರಾಹಕರ ಪೂರ್ಣ ಬೆಂಬಲ

ನಿವ್ವಳ ಮೌಲ್ಯ 91.80 ಕೋ.ರೂ.ಗೆ ಏರಿಕೆ : ಅನಿಲ್ ಲೋಬೊ

ಮಂಗಳೂರು: ಪ್ರತಿಷ್ಠಿತ ಬ್ಯಾಂಕ್‌ಗಳಲ್ಲಿ ಒಂದಾದ ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದು, 2026ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದಲ್ಲಿ ಎಲ್ಲ ಪ್ರಮುಖ ವ್ಯವಹಾರ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಬ್ಯಾಂಕ್ ಒಟ್ಟು ವ್ಯವಹಾರ ವಹಿವಾಟಿನಲ್ಲಿ ಶೇ.22.89 ಬೆಳವಣಿಗೆಯೊಂದಿಗೆ 1535 ಕೋಟಿ ರೂ. ಮೈಲಿಗಲ್ಲನ್ನು ತಲುಪಿದೆ ಎಂದು ಬ್ಯಾಂಕಿನ ಅಧ್ಯಕ್ಷ ಅನಿಲ್ ಲೋಬೊ ತಿಳಿಸಿದ್ದಾರೆ.

ಬುಧವಾರ ಬ್ಯಾಂಕಿನ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕಿನ ನಿವ್ವಳ ಮೌಲ್ಯ 83.76 ಕೋಟಿ ರೂನಿಂದ 91.80 ಕೋಟಿ ರೂ.ಏರಿಕೆಯಾಗಿದ್ದು, ಎನ್ ಆರ್‌ಐ ಗ್ರಾಹಕರ ಬೆಂಬಲ ಬ್ಯಾಂಕಿನ ಬೆಳವಣಿಗೆಗೆ ಪ್ರಮುಖ ಶಕ್ತಿಯಾಗಿದೆ ಎಂದರು.

ನೂತನ ಶಾಖೆಗಳ ಉದ್ಘಾಟನೆ

ಎಂಸಿಸಿ ಬ್ಯಾಂಕಿನ 22ನೇ ದೇರಳಕಟ್ಟೆ ಶಾಖೆಯನ್ನು ಜೂ.28ರಂದು ಹಾಗೂ 23ನೇ ಉಡುಪಿ ಕಟಪಾಡಿ ಶಾಖೆ ಆ.2ರಂದು ಉದ್ಘಾಟಿಸಲಾಗುವುದು. ದೇರಳಕಟ್ಟೆ ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾನೀರ್ ಅವರ್ ಲೇಡಿ ಆಫ್ ಮರ್ಸಿ ಚರ್ಚ್‌ನ ಧರ್ಮಗುರು ಫಾ.ವಿಕ್ಟರ್ ಡಿಮೆಲ್ಲೊ ಅವರು ಆಶೀರ್ವದಿಸಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಅರ್ಸುಲಾಯ್ನ್ ಫ್ರಾನ್ಸಿಸ್ಕನ್ ಸಭೆಯ ಸುಪೀರಿಯರ್ ಜನರಲ್ ಸಿಸ್ಟರ್ ಮಿಲ್ಲಿ ಫರ್ನಾಂಡಿಸ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇದೇ ವೇಳೆ ಬ್ಯಾಂಕಿನ 16ನೇ ಎಟಿಎಂ ಕೂಡ ಅಂದು ಉದ್ಘಾಟನೆಗೊಳ್ಳಲಿದೆ ಎಂದರು.

- ಬ್ಯಾಂಕ್ ಒಟ್ಟು ವ್ಯವಹಾರ ವಹಿವಾಟಿನಲ್ಲಿ ಶೇ.22.89 ಬೆಳವಣಿಗೆಯೊಂದಿಗೆ 1535 ಕೋಟಿ ರೂ.ಮೈಲಿಗಲ್ಲನ್ನು ತಲುಪಿದೆ.
- ಎನ್‌ಆರ್‌ಐ ಗ್ರಾಹಕರ ಬೆಂಬಲ ಬ್ಯಾಂಕಿನ ಬೆಳವಣಿಗೆಗೆ ಪ್ರಮುಖ ಶಕ್ತಿಯಾಗಿದೆ

ದಕ್ಷ ಆಡಳಿತ ಮಂಡಳಿ, ಸಮರ್ಪಿತ ಸಿಬ್ಬಂದಿ ಮತ್ತು ಸಮರ್ಥ ಕಾರ್ಯತಂತ್ರದ ಯೋಜನೆಯಿಂದ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿರುವ ಎಲ್ಲ ನಿಯಮಗಳನ್ನು ಯಶಸ್ವಿಯಾಗಿ ಪೂರೈಸಿದೆ. 22 ವರ್ಷಗಳ ನಂತರ ಬ್ಯಾಂಕ್ ಬ್ರಹ್ಮಾವರ, ಬೆಳ್ತಂಗಡಿ, ಬೆಳ್ಮಣ್, ಬೈಂದೂರು ಮತ್ತು ಸಂತೆಕಟ್ಟೆಯಲ್ಲಿ ಹೊಸ ಶಾಖೆಗಳನ್ನು ಆರಂಭಿಸುವ ಮೂಲಕ ವಿಸ್ತರಣೆಗೆ ಚಾಲನೆ ನೀಡಿದೆ. ಮೊರ್ಗನ್ಸ್‌ಗೇಟ್ ಶಾಖೆಯನ್ನು ಜು.25 ರಂದು, ಮೂಡುಬಿದರೆ ಶಾಖೆಯನ್ನು ಆ.22 ರಂದು ಸ್ಥಳಾಂತರಿಸಿ , ಕಾರ್ಕಳ ಶಾಖೆಯನ್ನು ಆ. 26ರಂದು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದು ಅನಿಲ್ ಲೊಬೋ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿಸಿಲ್ವಾ, ನಿರ್ದೇಶಕರಾದ ಆ್ಯಂಡ್ರ್ಯೂ ಡಿಸೋಜ, ಡಾ. ಜೆರಾಲ್ಡ್ ಪಿಂಟೊ, ಅನಿಲ್ ಪತ್ರಾವೊ, ಜೆ.ಪಿ. ರೊಡ್ರಿಗಸ್, ಡೇವಿಡ್ ಡಿಸೋಜ, ಎಲ್ರಾಯ್ ಕಿರಣ್ ಕ್ರಾಸ್ಟೊ, ಹೆರಾಲ್ಡ್ ಮೊಂತೇರೊ, ರೋಶನ್ ಡಿಸೋಜ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸಿ.ಜಿ. ಪಿಂಟೊ, ಸುಶಾಂತ್ ಸಲ್ಡಾನ್ಹಾ, ಐರಿನ್ ರೆಬೆಲ್ಲೊ, ಡಾ. ಫ್ರೀಡಾ ಡಿಸೋಜ, ಆಲ್ವಿನ್ ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಶರ್ಮಿಳಾ ಮಿನೇಜಸ್ ಹಾಗೂ ಪ್ರಧಾನ ವ್ಯವಸ್ಥಾಪಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QR ಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ಜಿಲ್ಲಾ ಪೋಲಿಯೋ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆ | ಅಪರ ಜಿಲ್ಲಾಧಿಕಾರಿ ಕರೆ

5 ವರ್ಷದೊಳಗಿನ ಪ್ರತಿಯೊಬ್ಬ ಮಕ್ಕಳಿಗೂ ತಪ್ಪದೆ ಲಸಿಕೆ ಹಾಕಿ

ಉಡುಪಿ: ಜಿಲ್ಲೆಯಾದ್ಯಂತ ಜೂ.28ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಅಭಿಯಾನದಡಿ 0–5 ವರ್ಷದೊಳಗಿನ ಪ್ರತಿಯೊಬ್ಬ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಬೇಕೆಂದು ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್ ಕರೆ ನೀಡಿದ್ದಾರೆ.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

665 ಬೂತ್‌ಗಳು ಕಾರ್ಯ ನಿರ್ವಹಿಸಲಿವೆ

ಜೂ.28 ರಂದು ಬೆಳಗ್ಗೆ 8ರಿಂದ ಸಂಜೆ 5 ರವರೆಗೆ ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲೆ ಎಲ್ಲಾ 0 ಯಿಂದ 5 ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಲಸಿಕೆ ಹಾಕಿಸಿದ್ದರೂ ಅಂದು ಪೋಲಿಯೋ ಲಸಿಕೆ ಹಾಕಿಸಬೇಕು ಎಂದರು. ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ 0–5 ವರ್ಷದೊಳಗಿನ ಒಟ್ಟು 65,401 ಮಕ್ಕಳನ್ನು ಗುರುತಿಸಲಾಗಿದೆ. 19 ಟ್ರಾನ್ಸಿಟ್, 3 ಮೊಬೈಲ್ ತಂಡಗಳು ಸೇರಿದಂತೆ ಒಟ್ಟು 665 ಬೂತ್‌ಗಳು ಕಾರ್ಯ ನಿರ್ವಹಿಸಲಿವೆ. 2660 ಲಸಿಕಾ ಕಾರ್ಯಕರ್ತರಿದ್ದು, 155 ಮೇಲ್ವಿಚಾರಕರನ್ನು ಲಸಿಕಾ ಕಾರ್ಯಕ್ಕೆ ನೇಮಿಸಲಾಗಿದೆ ಎಂದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ 1995 ಏರಿಂದ ಜಾರಿಗೆ ತರಲಾಗುತ್ತಿದೆ. ನಮ್ಮ ದೇಶ ದಲ್ಲಿ ಯಾವುದೇ ಒಂದು ಪ್ರಕರಣಗಳು ಸಹ ಕಂಡುಬಂದಿಲ್ಲ ಆದರೆ ನಮ್ಮ ನೆರೆಹೊರೆಯ ದೇಶಗಳಲ್ಲಿ ಪ್ರಕರಣ ಕಂಡುಬಂದ ಹಿನ್ನೆಲೆ, ನಮ್ಮಲ್ಲಿ ಸಹ ಪಲ್ಸ್ ಪೋಲಿಯೋ ಹಮ್ಮಿಕೊಳ್ಳಲಾಗಿದೆ ಎಂದರು.

ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಬೇಕು

ಪೋಲಿಯೋ ಬೂತ್ ತೆರೆಯಲು ಶಾಲಾ ಕೊಠಡಿಗಳು, ಅಂಗನವಾಡಿ ಕಟ್ಟಡಗಳು ಸೇರಿದಂತೆ ಅಗತ್ಯ ವಿರುವ ಇತರ ಸರ್ಕಾರಿ–ಅರೆ ಸರ್ಕಾರಿ ಕಟ್ಟಡಗಳ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಜೂ. 25ರಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮ ಮುಗಿಯುವವರೆಗೂ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂದು ಮೆಸ್ಕಾಂ ಇಲಾಖೆ ಅಧಿ ಕಾರಿಗಳು ಸೂಚಿಸಿದರು.

ಪೌರಾಯುಕ್ತ ಮಹಾಂತೇಶ ಹಂಗರಗಿ, ಜಿಲ್ಲಾ ಆರೋಗ್ಯ – ಕುಟುಂಬ ಕಲ್ಯಾಣ ಅಧಿ ಕಾರಿ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ಆರ್.ಸಿ.ಎಚ್ ಅಧಿ ಕಾರಿ ಡಾ. ಜ್ಯೋತ್ಸ್ನಾ ಬಿ.ಕೆ., ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ನಾಗರತ್ನ ವಿವಿಧ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಮತ್ತಿತರರು ಈ ಸಂದರ್ಭದಲ್ಲಿದ್ದರು.

> **ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಿ**
>
> ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಯಶಸ್ವಿಗೊಳಿಸಲು ಎಲ್ಲಾ ಇಲಾಖೆ ಗಳು ಸಮನ್ವಯದೊಂದಿಗೆ ಕಾರ್ಯ ನಿರ್ವ ಹಿಸಬೇಕು. ಆರೋಗ್ಯ ಇಲಾಖೆ ಸಿಬ್ಬಂದಿ ಗಳೂ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಪಾಲ್ಗೊಂಡು ಪ್ರತಿಶತಃ ನೂರರಷ್ಟು ಸಾಧನೆ ಮಾಡಬೇಕು.
>
> ● ಅಬೀದ್ ಗದ್ಯಾಳ್, ಎಡಿಸಿ

- 5 ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಲಸಿಕೆ ಹಾಕಿಸಿದ್ದರೂ ಅಂದು ಪೋಲಿಯೋ ಲಸಿಕೆ ಹಾಕಿಸಬೇಕು
- 155 ಮೇಲ್ವಿಚಾರಕರನ್ನು ಲಸಿಕಾ ಕಾರ್ಯಕ್ಕೆ ನೇಮಕ
- ಪೋಲಿಯೋ ಬೂತ್ ತೆರೆಯಲು ಶಾಲಾ ಕೊಠಡಿಗಳು, ಅಂಗನವಾಡಿ ಕಟ್ಟಡ ಸೇರಿದಂತೆ ಅಗತ್ಯ ವಿರುವ ಇತರ ಸರ್ಕಾರಿ–ಅರೆ ಸರ್ಕಾರಿ ಕಟ್ಟಡಗಳ ವ್ಯವಸ್ಥೆ ಕಲ್ಪಿಸಬೇಕು

ಸುತ್ತಮುತ್ತ

ಇಂದು ಉಸಿರಿಗಾಗಿ ಹಸಿರು ಅಭಿಯಾನ

ಕಟಪಾಡಿ: ಶ್ರೀ ಕ್ಷೇತ್ರ ಶಂಕರಪುರ ಶ್ರೀ ಸಾಯಿ ಮುಖ್ಯಪ್ರಾಣ ದೇವಸ್ಥಾನ ಇದರ ವತಿಯಿಂದ ಉಸಿರಿಗಾಗಿ ಹಸಿರು ಅಭಿಯಾನ ದೈವಿ ಗುಣ ಸಂಪನ್ನದ ಗಿಡಗಳನ್ನು ಭಕ್ತರಿಗೆ ವಿತರಿಸುವ ಕಾರ್ಯಕ್ರಮ ಜೂ. 25 ರಂದು ಮಂದಿರದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಶ್ರೀ ಸಾಯಿ ಈಶ್ವರ್ ಗುರೂಜಿ ಅವರು ಗಿಡಗಳನ್ನು ವಿತರಿಸಲಿದ್ದು, ಅತಿಥಿಗಳಾಗಿ ಸಮಾಜ ಕಾರ್ಯ ಉಪನ್ಯಾಸಕ ಡಾ.ಗಣೇಶ್ ಪ್ರಸಾದ್ ಜಿ.ನಾಯಕ್, ಸಂಚಾಲಕರಾಗಿ ರಾಘವೇಂದ್ರ ಪ್ರಭು ಕರ್ವಾಲು ಹಾಗೂ ಮಂದಿರದ ಪದಾಧಿಕಾರಿಗಳು ಉಪಸ್ಥಿತರಿರುವರು.

ಇಂದು ‘ಶ್ಲಾಘನ ತನಯ’ ಲೋಕಾರ್ಪಣೆ

ಕುಂದಾಪುರ: ಹೆಮ್ಮಾಡಿ ಗ್ರಾಮದ ಸುಳ್ಸೆಯಲ್ಲಿ ನಿರ್ಮಿಸಲಾಗಿರುವ ಜನತಾ ಪದವಿಪೂರ್ವ ಕಾಲೇಜಿನ ಬಾಲಕ– ಬಾಲಕಿಯರ ನೂತನ ವಸತಿ ನಿಲಯ ಜನತಾ ‘ಶ್ಲಾಘನ ತನಯ’ದ ಲೋಕಾರ್ಪಣಾ ಸಮಾರಂಭ ಜೂ.25ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರು ನೂತನ ವಸತಿ ನಿಲಯವನ್ನು ಲೋಕಾರ್ಪಣೆಗೊಳಿಸಿ, ಆಶೀರ್ವಚನ ನೀಡಿ ಅನುಗ್ರಹಿಸಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಗಣೇಶ್ ಮೊಗವೀರ ತಿಳಿಸಿದ್ದಾರೆ

ಜೂ.28: ಆತ್ಮ ಪರಮಾತ್ಮ, ಜೀವನದ ಸತ್ಯದರ್ಶನ ಶಿಬಿರ

ಪಡುಬಿದ್ರಿ : ಶ್ರೀ ಕ್ಷೇತ್ರ ಶಂಕರಪುರದ ಶ್ರೀ ದ್ವಾರಕಾಮಾಯಿ ಮಠದ ಆತಜ್ಞಾನಿ ಶ್ರೀ ಸಾಯಿ ಈಶ್ವರ್ ಗುರೂಜಿ ಅವರಿಂದ ಆತ್ಮ ಪರಮಾತ್ಮ, ಜೀವನದ ಸತ್ಯದರ್ಶನ ಶಿಬಿರವು ಮೂಲ್ಕಿ ಬಪ್ಪನಾಡು ಶ್ರೀ ಅನ್ನಪೂರ್ಣೇಶ್ವರೀ ಸಭಾಂಗಣದಲ್ಲಿ ಜೂ.28ರ ಬೆಳಗ್ಗೆ ಗಂಟೆ 10ಕ್ಕೆ ನಿಶುಲ್ಕವಾಗಿ ನಡೆಯಲಿದೆ ಎಂದು ಶ್ರೀ ಮಠದ ಪ್ರಕಟನೆ ತಿಳಿಸಿದೆ.

ಮೊದಲನೇ ಪುಟದಿಂದ

ಇನ್ನಷ್ಟು ಭಾರ!

ಏಪ್ರಿಲ್, ಮೇ ತಿಂಗಳುಗಳಲ್ಲಿ ತೀವ್ರವಾದ ಬರಗಾಲ ಇದ್ದ ಹಿನ್ನೆಲೆಯಲ್ಲಿ ಕೋಳಿ ಫಾರ್ಮ್‌ಗಳಲ್ಲಿ ಕೋಳಿಗಳ ಸಾವಿನ ಸಂಖ್ಯೆ ತೀವ್ರವಾಗಿ ಹೆಚ್ಚಿತ್ತು. ಈ ನಿಟ್ಟಿನಲ್ಲಿ ಮೊಟ್ಟೆ ಉತ್ಪಾದನೆ ಶೇಕಡಾ 15ರಿಂದ 20ರಷ್ಟು ಇಳಿಮುಖವಾಗಿತ್ತು. ಇಂಧನ ಬೆಲೆಯೇರಿಕೆಯು ಮೊಟ್ಟೆ ವಿತರಣೆಗಿರುವ ಸಾರಿಗೆ ಸಂಚಾರ ವೆಚ್ಚವನ್ನು ಹೆಚ್ಚಿಸಿದೆ. ಪ್ರೋಟೀನ್‌ನ ಪ್ರಧಾನ ಆಹಾರವಾಗಿರುವ ಮೊಟ್ಟೆಯ ಬೆಲೆ ಹೆಚ್ಚಿರುವುದು ಜನಸಾಮಾನ್ಯರ ಮನೆಗಳ ಪ್ರತೀ ತಿಂಗಳ ವೆಚ್ಚ ಏರಿಕೆಯಾಗುವಂತೆ ಮಾಡಿದೆ. ಒಟ್ಟಾರೆ ಕಳೆದ ಕೆಲವು ವಾರಗಳಿಂದ ಜಿಲ್ಲೆಯಲ್ಲಿ ಕೋಳಿಮೊಟ್ಟೆ ಬೆಲೆಯಲ್ಲಿ ಏರಿಕೆ ಮುಂದುವರಿದಿದೆ.

ಫುಡ್ ಝೋನ್

ಅದನ್ನು ಈಗ ಎಲ್ಲ ವಾರ್ಡ್‌ಗಳಿಗೂ ವಿಸ್ತರಿಸಲಾಗಿದ್ದು 23 ವಾರ್ಡ್‌ಗಳಲ್ಲೂ ಆಹಾರ ತಾಣವನ್ನು ಗುರುತಿಸಲಾಗಿದೆ. ಜಿಲ್ಲಾ ಮಟ್ಟದ ಸಮಿತಿಯ ನಿರ್ದೇಶನದಂತೆ ಮುಂದಿನ ದಿನಗಳಲ್ಲಿ 2 ಕಡೆಗಳಲ್ಲಿ ಆಹಾರ ತಾಣ ತೆರೆಯಲಾಗುವುದು ಎಂದು ಪುರಸಭೆಯ ಪರಿಸರ ಅಭಿಯಂತರ ಗುರುಪ್ರಸಾದ್ ಮಾಹಿತಿ ನೀಡಿದ್ದಾರೆ.

1,014 ಬೀದಿನಾಯಿಗಳು : ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ 2024ರ ಗಣತಿ ಪ್ರಕಾರ 1,014 ಬೀದಿ ನಾಯಿಗಳಿವೆ. ಅದು ಈಗ ಜಾಸ್ತಿ ಆಗಿರಬಹುದು. ಮುಂದಿನ ವರ್ಷ ಮತ್ತೆ ನಾಯಿಗಳ ಗಣತಿ ನಡೆಯಲಿದೆ. ಈವರೆಗೆ 400ಕ್ಕೂ ಮಿಕ್ಕಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ನಡೆದಿದೆ. ಈ ಪ್ರಕ್ರಿಯೆ ಪುರಸಭೆಯಿಂದ ನಿರಂತರವಾಗಿ ನಡೆಯುತ್ತಿದೆ.

ಆರ್‌ಟಿಒ ಬ್ರೇಕ್!

ಆದರೆ ಬೇರೆ ರೂಟ್‌ನಲ್ಲಿ ಓಡಾಟ ನಡೆಸುತ್ತಿವೆ. ಈ ಬಸ್‌ಗಳಿಗೆ ನೋಟಿಸ್ ನೀಡಲಾಗಿದೆ. ಅದೇ ರೀತಿ ರೂಟ್ ನಂಬರ್ 37 ಸ್ಟೇಟ್‌ಬ್ಯಾಂಕ್‌ನಿಂದ ಮರೋಳಿ–ಪಡೀಲ್, 30 ಬಿ ಸ್ಟೇಟ್‌ಬ್ಯಾಂಕ್ ನಿಂದ ಮರೋಳಿ ಪಡೀಲ್ ಅಡ್ಯಾರ್, 62 ಎ ಕಾಟಿಪಳ್ಳ ಕೈಕಂಬ ಸುರತ್ಕಲ್ – ಪಡೀಲ್ (ಬೈಕಂಪಾಡಿ ಕೂಳೂರು ಕಾವೂರು ಬೋಂದೆಲ್ ನಂತೂರು ಮರೋಳಿ ಪಡೀಲ್) ರೂಟ್‌ಗೂ ಪರವಾನಿಗೆ ಇದ್ದು ಬಸ್ ಓಡುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಈ ಬಗ್ಗೆ ಮೇ 6ರಂದು ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪವಾಗಿತ್ತು. ಇದೀಗ ಸ್ಥಳೀಯರ ದೂರಿನಂತೆ ಆರ್‌ಟಿಒ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿದ್ದು, ಪರವಾನಿಗೆ ಪಡೆದು ನಿರ್ದಿಷ್ಟ ರೂಟ್‌ನಲ್ಲಿ ಸಂಚರಿಸದ ಬಸ್‌ಗಳ ಪರವಾನಿಗೆ ರದ್ದು ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸ್ವ-ಉದ್ಯೋಗ ತರಬೇತಿ ಕಾರ್ಯಕ್ರಮ

ಕಾರ್ಕಳ: ತಾಲೂಕಿನ ಮರ್ಣೆ ಗ್ರಾ.ಪಂ. ವ್ಯಾಪ್ತಿಯ ಅಜೆಕಾರು ಪಂಚಾಯತ್ ಸಭಾಭವನದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಗಾಗಿ ಉಚಿತ ಸ್ವ–ಉದ್ಯೋಗ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಈ ತರಬೇತಿ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರುಡ್‌ಸೆಟ್ ಸಂಸ್ಥೆ ಹಾಗೂ ಕೆನರಾ ಬ್ಯಾಂಕ್ ಸಹಯೋಗದಲ್ಲಿ ಆಯೋಜಿಸಲಾಗಿದ್ದು, ಅಜೆಕಾರು ಮರ್ಣೆ ಗ್ರಾಮ ಪಂಚಾಯತ್ ಇವರ ಹಮ್ಮಿಕೊಳ್ಳಲಾಗಿದೆ.

ಸಮಗ್ರ ತರಬೇತಿ

18 ರಿಂದ 50 ವರ್ಷದ ಮಹಿಳೆಯರಿಗಾಗಿ ಆಯೋಜಿಸಲಾದ ಈ 14 ದಿನಗಳ ತರಬೇತಿಯಲ್ಲಿ ಕೃತಕ ಆಭರಣಗಳ ತಯಾರಿಕೆ, ಸೌಂದರ್ಯವರ್ಧಕ ಸೇವೆಗಳು, ಕೇಶ ವಿನ್ಯಾಸ, ಕೇಶಾಲಂಕಾರ, ಸೀರೆ ಉಡಿಸುವ ಕಲೆ ಸೇರಿದಂತೆ ವಿವಿಧ ಸ್ವ–ಉದ್ಯೋಗ ಕೌಶಲ್ಯಗಳ ಬಗ್ಗೆ ಸಮಗ್ರ ತರಬೇತಿ ನೀಡಲಾಯಿತು.

ತರಬೇತಿಯಲ್ಲಿ ಸುಮಾರು 35 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿ, ಹೊಸ ಕೌಶಲ್ಯಗಳನ್ನು ಕಲಿತು ಸ್ವಂತ ಉದ್ಯೋಗ ಆರಂಭಿಸುವ ಕುರಿತು ಮಾಹಿತಿಯನ್ನು ಹಾಗೂ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದಾರೆ.

> **ಮಹತ್ವದ ಹೆಜ್ಜೆ**
>
> ಮಹಿಳೆಯರ ಆತ್ಮವಿಶ್ವಾಸ ವೃದ್ಧಿ ಆರ್ಥಿಕ ಸ್ವಾವಲಂಬನೆ, ಕುಟುಂಬದ ಆದಾಯ ಹೆಚ್ಚಿಸುವ ಉದ್ದೇಶದಿಂದ ಆಯೋಜಿ ಸಲಾದ ಕಾರ್ಯಕ್ರಮ ಭಾಗವಹಿಸಿದ ಮಹಿಳೆ ಯರಿಂದ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಗ್ರಾಮೀಣ ಮಹಿಳೆಯರ ಸಬಲೀಕರಣದತ್ತ ಮಹತ್ವದ ಹೆಜ್ಜೆಯಾಗಿದೆ.

ಜೂ.27ರಿಂದ ಕಾಪುವಿನಲ್ಲಿ ಕರ್ನಾಟಕ ಸ್ಟೇಟ್ ಸ್ಕೂಲ್ ಚೆಸ್ ಚಾಂಪಿಯನ್ ಶಿಪ್

ಕಾಪು: ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಕಾಪು, ಉಡುಪಿ ವತಿಯಿಂದ ಅಕ್ಷಿಲೆನ್ಸ್ ಟೆಕ್ನಾಲಜಿ ಮಂಗಳೂರು ಇವರ ಸಹಯೋಗದೊಂದಿಗೆ ಕಾಪು ಶ್ರೀ ಹಳೇ ಮಾರಿಯಮ್ಮ ದೇವಸ್ಥಾನ ಸಹಕಾರದೊಂದಿಗೆ ಜೂ.27, 28 ರಂದು ಶ್ರೀ ಹಳೇಮಾರಿಯಮ್ಮ ಸಭಾ ಭವನ ಕಾಪುವಿನಲ್ಲಿ ಕರ್ನಾಟಕ ಸ್ಟೇಟ್ ಸ್ಕೂಲ್ ಚೆಸ್ ಚಾಂಪಿಯನ್ ಶಿಪ್ ಸ್ಪರ್ಧೆ ನಡೆಯಲಿದೆ ಎಂದು ಕಾಪು ಶ್ರೀ ನಾರಾಯಣ ಗುರು ಸ್ಪೋರ್ಟ್ಸ್ ಮತ್ತು ಎಜುಕೇಶನ್ ಟ್ರಸ್ಟ್ ಸ್ಥಾಪಕ ಸಾಕ್ಷಾತ್ ಯು.ಕೆ. ಹೇಳಿದರು.

ಅವರು ಕಾಪು ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚೆಸ್ ಪಂದ್ಯಾವಳಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ 300 ಸ್ಪರ್ಧಾಳುಗಳು ಬರುವ ನಿರೀಕ್ಷೆ ಇದೆ ವಯೋಮಿತಿ 7 9 11 13 15 ಮತ್ತು 17ರಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಸ್ಪರ್ಧೆ ನಡೆಯಲಿದೆ ಪ್ರತೀ ವಿಭಾಗದಲ್ಲಿ 2ಹುಡುಗರು –2 ಹುಡುಗಿಯರು ರಾಷ್ಟ್ರಮಟ್ಟಕ್ಕೆ ಆಯ್ಕೆ ಆಗುತ್ತಾರೆ. ಒಟ್ಟು 24 ಸ್ಪರ್ಧಾಳುಗಳು ರಾಷ್ಟ್ರಮಟ್ಟಕ್ಕೆ ಆಯ್ಕೆ ಆಗುತ್ತಾರೆ. ಪ್ರತಿ ಆರು ವಿಭಾಗದಲ್ಲಿ ಹುಡುಗರಿಗೆ 10 ಮತ್ತು ಹುಡುಗಿಯರಿಗೆ 10ರಂತೆ ಒಟ್ಟು 120 ಟ್ರೋಫಿ ನೀಡಲಾಗುವುದು.

ಜೂ.27ರಂದು ಉದ್ಘಾಟನಾ ಸಮಾರಂಭದಲ್ಲಿ ಎಂ ಆರ್ ಪಿ ಎಲ್ ಸಿ ಎಸ್ ಆರ್ ಜನರಲ್ ಮೆನೇಜರ್ ಮಂದಾರ ವಿಶಾಲೆ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಪು ಶ್ರೀ ಹೊಸ ಮಾರಿಗುಡಿ ದೇವಳ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ. ವಾಸುದೇವ ಶೆಟ್ಟಿ ದೀಪ ಪ್ರಜ್ವಲನೆ , ಕಾಪು ಶ್ರೀ ಲಕ್ಷ್ಮಿ ಜನಾರ್ದನ ದೇವಳ ಆಡಳಿತ ಮುಖ್ಯಸ್ಥ ಮನೋಹರ ಶೆಟ್ಟಿ ಚೆಸ್ ಸ್ಪರ್ಧೆ ಉದ್ಘಾಟಿಸಲಿದ್ದಾರೆ.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗೌರವ ಉಪಸ್ಥಿತಿ ಹೊಂದಿರುತ್ತಾರೆ. ಅತಿಥಿಗಳಾಗಿ ಡಾ. ವ್ಯಾಸರಾಜ ತಂತ್ರಿ ಆಡಳಿತ ನಿರ್ದೇಶಕರು ಗಾಂಧಿ ಆಸ್ಪತ್ರೆ, ಉಡುಪಿ, ಉಜ್ವಲ್ ಗ್ರೂಪ್ ಉಡುಪಿ ಮ್ಯಾನೇಜಿಂಗ್ ಡೈರೆಕ್ಟರ್ ಅಜಯ್ ಕುಮಾರ್ ಶೆಟ್ಟಿ ಮಂಗಳೂರು ಅಕ್ಷಿಲಿಯನ್ಸ್ ಟೆಕ್ನಾಲಜಿ ಸಂಸ್ಥಾಪಕ ಅವಿನಾಶ್ ಶೆಟ್ಟಿ ಶ್ರೀಧರ ಶೆಣೈ, ಮಧುಕರ ಟಿ.ಎನ್.,ಡಾ. ರಾಜಗೋಪಾಲ್ ಶೆಣೈ ಪಾಲ್ಗೊಳ್ಳಲಿದ್ದಾರೆ

ಜೂ.28ರಂದು ಸಮಾರೋಪದಲ್ಲಿ ಕಾಪು ಉಳಿಯಾರಗೋಳಿ ದಂಡ ತೀರ್ಥ ಪ್ರತಿಷ್ಠಾನ ಅಧ್ಯಕ್ಷ ಡಾ. ಸೀತಾರಾಮ್ ಭಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಹುಮಾನ ವಿತರಕರಾಗಿ ಉಡುಪಿ ಗ್ರೂಪ್ ಆಫ್‌ನ ಸಂಸ್ಥಾಪಕರಾದ ಧೃತಿ ಶರತ್ ಶೆಟ್ಟಿ, ಕ್ಷೀಲಿಯನ್ಸ್ ಟೆಕ್ನಾಲಜಿ ಮಂಗಳೂರು ಸಂಸ್ಥಾಪಕರು ಅವಿನಾಶ್ ಶೆಟ್ಟಿ ಮಾಜಿ ಶಾಸಕ ಲಾಲಾಜಿ ಆರ್ ಮೆಂಡನ್ ಉಡುಪಿ, ವೈಟಿ ರಾಘವೇಂದ್ರ ವಕೀಲರು ಉಡುಪಿ ಶ್ರೀ ಹಳೇ ಮಾರಿಯಮ್ಮ ದೇವಸ್ಥಾನ ಕಾಪು ಮೊಕ್ತೇಸರಾದ ರಾಮ ನಾಯಕ್, ಸಾಕ್ಷಾತ್ ಶೆಟ್ಟಿ ಕಾಪು, ಬ್ರಹ್ಮಾನಂದ ಭಟ್ ಕಾಪು ಉಪಸ್ಥಿತರಿದ್ದಾರೆ.

ಕಾಪು ಶ್ರೀ ನಾರಾಯಣ ಗುರು ಸ್ಪೋರ್ಟ್ಸ್ – ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಉಮಾನಾಥ ಕಾಪು, ಲೋಕೇಶ್ ಬೆಳ್ಚಡ ಗೋಷ್ಠಿಯಲ್ಲಿದ್ದರು.

ಶ್ರೀ ಜ್ಞಾನ ಜ್ಯೋತಿ ಭಜನಾ ಮಂದಿರ ಕಡಲ ತೀರ ಮಲ್ಪೆ -ಶೌರ್ಯ ವಿಪತ್ತು ನಿರ್ವಹಣಾ ಘಟಕ ಮಲ್ಪೆ ಇದರ ಜಂಟಿ ಆಶ್ರಯದಲ್ಲಿ ರಾಮದಾಸ್ ಪೈ ಕೆಮ್ಮಣ್ಣು ಇವರ ಗದ್ದೆಯಲ್ಲಿ ಭತ್ತ ನಾಟಿ ನಡೆಯಿತು. ಭಜನಾ ಮಂದಿರದ ಅಧ್ಯಕ್ಷರಾದ ಯಶವಂತ ಸುವರ್ಣ, ಉಪಾಧ್ಯಕ್ಷ ದೇವ್ ಸುವರ್ಣ, ಹರಿಶ್ಚಂದ್ರ ಸುವರ್ಣ, ಶಶಿಧರ್ ಕಾಂಚನ್, ಶೌರ್ಯ ವಿಪತ್ತು ನಿರ್ವಹಣೆ ಘಟಕದ ಸಂಯೋಜಕರಾದ ವಿಜಯ್ ಪೈ, ಸದಸ್ಯರಾದ ಕೃಷ್ಣ, ರಮೇಶ್, ಇಂದಿರಾ ಶಶಿಧರ್, ಧ.ಗ್ರಾ. ಸಂಸ್ಥೆ ಮೇಲ್ವಿಚಾರಕಿ ಸುಜಾತಾ, ಸ್ಕೌಟ್‌ನ ನೆಲ್ಸನ್ ಮತ್ತಿತರರಿದ್ದರು.

ಅಡಪಾಡಿ ಶ್ರೀ ಕ್ಷೇತ್ರದಲ್ಲಿ ಇಂದಿನಿಂದ ಸಹಸ್ರ ಚಂಡಿಕಾ ಮಹಾಯಾಗ, ಮಹಾರುದ್ರಾಭಿಷೇಕ

ಶಿರ್ವ: ಶಿರ್ವ ಸಮೀಪದ ಪಳ್ಳಿ ಶ್ರೀ ಕ್ಷೇತ್ರ ಅಡಪಾಡಿ ಶ್ರೀ ಉಮಾಮಹೇಶ್ವರ, ಶ್ರೀ ದುರ್ಗಾಪರಮೇಶ್ವರೀ ದೇವೀ ಸನ್ನಿಧಿಯಲ್ಲಿ ಜೂ.25ರಿಂದ ಜು. 5 ರಂದು ಪರ್ಯಂತ ಶ್ರೀದೇವೀ ಸನ್ನಿಧಿಯಲ್ಲಿ ‘ಸಹಸ್ರ ಚಂಡಿಕಾ ಮಹಾಯಾಗ’ ಮತ್ತು ಪ್ರತೀ ದಿನ ಶ್ರೀ ಉಮಾಮಹೇಶ್ವರ ದೇವರ ಸನ್ನಿಧಿಯಲ್ಲಿ ‘ಮಹಾ ರುದ್ರಾಭಿಷೇಕ್ ಪೂರಕ ಧಾರ್ಮಿಕ ಅನುಷ್ಠಾನಗಳು ಸಂಪನ್ನಗೊಳ್ಳಲಿವೆ.

11 ದಿನಗಳ ಪರ್ಯಂತ ಜರಗಲಿ ರುವ ಈ ಧಾರ್ಮಿಕ ಅನುಷ್ಠಾನಗಳು ವೇದಾಂತ ವಿದ್ವಾನ್ ಗಣೇಶ್ ಸಾಲಸ್ಕರ್ ಗುರೂಜಿ ರತ್ನಗಿರಿ ಇವರ ದಿವ್ಯ ಮಾರ್ಗದರ್ಶನದಲ್ಲಿ ಕ್ಷೇತ್ರದ ಪ್ರಧಾನ ವೈದಿಕರು ವೇದ ಮೂರ್ತಿಗಳಾದ ದಯಾನಂದ ಭಟ್ ಕಲ್ಲಡ್ಕ, ಹರಿಪ್ರಸಾದ್ ಭಟ್ ಅಡಪಾಡಿ, ವಿಷ್ಣುಪ್ರಸಾದ್ ಭಟ್, ಹರಿಪ್ರಸಾದ್ ಭಟ್, ರಂಜಿತ್ ಭಟ್ ನೇತೃತ್ವ ಹಾಗೂ ಸಹವೈದಿಕರ ಸಹಭಾಗಿತ್ವದಲ್ಲಿ ಸಂಪನ್ನಗೊಳ್ಳಲಿವೆ.

ಜು.5: ಪೂರ್ಣಾಹುತಿ

ಜು.5ರಂದು ಪೂರ್ವಾಹ್ನ ಸಹಸ್ರ ಚಂಡಿಕಾ ಯಾಗದ ಮಹಾ ಪೂರ್ಣಾಹುತಿ ಜರುಗಲಿದೆ.

ಕ್ಷೇತ್ರದ ಭಕ್ತರಾದ ಗೌರವ್ ಭಂಡಾರಿ ಸೇವಾರ್ಥ ನೆರವೇರಿಸಲಿರುವ ಸೇವಾ ಕಾರ್ಯಕ್ರಮದಲ್ಲಿ ಕ್ಷೇತ್ರದ ಭಗವದ್ಭಕ್ತರು ಭಾಗವಹಿ ಸುವಂತೆ ಕ್ಷೇತ್ರದ ಧರ್ಮದರ್ಶಿಗಳಾದ ಪುಂಡಲೀಕ ನಾಯಕ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ತೆಕ್ಕಟ್ಟೆ ಹಯಗ್ರೀವದಲ್ಲಿ ‘ನಾದಾವಧಾನ-ವಾರ್ಷಿಕೋತ್ಸವ-2026’ ಕಾರ್ಯಕ್ರಮ

ಕೋಟ: ಗುರು ಸ್ಥಾನ ಸಮರ್ಥವಾಗಿ ನಿಭಾಯಿಸಿಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳುವುದು ಪ್ರಸ್ತುತ ಕಾಲಘಟ್ಟದಲ್ಲಿ ಸುಲಭವಲ್ಲ. ಈ ನಿಟ್ಟಿನಲ್ಲಿ ಸಮರ್ಥ ಗುರುಗಳೀರ್ವರು ಆರೇಳು ವರ್ಷಗಳ ಪರ್ಯಂತ ಆನ್‌ಲೈನ್ ಮೂಲಕ ಯಕ್ಷಗಾನ ಕಲಿಸಿ ಶಿಷ್ಯರಿಂದ ಸೈ ಎನಿಸಿಕೊಂಡು ನಿರಂತರ ಚಟುವಟಿಕೆಯಲ್ಲಿ ಶಿಷ್ಯರನ್ವೇಷಣರನ್ನು ತೊಡಗಿಸಿಕೊಂಡು ಮುನ್ನಡೆಯುತ್ತಿರುವ ಕಾರ್ಯ ಶ್ಲಾಘನೀಯ ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ತೆಕ್ಕಟ್ಟೆ ಹಯಗ್ರೀವದಲ್ಲಿ ನಾದಾವಧಾನ ಪ್ರತಿಷ್ಠಾನ, ಕುಂದಾಪುರ ಆಯೋಜಿಸಿದ ‘ನಾದಾವಧಾನ–ವಾರ್ಷಿಕೋತ್ಸವ–2026’ ಕಾರ್ಯಕ್ರಮವನ್ನು ಜೂನ್ 21ರಂದು ಉದ್ಘಾಟಿಸಿ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿದರು.

ಗುರುಗಳಾದ ಎ. ಪಿ. ಪಾಠಕ್ ಮಾತನಾಡಿ, ಅನಾರೋಗ್ಯ ನಿಮಿತ್ತ ಮನೆಯಲ್ಲಿ ಉಳಿದ ಪ್ರಾಚಾರ್ಯ ಕೆ. ಪಿ. ಹೆಗಡೆವರಿಗೆ ಗುರುವಂದನೆಯನ್ನು ಗುರು ನಿವಾಸದಲ್ಲಿ ಸಲ್ಲಿಸುವುದಾಗಿ ವಿನಂತಿಸಿದರು. ಪುತ್ತಿಗೆ ರಘುರಾಮ ಹೊಳ್ಳ, ರಾಘವೇಂದ್ರ ಮೈಯ್ಯ, ಪ್ರಸನ್ನ ಭಟ್ ಬಾಳ್ಕಲ್, ವಿದ್ಯುತ್ ಗುತ್ತಿಗೆದಾರ ಕೆ. ಆರ್. ನಾಯಕ್, ಎನ್. ಜಿ. ಹೆಗಡೆ, ಯಶಸ್ವಿ ಕಲಾವೃಂದ ಕಾರ್ಯದರ್ಶಿ ವೆಂಕಟೇಶ ವೈದ್ಯ, ಮೇಳದ ಯಜಮಾನರಾದ ರಂಜಿತ್ ಶೆಟ್ಟಿ ಬಣ್ಣದ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಸಮಿತಿ ಮಂಜುನಾಥಯ್ಯ ಉಪಸ್ಥಿತರಿದ್ದರು. ಅಶೋಕ್ ಆಚಾರ್ ಸ್ವಾಬರಕಟ್ಟೆ ನಿರೂಪಿಸಿದರು.

‘ಮಾಗಧ ವಧೆ’ ರಂಗ ಯಕ್ಷಗಾನ

ಬಳಿಕ ಯಶಸ್ವಿ ಕಲಾವೃಂದ ಕೊಮೆ ಸಹಕಾರದೊಂದಿಗೆ ನಾದಾವಧಾನ ಸಂಸ್ಥೆ ವಿದ್ಯಾರ್ಥಿಗಳಿಂದ ಗಾನವೈಭವ , ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಯಕ್ಷಗಾನ ‘ಮಾಗದ ವಧೆ’ ರಂಗ ಪ್ರಸ್ತುತಿಗೊಂಡಿತು.

ಪತ್ರಕರ್ತರಿಗೆ ಆರೋಗ್ಯ ತಪಾಸಣಾ ಶಿಬಿರ: ಸದಸ್ಯತ್ವದ ಕಾರ್ಡ್ ವಿತರಣೆ

ಉಡುಪಿ: ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಉಡುಪಿ ಪತ್ರಿಕಾ ಭವನ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ, ಜಿಲ್ಲಾ ಆಸ್ಪತ್ರೆ ಎನ್.ಸಿ.ಡಿ. ವಿಭಾಗ ಉಡುಪಿ, ಜಿಲ್ಲಾ ಸರ್ವೇಕ್ಷಣ ಘಟಕ(ಎನ್‌ಸಿಡಿ), ರಾಷ್ಟ್ರೀಯ ಆರೋಗ್ಯ ಅಭಿಯಾನ ಉಡುಪಿ, ಆದರ್ಶ ಆಸ್ಪತ್ರೆ ಉಡುಪಿ, ಪ್ರಸಾದ್ ನೇತ್ರಾಲಯ ಉಡುಪಿ ಇವುಗಳ ಸಹಯೋಗದೊಂದಿಗೆ ಪತ್ರಕರ್ತರಿಗೆ ಉಚಿತ ಆರೋಗ್ಯ ಶಿಬಿರವನ್ನು ಬುಧವಾರ ಉಡುಪಿ ಪತ್ರಿಕಾ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಬಸವರಾಜ ಹುಬ್ಬಳ್ಳಿ ಉದ್ಘಾಟಿಸಿದರು. ಈ ಸಂದರ್ಭ ಸಂಘದ 2026–27ನೇ ಸಾಲಿನ ಸದಸ್ಯತ್ವ ಕಾರ್ಡ್‌ಗಳನ್ನು ವಿತರಿಸಲಾಯಿತು.

ಜಿಲ್ಲಾ ಸರ್ಜನ್ ಡಾ.ಎಚ್.ಅಶೋಕ್ ಮಾತನಾಡಿ, ಒತ್ತಡದ ವ್ಯಕ್ತಿ ಬದುಕಿನಲ್ಲಿರುವ ಪತ್ರಕರ್ತರು ದಿನಕ್ಕೆ 45 ನಿಮಿಷ ವ್ಯಾಯಮ, ವಾಕಿಂಗ್‌ಗೆ ಮೀಸಲಿರಿ ಸಬೇಕು. ಈ ಮೂಲಕ ತಮ್ಮ ಆರೋಗ್ಯ ಕಾಪಾಡಬೇಕು. ಪ್ರತಿ ಆರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಬೇಕು ಎಂದರು.

ವಾರ್ತಾಧಿಕಾರಿ ಮಂಜುನಾಥ್ ಮಾತನಾಡಿದರು. ಅಧ್ಯಕ್ಷತೆಯನ್ನು ಸಂಘದ ಜಿಲ್ಲಾಧ್ಯಕ್ಷ ಸುಬ್ರಹ್ಮಣ್ಯ ಜೆ.ಕುರ್ಯ ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಸಮಿತಿ ಸದಸ್ಯ ಅಸ್ಟೋ ಮೋಹನ್, ಜಿಲ್ಲಾ ಕೋಶಾಧಿಕಾರಿ ಹರೀಶ್ ಕುಂದರ್ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಸ್ವಾಗತಿಸಿ, ವಂದಿಸಿದರು. ಪತ್ರಕರ್ತ ಶ್ರೀಕಾಂತ್ ಹೆಮ್ಮಾಡಿ ನಿರೂಪಿಸಿದರು.

ಶಿಬಿರದಲ್ಲಿ ಮಧುಮೇಹ, ರಕ್ತದೊತ್ತಡ, ಇಸಿಜಿ, ಹಿಮೋಗ್ಲೋಬಿನ್, ಕೊಲೆಸ್ಟ್ರಾಲ್, ಕಣ್ಣಿನ ಪರೀಕ್ಷೆಗಳನ್ನು ನಡೆಸಲಾಯಿತು.

ಮೂಡ್ಲಕಟ್ಟೆ ಎಂಬಿಎ ವಿಭಾಗ: ಏಸ್‌ಬಾಂಡ್ ಕೈಗಾರಿಕಾ ಘಟಕಕ್ಕೆ ಇಂಡಸ್ಟ್ರಿಯಲ್ ವಿಸಿಟ್

ಕುಂದಾಪುರ: ಕುಂದಾಪುರದ ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಲ್ಲಿನ ಎಂಬಿಎ ವಿಭಾಗದ ವತಿಯಿಂದ ಏಸ್‌ಬಾಂಡ್ ಕೈಗಾರಿಕೆ ಘಟಕಕ್ಕೆ ಒಂದು ದಿನದ ಇಂಡಸ್ಟ್ರಿಯಲ್ ವಿಸಿಟ್ ಕೈಗೊಳ್ಳಲಾಯಿತು.

ಭೇಟಿ ವೇಳೆ ವಿದ್ಯಾರ್ಥಿಗಳು ಉತ್ಪಾದನಾ ಪ್ರಕ್ರಿಯೆ, ಗುಣಮಟ್ಟ ನಿಯಂತ್ರಣಾ, ಮಾನವ ಸಂಪನ್ಮೂಲ ನಿರ್ವಹಣೆ, ಮಾರುಕಟ್ಟೆ ತಂತ್ರಗಳು , ಹಣಕಾಸು ನಿರ್ವಹಣೆ ಕುರಿತು ಕಂಪನಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕಂಪನಿಯ ವಿವಿಧ ವಿಭಾಗಗಳನ್ನು ವೀಕ್ಷಿಸಿದ ವಿದ್ಯಾರ್ಥಿಗಳು ಕೈಗಾರಿಕಾ ಕಾರ್ಯಾಚರಣೆ ನೈಜ ಅನುಭವ ಪಡೆದರು. ಕೈಗಾರಿಕಾ ಕಾರ್ಯ ವೈಖರಿ, ನಿರ್ವಹಣಾ ಪದ್ಧತಿಗಳ ಬಗ್ಗೆ ಪ್ರಾಯೋಗಿಕ ಜ್ಞಾನ ಪಡೆದುಕೊಂಡರು. ಕಂಪನಿಯ ಅಧಿಕಾರಿಗಳು ವಿದ್ಯಾರ್ಥಿ ಗಳಿಗೆ ಕೈಗಾರಿಕಾ ಕ್ಷೇತ್ರದಲ್ಲಿನ ಅವಕಾಶಗಳು, ಸವಾಲುಗಳು , ವೃತ್ತಿ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು. ಕಾಲೇಜಿನ ಎಂಬಿಎ ವಿಭಾಗ ಮುಖ್ಯಸ್ಥೆ ಡಾ. ಸುಚಿತ್ರ ಪೂಜಾರಿ , ಉಪನ್ಯಾಸಕರು, ಕಂಪನಿಯ ಅಧಿಕಾರಿಗಳಿದ್ದರು.

ಜಾಲಾಡಿ – ಹೊಸ್ಕಳಿ ಭಾಗದ ಗದ್ದೆಗಳು ಮುಳುಗಡೆ | ನಾಟಿ ಕಾರ್ಯಕ್ಕೆ ತೊಂದರೆ

ಉಡುಪಿ ಜಿಲ್ಲಾಧಿಕಾರಿ ಭೇಟಿ ಪರಿಶೀಲನೆ, ಕ್ರಮಕ್ಕೆ ಸೂಚನೆ

ಕುಂದಾಪುರ: ಜಾಲಾಡಿ – ಹೊಸ್ಕಳಿ ಭಾಗದ ಗದ್ದೆಗಳು ಮುಳುಗಡೆಯಾಗಿ, ನಾಟಿ ಕಾರ್ಯಕ್ಕೆ ತೊಂದರೆ ಆಗಿರುವುದನ್ನು ತಿಳಿದು ಉಡುಪಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಜಾಲಾಡಿ – ಹೊಸ್ಕಳಿ ಭಾಗದ ಮುಳುಗಡೆ ಯಾದ ಗದ್ದೆಗಳನ್ನು ಡಿಸಿ ಪರಿಶೀಲಿಸಿದರು. ಈ ವೇಳೆ ಕುಂದಾಪುರ ತಹಶಿಲ್ದಾರ್ ಪ್ರದೀಪ್ ಕುರ್ಡೇಕರ್, ಕಂದಾಯ ನಿರೀಕ್ಷಕ ರಾಘವೇಂದ್ರ ದೇವಾಡಿಗ, ಗ್ರಾಮ ಆಡಳಿತಾಧಿಕಾರಿ ಸೋಮಪ್ಪ ಕಟ್ ಬೆಲ್ತೂರು ಗ್ರಾ.ಪಂ. ಪಿಡಿಒ , ಉದ್ಯಮಿ ಕುಶಲ ಶೆಟ್ಟಿ ಗೈತ ಮುಖಂಡ ಶರತ್ ಕುಮಾರ್ ಶೆಟ್ಟಿ ತ್ರಾಸಿ ಗ್ರಾ.ಪಂ. ಮಾಜಿ ಅಧ್ಯಕ್ಷ ಮಿಥುನ್ ದೇವಾಡಿಗ, ಗ್ರಾ.ಪಂ. ಮಾಜಿ ಸದಸ್ಯ ಸಚ್ಚಿಂದ್ರ ದೇವಾಡಿಗ, ರೈತರಾದ ಜಗನ್ನಾಥ ದೇವಾಡಿಗ, ತೇಜ ದೇವಾಡಿಗ, ದಿನಕರ ದೇವಾಡಿಗ ಮತ್ತಿತರರಿದ್ದರು.

ಈಗ ಬೇಸಾಯವೇ ಮಾಡದಂತಾಗಿದೆ. ಆದಷ್ಟು ಬೇಗ ಮಳೆ ನೀರು ಹರಿದು ಹೋಗಲು ಮೋರಿ ಹಾಕಿ ಕೊಡುವ ಕಾರ್ಯ ಆಗಬೇಕು. ಅದನ್ನ ತಹಶೀಲ್ದಾರ್ ಮುಂದಾಳತ್ವದಲ್ಲಿಯೇ ಮಾಡಲಿ ಎನ್ನುವುದಾಗಿ ಅಲ್ಲಿ ಸೇರಿದ್ದ ರೈತರು ಒತ್ತಾಯಿಸಿದರು.

ಈಗ ಏನೇ ಮಾಡಿದರೂ, ಇನ್ನು ಈ ಸಲ ಬೇಸಾಯ ಮಾಡುವುದು ಕಷ್ಟ ಮಾಡಿದರೂ, ನೆರೆ ನೀರಲ್ಲಿ ಮುಳುಗಡೆಯಾಗಲಿದೆ. ಹಾಗಾದರೆ ರೈತರು ಏನು ಮಾಡಬೇಕು, ರೈತರಿಗೆ ನಷ್ಟ ಪರಿಹಾರಕ್ಕೆ ಜಿಲ್ಲಾಡಳಿತ ಕ್ರಮಕೈಗೊಳ್ಳಲಿ ಎಂದು ಇಲ್ಲಿನ ರೈತರು ಆಗ್ರಹಿಸಿದರು.

> **ಕ್ರಮ ಕೈಗೊಳ್ಳಲಾಗುವುದು**
>
> ಜಾಲಾಡಿ – ಹೊಸ್ಕಳಿಯಲ್ಲಿ ಗದ್ದೆಗಳಲ್ಲಿ ನೀರು ನಿಂತಿರುವುದನ್ನು ಸ್ವತಃ ಪರಿಶೀಲಿಸಿದ್ದು ತುರ್ತಾಗಿ ನಿಂತ ನೀರು ಕೆಳಗೆ ಹರಿದು ಹೋಗಲು ಮೋರಿ ಅಳವಡಿಸಿ, ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಅದಕ್ಕೆ ಸ್ಥಳೀಯಾಡಳಿತ ಎಲ್ಲರೀತಿಯಲ್ಲೂ ಸಹಕಾರ ನೀಡಲಿದೆ. ರೈತರ ಬೇಸಾಯಕ್ಕೆ ತೊಂದರೆಯಾಗದಂತೆ ಕ್ರಮಕೈಗೊಳ್ಳಲಾಗುವುದು. ಇನ್ನು ಇಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸುವ ಸಂಬಂಧ ಪ್ರಾಕೃತಿಕ ವಿಕೋಪದಡಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದನ್ನು ತಹಶೀಲ್ದಾರ್ ಫಾಲೋಅಪ್ ಮಾಡುತ್ತಾರೆ.
>
> ● ಸ್ವರೂಪ ಟಿ.ಕೆ., ಉಡುಪಿ ಜಿಲ್ಲಾಧಿಕಾರಿ

ದೊಡ್ಡನಗುಡ್ಡೆಯಲ್ಲಿ ವನಮಹೋತ್ಸವ ಕಾರ್ಯಕ್ರಮ

ಉಡುಪಿ: ವಿಷ್ಣುಮೂರ್ತಿ ಫ್ರೆಂಡ್ಸ್ ದೊಡ್ಡನಗುಡ್ಡೆ, ಸ್ವರಾಜ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ದೊಡ್ಡನಗುಡ್ಡೆ ಹಾಗೂ ಅಲಯನ್ಸ್ ಶ್ರೀ ಕೃಷ್ಣ ಉಡುಪಿ ಇವುಗಳ ಜಂಟಿ ಆಶ್ರಯದಲ್ಲಿ ದೊಡ್ಡನಗುಡ್ಡೆಯ ಸಾರ್ವಜನಿಕ ಆಟದ ಮೈದಾನದಲ್ಲಿ ವನಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪರಿಸರ ಸಂರಕ್ಷಣೆ ಮಾಹಿತಿ

ಕಾರ್ಯಕ್ರಮದಲ್ಲಿ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆ ಸಂದೇಶ ನೀಡಲಾಯಿತು. ಈ ಸಂದರ್ಭ ಸ್ವರಾಜ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ರಾಧಾಕೃಷ್ಣ ಶೆಟ್ಟಿ ದೊಡ್ಡನಗುಡ್ಡೆ, ಅಲಯನ್ಸ್ ಶ್ರೀ ಕೃಷ್ಣ ಉಡುಪಿ ಸಂಸ್ಥೆಯ ಅಧ್ಯಕ್ಷ ಹರೀಶ್ ರೈಲ್ವೆ ಕಾರ್ಯದರ್ಶಿ ಮಹೇಂದ್ರ ಉಡುಪಿ ಉಪಸ್ಥಿತರಿದ್ದರು. ವಿಷ್ಣುಮೂರ್ತಿ ಫ್ರೆಂಡ್ಸ್ ಸಂಸ್ಥೆಯ ಗೌರವ ಸಲಹೆಗಾರ ಸತೀಶ್ ಪುತ್ರನ್ ಹಾಗೂ ಪ್ರಮುಖರಾದ ದಿನೇಶ್, ಶ್ರೀನಾಥ್ ಭಟ್, ರಮೇಶ್ ಕೋಟ್ಯಾನ್, ಮೋಹನ್ ಶೇರಿಗಾರ್, ಪ್ರಶಾಂತ್ ಆಚಾರ್ಯ, ರಾಮು ಆಚಾರ್ಯ, ಜಯಕರ ಆಚಾರ್ಯ, ಸುರೇಶ್ ದೊಡ್ಡನಗುಡ್ಡೆ, ಪ್ರಶಾಂತ್ ದೊಡ್ಡನಗುಡ್ಡೆ ಮತ್ತಿತರರು ಉಪಸ್ಥಿತರಿದ್ದರು.